Transfer of B.D.O to chitapur Block

ಶ್ರೀ ಬಿ.ಆರ್. ಯಾವಗಲ್(ಸನ್ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತ್‌ರಾಜ್ ರಾಜ್ಯ ಸಚಿವರು).—ನಿಯಮ ೩೨೪ರ ಅಡಿಯಲ್ಲಿ ಶ್ರೀ ಎಸ್. ಬಂಗಾರಪ್ಪನವರ ಪ್ರಶ್ನೆಗೆ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.—

'ಚಿತಾಪುರ ಬ್ಲಾಕಿನ ಕ್ಷೇತ್ರಾಭಿವೃದ್ಧಿ ಅಧಿಕಾರ ಶ್ರೀ ವೈಜನಾಥರವರ, ವರ್ಗಾವಣೆ ಬಗ್ಗೆ ಹೇಳುವುದಾದರೆ, ಸದರಿಯವರು ದಿನಾಂಕ ೨-೧೨-೧೯೮೫ರಲ್ಲಿ ತಮ್ಮ ಸ್ಥಾನದಿಂದ ಬಿಡುಗಡೆಯಾಗಿ, ರಜೆಯ ಮೇಲೆ ತೆರಳಿರುತ್ತಾರೆ. ಚಿತಾಪುರ ತಾಲ್ಲೂಕು ತಹಸೀಲ್ದಾರರು ಕ್ಷೇತ್ರಾಭಿವೃದ್ಧಿ ಅಧಿಕಾರಿಯವರ ಕೆಲಸವನ್ನು (ಇನ್‌ಚಾರ್ಜ್) ನಿರ್ವಹಿಸುತ್ತಿರುತ್ತಾರೆ.

ಗುಲ್ಬರ್ಗ ಜಿಲ್ಲಾಧಿಕಾರಿಗಳು ಸದರಿ ಶ್ರೀ ವೈಜನಾಥ್‌ರವರನ್ನು ಚಿತಾಪುರದಿಂದ ವರ್ಗಾವಣೆ ಮಾಡಿ, ಶ್ರೀ ಮೊಹಮ್ಮದ್ ಇಬ್ರಾಹಿಂ, ವಿಶೇಷ ತಹಸಿಲ್ದಾರ, (ಭೂ ಸುಧಾರಣೆ), ಆಲಂದ್, ಇವರನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿ. ಚಿತಾಪುರಕ್ಕೆ ತೈನಾತಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ. ಈ ವಿಷಯವು ಪರಿಶೀಲನೆಯಲ್ಲಿದೆ.

ಚಿತಾಪುರದ ಕ್ಷೇತ್ರಾಭಿವೃದ್ಧಿ ಅಧಿಕಾರಿ, ಮತ್ತು ಕಿರಿಯ ಅಭಿಯಂತರರು ವೆಸಗಿರುವ ಅಕ್ರಮಗಳ ಬಗ್ಗೆ ಸೇಡಂ ಉಪವಿಭಾಗದ ಅಸಿಸ್ಟೆಂಟ್ ಕಮಿಷನರವರು ತನಿಖೆ ನಡೆಸುತ್ತಿದ್ದಾರೆ. ಜಿಲ್ಲಾಧಿಕಾರಿ, ಗುಲ್ಬರ್ಗಾ ಅವರನ್ನು ಶೀಘ್ರವಾಗಿ ತನಿಖಾ ವರದಿಯನ್ನು ಪಡೆದು ಅವರ ಅಭಿಲೇಖಗಳೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಲು ಕೋರಿದೆ.

ಜಿಲ್ಲಾಧಿಕಾರಿಗಳ ವರದಿಯನ್ನು ಕಾಯಿದೆ, ಈ ವರದಿ ಬಂದಕೂಡಲೇ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾರ್ಪಣಾ ನಿರ್ಣಯದ ಮೇಲಿನ ಚರ್ಚೆ(ಮುಂ.ವ)

ಶ್ರೀ ಕೆ.ಎಚ್.ಪಾಟೀಲ್(ಗದಗ).—ಮಾನ್ಯ ಸಭಾಧ್ಯಕ್ಷರೇ. ನಿನ್ನೆ ದಿವಸ ವ್ಯವಸಾಯದ ಬಗ್ಗೆ ಏನೇನು ಮಾಡಬೇಕು ಎನ್ನುವ ಬಗ್ಗೆ ಸಲಹೆಗಳನ್ನು ಕೊಟ್ಟೆ. ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ವ್ಯವಸಾಯದ ವಿಷಯವಾಗಿ ಎಷ್ಟು ಮಹತ್ವವನ್ನು ಕೊಡಬೇಕಾಗಿತ್ತೋ ಅಷ್ಟು ಮಹತ್ವವನ್ನು ಕೊಟ್ಟಿಲ್ಲ ಎನ್ನುವ ಬಗ್ಗೆ ಕೂಡ ಮಾತನಾಡಬೇಕಾಗಿದೆ. ಇದು ಅಷ್ಟೇ ಅಲ್ಲ ವ್ಯವಸಾಯದ ವಿಷಯವಾಗಿ ಮತ್ತೆ ಇಂದಿನ ಬರಗಾಲದ ಪರಿಸ್ಥಿತಿ ಮುಂದೆ ಬರಗಾಲದಲ್ಲಿ ಬರಲಿರುವ ಪರಿಸ್ಥಿತಿಯ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಒಂದು ಉಲ್ಲೇಖನವೂ ಕೂಡ ಇಲ್ಲ. ಸರ್ಕಾರದವರು ಅಧಿಕಾರಕ್ಕೆ ಬರುವಾಗ ಜನರಿಗೆ ಕೊಟ್ಟ ವಚನವನ್ನು ಪಾಲನೆ ಮಾಡಿದ್ದಾರೆ ಎಂದು ಮಾನ್ಯ ರಾಜ್ಯಪಾಲರು ಪ್ರಶಂಸೆ ಮಾಡಿದ್ದಾರೆ. ಆದರೆ ಈ ಪ್ರಶಂಸೆ ಸಾರ್ವಜನಿಕವಾಗಿ ನಿಜಸ್ಥಿತಿಯನ್ನು ಹೇಳಿದಾಗ ಅದು ಅಷ್ಟೇ ಅಪ್ರಸ್ತುತವಾಗುತ್ತದೆ ಎನ್ನುವ ಮಾತು ನಮಗೆಲ್ಲರಿಗೂ ವೇದ್ಯವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಅನೇಕ ಸಕ್ಕರೆ ಕಾರ್ಖಾನೆಗಳು ಇವೆ. ಮಾನ್ಯ ಜೆ. ಎಚ್. ಪಟೇಲ್‌ರವರು ಹಿರಿಯರು, ಬಹಳ ಅನುಭವಶಾಲಿಗಳು ಮಂತ್ರಿಗಳಾಗಿರುವಾಗ ಈ ಸಕ್ಕರೆ ಕಾರ್ಖಾನೆಗಳು ಬಹಳ ಉಚ್ಚ್ರಾಯಮಟ್ಟಕ್ಕೆ ಹೋಗಬೇಕಾಗಿತ್ತು ಎಂದು ಹೇಳುವಾಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಪ್ರದೇಶ ಮತ್ತು ಪಂಜಾಬ್‌ಗಳಲ್ಲಿರತಕ್ಕಂಥ ಕಾರ್ಖಾನೆಗಳ ಬಗ್ಗೆ ಹೋಲಿಸಿ ನಮ್ಮಲ್ಲಿ ನಂಬರ್ ೧, ನಂಬರ್ ೨ ಗೆ ಹೋಗಿದ್ದೇವೆಂದು ಹೇಳಿದರು. ಆದರೆ ಸಕ್ಕರೆ ಕಾರ್ಖಾನೆಗಳ ಬಗ್ಗೆ ಹೇಳುವುದಾದರೆ, ಬಹಳ ಬೇಸರದಿಂದ ಹೇಳಬೇಕಾಗುತ್ತದೆ. ಇಡೀ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಪೈಕಿ ಒಂದೆರಡನ್ನು ಬಿಟ್ಟರೆ ಉಳಿದ ಕಾರ್ಖಾನೆಗಳನ್ನು ತೆಗೆದುಕೊಂಡರೆ ಅವು ಮುಚ್ಚತಕ್ಕಂಥ ಪರಿಸ್ಥಿತಿಗೆ ಬಂದಿರುತ್ತದೆ. ಮತ್ತೆ ಉಳಿದ ಕಾರ್ಖಾನೆಗಳಲ್ಲಿ ಅಷ್ಟೋ ಇಷ್ಟೋ ಬದುಕಿ ಉಳಿದಿರತಕ್ಕಂಥ ಕಾರ್ಖಾನೆಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಮತ್ತು ಸಂಪೂರ್ಣವಾಗಿ ಮುಚ್ಚಿರತಕ್ಕಂಥ ಕಾರ್ಖಾನೆಗಳನ್ನು ಪುನರ್ ಪ್ರಾರಂಭ ಮಾಡುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದಾರೆಯೋ ಎಂದು ನೋಡಿದರೆ ಅಂಥ ಯಾವ ಪ್ರಯತ್ನವನ್ನೂ ಕೂಡ ಮಾಡಿದಂತಿಲ್ಲ.

(ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಬೆಂಗಳೂರು ನಗರದಲ್ಲಿ ನೀರಿನ ಬವಣೆ ವಿಪರೀತವಾಗಿ ಉಂಟಾಗಿರುವ ಬಗ್ಗೆ ಮಾನ್ಯ ಅಧ್ಯಕ್ಷಣಿಯವರಿಗೂ ಸಹ ತಿಳಿದಿರಬಹುದು. ಇದನ್ನು ತಪ್ಪಿಸುವುದಕ್ಕೆ ಕಾವೇರಿ ಮೂರನೆಯ ಹಂತವನ್ನು ಕೈಗೊಳ್ಳಬೇಕಾಗಿದ್ದು, ಇದಕ್ಕೆ ಹಣವನ್ನು ತೊಡಗಿಸಬೇಕಾಗಿರುತ್ತದೆ. ನಾವು ಕಾಂಗ್ರೆಸ್ (ಐ) ಪಕ್ಷದವರು ಅನೇಕ ಸಲ ಕೇಂದ್ರ ಸರ್ಕಾರವನ್ನು ಕೇಳಿ ಒತ್ತಾಯ ತಂದಿರುತ್ತೇವೆ. ಈ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಅಕ್ಷರವನ್ನು ಸಹ ಬರೆದಿಲ್ಲ. ಬೆಂಗಳೂರು ನಗರಕ್ಕೇ ಆಗಲಿ, ಇನ್ನಿತರ ನಗರಗಳಿಗೆ ಆಗಲಿ ಇತರ ನಗರಗಳು ಯಾವುದೇ ಆಗಲಿ ನೀರಿನ ಬವಣೆಯನ್ನು ಪಡುತ್ತಿರುವುದನ್ನು ತಪ್ಪಿಸಲಿಕ್ಕೆ ಸರ್ಕಾರದಿಂದ ಆಗಲಿಲ್ಲ.

ಇಷ್ಟೇ ಅಲ್ಲ, ಇಡೀ ರಾಷ್ಟ್ರದಲ್ಲಿ, ಇಡಿ ಜಗತ್ತಿನಲ್ಲಿಯೇ ಹೊಸ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದಿರುತ್ತಾರೆ. ಅದೇರೀತಿಯಾದ ಪಾಲಿಸಿಯನ್ನು ತಂದರೆ ಯಾವರೀತಿ ಅನ್ವಯವಾಗುತ್ತದೆ, ಎಲ್ಲೆಲ್ಲಿ ಯಾವ ಯಾವರೀತಿಯಾದ ದೋಷಗಳು ಇದೆ ಇದನ್ನು ತಪ್ಪಿಸಲಿಕ್ಕೆ ಏನು ಮಾಡಬೇಕು ಎನ್ನುವ ಬಗ್ಗೆ ಯೋಚನೆ ಮಾಡಿದ್ದೀರಾ ? ನಮ್ಮ ಕೇಂದ್ರ ಸರ್ಕಾರದವರು ರಚನೆ ಮಾಡಿರತಕ್ಕಂಥ ಶಿಕ್ಷಣ ಪದ್ಧತಿಯನ್ನು ಒಳಪಟ್ಟಂತೆ ಕಾರ್ಯಕ್ರಮಗಳನ್ನು ಕೈಗೊಂಡು ಅವರಿಂದ ಸಹಾಯವನ್ನು ಪಡೆಯಲು ರೂಪಿಸಿದ ಯೋಜನೆಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ವಿಷಯವನ್ನು ನಮೂದು ಮಾಡಿಲ್ಲ. ಶಿಕ್ಷಣದಲ್ಲಿ ಅಭಿರುಚಿ ಉಳ್ಳವರಾಗಿದ್ದೀರಾ ಎಂದು ಪ್ರಶ್ನೆಯನ್ನು ಕೇಳಿ ಮಾತನಾಡಿದಾಗ ತಮಗೆ ಕೋಪ ಬರುತ್ತದೆ. ನಿಜಸ್ಥಿತಿಯನ್ನು ತಾವೇ ತಿಳಿದುಕೊಂಡು ತಾವು ಇನ್ನೆಷ್ಟು ದಿವಸಗಳ ಕಾಲ ಅಧಿಕಾರದಲ್ಲಿ ಉಳಿಯಲು ಶಿಕ್ಷಣ ಪದ್ಧತಿಯ ಬಗ್ಗೆ ನಿಮ್ಮಲ್ಲಿ ಯಾವುದಾದರೂ ಯೋಜನೆಗಳು ಇದೆಯೇ? ನೀವು ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿದ್ದೇವೆಂದು ಮಾತ್ರ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ.

ಕ್ಯಾಪಿಟೇಷನ್ ಫೀಸ್ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಅನೇಕವಿಧವಾಗಿ ಹೇಳಿದ್ದಾರೆ. ಈ ವರ್ಷ ಕ್ಯಾಪಿಟೇಷನ್ ಫೀಸ್‌ನ್ನು ಬಂದ್ ಮಾಡುತ್ತೇವೆಂದು ಹೇಳಿದಿರಿ. ನನಗೆ ಗೊತ್ತಿರುವಂತೆ ಕ್ಯಾಪಿಟೇಷನ್ ಫೀಸ್‌ನ್ನು ವಸೂಲು ಮಾಡುತ್ತಲೇ ಇರುತ್ತಾರೆ. ಇದನ್ನು ಸಂಪೂರ್ಣವಾಗಿ ನಿಲ್ಲಿಸಿಲ್ಲ. ನಮ್ಮ ರಾಜ್ಯದಲ್ಲಿಯೇ ಅಲ್ಲ ಇಡೀ ರಾಷ್ಟ್ರದಲ್ಲಿ ಯಾವುಯಾವುದೋ ರಾಷ್ಟ್ರಗಳಲ್ಲಿ ಬರತಕ್ಕಂಥ ವಿದ್ಯಾರ್ಥಿಗಳಿಂದ ಲಕ್ಷಗಟ್ಟಲೇ, ಕೋಟಿಗಟ್ಟಲೆ ಹಣವನ್ನು ಮಾಡತಕ್ಕಂಥ ಶಿಕ್ಷಣ ಸಂಸ್ಥೆಗಳು ನಮ್ಮ ರಾಜ್ಯದಲ್ಲಿ ಹಣವನ್ನು ಗಳಿಸತಕ್ಕಂಥ ಒಂದು ಸಂಪ್ರದಾಯವನ್ನು ಬೆಳೆಸಿಕೊಂಡು ಬರತಕ್ಕಂಥದ್ದು ನಡೆಯುತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.—ನೀವು ನಡೆಸುತ್ತಿರುವ ಶಿಕ್ಷಣ ಸಂಸ್ಥೆಯಿಂದ ಲಾಭ ಮಾಡುತ್ತಿರುವುದನ್ನು ಕೂಡ ಹೇಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಪ್ರಾಮಾಣಿಕವಾಗಿ ನಡೆಸತಕ್ಕಂಥ ಶಿಕ್ಷಣ ಸಂಸ್ಥೆಗಳಿಗೆ ಪುಕ್ಕಟೆಯಾಗಿ ಕೊಡಲಿ ಅದಕ್ಕೆ ಯಾವುದೇ ಅಭ್ಯಂತರವೂ ಇಲ್ಲ. ಅವರಿಗೆ ಅನ್ಯಾಯವಾಗದೇ ಇರತಕ್ಕಂಥ ಅಧಿಕಾರವನ್ನು ಕೊಟ್ಟಿದ್ದೀರಿ. ನೇರವಾಗಿ ನೀವೇ ಫಿಕ್ಸ್ ಮಾಡಿ. ಹತ್ತು ಸಾವಿರ ರೂಪಾಯಿಗಳೆಂದು ಫಿಕ್ಸ್ ಮಾಡಿ ಯಾವುದೇ ಶಿಕ್ಷಣ ಸಂಸ್ಥೆಯನ್ನು ನಡೆಸಬೇಕಾದರೂ ಅನುದಾನವನ್ನು ಕೊಡತಕ್ಕಂಥದ್ದು ಅವಶ್ಯಕತೆ ಇರುತ್ತದೆ. ಶಿಕ್ಷಕರಿಗೆ ಎಷ್ಟು, ಲ್ಯಾಬರೇಟರಿ ಎಕ್ವಿಪ್‌ಮೆಂಟ್, ಪೀಠೋಪಕರಣಗಳಿಗೆ ಇಂತಿಷ್ಟು ಹಣ ಕೊಡಬೇಕೆಂದು ನಿರ್ಧಾರ ಮಾಡಿ. ಆ ನಿರ್ಧಾರಕ್ಕೆ ಅನುಗುಣವಾಗುವಂತೆ ನಡೆದುಕೊಳ್ಳಲು ಒಪ್ಪುತ್ತೇವೆ.

ಅದು ಬಿಟ್ಟು ಅಲ್ಲಿರತಕ್ಕಂಥ ಡೈರೆಕ್ಟರ್ ಆಗಲ್ಲಿ ಇನ್ನಿತರೇ ಆಗಲಿ ಬಂದ ಹಣವನ್ನು ಕಬಳಿಸುವ ರೀತಿಯಲ್ಲಿ ನಡೆದುಕೊಂಡು ಹೋದರೆ, ಈ ಶಿಕ್ಷಣ ಸಂಸ್ಥೆಗಳು ಪ್ರಾಸ್ಟಿಟ್ಯೂಟ್ ಹೌಸ್‌ಗಳಾಗುತ್ತವೆ ಎನ್ನುವ ಎಚ್ಚರಿಕೆಯನ್ನು ನಾನು ಸರ್ಕಾರಕ್ಕೆ ಕೊಡಲಿಕ್ಕೆ ಇಚ್ಚೆಪಡುತ್ತೇನೆ. ಉತ್ತಮ ಶಿಕ್ಷಣ ಸಂಸ್ಥೆಗಳ ಬಗ್ಗೆ ನಾನು ಮಾತನಾಡುವುದಿಲ್ಲ. ಕೆಲವರ ಉದ್ಯೋಗ ಏನು ಎಂದರೆ ಶಿಕ್ಷಣ ಸಂಸ್ಥೆಗಳನ್ನು ನಡೆಸುವುದು ಇರುತ್ತದೆ ಯಾವುದಾದರೂ ಒಂದು ಸಂಘ ಮಾಡಿಕೊಂಡು ಟ್ರಸ್ಟ್ ವತಿಯಿಂದ ಶಿಕ್ಷಣ ಕೊಡುವ ವ್ಯವಸ್ಥೆ ಮಾಡುವುದಾದರೆ ನನ್ನ ಅಭ್ಯಂತರ ಇಲ್ಲ; ಆದರೆ ಖಾಸಗಿಯಾಗಿ ಕೆಲವರು ಶಾಲೆಗಳನ್ನು ನಡೆಸಿ ಈ ಶಾಲೆಗಳ ಮುಖಾಂತರ ಅವರ ಹಾಗೂ ಅವರ ಹಿತೈಷಿಗಳ ಸಂರಕ್ಷಣೆ ಮಾಡುವ ಉದ್ದೇಶ

ವನ್ನು ಏನು ಇಟ್ಟುಕೊಂಡಿದ್ದಾರೆ. ಇಂಥಾದ್ದನ್ನು ಬಂದ್ ಮಾಡಲಿಕ್ಕೆ ಯಾವುದಾದರೂ ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರಕ್ಕೆ ಬಿನ್ನಹ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷಿಣಿಯವರೇ, ಕ್ಷಾಮ ಮೂರು ವರ್ಷಗಳ ಕಾಲ ಬಂದಿದೆ. ಇವರಿಂದ ಹೆಚ್ಚಿನ ನಿರೀಕ್ಷೆ ಏನೂ ಮಾಡದಿದ್ದರೂ, ಮುಂದೆ ಕ್ಷಾಮ ಬಾರದಹಾಗೆ ಅದನ್ನು ಎದುರಿಸಲಿಕ್ಕೆ ಬೇಕಾದಂಥ ಸಲಕರಣೆಗಳನ್ನು ತಯಾರು ಮಾಡುವುದಕ್ಕಾದರೂ ಯೋಚನೆ ಮಾಡಬೇಕು. ಅದು ಕೂಡ ಆಗಲಿಲ್ಲ ವೆನ್ನುವುದು ನಮ್ಮ ವ್ಯಥೆ. ಇವತ್ತು ಮಾನ್ಯ ಶ್ರೀ ದೇವೇಗೌಡರವರು ಅನೇಕ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಹಾಕಿದ್ದಾರೆ. ಅವುಗಳನ್ನೆಲ್ಲಾ ಮಾಡಬೇಕೆಂದು ಅವರಿಗೆ ಅಭಿಲಾಷೆ ಇದೆ. ಆದರೆ, ಪಾಪ ಅದಕ್ಕೆ ಬೇಕಾಗುವಷ್ಟು ಹಣ ಇಲ್ಲ. ಇವತ್ತಿನ ದಿವಸ ನಮಗೆ ಕೋಟ್ಯಾಂತರ ರೂಪಾಯಿ ಹಣ ಇವುಗಳನ್ನು ಪೂರೈಸಬೇಕಾದರೆ ಸುಮಾರಾಗಿ ಬೇಕಾಗುತ್ತದೆ. ಪ್ರತಿವರ್ಷ ೨–೩ ಸಾವಿರ ಕೋಟಿ ಹಣವನ್ನು ಇದಕ್ಕಾಗಿ ತೆಗೆದಿಟ್ಟು ಕೆಲವು ದಿವಂಗತ ದೇವರಾಜ ಅರಸು ಅವರು ಇದ್ದಾಗ ಕಟ್ಟಿಸಿದಂತಹ ಅಣೆಕಟ್ಟುಗಳು ಕೆಲವು ಏನು ಇವೆ, ಅಲ್ಲಿ ಕಾಲುವೆಗಳನ್ನು ಮಾಡಿದರೆ, ಒಳ್ಳೆಯದು. ಅನೇಕ ಕಡೆ ಇವು ಇನ್ನೂ ಪೂರ್ತಿಯಾಗಿಲ್ಲ. ಹಲ್ಲು ಇದ್ದವರಿಗೆ ಕಡಲೆ ಇಲ್ಲ, ಕಡಲೆ ಇದ್ದವರಿಗೆ ಹಲ್ಲು ಇಲ್ಲ–ಎನ್ನುವಂಥ ಪರಿಸ್ಥಿತಿ ನಮಗೆ ಬಂದಿದೆ. ನಾನು ಹೇಳಲಿಕ್ಕೆ ಹೋದರೆ ಕುದುರೆ ನಿಂತು ಹೋಗುತ್ತದೆ ಎಂದು ಶ್ರೀಮಾನ್ ಜೆ.ಹೆಚ್. ಪಟೇಲರು ಹೇಳುತ್ತಾರೆ. ಹಿಂದಿನವರ ಕಹಿ–ಸಿಹಿ ಎರಡೂ ಬಗೆಯ ಅನುಭವವನ್ನು ಪಡೆದು, ಬುದ್ಧಿವಂತಿಕೆಯನ್ನು ಉಪಯೋಗ ಮಾಡಿ ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಡುವ ಕಡೆಗೆ ಹೆಚ್ಚಿನ ಗಮನ ಕೊಡಬೇಕಾಗುತ್ತದೆ ಎಂದು ನಾನು ಹೇಳುತ್ತೇನೆ. ಈಗಲೂ ಸಮಯ ಮೀರಿಲ್ಲ. ಮುಂದಿನ ಫೈನಾನ್ಸಿಯಲ್ ಬಡ್ಜೆಟ್‌ನಲ್ಲಾದರೂ ಕನಿಷ್ಟ ಸುಮಾರು ಮೂರು ಸಾವಿರ ಕೋಟಿ ಹಣವನ್ನು ನೀವು ಬೃಹತ್ ನೀರಾವರಿ ಯೋಜನೆಗಳಿಗಾಗಿ ಮೀಸಲಿಟ್ಟು ರೈತಾಪಿ ಜನರಿಗೆ ಅನುಕೂಲವಾಗುವಂತೆ ಯೋಜನೆಯನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಕಾವೇರಿ ಇರಲಿ, ಕೃಷ್ಣ, ಮಲಪ್ರಭಾ, ಘಟಪ್ರಭಾ ಯಾವುದೇ ಇರಲಿ, ಎಲ್ಲಿ ತೀವ್ರವಾಗಿ ಮುಗಿಸಲಿಕ್ಕೆ ಸಾಧ್ಯವೋ ಅದನ್ನು ಮುಗಿಸಿ ಕೀರ್ತಿಶಾಲಿಗಳಾಗತಕ್ಕಂಥ ಮಾಡಬೇಕೆಂದು ಇವತ್ತಿನ ದಿವಸ ನಾನು ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು, ಈ ಸರ್ಕಾರ ಮಾಡಿದಂಥ ಭಾಷಣ ನೋಡಿದರೆ, ಕೇಂದ್ರವನ್ನು ಹಳಿಯುವುದಕ್ಕಾಗಿಯೇ ಅವರು ಬಹುಭಾಗವನ್ನು ಉಪಯೋಗಿಸಿಕೊಂಡಿದ್ದಾರೆ. ಹೀಗೆ ಹಳಿಯುವಾಗ ಜನತೆಗೆ ಏನು ಅನ್ಯಾಯವಾಗುತ್ತಾ ಇದೆ ಎಂಬುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳದೇ ಮಾಡುತ್ತಿದ್ದಾರೆ. ಕೇವಲ ಕೇಂದ್ರವನ್ನು ಹಳಿಯುವುದನ್ನು ಗಮನದಲ್ಲಿಟ್ಟುಕೊಂಡು ರಚನಾತ್ಮಕ ಕಾರ್ಯಗಳ ಬಗ್ಗೆ ಆಸಕ್ತಿ ವಹಿಸಿಲ್ಲದೇ ಹೋದರೆ, ಆಗ ನಾವು ಟೀಕೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ನನ್ನ ಮತದಾರ ಕ್ಷೇತ್ರಕ್ಕೆ ನಾವು ಅನ್ಯಾಯ ಮಾಡಿದಂತಾಗುತ್ತದೆ ಎನ್ನುವ ಭಾವನೆ ನನಗೆ ಇದೆ. ರಚನಾತ್ಮಕ ಕಾರ್ಯಗಳಲ್ಲಿ ಎಲ್ಲೆಲ್ಲಿ ತಡ ಮಾಡುತ್ತಿದ್ದಾರೆ, ಅಲ್ಲಿ ಮಾತ್ರ ನಾವು ಟೀಕೆ ಮಾಡೋಣ. ಇಲ್ಲದಿದ್ದರೆ ವ್ಯರ್ಥವಾಗಿ ನಮ್ಮ ಸಮಯ ಹಾಳು ಮಾಡುವುದು ಬೇಡ, ಮತ್ತು ಅವರ ಮನಸ್ಸು ನೋಯಿಸುವುದೂ ಬೇಡ. ಕೇಂದ್ರವನ್ನು ಬಯ್ಯುವುದನ್ನು ಅವರು ತೀವ್ರವಾಗಿ ಬದಲಾಯಿಸಿಕೊಳ್ಳುವುದು ಒಳಿತು. ನೀವು ಏನು ಮಾಡಿದಿರಿ ಎಂದು ಕೇಳಿದರೆ ಅವರು ಏನು ಉತ್ತರ ಕೊಡುತ್ತಾರೆ ? ಮಾನ್ಯ ಆರೋಗ್ಯ ಸಚಿವ ಡಾ. ತಿಮ್ಮೇಗೌಡರು ಇಲ್ಲಿ ಇದ್ದಾರೆ. ಇವತ್ತಿನ ದಿವಸ ನಾನು ಅವರನ್ನು ಒತ್ತಾಯ ಮಾಡಿ ಕೇಳುತ್ತಿದ್ದೇನೆ, ಕೇಂದ್ರ ಸರ್ಕಾರದವರು ಎಷ್ಟು ಹಣ ಕೊಡುತ್ತಿದ್ದಾರೆ, ಅಷ್ಟೂ ಹಣವನ್ನು ಪಡೆಯುವುದಕ್ಕೆ ಇವರು ಪ್ರಯತ್ನ ಮಾಡುತ್ತಿದ್ದಾರೆಯೆ ? ನೀವು ಪ್ರಾಮಾಣಿಕ ಮಂತ್ರಿಯಾಗಿರ ಬಹುದು. ಆದರೆ ನಿಮಗೆ ಸಹಾಯಕರಾಗಿರತಕ್ಕಂಥವರು ಅಷ್ಟು ಪ್ರಾಮಾಣಿಕರಾಗಿದ್ದಾರೆಯೆ ? ನಿಮ್ಮ ಪ್ರಾಮಾಣಿಕತೆ ಮನೆಯಲ್ಲಿದ್ದರೆ ಉಪಯೋಗ ಇಲ್ಲ. ಸಾರ್ವಜನಿಕರು ಯಾವ ರೀತಿಯ ಉಪಯೋಗ ಪಡೆಯುತ್ತಿದ್ದಾರೆ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಸ್ಪೆಶಲೈಸ್ ಹಾಸ್ಪಿಟಲ್‌ಗಳನ್ನು ಕಟ್ಟಲಿಕ್ಕೆ ಕೇಂದ್ರದಿಂದ ಹಣ ಪಡೆಯತಕ್ಕಂಥ ಪ್ರಯತ್ನ ಮಾಡಿದ್ದೀರಾ ? ಪ್ರತಿಹಳ್ಳಿಯಲ್ಲೂ ದವಾಖಾನೆಗಳನ್ನು ಕಟ್ಟಿಸಲಿಕ್ಕೆ ಕೇಂದ್ರ ಸರ್ಕಾರದವರಿಂದ ಎಷ್ಟರಮಟ್ಟಿಗೆ ಹಣವನ್ನು ಪಡೆದು ಕೊಂಡಿದ್ದೀರಿ ? ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದ್ದು, ಅವರು ಯಾವ ಅಭಿಪ್ರಾಯವನ್ನೂ ಹೇಳಿದೇನೆ, ಯಾವ ಸ್ಟೇಟ್‌ಮೆಂಟ್ ಕೂಡ ಈ ಸದನಕ್ಕೆ ಬಾರದೇ, ನಮ್ಮ ಗಮನಕ್ಕೂ ಕೂಡಬಾರದೇ, ಜನಸಾಮಾನ್ಯರಿಗೂ ತಿಳಿಯದೆ ಈ ಬಂದು ದವಾಖಾನೆ ಗಳ ವಿಸ್ತರಣೆಯ ಉಪಯೋಗ ಪಡೆಯುತ್ತೇವೆ ಎಂದರೆ ಹೇಗೆ ? ಇದರ ಪ್ರಯೋಜನ ಪಡೆಯದೇ

ಇದ್ದರೆ, ನಿಜವಾಗಿಯೂ ನಾವು ಜನತೆಗೆ ದ್ರೋಹ ಮಾಡಿದಂತೆ ಆಗುತ್ತದೆ ಎಂಬ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಡಲಿಕ್ಕೆ ನಾನು ಇಷ್ಟಪಡುತ್ತೇನೆ.

ಇವರು ಹಾಕಿಕೊಳ್ಳುವ ಯೋಜನೆಗಳು ಯಾವುದೂ ಸಾಗುತ್ತಿಲ್ಲ. ಪ್ರಚಾರ ಇಲಾಖೆಯಿಂದ ಪ್ರಚಾರ ಮಾತ್ರ ದೊಡ್ಡದಾಗಿ ಮಾಡುತ್ತಾರೆ. ಅವರು ಮಾಡತಕ್ಕಂಥ ಪ್ರಚಾರ ನೋಡಿದರೆ ಕಿವಿ ಮತ್ತು ಕಣ್ಣು ಮುಚ್ಚಿಕೊಳ್ಳಬೇಕಾಗುತ್ತದೆ. ಫೈಲುಗಳನ್ನು ವರ್ಷಾನುಗಟ್ಟಲೆ ಇಟ್ಟುಕೊಳ್ಳುತ್ತಾರೆ. ಎಷ್ಟು ವರ್ಷ ಫೈಲು ಇಟ್ಟುಕೊಳ್ಳುತ್ತಾರೆ ಎಂದು ಕೇಳಿದರೆ ಅದಕ್ಕೆ ಉತ್ತರವೇ ಇಲ್ಲ. ನಾವು ಮಾತನಾಡಿದರೆ ನಿಮ್ಮ ಕುದರೆ ನಿಂತು ನಿಂತು ಹೋಗುತ್ತದೆ ಎಂದು ಹೇಳುತ್ತಾರೆ. ಅದೆ ಇವರ ಕುದರೆ ಸರೋವರದೊಳಗೆ ಹೋಗಿ ಬೀಳುತ್ತದೆ. ಒಂದೊಂದು ವರ್ಷದವರೆಗೆ ಫೈಲು ಇಟ್ಟುಕೊಂಡರೆ ಇಂತಹ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದು ಬಿಟ್ಟು ಸಣ್ಣ ಸಣ್ಣ ಪೇದೆಗಳನ್ನು ಯಾವ್ಯಾವುದೋ ಕಾರಣಕ್ಕೆ ಸಸ್ಪೆಂಡ್ ಮಾಡುವಂತಹ ಸರ್ಕಾರ ನಿಜವಾಗಿಯೂ ಅಧಿಕಾರದಲ್ಲಿ ಉಳಿಯಲು ಅದಕ್ಕೆ ಅರ್ಹತೆ ಇದೆಯೋ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಐ.ಎ.ಎಸ್. ಅಧಿಕಾರಿಗಳನ್ನು ಸಂಸ್ಪೆಂಡ್ ಮಾಡಿ ಎಂದು ನೀವು ಧರಣಿ ಮಾಡಲಿಲ್ಲ.

ಶ್ರೀ ಕೆ.ಎಚ್. ಪಾಟೀಲ್.—ಏಕೆ ಧರಣಿ ಮಾಡಬೇಕು ? ಧರಣಿ ಯಾವಾಗ ಮಾಡಬೇಕು ಎಂದರೆ ನಮ್ಮ ಶಕ್ತಿ ಎಲ್ಲಾ ಉಡುಗಿ ಹತಾಶರಾದಾಗ ಮಾಡಬೇಕು. ನಿಮ್ಮ ಸರ್ಕಾರವನ್ನು ಕೆಳಗಿಳಿಸಲಿಕ್ಕೆ ನಮಗೆ ಇನ್ನೂ ಶಕ್ತಿ ಇದೆ.

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ಕೇಂದ್ರ ಸರ್ಕಾರದವರು ಸ್ಪೆಶಲೈಸ್ಡ್ ಆಸ್ಪತ್ರೆಗಳಿಗೆ ದುಡ್ಡು ಕೊಡುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಬಹುಶ; ಅದನ್ನು ಅವರು ಕೊಡಿಸಿಕೊಟ್ಟರೆ ನಾನು ಅವರಿಗೆ ಚಿರಋಣಿಯಾಗಿರುತ್ತೇನೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಯಾವ ದುಡ್ಡೂ ಬರುವುದಿಲ್ಲ.

ಶ್ರೀ ಕೆ.ಎಚ್. ಪಾಟೀಲ್.—ಕೇಂದ್ರ ಸರ್ಕಾರದವರು ವ್ಯಾಗನ್‌ಗಳಲ್ಲಿ ಹಣ ತುಂಬಿಸಿಕೊಂಡು ಕೊಡುವುದಕ್ಕೆ ಬರುವುದಿಲ್ಲ. ಅವರು ಸಹಾಯ ಮಾಡುವ ಸ್ಕೀಮ್‌ಗಳು ಇವೆ, ಬೇಕಾದರೆ ನಿಮಗೆ ಕಳಿಸಿಕೊಡುತ್ತೇನೆ. ಒನ್‌ಥರ್ಡ್ ಸ್ಕೀಮ್ ಅಂತ ಒಂದು ಇದೆ. ವರ್ಲ್ಡ್ ಬ್ಯಾಂಕ್ ಯೋಜನೆಯಿಂದ ರೂಪಿತವಾಗಿರುವ ಸ್ಕೀಮ್ ಅದು. ಇದಕ್ಕೆ ಒಂದು ಕಮಿಟಿ ಇದೆ. ಮುಖ್ಯ ಕಾರ್ಯದರ್ಶಿಗಳು ಅದಕ್ಕೆ ಅಧ್ಯಕ್ಷರಾಗಿದ್ದಾರೆ. ಅವರು ಹೋಗಿ ಪರಿಶೀಲನೆ ಮಾಡಬೇಕು. ಎಲ್ಲೆಲ್ಲಿ ಆಸ್ಪತ್ರೆಗಳು ಕಡಿಮೆ ಇದೆ, ಸಿಬ್ಬಂಧಿ ವರ್ಗ ಎಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಇಲ್ಲ ? ಎಂಬುದನ್ನು ನೋಡಬೇಕು. ಇದಕ್ಕೆ ಬೇಕಾದಂಥ ಮುಕ್ಕಾಲು ಭಾಗದಷ್ಟು ಹಣ ಸಂಪೂರ್ಣವಾಗಿ ವರ್ಲ್ಡ್ ಬ್ಯಾಂಕ್‌ನಿಂದ ಸಿಗುತ್ತದೆ. ಇದರ ಬಗ್ಗೆ ಏನು ಮಾಡಿದ್ದೀರಿ ? ಹಾಗೆಯೇ ವಿಶ್ವ ಆರೋಗ್ಯ ಸಂಸ್ಥೆ ಕೂಡ ಸಾಕಷ್ಟು ಹಣ ಕೊಡುತ್ತಿದೆ. ಗುಜರಾತ್ ಮತ್ತು ಮಹಾರಾಷ್ಟ್ರದವರು ಯಾವ ರೀತಿ ಅಲ್ಲಿಂದ ಹಣ ಪಡೆದುಕೊಂಡಿದ್ದಾರೆ ಎಂಬುದನ್ನು ನೋಡಬೇಕು. ಇದಕ್ಕೆ ನೀವು ನಮ್ಮ ಸಹಾಯ ಕೇಳಬೇಕಾದ ಅವಶ್ಯಕತೆ ಇಲ್ಲ. ತಮಗೆ ವಿರೋಧ ಮಾಡಿದವರಿಗೆ ಕೊಡಬಾರದು ಎನ್ನುವ ಪಕ್ಷಭಾವನೆ ಕೇಂದ್ರ ಸರ್ಕಾರದಲ್ಲಿ ಇಲ್ಲ. ನೀವು ಕೇಳಿದರೆ ನಿಮಗೆ ಕೊಡುತ್ತಾರೆ. ಒಂದು ಉದಾಹರಣೆಯನ್ನು ನಿಮಗೆ ಹೇಳಿದರೆ ಈ ಸಂದರ್ಭದಲ್ಲಿ ತಪ್ಪಾಗುವುದಿಲ್ಲವೆಂದು ಭಾವಿಸುತ್ತೇನೆ. ಒನ್‌ಥರ್ಡ್ ಸ್ಕೀಮ್ ಪ್ರಕಾರ ಕೇಳಲಾದ ಕೆ.ಎಚ್. ಪಾಟೀಲರ ಸಂಸ್ಥೆ. ಒಂದೂವರೆ ವರ್ಷ ಆಯಿತು. ಇದು ಏತಕ್ಕೆ ಹಿಂದೆ ಹೋಯಿತು ? ಏನೂ ಆಗಿಲ್ಲ. ಇದಕ್ಕೆ ಆರೋಗ್ಯ ಇಲಾಖೆಯ ನಿರ್ದೇಶಕರನ್ನು ಏನಾದರೂ ಸಸ್ಪೆಂಡ್ ಮಾಡುತ್ತೀರಾ ?

೧–೦೦ ಪಿ.ಎಂ

ಹೀಗೆ ಆರೋಗ್ಯ ಇಲಾಖೆ ಹಿಂದೆ ಬಿದ್ದರೆ ಹೇಗೆ ? ನಾನು ನಿಮ್ಮಲ್ಲಿ ತಪ್ಪನ್ನು ಕಾಣುತ್ತಿಲ್ಲ. ಆದರೆ ಇವನ್ನೆಲ್ಲ ತಮ್ಮ ಹತ್ತಿರಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತರುವುದಿಲ್ಲ, ಅಷ್ಟೇ.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).—ಒನ್ ಥರ್ಡ್ ಸ್ಕೀಮ್ ನಮ್ಮ ಸರ್ಕಾರದಿಂದ ಕೊನೆಗೆ ಹೋಗಿ ಸ್ಯಾಂಕ್ಷನ್ ಆಗಿ ಬಂದಿದೆ. ನಮ್ಮ ದುಡ್ಡನ್ನು ಈ ವರ್ಷ ಬಜೆಟ್‌ನಲ್ಲಿಲ್ಲದ್ದರಿಂದ ರಿಲೀಸ್ ಮಾಡಲಿಲ್ಲ. ಈ ವರ್ಷ ಎರಡು ಮತ್ತೆ ಎರಡು ಕಳಿಸಿದ್ದೇವೆ. ಹಿಂದಿನ ದನ್ನು ಧಾರವಾಡಕ್ಕೊಂದು ಬೆಳಗಾಮ್‌ಗೊಂದು ಅಲಾಟ್ ಮಾಡಿದ್ದೇವೆ. ಕೇಂದ್ರ ಪಕ್ಷಪಾತ ಮಾಡುತ್ತಿದೆ ಎಂದು ನಾನು ಹೇಳಲಿಲ್ಲ. ವಿಶೇಷ ಆರೋಗ್ಯ ಘಟಕ ಯೋಜನೆಯು ಫೈನಾನ್ಸಿಯಲ್ ಸ್ಯಾಂಕ್ಷನ್ ಕೇಂದ್ರದಿಂದ ಯಾವುದೂ ಇಲ್ಲ. ನಮಗೇನಿದ್ದರೂ ಫ್ಯಾಮಿಲಿ ವೆಲ್‌ಫೇರ್ ಯೋಜನೆಗೆ ಎಷ್ಟು ಬೇಕೋ ಅಷ್ಟನ್ನು ಕೊಡುತ್ತಿದ್ದಾರೆ. ಪಕ್ಷಪಾತ ಮಾಡುತ್ತಾ ಇಲ್ಲ. ಸ್ಪೆಷಲ್ ಹೆಲ್ತ್ ಸ್ಕೀಮಿಗೆ ನೀವೇನಾದರೂ ಸ್ಯಾಂಕ್ಷನ್ ಕೊಡಿಸಿಕೊಟ್ಟರೆ ಒಳ್ಳೆಯದಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ನಿಮ್ಮಲ್ಲಿ ಹಣ ಇಲ್ಲದಿದ್ದರೆ ನಾನು ಒತ್ತಾಯ ಮಾಡುವುದಿಲ್ಲ. ಹಣ ಇಲ್ಲದಿದ್ದರೆ ನೀವು ಆರ್ಡರ್ ಮಾಡಿ 'This amount may be paid at the second instalment.' ಆದರೆ ಹೀಗೆ ಮಾಡದ ಹೊರತು ಅವರದ್ದು ಬಂದರೆ ನಿಮ್ಮದಿಲ್ಲ, ನಿಮ್ಮದಿದ್ದರೆ ಅವರದು ಬರುವುದಿಲ್ಲ ಎಂದಂತಾಗುತ್ತದೆ. ನಿಮ್ಮಲ್ಲಿ ಶಾನೆ ಏಕೆ ಹಣವಿಲ್ಲ ? ವಿಶ್ವ ಕನ್ನಡ ಮೇಳ ಎಂದು ಕೋಟ್ಯಂತರ ರೂ. ಖರ್ಚು ಮಾಡಿ ಹತ್ತಾರು ಪೇಜುಗಳಲ್ಲಿ ಅಡ್ವರ್ಟೈಸ್‌ಮೆಂಟ್ ಕೊಟ್ಟಿದ್ದೀರಲ್ಲಾ ಏತಕ್ಕೆ ಮಾಡಿದಿರಿ ? ಡ್ಯಾನ್ಸ್‌ಗೆಂದು ಖರ್ಚು ಮಾಡಿದ ಹಣ ಖರ್ಚು ಮಾಡದಿದ್ದರೆ ಎಷ್ಟೋ ಶಾಲೆಗಳಾಗುತ್ತವೆ. ಶ್ರೀ ತಿಮ್ಮೇಗೌಡರೇ ಇದೆಲ್ಲ ಮಾಡುತ್ತಿದ್ದಾರೆಂದು ನಾನು ಹೇಳುತ್ತಿಲ್ಲ. ನಿಮ್ಮ ನಜರಿಗೆ ಇದೆಲ್ಲ ಬರುವುದಿಲ್ಲ. ನಿಮ್ಮ ತಪ್ಪಿಲ್ಲ.

ಇನ್ನೊಂದು ಹೇಳುತ್ತೇನೆ : ಇದ್ದಂತಹ ಆಸ್ಪತ್ರೆಗಳನ್ನು ಎನ್‌ಲಾರ್ಜ್ ಮಾಡಿ. ಎಕ್ಸ್‌ಟೆನ್‌ಷನ್ ಮಾಡಿ, ಎಕ್ಸ್‌ರೇ ಸಾಮಾನುಗಳನ್ನು ಕೊಳ್ಳುವುದಕ್ಕೆ ಕೇಂದ್ರದ ಸ್ಯಾಂಕ್ಷನ್ ಸಿಗುತ್ತದೆ. ಇದಕ್ಕೆಲ್ಲ ಸಂಬಂಧಿಸಿದ ಕಾಗದಗಳು, ಆರ್ಡರ್‌ಗಳು ನನ್ನ ಬಳಿ ಇವೆ. ಬೇಕಾದರೆ ನಿಮಗೆ ಅದನ್ನು ಕಳಿಸಿ ಕೊಡುತ್ತೇನೆ. ನೋಡಿ. ಇದರಲ್ಲಿ ನಿಮ್ಮ ಅಧಿಕಾರಿಗಳದ್ದು ತಪ್ಪಿರುತ್ತದೆ. ಬರೀ ಟ್ರಾನ್ಸ್‌ಫರ್, ಟ್ರಾನ್ಸ್‌ಫರ್ ಎಂದು ಈ ಅಧಿಕಾರಿಗಳು ಹಿಂದೆ ಬೀಳುತ್ತಾರಲ್ಲ ಅವರಿಗೆ ಈ ಕೆಲಸ ಮಾಡಿ ಎಂದು ತಾವು ಏಕೆ ಹೇಳಬಾರದು. ಅವರ ಬಗ್ಗೆ ಏಕೆ ಕ್ರಮ ತೆಗೆದುಕೊಳ್ಳಬಾರದು ?

ಮಾನ್ಯ ಸಭಾಧ್ಯಕ್ಷಣಿಯವರೇ, ಧಾರವಾಡ ವಿಶ್ವವಿದ್ಯಾನಿಲಯದ ಬಗ್ಗೆ ಏನೇನು ವ್ಯವಸ್ಥೆ ಮಾಡಿದ್ದೀನೆಂದು ನಮ್ಮ ಕೃಷಿ ಮಂತ್ರಿಗಳು ಹೇಳಿದರು. ಆದರೆ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಒಂದಕ್ಷರವಾದರೂ ಇದರ ಬಗ್ಗೆ ಇದೆಯೇ ? ಕೃಷಿ ವಿಶ್ವವಿದ್ಯಾಲಯದಂತಹ ಮಹತ್ವದ ವಿಷಯದ ಬಗ್ಗೆ ಇಷ್ಟು ನಿರಾಸಕ್ತಿ ಏಕೆ ? ಮುಂದೆ ಕೊಟ್ಟಿದ್ದಾರೆ. "ಮುಖ್ಯಮಂತ್ರಿಗಳ ನಿಧಿಗೆ ಹಣ ಕೊಡಿ" ಎಂದು. ಅದು ಅವರು ಹೇಳುವ ಮಾತೆ ? ನಮ್ಮ ರಾಜ್ಯದ ಮುಖ್ಯಮಂತ್ರಿಗಳಲ್ಲಿ ನಮಗೆ ವಿಶ್ವಾಸ ಇಲ್ಲವೇ ? ಅವರು ಕೇಳಿರುವಾಗ, ಅವರು ವಿರೋಧ ಪಕ್ಷದವರಾದರೂ ರಾಜ್ಯದ ಜನತೆಯ ದೃಷ್ಟಿಯಿಂದ ಅವರು ಕೇಳಿರುವಷ್ಟು ಹೇರಳವಾಗಿ ಹಣ ಕೊಡುವುದಕ್ಕೆ ನಮಗೇನೂ ಕಷ್ಟವಿಲ್ಲ. ಇಂತಹ ವಿಷಯದಲ್ಲಿ ರಾಜ್ಯಪಾಲರಿಂದ ಹೇಳಿಸುವಂತಹ ಮಾತು ಸರ್ಕಾರಕ್ಕೆ ಗೌರವ ತರುವಂಥದಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೆನೆ.

ಇನ್ನು ಭೂ ಸಂರಕ್ಷಣೆ ಕಾರ್ಯಕ್ರಮಗಳ ಬಗ್ಗೆ ಸ್ವಲ್ಪ ಹೇಳಿದ್ದಾರೆ. ಮಾನ್ಯ ಪ್ರಕಾಶರು ಹೇಳಿದರು, ಭೂ ಸಂರಕ್ಷಣೆ ಕಾರ್ಯಕ್ರಮ ಮಾಡುತ್ತೇವೆ ಎಂದು. ಇವರು ಪ್ರಿಂಟ್ ಮಾಡಿದಂತಹ "ನೀಡಿರುವ ಆಶ್ವಾಸನೆ–ಈಡೇರಿದ ಭರವಸೆ" ಪುಸ್ತಕದಲ್ಲಿ ಈ ಕಾರ್ಯಕ್ರಮದ ಬಗ್ಗೆ ಬಹಳಷ್ಟು ವಾಗ್ದಾನಗಳಿವೆ. ಆದರೆ ಇವರು ಮಾಡಿರುವುದೇನು ? ಅಲ್ಲೋ ಇಲ್ಲೋ ನಡೆದ ಒಂದು ಭೂ ಸಂರಕ್ಷಣೆ ಕಾರ್ಯಕ್ರಮ ಅಥವಾ ಬರ ಪರಿಹಾರ ಕಾರ್ಯಕ್ರಮ ಇವೆಲ್ಲವನ್ನು ಸೇರಿಸಿ ಇಷ್ಟೊಂದು ಮಾಡಿದ್ದೇವೆ ಎಂದು ಹೇಳುತ್ತೀದ್ದೀರಿ ಅಷ್ಟೇ. ರಾಜ್ಯಮಟದಲ್ಲಿ ಈ ಕಾರ್ಯಕ್ರಮದ ಸ್ಥಾನವೇನಿದೆ ಎನ್ನುವುದನ್ನು ಹೇಳುವಿರಾ ? ಮಾನ್ಯ ಪ್ರಕಾಶರೂ ಪಾಪ ವ್ಯವಸಾಯ ಮನೆತನದವರು. ಯಾವುದಕ್ಕೆ ಆದ್ಯತೆ ಕೊಡಬೇಕಾಗಿತ್ತೋ ಅದಕ್ಕೆ ಆದ್ಯತೆ ಕೊಟ್ಟಿಲ್ಲ. ಉತ್ತರ ಕರ್ನಾಟಕದಲ್ಲಿ ಭೂ ಸಂರಕ್ಷಣೆ ಆಗದಿದ್ದರೆ ಬಹುಭಾಗ ಮತ್ತೇ ಕ್ಷಾಮಕ್ಕೆ ಈಡಾಗುವಂತಹ ಪರಿಸ್ಥಿತಿ ಬಂದಿದೆ. ಇದಕ್ಕೆ ಹೇರಳವಾದ ಹಣ ಕೊಟ್ಟು ತೀವ್ರವಾಗಿ ಅಳವಡಿಸುವುದು ಅತ್ಯಂತ ಅವಶ್ಯವೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಸಭಾಧ್ಯಕ್ಷಿಣಿಯವರೇ, ಈ ಸರ್ಕಾರ ಹೊರಡಿಸಿದಂತಹ ಪ್ರಕಟಣೆಯಲ್ಲಿ ರೈತರ ಬಗ್ಗೆ ಬಹಳ ಉದಾರವಾದ ಮನಸ್ಸನು ತಳೆದಿದ್ದಾರೆ. ಏನು ಹೇಳಿದ್ದಾರೆಂದರೆ ತೆರಿಗೆಗಳನ್ನು ರದ್ದುಪಡಿಸಿ ಎಂಬುದು ರೈತರ ಬಹಳ ದಿನಗಳ ಆಗ್ರಹವಾಗಿತ್ತು. ತೆರಿಗೆಗಳನ್ನು ರದ್ದು ಮಾಡಿರುವುದಲ್ಲದೆ ಅವರಿಗೆ ಬೇಕಾದ ಸೌಲಭ್ಯಗಳನ್ನೂ ನೀಡಲಾಗುವುದು ಎಂದು ಹೇಳಿಕೊಂಡಿದ್ದಾರೆ. ರೈತರ ಮನವಿ ಏನಿದೆ ಅದು ಬರೀ ತೆರಿಗೆ ರದ್ದು ಮಾಡುವುದಿಲ್ಲ. ಸೌಕರ್ಯಗಳನ್ನೂ ಕೊಡಿ ಎಂಬುದು. ಆದರೆ ಇವರು ಏನೇನು ಸೌಕರ್ಯ ಕೊಟ್ಟಿದ್ದಾರೆ ? ರೈತರು ಚಳುವಳಿ ಮಾಡಲಿಕ್ಕೆಂದು ಬಂದರೆ ನೀರಿನ ವ್ಯವಸ್ಥೆ, ಕಕ್ಕಸ್ ವ್ಯವಸ್ಥೆ ಮಾಡಿದ್ದಿರಲ್ಲ ಅದೇನೇ ? ೩೦ ಸಾವಿರ ಜನರನ್ನು ಜೈಲಿಗೆ ಹಾಕಿ ಹಿಂಸಿಸಿದ್ದಲ್ಲದೇ, ಎಷ್ಟೋ ಜನಕ್ಕೆ ಬೆನ್ನಲ್ಲಿ ಬಾಸುಂಡೆ ಬರುವ ಹಾಗೆ ಹೊಡೆದು ಆಮೇಲೆ ಸಾಂತ್ವಸದ ಮಾತುಗಳನ್ನು ಹೇಳಿದ್ದಾರೆ. ನಿಜವಾಗಿಯೂ ನಿಮಗೆ ರೈತರ ಮೇಲೆ ವಿಶ್ವಾಸ ಇದೆಯೋ ಎಂದು ಪ್ರಶ್ನೆ ಮಾಡುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿ).—ರೈತರು ಚಳುವಳಿ ಮಾಡಿದಾಗ ನಾವು ಜೈಲಿಗೆ ಹಾಕಿದ್ದು ನಿಜ. ಆದರೆ ನಿಮ್ಮ ಸರ್ಕಾರ ೧೩೦ ರೈತರನ್ನು ಗುಂಡಿಕ್ಕಿ ಸಾಯಿಸಿದಂತೆ ನಾವು ಒಬ್ಬರನ್ನೂ ಸಾಯಿಸಲಿಲ್ಲ. ಅವರನ್ನು ಜೈಲಿನಲ್ಲಿ ಚೆನ್ನಾಗಿ ನೋಡಿಕೊಡು ಕೊನೆಯಲ್ಲಿ ಸರ್ಕಾರದ ಖರ್ಚಿನಲ್ಲೇ ಊರುಗಳಿಗೆ ಬಿಟ್ಟಿದ್ದೇವೆ.

ಶ್ರೀ ಕೆ.ಹೆಚ್. ಪಾಟೀಲ್.—ಸಂತೋಷ. ಮಾನ್ಯ ಜಾಲಪ್ಪನವರಿಗೆ ಒಂದು ಹೇಳುತ್ತೇನೆ. ಇವತ್ತು ಅವರು ಮಂತ್ರಿಗಳಿದ್ದಾರೆ. ನಿಮ್ಮ ಕಾಲದಲ್ಲಿ ಒಳ್ಳೆಯದನ್ನೂ ಮಾಡಿದ್ದೀರಿ. ಅದಕ್ಕೇನೊ ಅಭ್ಯಂತರವಿಲ್ಲ. ಆದರೆ ರೈತಾಪಿ ಜನತೆಗೆ ಕೊಟ್ಟ ವಚನ ತಪ್ಪಿ ನಡೆದಿದ್ದೀರಿ. ಪಾಪ, ನಾವು ಅಧಿಕಾರಕ್ಕೆ ಬಂದರೆ ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆಂದು ರೈತರಿಗೆಲ್ಲ ಹೇಳಿ ನಿಮಗೆ ಸೂರ್ಯನ್ನ ತಂದು ಕೊಡ್ತೇವೆ, ಚಂದ್ರನನ್ನು ತಂದುಕೊಡ್ತೇವೆ ಎಂದು ಹೇಳಿ ಅಧಿಕಾರಕ್ಕೆ ಬಂದಿರಿ. ನೀವು ಅಧಿಕಾರಕ್ಕೆ ಬರುತ್ತೀರೆಂದು ನಿಮಗೆ ಕನಸಿನಲ್ಲೂ ಇರಲಿಲ್ಲ ಇವರು ಹೇಳಿದ್ದನ್ನು ಕೇಳಿ ನಂಬಿ ಅವರು ಇವನ್ನು ಅಧಿಕಾರಕ್ಕೆ ತಂದರು. ಅಧಿಕಾರಕ್ಕೆ ಬಂದವರು ಕೊಟ್ಟಿದ್ದ ಆಶ್ವಾಸನೆ ಕಡೆ ನೋಡಲೇ ಇಲ್ಲ. ಆಶ್ವಾಸನೆ ಕೊಡುವ ಮುಂಚೆ ಯೋಚನೆ ಮಾಡಬೇಕಾಗಿತ್ತು. ಆದಕ್ಕೆ ನಾನು ಆಶ್ವಾಸನೆ ಕೊಡುವ ಮುನ್ನ ಹೀಗೆ ಮಾಡಲು ಸಾಧ್ಯವೇ ಎಂದು ಮೊದಲು ಯೋಚಿಸುತ್ತೇನೆ. ರೈತರ ಬೆನ್ನಿನಲ್ಲಿ ಬಿದ್ದಿರುವ ಬಾಸುಂಡೆ ನಿಮ್ಮ ಕಣ್ಣಿಗೆ ಬೀಳದಿರಬಹುದು. ಆದರೆ ಅಂಥವರನ್ನು ನಾನು ನೋಡಿದ್ದೇನೆ. ಆದ್ದರಿರಿಂದ ರೈತರಿಗೆ ಹೊಡೆಯಬೇಡಿ, ಅದರಿಂದ ಪಾಪ ಬರುತ್ತದೆ ಎಂದು ಎಚ್ಚರಿಕೆ ಕೊಡುತ್ತೇನೆ,

ಶ್ರೀ ಕೆ. ಬಿ. ಮಲ್ಲಪ್ಪ (ಅರಕಲಗೂಡು).—ಗರೀಬಿ ಹಠಾವೋ ಮಾಡಬೇಕೆಂದು ಘೋಷಣೆ ಮಾಡಿದ್ದಿರಿ. ಆದ್ದರಿಂದ ಅಧಿಕಾರಕ್ಕೆ ಬರುತ್ತೇವೆಂದು ಭರವಸೆ ಇಟ್ಟಿದ್ದಿರಿ. ಅಧಿಕಾರಕ್ಕೆ ಬಂದ ಮೇಲೆ ಅದನ್ನು ಮಾಡಿದಿರಾ ?

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಮಲ್ಲಪ್ಪನವರಿಗೆ ಗರೀಬಿನೂ ಗೊತ್ತಿಲ್ಲ ಹಠಾವೋನೂ ಗೊತ್ತಿಲ್ಲ. ನಮ್ಮಲ್ಲಿ ಗರೀಬಿ ಹಠಾವೋ ಆಗಿದೆಯೋ ಇಲ್ಲವೊ ಎಂಬುದನ್ನು ನಿಮ್ಮ ಮುಖ್ಯಮಂತ್ರಿ ಹೆಗಡೆಯವರೇ ಅಂಕಿ ಅಂಶಗಳ ಸಮೇತ ಹೇಳುತ್ತಾರೆ. ಹಿರಿಯರಾದ ಶ್ರೀ ಜೆ.ಹೆಚ್. ಪಟೇಲರು ಹೇಳುತ್ತಾರೆ. ಆದರೆ ನಿಮ್ಮಂಥವರಿಗೆ ಗೊತ್ತಿಲ್ಲ. ಕೇವಲ ಹೊಟ್ಟೆ ಹಸಿದಿರುವವರಿಗೆ, ಅರಿವೆ ಇಲ್ಲದವರಿಗೆ ಸಹಾಯ ಮಾಡ ಬೇಕೆಂದು ನೀವ್ಯಾಕೆ ಹೋಗುತ್ತೀರಿ ದುಡ್ಡು ಸಿಗುತ್ತದೆ ಹೊಡೆಯೋಣ ಎಂದು ಹೋಗುತ್ತೀರಾ ?

ಶ್ರೀ ಜೆ.ಹೆಚ್. ಪಟೇಲ್.—ನಮ್ಮ ದೇಶದಲ್ಲಿ ಗರೀಬಿ ಹಠಾವೋ ಮಾಡಲು ಸಾಧ್ಯವಿಲ್ಲ ಎಂದು ನಮಗೆ ಗೊತ್ತಿದೆ. ಆದ್ದರಿಂದಲೇ ನಾವು ಹಾಗೆ ಹೇಳದೆ ಗರೀಬಿ ಮಿಠಾವೋ ಎಂದು ಹೇಳುತ್ತಿರುವುದು. ಅಂದರೆ ಗರೀಬಿಯನ್ನು ನಾವು ಕಡಿಮೆ ಮಾಡುತ್ತೇವೆ ಎಂದು ಅದರ ಅರ್ಥ.

ಶ್ರೀ ಕೆ. ಹೆಚ್. ಪಾಟೀಲ್.—ಅದೇ ರೀತಿ ಇರಲಿ. ಗರೀಬಿ ಹಠಾವೋ ನಮ್ಮದು. ಗರೀಬಿ ಉಠಾವೋ ನಿಮ್ಮದು. ಇದನ್ನು ಒಪ್ಪಿಕೊಳ್ಳುತ್ತೀರಾ ? ನನ್ನ ಜೊತೆಯಲ್ಲೇ ಮಾತನಾಡಿದ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ವಚನವನ್ನು ಕೊಡುವಾಗ ನಾವು ವಿಚಾರ ಮಾಡದೆ ಕೊಟ್ಟಿದ್ದರಿಂದ ವಚನಕ್ಕೆ ಭಂಗ ಬಂದಿದೆ. ಅದನ್ನು ಮುಚ್ಚಿ ಕೊಳ್ಳುವುದಕ್ಕಾಗಿ ಮಾನ್ಯ ಗವರ್ನರ್‌ರವರ ಬಾಯಿಯನ್ನು ಸಾಧನವನ್ನಾಗಿ ಬಳಸಿಕೊಂಡಿದ್ದಾರೆ. ಇದು ರಾಜ್ಯಪಾಲರ ಭಾಷಣವನ್ನು ಕೇಳಿದ ಮೇಲೆ ನನ್ನ ಭಾವನೆ.

ಮಾನ್ಯ ಸಭಾಧ್ಯಕ್ಷಿಣಿಯವರೇ, ೧೬ ಜಿಲ್ಲೆಗಳಲ್ಲಿ ರಾಜ್ಯದ ಎಣ್ಣೆ ಕಾಳು ಅಭಿವೃದ್ಧಿ ಯೋಜನೆ ಕಾರ್ಯಾಚರಣೆಯಲ್ಲಿದೆಯೆಂದು ರಾಜ್ಯಪಾಲರು ಹೇಳಿದ್ದಾರೆ. ಕಾಳು ಎಲ್ಲೋ, ಎಣ್ಣೆ ಎಲ್ಲಿದೆಯೋ, ಯಾರ ಮನೇಲಿದೆಯೋ ಒಂದೂ ಗೊತ್ತಿಲ್ಲ. ಅದಕ್ಕಾಗಿ Sky is the limit for this amount in the Centre. ಅದನ್ನು ನೀವು ಮಾಡಿಕೊಳ್ಳಲಿಲ್ಲ. ಎಣ್ಣೆಕಾಳಿಗಾಗಿ ಯಾವನೋ ಒಬ್ಬ ಆಫೀಸರ್ ಕೊಟ್ಟ ರಿಪೋರ್ಟ್‌ನ್ನು ನಂಬಿ ಹೀಗೆ ಮಾಡಿದ್ದೀರಿ.
ಮುಂದೆ ಈ ಬಗ್ಗೆ ಈ ರೀತಿ ಹೇಳಿದ್ದಾರೆ : "ಇದರ ಜೊತೆಗೆ, ಕರ್ನಾಟಕ ಸಹಕಾರಿ ಎಣ್ಣೆಕಾಳು ಬೆಳೆಗಾರರ ಮಹಾಮಂಡಲವು ರಾಜ್ಯದ ೧೦ ಜಿಲ್ಲೆಗಳಲ್ಲಿ ಕಾರ್ಯಾಚರಣೆ ನಡೆಸುತ್ತಿದೆ" ಈ ೬ ಜಿಲ್ಲೆಗಳಲ್ಲಿ ನಮ್ಮ ಧಾರವಾಡ ಜಿಲ್ಲೆ ಸಹ ಇದೆ, ಇದು ತಮ್ಮ ನಜರಿಗೆ ಬಂದಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಇದರ ಒಂದು ಕಾರ್ಯಾಚರಣೆ ಯಾವ ರೀತಿ ನಡೆಯುತ್ತಿದೆ, ಎಂದರೆ ನಮ್ಮ ಜಿಲ್ಲೆಯಲ್ಲಿಯೂ ಸಹ ಇವರು ಖರೀದಿ ಮಾಡುವುದಕ್ಕೆ ಬಂದರು. ಸುಮಾರು ಎರಡು ಸಾವಿರ ಚೀಲದಷ್ಟು ಶೇಂಗಾವನ್ನು ಖರೀದಿ ಮಾಡಿದರು. ನಂತರ ಅದನ್ನು ಮಾರಾಟ ಮಾಡಿಕೊಂಡರು. ಆದರೆ ಇದುವರೆಗೆ ಶೇಂಗಾ ಕೊಟ್ಟವರಿಗೆ ಹಣ ಕೊಟ್ಟಿಲ್ಲ. ಒಬ್ಬ ಅಧಿಕಾರಿಗೆ ಎಷ್ಟು ಪಗಾರ ಕೊಡುತ್ತಾರೆ, ಅಷ್ಟು ಹಣವನ್ನು ಸಹ ಇವರು ರೈತರಿಗೆ ಮುಟ್ಟಿಸಿಲ್ಲ, ಆದರೆ ಇಲ್ಲಿ ದೊಡ್ಡದಾಗಿ ಏನೋ ನಡೆಯುತ್ತಿದೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಇದಕ್ಕಾಗಿ ಒಂದು ಮಹಾಮಂಡಲವನ್ನು ರಚಿಸಿದ್ದಾರೆ. ಅದಕ್ಕೆ ಸರ್ಕಾರದವರು ಕೋಟಿಗಟ್ಟಲೆ ಹಣವನ್ನು ಕೊಟ್ಟಿದ್ದಾರೆ. ಇವರ ಒಂದು ವರದಿಯನ್ನು ನಂಬಿಕೊಂಡು ಕೇಂದ್ರಸರ್ಕಾರದವರು ಸಹ ಹಣ ಕೊಡುತ್ತಾರೆ. ಆದರೆ ರೈತರಿಗೆ ಮಾತ್ರ ಸಕಾಲದಲ್ಲಿ ಹಣ ಕೊಡುತ್ತಿಲ್ಲ. ಸೂರ್ಯ ಚಂದ್ರರನ್ನು ಬೇಕಾದರೆ ನಂಬಬಹುದು, ಆದರೆ ಅಧಿಕಾರಿಗಳನ್ನು ಮಾತ್ರ ನಂಬಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಇಂತಹ ಜಾಗಗಳಲ್ಲಿ ಒಳ್ಳೆಯ ಬಲಿಷ್ಠರಾದವರನ್ನು ಹಾಕಿದಾಗ ಮಾತ್ರ ಕೆಲಸ ಚೆನ್ನಾಗಿ ನಡೆಯುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ಇದನ್ನು ಗುಜರಾತ್ ಹಾಲಿನ ಡೈರಿ ತರಹ ಅಭಿವೃದ್ಧಿಪಡಿಸಬೇಕೆಂದು ಕುರಿಯನ್ ಅವರಿಂದ ಪ್ರಪೋಸಲ್ ಬಂತು. ಅದನ್ನು ನಮ್ಮ ಸರ್ಕಾರ ಒಪ್ಪಿದೆ. ಇದು ರಿಜಿಸ್ಟರ್ ಆಗಿ ೭-೮ ತಿಂಗಳುಗಳು ಇಲ್ಲವೇ ಒಂದು ವರ್ಷ ಆಗಿರಬಹುದು. ಇನ್ನು ಕೆಲವೊಂದು ಸಾಮಾನುಗಳನ್ನು ತರಿಸಬೇಕಾಗುತ್ತದೆ. ಆದ್ದರಿಂದ ತಾವು ಒಂದು ೬ ತಿಂಗಳ ಕಾಲ ಕಾದು ನೋಡಿ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ರಾಜ್ಯಪಾಲರ ಬಾಯಿಂದ ಇಂತಹ ಮಾತುಗಳನ್ನು ಹೇಳಿಸುವುದಕ್ಕೆ ಬದಲು ಎಣ್ಣೆಕಾಳು ಬೆಳೆಗಾರರ ಮಹಾಮಂಡಲವು ರಾಜ್ಯದಲ್ಲಿ ೬ ಲಕ್ಷ ಚೀಲಗಳಷ್ಟು ಶೇಂಗಾವನ್ನು ಖರೀದಿ ಮಾಡಿದೆ, ಸುಮಾರು ೩ ಲಕ್ಷ ಚೀಲಗಳಷ್ಟು ಶೇಂಗಾವನ್ನು ಮಾರಾಟ ಮಾಡಲಾಯಿತು ಎಂದು ಹೇಳಿಸಿದ್ದರೆ, ಒಂದು ಉತ್ತಮ ಕಾರ್ಯ ನಡೆದಿದೆ ಎಂದು ನಾನು ತಮಗೆ ಶಹಭಾಷ್‌ಗಿರಿಯನ್ನು ಕೊಡುತ್ತಿದ್ದೆ. ಇದರಲ್ಲಿ ರಾಜ್ಯಪಾಲರ ತಪ್ಪು ಏನೂ ಇಲ್ಲ. ನೀವು ಹೇಳಿದ್ದನ್ನು ನಂಬಿ ಇದನ್ನೆಲ್ಲಾ ಓದಿದ್ದಾರೆ. ಈಗ ಕುರಿಯನ್ ಅವರು ಹೇಳಿದ್ದು ಎಂದು ಹೇಳುತ್ತಿದ್ದೀರಿ. ಎಣ್ಣೆಬೀಜಗಳನ್ನು ಹೆಚ್ಚು ಹೆಚ್ಚು ಬೆಳೆಯುವ ಸಲುವಾಗಿ ಕೇಂದ್ರಸರ್ಕಾರದವರು ಸಹ ಹೇರಳವಾಗಿ ಹಣವನ್ನು ಕೊಡುತ್ತಿದ್ದಾರೆ. ಆದರೆ ಎಣ್ಣೆಕಾಳುಗಳನ್ನು ಹೆಚ್ಚಾಗಿ ಉತ್ಪತ್ತಿ ಮಾಡುವ ಬಗ್ಗೆ ಸರಿಯಾದ ರೀಸರ್ಚ್ ನಮ್ಮಲ್ಲಿ ನಡೆದಿಲ್ಲ. ಇದರಲ್ಲಿಯೂ ಲೋಪವಾಗಿದೆ. ಇದರ ಬಗ್ಗೆ ಏನಾದರು ಹೇಳಿದರೆ ತಾವು ವ್ಯವಸಾಯ ವಿಶ್ವವಿದ್ಯಾನಿಲಯದ ಕಡೆಗೆ ತೋರಿಸುತ್ತೀರಿ. ಈಗ ಬೆಂಗಳೂರಿನಲ್ಲಿರುವ ವ್ಯವಸಾಯ ವಿದ್ಯಾನಿಲಯದಲ್ಲಿ ಈ ಬಗ್ಗೆ ಸಂಶೋಧನೆ ನಡೆಯುತ್ತಿರಬಹುದು. ಆದರೆ ಅಲ್ಲಿನ ಅಧಿಕಾರಿಗಳು ರೈತರ ಹೊಲಗಳಿಗೆ ಹೋಗಿ ಈ ಕೆಲಸ ಮಾಡುತ್ತಿಲ್ಲ. ಇಂತಹ ಕೆಲಸಗಳಿಗೆ ದುಡ್ಡು ಕೊಡಲು ನಿಮಗೂ ಮನಸ್ಸಿಲ್ಲ. ಇದೇ ಕಾರಣದಿಂದ ಕೆಲಸಗಳು ಸರಿಯಾಗಿ ಆಗದೆ ಯದ್ವಾತದ್ವಾ ನಡೆಯುತ್ತಿವೆ. ಇಂತಹ ವಿಷಯಗಳನ್ನು ಒಳಗೊಂಡ ರಾಜ್ಯಪಾಲರ ಭಾಷಣಕ್ಕೆ ತಾವು ಯಾವ ರೀತಿ ಅನುಕಂಪ ತೋರಿಸಬೇಕು. ಮುಂದೆ ಈ ರೀತಿ ಹೇಳಿದ್ದಾರೆ.—"ಒಂದು ಕೋಟಿ ರೂಪಾಯಿಗಳ ಆರಂಭದ ಷೇರು ಬಂಡವಾಳದೊಂದಿಗೆ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ರಚನೆಯನ್ನು ಕುರಿತು ಸರ್ಕಾರಿ ಆದೇಶವೊಂದನ್ನು ಹೊರಡಿಸಲಾಗಿದೆ" ಎಂದು. ಈಗಿರುವಂತಹ ಆಸ್ಪತ್ರೆಗಳನ್ನು ವಿಸ್ತರಣೆ ಮಾಡಲು ಹಣದ ಕೊರತೆ ಇದೆ ಎಂದು ಮಾನ್ಯ ತಿಮ್ಮೇಗೌಡರು ತುಂಬಾ ಪ್ರಾಮಾಣಿಕತೆಯಿಂದ ಹೇಳಿದರು. ಆಸ್ಪತ್ರೆಗಳಿಗೆ ಹಣದ ಕೊರತೆ ಇರುವಾಗ ಇಲ್ಲಿ ಇದಕ್ಕೆ ಏತಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರು? ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ ಅಲ್ಪ

ಸಂಖ್ಯಾತರ ಅಭಿವೃದ್ಧಿ ಆಗುತ್ತದೆಯೋ? ಈಗ ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತರಿಗೆ ಸೇರಿದ ವಕ್ಫ್ ಆಸ್ತಿಗಳು ಬೇಕಾದಷ್ಟು ಇವೆ ಈ ಆಸ್ತಿಗಳ ಮೇಲ್ವಿಚಾರಣೆಯನ್ನು ಸರಿಯಾಗಿ ನೋಡಿಕೊಂಡರೆ ವರ್ಷಕ್ಕೆ ೨-೩ ಕೋಟಿ ರೂಪಾಯಿಗಳಷ್ಟು ವರಮಾನ ಬರುತ್ತದೆ. ಆದರೆ ಇದರ ಕಡೆಗೆ ನಿಮ್ಮ ಮನಸ್ಸು ಇಲ್ಲ. ಈ ವಕ್ಫ್ ಖಾತೆಯನ್ನು ಈಗ ಶ್ರೀ ನಜೀರ್‌ಸಾಬ್ ಅವರಿಗೆ ವಹಿಸಲಾಗಿದೆ. ಈಗ ಅವರಿಗೆ ಗ್ರಾಮೀಣಾಭಿವೃದ್ಧಿ ಖಾತೆಯನ್ನು ಸಹ ಇದರ ಜೊತೆಗೆ ವಹಿಸಲಾಗಿದೆ. ಅದರ ಕೆಲಸವೇ ಅವರಿಗೆ ಜಾಸ್ತಿಯಾಗಿದೆ. ಎಲ್ಲಿ ನೀರು ಇಲ್ಲ ಎಂದು ಮನವಿ ಬರುತ್ತದೋ ಅಲ್ಲಿಗೆ ಯಾವ ಯೋಜನೆಯ ಅಡಿಯಲ್ಲಿ ನೀರನ್ನು ಒದಗಿಸಬೇಕು ಎಂಬುದನ್ನು ಅವರು ನೋಡಬೇಕಾಗುತ್ತದೆ ಇದರ ಜೊತೆಗೆ ಹಣ ಸರಿಯಾಗಿ ಖರ್ಚಾಗುತ್ತಿದೆಯೋ ಅಥವಾ ಯಾರಾದರು ಹಣ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆಯೋ ಎಂಬುದನ್ನು ಸಹ ಅವರು ನೋಡಬೇಕಾಗಿದೆ. ಆದ್ದರಿಂದ ಈ ಕೆಲಸಗಳ ಜೊತೆಗೆ ಅವರಿಗೆ ವಕ್ಫ್ ಖಾತೆಯನ್ನು ಸಹ ಕೊಡುವುದಕ್ಕೆ ಬದಲು, ಅದನ್ನು ಮಾನ್ಯ ಪಟೇಲ್ ಅವರಿಗೆ ಕೊಟ್ಟಿದ್ದರೆ ಚೆನ್ನಾಗಿ ನಡೆಸುತ್ತಿದ್ದರು, ಇಲ್ಲಿ ಕೇವಲ ಒಂದು ಕೋಟಿ ರೂಪಾಯಿಗಳನ್ನು ಏನು ಕೊಟ್ಟಿದ್ದಾರೆ. ಇದರಿಂದ ಮುಸ್ಲೀಮರು ಕಣ್ಣೀರನ್ನು ಸಹ ಒರೆಸುವುದಕ್ಕೆ ಸಾಕಾಗುವುದಿಲ್ಲ. ಈ ಹಿಂದೆ ಹರಿಜನ ಮತ್ತು ಗಿರಿಜನರ ಅಭಿವೃದ್ಧಿ ಸಲುವಾಗಿ ಒಂದು ಕಾರ್ಪೊರೇಷನನ್ನು ರಚಿಸಲಾಯಿತು. ನಂತರ ಹಣದ ಸಹಾಯ ಪಡೆಯಲು ಈ ಜನಾಂಗದವರಿಂದ ಅರ್ಜಿಗಳನ್ನು ಕರೆದರು. ಅರ್ಜಿಗಳನ್ನು ಹಾಕಿಕೊಳ್ಳುವವರು ೫ ರೂಪಾಯಿಗಳ ಫೀಯನ್ನು ಸಹ ಕೊಡಬೇಕಾಗಿತ್ತು. ಈ ಒಂದು ಬಾಬಿನಿಂದ ಆಗ ಎಷ್ಟು ಹಣ ವಸೂಲಿ ಆಯಿತೋ, ಅಷ್ಟು ದುಡ್ಡನ್ನಾದರೂ ಸಹ ಈ ಜನರಿಗೆ ಹಂಚಿಲ್ಲ. ನಿಮಗೆ ಯಾವುದೇ ಕಾರ್ಪೊರೇಷನ್‌ಗಳನ್ನು ಮಾಡುವಂತಹ ಮನಸ್ಸು ಇದ್ದರೆ, ರಚನಾತ್ಮಕವಾದಂಥ ಕೆಲಸಗಳನ್ನು ಮಾಡಿ. ನಮ್ಮಲ್ಲಿ ಬಹಳಷ್ಟು ಮಂದಿ ಕ್ರಿಶ್ಚಿಯನ್ ಬಾಂಧವರಿದ್ದಾರೆ, ಮುಸ್ಲಿಂ ಬಾಂಧವರಿದ್ದಾರೆ, ಈ ಜನರ ಏಳಿಗೆ ಸಲುವಾಗಿ ಕೆಲವೊಂದು ಉದ್ಯಮಗಳನ್ನು ತಾವು ಪ್ರಾರಂಭ ಮಾಡಬೇಕು. ಈ ಹಿಂದೆ ಷೆಡ್ಯೂಲ್ಡ್ ಕ್ಯಾಸ್ಟ್ ಜನಾಂಗದವರ ಅಭಿವೃದ್ಧಿ ಸಲುವಾಗಿ ಒಂದು ಕಾರ್ಪೊರೇಷನ್ ರಚಿಸಿ, ಅದಕ್ಕೆ ಒಬ್ಬರು ಚೇರ್‌ಮನ್‌ರನ್ನು, ಒಬ್ಬರು ಮೇನೇಜಿಂಗ್ ಡೈರೆಕ್ಟರನ್ನು ನೇಮಕ ಮಾಡಲಾಯಿತೇ ಹೊರತು, ಆ ಜನಾಂಗದವರ ಅಭಿವೃದ್ಧಿ ಮಾತ್ರ ಆಗಿಲ್ಲ. ಆದ್ದರಿಂದ ಮತ್ತೆ ಮತ್ತೆ ಇಂತಹ ಕಾರ್ಪೊರೇಷನ್‌ಗಳನ್ನು ರಚನೆ ಮಾಡಿ ಅಲ್ಲಿಗೆ ಚೇರ್‌ಮನ್‌ಗಳನ್ನು ತರುವಂತಹ ಕೆಲಸವನ್ನು ಇನ್ನು ಮುಂದಾದರೂ ಬಂದ್ ಮಾಡಬೇಕೆಂದು ಮಾನ್ಯ ಪಟೇಲ್ ಅವರ ಮೂಲಕ ಮಾನ್ಯ ಹೆಗಡೆ ಅವರ ಸರ್ಕಾರಕ್ಕೆ ನಾನು ಸವಿನಯಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ. ಅಧ್ಯಕ್ಷ ಪೀಠದಲ್ಲಿರುವ ತಾವು ಹೆಣ್ಣುಮಕ್ಕಳಿದ್ದೀರಿ, ಈಗಿನ ಮಂತ್ರಿಮಂಡಲದಲ್ಲಿಯೂ ಸಹ ಹೆಣ್ಣು ಮಕ್ಕಳು ಮಂತ್ರಿಗಳಾಗಿದ್ದಾರೆ. ಮಾನ್ಯ ವಿ. ಎಲ್. ಪಾಟೀಲ್ ಅವರು ಮೊನ್ನೆ ಉತ್ತರ ಕೊಡುವಾಗ ಇಲ್ಲಿ ಸತ್ಯಕ್ಕೆ ದೂರವಾದ ಸಂಗತಿಯನ್ನು ಹೇಳಿದರು. ನಾವು ನಿಜ ಸಂಗತಿಯನ್ನು ಹೇಳಿದಾಗಲೂ ಸಹ ಅವರು ಕ್ರಮ ತೆಗೆದುಕೊಳ್ಳುವುದಿಲ್ಲ. ಅಧಿಕಾರಿಗಳು ಬರೆದುಕೊಟ್ಟಿದ್ದನ್ನು ಇಲ್ಲಿ ಓದಿಬಿಡುತ್ತಾರೆ. ಅಧಿಕಾರಿಗಳ ಮಾತನ್ನು ಅವರು ನಂಬಿ ತಪ್ಪು ಹಾದಿಗೆ ಬೀಳುತ್ತಿದ್ದಾರೆ. ಅಧಿಕಾರಿಗಳು ಹೇಳಿದ್ದು ಸರಿಯೋ ಅಥವಾ ತಪ್ಪೋ ಎಂದು ತಿಳಿದುಕೊಳ್ಳುವ ಸಲುವಾಗಿ ಅವರು ಸಂಬಂಧಪಟ್ಟ ಫೈಲುಗಳನ್ನು ತರಿಸಿಕೊಂಡು ನೋಡುತ್ತಿಲ್ಲ. ಈ ವರ್ಷ ೧೦೦ ಹೊಸ ವಿದ್ಯಾರ್ಥಿ ನಿಲಯಗಳನ್ನು ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಸಲುವಾಗಿ ತೆರೆಯಲಾಗಿದೆ ಎಂದು ಇಲ್ಲಿ ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಇವರ ಇಲಾಖೆಯಿಂದ ನನಗೆ ಒಂದು ಪತ್ರ ಬಂದಿದೆ. ಅದನ್ನು ಇಲ್ಲಿ ಓದಿ ಹೇಳುತ್ತೇನೆ.—

> "Subject.—Sanction of recognition of payment of grant-in-aid to Sri Gowri Shankar, Vidya Nilaya, Muthigi, Basavanabagewadi Taluk, Bijapur."

ಇವರು ಕಳೆದ ಮೂರು ವರ್ಷಗಳಿಂದ ಹಾಸ್ಟೆಲ್ ನಡೆಸುತ್ತಿದ್ದಾರೆ. ಇಲ್ಲಿರುವಂತಹ ವಿದ್ಯಾರ್ಥಿಗಳೆಲ್ಲಾ ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದಾರೆ, ಸರ್ಕಾರದ ರೂಲ್ಸ್‌ಗೆ ಹೊಂದಿಕೊಂಡಂತೆ ಈ ಹಾಸ್ಟೆಲ್ ಇದೆ. ಎರಡು ವರ್ಷಗಳ ಕಾಲ ಹಾಸ್ಟೆಲ್ ನಡೆಸಿದರೆ ಗ್ರಾಂಟ್ ಕೊಡಬೇಕೆಂದು ನಿಯಮವಿದೆ. ಇದೇ ಕಾರಣದಿಂದ ಮುಂದಿನ ವರ್ಷದಿಂದ ಗ್ರಾಂಟ್ ಕೊಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಪಾಟೀಲ್ ಅವರು ನನ್ನ ಹತ್ತಿರ ಖಾಸಗಿಯಾಗಿ ಮಾತನಾಡುವಾಗ ಸುಳ್ಳನ್ನು ಮಾತ್ರ ಹೇಳುವುದಿಲ್ಲ, ಆದರೆ ಇಲ್ಲಿ

ಮಾತ್ರ ಅಧಿಕಾರಿಗಳ ಮಾತನ್ನು ನಂಬಿಕೊಂಡು ಸುಳ್ಳು ಹೇಳುತ್ತಾರೆ. ಈ ಪತ್ರದಲ್ಲಿ ಮುಂದೆ ಏನು ಹೇಳಿದ್ದಾರೆಂದರೆ.—

"Please refer to your letter dated so and so. In this regard I write to inform you that the Deputy Commissioner, Bijapur District in his letter dated 29-9-84 had sent a proposal for recognition and payment of grant-in-aid to the above hostel during 1984-85. But we have not considered any such request during the year 1984-85 due to paucity of funds."

It is not the liquidation of the Government?

ಯಾರಿಗೆ ಇವರು ಸರ್ಕ್ಯುಲರ್ ಮೂಲಕ ವಚನ ಕೊಡುತ್ತಾರೋ, ಯಾವ ಮಾತುಗಳನ್ನು ಇವರು ರಾಜ್ಯಪಾಲರ ಭಾಷಣದ ಮೂಲಕ ಹೇಳಿಸುತ್ತಾರೋ, ಯಾರಿಂದ ಇವರು ಹೆಚ್ಚಿನ ಬೆಂಬಲವನ್ನು ಪಡೆದಿದ್ದಾರೋ, ಅಂತಹ ಹಿಂದುಳಿದ ವರ್ಗದ ಜನರಿಗೆ ಈ ರೀತಿ ಹೇಳುತ್ತಿದ್ದರೆ ನಾನು ನನ್ನ ಜಿಲ್ಲೆಯ ಬಗ್ಗೆ ಹೇಳುತ್ತಿಲ್ಲ, ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟಂತೆ ಹೇಳುತ್ತಿದ್ದೇನೆ. ಈ ಪತ್ರದಲ್ಲಿ ಮುಂದೆ ಈ ರೀತಿ ಹೇಳಿದ್ದಾರೆ.—

"We are not entertaining any fresh recognition and sanction of grant-in-aid to the hostels As and when adequate budget is provided by the Government, such a request could be considered. As the same has already been informed to the President of the above Hostel vide this office letter No. dated 5-8-85."

ಈ ಒಂದು ಪತ್ರ ಬ್ಯಾಕ್‌ವರ್ಡ್‌ಕ್ಲಾಸ್ ಡೈರೆಕ್ಟರ್ ಅವರಿಂದ ಬಂದಿದೆ. ಇಲ್ಲಿರುವಂತಹ ನಮ್ಮ ಸೋದರಿಯುವರು ಹೇಳಿದಂತೆ ಹೋದವರ್ಷ ಬ್ಯಾಕ್‌ವರ್ಡ್‌ಕ್ಲಾಸ್ ಹಾಸ್ಟಲ್‌ಗಳಿಂದು ಹಣವನ್ನು ಸರ್ಕಾರ ಕೊಟ್ಟರೂ ಸಹ ಅದನ್ನು ಇವರು ಉಪಯೋಗ ಮಾಡಿಕೊಳ್ಳದ ಕಾರಣದಿಂದ ಅದು ಲ್ಯಾಪ್ಸ್ ಆಯಿತು. ಕೆಲಸ ಪೂರ್ತಿಯಾಗಲಿಲ್ಲ.

ಇದಕ್ಕೆ ಯಾರು ಕಾರಣ ? ಇದಕ್ಕೆ ಯಾರನ್ನು ಬಯ್ಯಬೇಕು ? ನಾನು ಡೈರಕ್ಟರನ್ನು ಬಯ್ಯುವುದಕ್ಕಾಗುವುದಿಲ್ಲ, ಇದುವರೆಗೆ 100 ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಲಾಗಿದೆ ಆದರೆ 1984-85 ರಲ್ಲಿ ಒಂದೂ ಹಾಸ್ಟೆಲ್‌ನ್ನೂ ಪ್ರಾರಂಭ ಮಾಡಿಲ್ಲವೆಂದು ಮಂತ್ರಿಯವರು ಉತ್ತರ ಕೊಡುತ್ತಾರೆ. ಇದು ಸರಿಯೇ ? ಇನ್ನು ಹೊಸ ಔದ್ಯೋಗಿಕ ಮತ್ತು ಉದ್ದಿಮೆಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಒಂದು ಅಕ್ಷರವೂ ಸಹ ಪ್ರಸ್ತಾಪ ಮಾಡಿಲ್ಲ. ಏಷ್ಟೋ ಉದ್ದಿಮೆಗಳಿಗೆ ರೂಪುರೇಕೆಗಳನ್ನು ಮಾಡಲಾಗಿದೆ ಆದರೆ ಅವುಗಳನ್ನು ಪ್ರಾರಂಭ ಮಾಡಿಲ್ಲ. ಕೆ.ಎಸ್.ಎಫ್.ಸಿ , ಕೆ ಎಸ್.ಐ.ಐ.ಡಿ.ಸಿ., ಐ.ಡಿ.ಬಿ.ಐ ಮತ್ತು ಐ.ಎಫ್.ಸಿ. ಯವರು ದೊಡ್ಡ ದೊಡ್ಡ ಉದ್ದಿಮೆಗಳನ್ನು ಸ್ಥಾಪನೆ ಮಾಡುವುದಕ್ಕಾಗುವುದಿಲ್ಲವೆಂದು ತಿಳಿಸಿದ್ದಾರೆ. ನಾನು ಡೆಲ್ಲಿಗೆ ಹೋಗಿದ್ದಾಗ ಐ ಡಿ.ಬಿ.ಐ. ಅವರೊಡನೆ ಮತ್ತು ಕೇಂದ್ರ ಹಣಕಾಸಿನ ಮಂತ್ರಿವರ್ಯರೊಡನೆ ಮಾತನಾಡಿದ್ದೇನೆ ಐ.ಡಿ.ಬಿ.ಐ. ನವರು ಹಣವನ್ನು ಕೊಡುವುದಿಲ್ಲವೆಂದು ನಾವು ಹೇಳಿಲ್ಲವೆಂದು ಅವರು ಹೇಳಿದ್ದಾರೆ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಸಹಾಯ ಮತ್ತು ಇಂಡಸ್ಟ್ರೀಸ್‌ಗಳಿಗೆ ಸಾಲ ಕೊಡುವ ಬ್ಯಾಂಕುಗಳಿಂದ ಯಾವ ರೀತಿ ಸಾಲ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಿಲ್ಲ. ಆದ್ದರಿಂದ ಡೆವಲಪ್‌ಮೆಂಟ್ ಕೆಲಸಗಳು ನಿಂತು ಹೋಗಿದೆ. ಕೆಲವು ಟೆಕ್ಸ್‌ಟೈಲ್ ಮಿಲ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಜನರು ಮುಂದೆ ಬಂದಿದ್ದಾರೆ. ಆದರೆ ಸರ್ಕಾರ ಅವರಿಗೆ ಬೇಕಾದ ಸವಲತ್ತುಗಳನ್ನು ಒದಗಿಸುವುದಕ್ಕೆ ಪ್ರಯತ್ನವನ್ನೇ ಮಾಡಿಲ್ಲ ಕೊನೆಗೂ ಈ ಕಂಪನಿಗಳು ಚಾಲು ಆಗಲೇ ಇಲ್ಲ. ನೀವು ಹೇಳಬಹುದು. ಇದು ಹಿಂದಿನ ಸರ್ಕಾರ ಇದ್ದಾಗ ಈ ಕಂಪನಿಗಳ ರೂಪುರೇಕೆಗಳು ಆಗಿದ್ದುದರಿಂದ ಮಾಡಲಾಗಲಿಲ್ಲ

ವೆಂದು, ಯಾವುದೇ ಸರ್ಕಾರ ಇರಲಿ ಡೆವಲಪ್‌ಮೆಂಟ್ ಕೆಲಸಗಳನ್ನು ಮಾಡಲೇ ಬೇಕು. ಹಿಂದಿನ ಸರ್ಕಾರದವರು ಇದನ್ನು ಪ್ರಾರಂಭ ಮಾಡುವುದಕ್ಕೆ ಯೋಜನೆ ಮಾಡಿದ್ದರು ಅದನ್ನು ನಾವು ಏಕೆ ಮಾಡಬೇಕು ಎಂದು ಅದನ್ನು ಹಾಗೇ ಬಿಡಬಾರದು. ನಾನು ಯಾವುದೇ ರೀತಿಯಲ್ಲಿ ಸರ್ಕಾರವನ್ನು ಪೇಚಿಗೆ ಸಿಕ್ಕಿಸಬೇಕೆಂದು ನನ್ನ ಅಭಿಪ್ರಾಯವಲ್ಲ. ಆದರೆ ಇರುವ ವಿಷಯವನ್ನು ನಾನು ಹೇಳುತ್ತಿದ್ದೇನೆ. ಚುನಾವಣೆಯ ಸಂದರ್ಭದಲ್ಲಿ, ಎಲ್ಲಾ ಜನರನ್ನು ನಾವು ಸಮಾನಸ್ಕಂದವಾಗಿ ನೋಡುತ್ತೇವೆಂದು ನೀವು ಹೇಳಿದ್ದೀರಿ, ಅದೇ ರೀತಿ ನೀವು ಸಮಾನಸ್ಕಂದವಾಗಿ ಜನರ ಕ್ಷೇಮವನ್ನು ನೋಡಬೇಕು. ಪ್ರತಿಯೊಬ್ಬ ಬಡ ಬೋರೇಗೌಡನಿಗೂ ಅನುಕೂಲವಾಗುವಂತೆ ಸರ್ಕಾರವನ್ನು ನಡೆಸಿಕೊಂಡು ಹೋಗಬೇಕು. ಆಗ ಮಾತ್ರ ನೀವು ಪ್ರಾಮಾಣಿಕರಾಗುತ್ತೀರಿ. ಮಹಾರಾಷ್ಟ್ರ ಸರ್ಕಾರದವರು, ಇಂಡಸ್ಟ್ರೀಗಳನ್ನು ಓಪನ್ ಮಾಡುತ್ತೇವೆಂದು ಜನ ಮುಂದೆ ಬಂದರೆ, ಅವರು ಎಷ್ಟು ಇಂಡಸ್ಟ್ರೀಗಳಿಗೆ ಲೈಸನ್ಸ್ ಕೇಳುತ್ತಾರೋ ಅಷ್ಟೂ ಲೈಸನ್ಸನ್ನು ಕೊಡುತ್ತಾರೆ. ಹಾಗೇ ನೀವು ಸಹ ಜನರು ಒಂದು ಲೈಸನ್ಸ್ ಕೇಳಿದರೆ ನೀವು ೧೦ ಲೈಸನ್ಸ್‌ಗಳನ್ನು ಕೊಡಬೇಕು ಆಗ ಮಾತ್ರ ಇಂಡಸ್ಟ್ರೀಗಳು ಹೆಚ್ಚಾಗುತ್ತವೆ. ನೀವು ಉದ್ದಿಮೆಗಳಿಗೆ ಲೈಸನ್ಸ್‌ಗಳನ್ನು ಕೊಟ್ಟು ಆಗ ಕೇಂದ್ರ ಸರ್ಕಾರದವರಿಗೆ ಸಹಾಯಧನವನ್ನು ಕೊಡಬೇಕೆಂದು ಒತ್ತಾಯ ಮಾಡಿ. ಆಗ ಕೇಂದ್ರ ಸರ್ಕಾರವು ಸಹ ಕೊಡುತ್ತದೆ. ಅದು ಬಿಟ್ಟು ಸುಮ್ಮ ಸುಮ್ಮನೇ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಧನಸಹಾಯವನ್ನು ಮಾಡುತ್ತಿಲ್ಲವೆಂದು ಹೇಳುವುದರಲ್ಲಿ ಅರ್ಥವಿಲ್ಲ. ಇವತ್ತು ಸಕ್ಕರೆ ಕಾರ್ಖಾನೆಗಳು ಸರಿಯಾಗಿ ನಡೆಯುವುದೇ ಇಲ್ಲ. ಇದಕ್ಕೆ ಕಾರಣ ಏನು ? ಸರ್ಕಾರವು ಸಕ್ಕರೆ ಕಾರ್ಖಾನೆಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡುತ್ತಿಲ್ಲ. ಇನ್ನೂ ೩ ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗುವುದಕ್ಕೆ ತಯಾರಾಗಿವೆ ಆದರೆ ಸರ್ಕಾರ ಅದಕ್ಕೆ ಬೇಕಾದ ಸಂಪನ್ಮೂಲಗಳನ್ನು ಒದಗಿಸಿಯೇ ಇಲ್ಲ. ಕೆಲವು ಕಂಪನಿಗಳನ್ನು ಅಲ್ಲಿನ ಅಧಿಕಾರಿಗಳು ಸೇರಿಕೊಂಡು ಲಾಸ್ ಮಾಡುತ್ತಿದ್ದಾರೆ. ಸಾವಿರಾರು ರೂಪಾಯಿಗಳು ಬೆಲೆ ಬಾಳುವ ವಸ್ತುಗಳನ್ನು ಕಂಡೆಮ್ ಎಂದು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಾರೆ ಉದಾಹರಣೆಗೆ ಧಾರವಾಡದ ಹೌಸಿಂಗ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ಅಧಿಕಾರಿಯಾಗಿದ್ದ ಚೌಗಲೇ ಎಂಬುವರು ಇಂಪೋರ್ಟ್ ಮಾಡಿಕೊಂಡಿದ್ದ ರೀಸರ್ಚ್ ಇನ್ಸ್‌ಟ್ರುಮೆಂಟ್‌ನ್ನು, (ಇದು ಸುಮಾರು ೧೦ ಸಾವಿರ ರೂಪಾಯಿಗಳಿಂದ ೨೦ ಸಾವಿರ ರೂಪಾಯಿಯ ವರೆಗೆ ಬೆಲೆ ಬಾಳುತ್ತದೆ). ಕೇವಲ ೭೦ ರೂಪಾಯಿಗಳಿಗೆ ಮಾರಾಟ ಮಾಡಿದ್ದಾರೆ. ಇಂತಹ ಅಧಿಕಾರಿಯನ್ನು ನೀವು ಪ್ರಾಮಾಣಿಕ ಎಂದು ತಿಳಿದುಕೊಂಡು ಅವರಿಗೆ ಪ್ರಮೋಷನ್ ಕೊಟ್ಟಿದ್ದೀರಿ ಇವರಿಗೆ ಪ್ರಮೋಷನ್ ಕೊಟ್ಟಿರುವುದು ನನಗೆ ಸ್ವಲ್ಪ ದಿನಗಳ ಹಿಂದೆ ತಿಳಿಯಿತು. ಇಂತಹ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದನ್ನು ಬಿಟ್ಟು ಪ್ರಮೋಷನ್ ಕೊಟ್ಟರೆ ಹೇಗೆ ? ಇದು ಎಫಿಶಿಯಂಟ್ ಗೌರ್ನಮೆಂಟ್ ಮತ್ತು ಪ್ರಾಮಾಣಿಕ ಗೌರ್ನಮೆಂಟ್ ಎಂದು ಹೇಳಬೇಕಾದರೆ, ಮೊದಲು ಇಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಆಗ ಮಾತ್ರ ನೀವು ಅಭಿನಂದನೆಗೆ ಅರ್ಹರಾಗುತ್ತೀರಿ, ಇಲ್ಲದಿದ್ದರೆ ಇಲ್ಲ. ಈ ಚೌಗಲೇಯವರು ಎಷ್ಟು ವಸ್ತುಗಳನ್ನು ಮಾರಾಟ ಮಾಡಿದ್ದಾರೆ ಎನ್ನುವುದನ್ನು ಕಂಡು ಹಿಡಿಯಬೇಕು. ಅದೂ ಅಲ್ಲದೇ ಈ ಚೌಗಲೇಯವರ ಪ್ರಕರಣವನ್ನು ಸರ್ಕಾರಕ್ಕೆ ತಿಳಿಸದೇ ಯಾರು ಇಟ್ಟುಕೊಂಡಿದ್ದರು ಅವರ ಮೇಲೂ ಸಹ ಕ್ರಮವನ್ನು ತೆಗೆದುಕೊಂಡರೆ ಈ ಸದನಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಛೇರ್ಮನ್.—ನೀವು ಬಹಳ ಮಾತನಾಡಿದ್ದೀರಿ, ಬೇಗ ಮುಗಿಸಿ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಹಲವಾರು ಮಹತ್ವವಾದ ಸಮಸ್ಯೆಗಳನ್ನು ಹೇಳುತ್ತಿದ್ದೇನೆ. ಈ ಸಮಸ್ಯೆಗಳನ್ನು ಸದನಕ್ಕೆ ಹೇಳದಿದ್ದರೆ ನನ್ನ ಕರ್ತವ್ಯ ಲೋಪವಾಗುತ್ತದೆ, ಇವತ್ತಿನ ದಿವಸ ಬರಗಾಲ ಬಂದಿರುವುದರಿಂದ ಅಭಿವೃದ್ಧಿ ಕೆಲಸಗಳನ್ನು ಮಾಡಿಸುವುದರ ಜೊತೆಗೆ ಸಣ್ಣ ಸಣ್ಣ ಉದ್ದಿಮೆಗಳನ್ನು ಪ್ರಾರಂಭ ಮಾಡುವುದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಯಾರು ಯಾರು ಸಣ್ಣ ಉದ್ದಿಮೆಗಳನ್ನು ಪ್ರಾರಂಭ ಮಾಡುತ್ತೇವೆಂದು ಬರುತ್ತಾರೋ ಅಂತಹವರಿಗೆಲ್ಲಾ ಲೈಸನ್ಸ್‌ಗಳನ್ನು ಕೊಟ್ಟು ಹಣ ಸಹಾಯವನ್ನು ಮಾಡಬೇಕು ಇಲ್ಲದಿದ್ದರೆ ಕೈಗಾರಿಕಾ ಅಭಿವೃದ್ಧಿಯಾಗುವುದಿಲ್ಲ. ಉದ್ದಿಮೆಗಳಿಗೆ ಸಹಾಯವನ್ನು ಮಾಡಿದಾಗ ಮಾತ್ರ ನಾನು ಮಾನ್ಯ ಜೆ. ಹೆಚ್. ಪಟೇಲರನ್ನು ಅಭಿನಂದಿಸುತ್ತೇನೆ. ಉದ್ದಿಮೆಗಳನ್ನು ಪ್ರಾರಂಭ ಮಾಡುವುದಕ್ಕೆ ಪರವಾನಿಗೆಯನ್ನು ಕೊಟ್ಟು ಧನ ಸಹಾಯವನ್ನು ಮಾತ್ರ ಸರ್ಕಾರದವರು ಮಾಡಿಲ್ಲ. ಏಕೆ ಈ ರೀತಿ ಮಾಡಿದ್ದಾರೆ ಎಂಬುದು ನಮಗೆ

ಗೊತ್ತಾಗಲಿಲ್ಲ. ಸರ್ಕಾರದಲ್ಲಿ ಹಣ ಇಲ್ಲವೇ ? ಸರ್ಕಾರದಲ್ಲಿ ಹಣ ಇಲ್ಲ, ಆದುದರಿಂದ ನಾವು ಉದ್ದಿಮೆಗಳಿಗೆ ಧನ ಸಹಾಯವನ್ನು ಮಾಡಿಲ್ಲವೆಂದು ಪ್ರಾಮಾಣಿಕವಾಗಿ ಹೇಳಿ. ಆಗ ನಾವು ಒಪ್ಪಿಕೊಳ್ಳುತ್ತೇವೆ. ಸುಮ್ಮನೇ ಉದ್ದಿಮೆಗಳು ಪ್ರಾರಂಭವಾಗುವುದು ಮುಂದು ಮುಂದಕ್ಕೆ ಹೋಗುತ್ತಲೇ ಇದೆ.

ಶ್ರೀ ಜೆ. ಹೆಚ್. ಪಟೇಲ್.—ಸಬ್‌ಸೀಡಿ ಹಣವೋ ? ಡೆವಲಪ್‌ಮೆಂಟ್ ಲೋನೋ ನಾವು ಕೊಡಬೇಕಾಗಿರುವುದು.

ಶ್ರೀ ಕೆ. ಹೆಚ್. ಪಟೇಲ್.—ಉದ್ದಿಮೆಗಳಿಗೆ ನೀವು ಸಬ್‌ಸೀಡಿಯನ್ನೂ ಹೆಚ್ಚು ಮಾಡಬೇಕು. ಡೆವಲಪ್ ಲೋನ್‌ಗಳನ್ನೂ ಹೆಚ್ಚು ಮಾಡಬೇಕು. ಹಾಗೂ ಸಕಾಲದಲ್ಲಿ ಹಣವನ್ನು ಉದ್ದಿಮೆದಾರರಿಗೆ ಕೊಡಬೇಕು. ಸಣ್ಣ ಸಣ್ಣ ಉದ್ದಿಮೆದಾರರಿಗೆ ಹಣವನ್ನು ಕೊಟ್ಟು ಪ್ರೋತ್ಸಾಹ ಕೊಡಿ ಎಂದರೆ ದೊಡ್ಡ ದೊಡ್ಡ ಉದ್ದಿಮೆದಾರರಾದ 'ದೀಪಕ್ ಕೇಬಲ್ಸ್' ಅಂತಹವರಿಗೆ ನೀವು ಧನ ಸಹಾಯವನ್ನು ಮಾಡುತ್ತೀರಿ. ಅವರಿಗೆ ಏನು ಹಣದ ಕೊರತೆ ಇತ್ತೇ ? ಅವರಿಗೆ ನೀವು ಒಂದೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ನೀವು ಅವರಿಗೆ ಕೊಟ್ಟ ಹಣದ ಬಗ್ಗೆ ನಿಮ್ಮ ಪಾರ್ಟಿಯವರಿಗೂ ನೀವು ಹೇಳಲಿಲ್ಲ. ನಮ್ಮ ಪಾರ್ಟಿಯವರಿಗೂ ಹೇಳಲಿಲ್ಲ. ಒಬ್ಬ ವ್ಯಕ್ತಿಗೆ ಹಣವನ್ನು ಕೊಡುವುದನ್ನು ಬಿಟ್ಟು ಅನೇಕ ಜನರಿಗೆ ಅದೇ ಹಣವನ್ನು ಕೊಟ್ಟು ಸಣ್ಣ ಸಣ್ಣ ಉದ್ದಿಮೆಗಳನ್ನು ಪ್ರಾರಂಭ ಮಾಡಿ ನೀವು ಕೊಡುವ ಹಣದಿಂದ ಸಾವಿರಾರು ಜನರಿಗೆ ಒಳ್ಳೆಯದಾಗಬೇಕು. ಇದನ್ನು ನೀವು ಮಾಡಿರಿ ಎಂದು ನಾನು ಹೇಳುತ್ತಿದ್ದೇನೆ. ಇನ್ನು ಆಹಾರ ಧಾನ್ಯ ಸರಬರಾಜಿನಲ್ಲಿ ಗೌರ್ನರ್‌ರವರು 'ನನ್ನ ಸರ್ಕಾರ ಚುನಾವಣೆಯ ಕಾಲದಲ್ಲಿ ನೀಡಿದ್ದ ವಾಗ್ದಾನಗಳನ್ನು ಸಮರ್ಥವಾಗಿ ಈಡೇರಿಸಿದೆ, ಎಂದು ಹೇಳಿದ್ದಾರೆ. ಈ ಮಾತನ್ನು ರಾಜ್ಯಪಾಲರ ಬಾಯಿನಲ್ಲಿ ತಾವು ಹೇಳಿಸಿದ್ದೀರಿ. ಚುನಾವಣೆಗೂ ಗೌರ್ನರ್‌ವರಿಗೂ ಸಂಬಂಧ ಇಲ್ಲ. ಮುಸ್ಲೀಮನಿಗೂ ಗೋಕುಲಾಷ್ಟಮಿಗೂ ಸಂಬಂಧ ಎಷ್ಟು ಇದೆಯೋ ಅಷ್ಟು ಸಂಬಂಧ ಚುನಾವಣೆಗೂ ಮತ್ತು ರಾಜ್ಯಪಾಲರಿಗೂ ನಡುವೆ ಇದೆ. ಚುನಾವಣೆಯಲ್ಲಿ ನೀಡಿದ್ದ ವಾಗ್ದಾನಗಳನ್ನು ಈಡೇರಿಸುವಲ್ಲಿ ನನ್ನ ಸರ್ಕಾರ ಸಮರ್ಥವಾಗಿದೆ ಎಂದು ನೀವು ರಾಜ್ಯಪಾಲರಿಂದ ಹೇಳಿಸಬಾರದಾಗಿತ್ತು.

೧–೩೦ ಪಿ. ಎಂ.

ಸಂತೋಷ, ಹಾಗಾದರೆ ರಾಜ್ಯಪಾಲರ ಕಕ್ಷೆಯನ್ನು ಮೀರಿದ್ದು ಅಲ್ಲ. ರಾಜ್ಯಪಾಲರಿಗೆ ಸಂಬಂಧ ಇಲ್ಲದೇನೆ ಅವರ ಬಾಯಿಯಿಂದ ನೀವು ಹೇಳಿಸಿದ್ದೀರಿ. ಚುನಾವಣೆಯ ವಾಗ್ದಾನಗಳನ್ನು ಪೂರೈಸಿದ್ದೇವೆಂದು ಹೇಳಿದರೆ ಇದು ನಿಜಕ್ಕೂ ತಪ್ಪಾಗುತ್ತದೆ. ಹೋದ ಸಲ ಮಾನ್ಯ ದೇವೇಗೌಡರು ನಾವು ಕೇಳಿದಾಗ ಹೇಳಿದ್ದರು, ಒಂದು ವರ್ಷದಲ್ಲಿ ಅಲ್ಲ, ಐದು ವರ್ಷಗಳೊಳಗಾಗಿ ಎಂದು ಹೇಳಿದ್ದಾರೆ. ಚುನಾವಣೆಯ ವಾಗ್ದಾನಗಳನ್ನು ಪೂರೈಸಿದ್ದೇವೆ ಎಂದು ಹೇಳಿದರೆ ಅದು ತಪ್ಪಾಗುತ್ತದೆ ಮತ್ತು ಸತ್ಯಕ್ಕೆ ಬಹಳ ದೂರವಾದ ಸಂಗತಿಯಾಗುತ್ತದೆ ಎಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷಿಣಿಯವರೆ, ಇನ್ನು ಲೋಕಾಯುಕ್ತದ ಬಗ್ಗೆ ಹೇಳಿದ್ದಾರೆ. ನಮ್ಮ ಸರಕಾರ ಭ್ರಷ್ಟಾಚಾರದಿಂದ ಬಹು ದೂರವಿದೆ. ಭ್ರಷ್ಟಾಚಾರ ನಿರ್ಮೂಲನೆಗಾಗಿ ನಾವು ಟೊಂಕಕಟ್ಟಿ ನಿಂತಿದ್ದೇವೆ ಮತ್ತು ಭ್ರಷ್ಟಾಚಾರ ನಿರ್ಮೂಲನೆಗೆ ತೀವ್ರ ರೀತಿಯಿಂದ ಪ್ರಯತ್ನ ಮಾಡುತ್ತೇವೆ. ಮೊನ್ನೆಯ ಸ್ಟೇಟ್ ಮೆಂಟ್‌ನಲ್ಲಿ ಹೇಳಿದ್ದಾರೆ. ಮತ್ತು 'ಹಿಂದುಳಿದ ವರ್ಗಗಳನ್ನು ಮೇಲೆತ್ತಿ ಮುನ್ನಡೆಸುವ ಯತ್ನ ನಮ್ಮದು. ಸಾಮಾಜಿಕವಾಗಿ, ಆರ್ಥಿಕವಾಗಿ, ಹಿಂದುಳಿದಿರುವವರ ಏಳಿಗೆಗಾಗಿ ತರ್ಕಬದ್ಧ ಮೀಸಲು ಪದ್ಧತಿ ಅಗತ್ಯ, ಇದು ಇವರ ವಾದ. ಇವೊತ್ತಿನ ದಿವಸ ಎಸ್. ಸಿ. ಯವರಿಗೆ ಇವರು ಏನು ಮಾಡಿದ್ದಾರೆ ಅದರ ಬಗ್ಗೆ ಒಂದೂ ವ್ಯಾಖ್ಯಾನ ಇಲ್ಲಿಲ್ಲ. ಎಸ್. ಟಿ. ಯವರಿಗೆ ಏನು ಮಾಡಿದ್ದಾರೆ ಅದನ್ನು ಹೇಳಿದ ಹಾಗಿಲ್ಲ. ಅದು ಹೋಗಲಿ, ಆ ವಿಷಯವನ್ನು ಬಿಟ್ಟು ಬಿಡಿ ನಿಮ್ಮ ಹೆಣ್ಣು ಮಕ್ಕಳ ಸಲುವಾಗಿ ಏನು ಮಾಡಿದ್ದಾರೆ ಹೇಳುತ್ತೀರಾ? ಹೆಣ್ಣು ಮಕ್ಕಳ ಸಲುವಾಗಿ ಎಷ್ಟೋ ಆಸ್ಥೆವಹಿಸಿ ಸಮ್ಮೇಳನಗಳನ್ನು ಮಾಡುತ್ತೀರಿ, ಅವರ ಬಗ್ಗೆ ವಾದ ಮಾಡುತ್ತೀರಿ, ಎಂದ ಮೇಲೆ ಹೆಣ್ಣು ಮಕ್ಕಳ ಅಭಿವೃದ್ಧಿಗಾಗಿ ಈ ಸರಕಾರದವರು ಏನು ಮಾಡಿದ್ದಾರೆ ? ಎಷ್ಟು ವರ್ಕಿಂಗ್ ವಿಮನ್ಸ್ ಹಾಸ್ಟೆಲ್‌ಗಳನ್ನು ಈ ರಾಜ್ಯದಲ್ಲಿ ಮಾಡಿದ್ದಾರೆ ? ಇವೊತ್ತಿನ ದಿವಸ ಕೇಂದ್ರ ಸರಕಾರದವರು ಇಂತಹ ಹಾಸ್ಟೆಲ್

ಗಳನ್ನು ಮಾಡುತ್ತೇವೆಂದು ಯಾವುದೇ ಇನ್ಸಿಟಿಟ್ಯೂಶನ್ಸ್‌ನವರು ಮುಂದೆ ಬಂದರೂ ಕೂಡಾ ಅವರಿಗೆ ೭೫ ಪರ್ಸೆಂಟ್ ಹಣವನ್ನು ಪುಕ್ಕಟೆಯಾಗಿ ಕೊಡುತ್ತಾರೆ. ಉಳಿದ ೨೫ ಪರ್ಸೆಂಟ್‌ನಲ್ಲಿ ೧೨ ಪರ್ಸೆಂಟ್‌ನ್ನು ಮಾತ್ರ ನೀವು ಹಾಕುವುದು. ಅದಕ್ಕೂ ನಿಮ್ಮಲ್ಲಿ ಹಣ ಇಲ್ಲ ಎಂದು ಹೇಳಿದರೆ, ೧೨ ಪರ್ಸೆಂಟ್‌ನ್ನು ಕೊಡುವುದು ಕಷ್ಟ, ನೀವೇ ಮಾಡಿರಿ ಎಂದು ಹೇಳಿದರೆ ಅವರೇ ಮಾಡಬಹುದು.

ಶ್ರೀ ಜೆ.ಹೆಚ್. ಪಟೇಲ್.—ಮೊನ್ನೆ ನೀವೇ ಹೇಳಿದ್ದೀರಿ, ''ಇರಿಗೇಷನ್‌ಗೆ ದುಡ್ಡು ಹಾಕಿ, ಪವರ್‌ಗೆ ದುಡ್ಡು ಹಾಕಿ'' ಎಂದು. ಹಾಗೆಯೇ ''ಅದನ್ನು ಬಿಟ್ಟು ಸೀರೆ ಕೊಡುತ್ತೇವೆ, ಧೋತಿ ಕೊಡುತ್ತೇವೆ, ವಿಧವಾ ವೇತನ ಕೊಡುತ್ತೇವೆ ತಾಳಿ ಕೊಡುತ್ತೇವೆ'' ಎಂದರೆ ಹೇಗೆ ? ಎಂದು ಕೇಳಿದ್ದೀರಿ. ಇವೊತ್ತು ಹೀಗೆ ಹೇಳುತ್ತಿದ್ದೀರಿ. ತಾಳಿಯನ್ನು ಗಂಡಸರಿಗೆ ಕಟ್ಟುತ್ತಾರೆಯೇ ?

ಶ್ರೀ ಕೆ.ಎಸ್. ನಾಗರತ್ನಮ್ಮ.— ಊರಿಗೆಲ್ಲಾ ಕಟ್ಟಿಸ್ತೀರಾ ನೀವು ತಾಳೀನ ?

ಶ್ರೀ ಕೆ.ಎಚ್. ಪಾಟೀಲ್.— ಯಾವಾಗಲೂ ಲಗ್ನ ಆಗುವವರಿಗೆ ತಾಳಿ ಕಟ್ಟುವುದಿಲ್ಲ. ಬೇರೆಯವರಿಗೆ ಕಟ್ಟುತ್ತಾರೆ. ಮಾನ್ಯ ಜೆ. ಎಚ್. ಪಟೇಲ್‌ರವರು ಹಿರಿಯರು ಇರುವುದರಿಂದ ಅವರು ಏನು ಮಾಡಿದರೂ ಮಾಫಿ ಮಾಡೋಣ. ನಾನು ಕೇಳುವುದು ಇಷ್ಟೆ.

ಶ್ರೀ ಜೆ.ಎಚ್. ಪಟೇಲ್.— ಲಗ್ನ ಆಗುವವರಿಗೆ ತಾಳಿ ಕಟ್ಟುವುದು ಅಂದರೆ, ತಾಳಿ ಕಟ್ಟಿದರೆ ಲಗ್ನ ಆದಹಾಗೆ ಅಲ್ಲವೇನು ?

ಶ್ರೀ ಎನ್.ಎಸ್. ಕಡಪಟ್ಟಿ.— ನೀವು ಇಬ್ಬರೂ ಹಿರಿಯರು ಇಲ್ಲಿ ಗುದ್ದಾಡುವುದು ಸರಿಯಲ್ಲ ಬೇರೆ ಜಾಗದಲ್ಲಿ ಗುದ್ದಾಡುವುದು ಒಳ್ಳೆಯದು.

ಶ್ರೀ ಕೆ.ಎಚ್. ಪಾಟೀಲ್.— ನಾನು ಕೇಳುವುದು ಇಷ್ಟೆ, ನೀವು ತಾಳಿಯನ್ನು ಕೊಡದಿದ್ದರೂ ಲಗ್ನ ಆಗಿಯೇ ಆಗುತ್ತಿದ್ದರು. ಕೊಡದಿದ್ದರೂ ತಾಳಿಯನ್ನು ಕಟ್ಟಿಯೇ ಕಟ್ಟುತ್ತಾರೆ. ಬಂಗಾರದ ಬದಲು ತಾಮ್ರದ ತಾಳಿಯನ್ನಾದರೂ ಕಟ್ಟುತ್ತಾರೆ. ತಾಳಿಯನ್ನು ಕಟ್ಟುವುದಕ್ಕೆ ಆಯೋಗ್ಯನಾದಂತಹ ಮನುಷ್ಯ ಹೆಂಡತಿಯನ್ನು ಏಕೆ ಲಗ್ನ ಮಾಡಿಕೊಳ್ಳುತ್ತಾನೆ. ತಾಳಿ ಕಟ್ಟುವುದಕ್ಕೆ ಹಣವಿಲ್ಲದವನು ಮುಂದೆ ಕೂಳಿಗೆ ಏನು ಮಾಡುತ್ತಾನೆ ? ಎಲ್ಲಿಂದ ತರುತ್ತಾನೆ ?

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಜೆ.ಎಚ್. ಪಟೇಲ್‌ರವರು ತಾಳಿ ಕಟ್ಟುವ ಯೋಜನೆಯನ್ನು ಹೇಳಿದರು. ಅದು ಗಂಡಸರು ಹೆಣ್ಣು ಮಕ್ಕಳಿಗೆ ಕಟ್ಟತಕ್ಕಂಥಾದ್ದು. ಮದುವೆಯಾಗುವಾಗ ಗಂಡಸು ಹೆಂಗಸಿಗೆ ತಾಳಿ ಕಟ್ಟುತ್ತಾನೆ. ಈಗ ಒಂದು ಪ್ರಗತಿಶೀಲವಾಗಿರತಕ್ಕಂತಹ ಒಂದು ನಿಲುವು ಹೆಣ್ಣು ಮಕ್ಕಳಲ್ಲಿ ಇದೆ. ಅದು ತಮ್ಮ ಗಮನಕ್ಕೆ ಬಂದಿಲ್ಲ. ಹೆಣ್ಣುಮಕ್ಕಳಿಗೆ ತಾಳಿ ಕಟ್ಟಿ ಹೆಂಡತಿ ಎಂದು ಕರೆಯುವ ಬದಲಾಗಿ ಹೆಣ್ಣುಮಕ್ಕಳು ಗಂಡಿಗೆ ತಾಳಿ ಕಟ್ಟಿಬಿಟ್ಟು ಗಂಡ ಎಂದು ಕರೆಯಬೇಕೆಂದು ಬಂದಿದೆ ಹಾಗೆಂದ ಮೇಲೆ ನೀವು ತಾಳಿ ಕೊಟ್ಟರೆ ಗಂಡ ಎಂದು ಹೇಗೆ ಅನ್ನಬೇಕು ? ಅದಕ್ಕೆ ಇವರಿಗೆ ಕಟ್ಟಿ ಎಂದು ನೀವು ಹೇಳುತ್ತೀರಾ ? ಇದಕ್ಕೆ ನೀವು ಏನು ಹೇಳುತ್ತೀರಿ ?

ಶ್ರೀ ಜೆ.ಎಚ್. ಪಟೇಲ್.—ಪ್ರಗತಿಪರವಾದಂತಹ ಯಾವುದೇ ಸಲಹೆ ಬಂದರೂ ಗಮನಿಸುತ್ತೇವೆ. ಇನ್ನು ಮೇಲೆ ಬರೀ ಹೆಣ್ಣುಮಕ್ಕಳು ಗಂಡಸರಿಗೆ ತಾಳಿಕಟ್ಟಬೇಕು. ಅಷ್ಟೇ ಅಲ್ಲ ನಾನು ಒಂದು ಹೆಜೆ ಮುಂದೆ ಹೋಗಿ, ಎಲ್ಲರೂ ಶ್ರೀಮತಿ ಬಸವಲಿಂಗಪ್ಪ, ಶ್ರೀಮಂತಿ ಜೆ.ಎಚ್. ಪಟೇಲ್ ಎಂದು ಬರೆದುಕೊಳ್ಳುತ್ತಾರಲ್ಲ, ಅದನ್ನು ಬಿಟ್ಟುಬಿಟ್ಟು ನಮ್ಮ ಹೆಂಡರ ಹೆಸರನ್ನು ಇಟ್ಟುಕೊಂಡರೆ ಹೇಗೆ ?...

ಶ್ರೀ ಕೆ.ಎಚ್. ಪಾಟೀಲ್.— ಜೆ.ಎಚ್. ಪಟೇಲ್‌ರವರು ಯಾವಾಗಲೂ ಪ್ರಗತಿಶೀಲರು ಮತ್ತು ಹೇಳಿದ್ದನ್ನು ಮಾಡುತ್ತಾರೆ, ಆದಕ್ಕಾಗಿ ಅವರು ಹೇಳಿದ್ದನ್ನು ಯಾವಾಗ ಮಾಡುತ್ತಾರೆ ಎಂದು ಕಾದು ನೋಡೋಣ, ಈಗ ವಿಷಯಕ್ಕೆ ಬರಲಾಗಿ, ನಾನು ಈ ಸರಕಾರಕ್ಕೆ ತೊಂದರೆ ಇದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಕೆಲವು ಸಲಹೆಗಳನ್ನು ಮಾಡಿದ್ದೇನೆ. ಸರಕಾರಕ್ಕೆ ಏನೂ ತೊಂದರೆ ಆಗದೇನೆ, ಇರುವಂತಹ ವರ್ಕಿಂಗ್ ವಿಮೆನ್ಸ್ ಹಾಸ್ಟೆಲ್ಸನ್ನು ಕಟ್ಟುವ ಕೆಲಸವನ್ನು ನೀವು ಏಕೆ ನಿಲ್ಲಿಸಿದ್ದೀರಿ.

ಚೇರ್‌ಮನ್.— ಮಾನ್ಯ ಪಾಟೀಲ್‌ರವರೆ, ದಯವಿಟ್ಟು ಬೇಗನೆ ಮುಗಿಸಿ ಬಿಡಿ.

ಶ್ರೀ ಕೆ. ಎಚ್. ಪಾಟೀಲ್.— ಕೇಂದ್ರ ಸರಕಾರದವರಿಂದ ಇದಕ್ಕಾಗಿ ಸಾಕಷ್ಟು ಹಣ ಬರುತ್ತದೆ. ಇವೊತ್ತು ನೂರಾರು ಹೆಣ್ಣುಮಕ್ಕಳ ಹಾಸ್ಟೆಲ್‌ಗಳನ್ನು ಕಟ್ಟಿದರೂ ಕೂಡಾ ಹಣ ಇದೆ. ಇಷ್ಟೇ ಅಲ್ಲ ಕೇಂದ್ರ ಸರಕಾರದವರು ನೀವು ತಡ ಮಾಡುತ್ತಿದ್ದೀರಿ ತಡ ಮಾಡಬೇಡಿ ಎಂದು ತಿಳಿಸಿದ್ದಾರೆ. ಆದರೆ ನಮ್ಮಲ್ಲಿ ಏನು ಆಗುತ್ತಿದೆ ? ನಮ್ಮಲ್ಲಿ ಕನ್ನಡ ಬರುವಂತಹ ಡೈರೆಕ್ಟರ್ ಇಲ್ಲ. ಜನರಿಗೆ ಭೇಟಿ ಆಗುವುದಕ್ಕೆ ಅವರಿಗೆ ಆಗುವುದಿಲ್ಲ, ಯಾರಾದರೂ ಒಳ್ಳೆಯ ಅಧಿಕಾರಿ ಇದ್ದರೆ ಅವರ ವಿರುದ್ಧ ಚಾಡಿ ಹೇಳಿ ಮನೆಗೆ ಕಳುಹಿಸುತ್ತಾರೆ. ನಿಮ್ಮ ಡೈರಕ್ಟರ್‌ರವರಿಗೆ, ನಮ್ಮ ಹತ್ತಿರ ಬೇಡ ನಿಮ್ಮ ಮಂತ್ರಿಗಳ ಜೊತೆಗೆ ಮಾತನಾಡುವುದಕ್ಕೆ ಆಗುವುದಿಲ್ಲ. ಒಬ್ಬ ಹೆಣ್ಣುಮಗಳನ್ನು ಸೋಶಿಯಲ್ ವೆಲ್‌ಫೇರ್ ಖಾತೆಗೆ ಹಾಕಿದ್ದೀರಿ. ಆ ಹೆಣ್ಣುಮಗಳಿಗೂ, ಡೈರೆಕ್ಟರ್‌ರಿಗೂ ಸಂಬಂಧ ಇಲ್ಲದ ಹಾಗೆ ಆಗುತ್ತದೆ. ಇದನ್ನೆಲ್ಲಾ ವಿಚಾರ ಮಾಡಿನೋಡಿ. ಉತ್ತರಕ್ಕೆ ಉತ್ತರ, ಮಾತಿಗೆ ಮಾತು ಎಂದು ಹೇಳಬೇಡಿ ಇದನ್ನು ನೀವು ವಿಚಾರ ಮಾಡಿನೋಡಿ. ಯೋಗ್ಯ ಎಂದು ಕಂಡರೆ ಯೋಗ್ಯ ಎಂದು ಹೇಳಿ, ಇಲ್ಲದಿದ್ದರೆ ತಿದ್ದಿಕೊಳ್ಳಿ. ನಮ್ಮ ರಾಜ್ಯದವರೇ ಆದಂತಹ ಶ್ರೀಮತಿ ಮಾರ್ಗರೇಟ್ ಆಳ್ವರವರು ಕೇಂದ್ರದಲ್ಲಿ ಈ ಖಾತೆಯನ್ನು ಹೊಂದಿದ್ದಾರೆ. ಸಾಕಷ್ಟು ಹಣವೂ ಇದೆ. ಉಳಿದ ರಾಜ್ಯ ಸರ್ಕಾರಗಳವರು ಎಲ್ಲರೂ ಹಣವನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಮುಂಬೈನಗರದೊಳಗೆ ಸಹಿತ ೨೦ ಹಾಸ್ಟೆಲ್‌ಗಳು ಆಗಿವೆ. ಎಲ್ಲಾ ರಾಜ್ಯಗಳಲ್ಲಿಯೂ ಹೆಚ್ಚು ಹೆಚ್ಚಾಗಿ ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನಮ್ಮ ರಾಜ್ಯಕ್ಕೆ ಏನು ಬವಣೆ ಬಂತು ? ಜನತಾ ಸರ್ಕಾರ ಇದೆ, ನಮಗೆ ಹಣ ಸಿಗುವುದಿಲ್ಲ ಎಂದು ತಿಳಿದು ಕೊಳ್ಳಬೇಡಿ. ಕಾಂಗ್ರೆಸ್‌ನವರಿಗಿಂತ ನಿಮಗೆ ಹೆಚ್ಚು ಹಣವನ್ನು ಕೇಂದ್ರದವರು ಕೊಡುತ್ತಿದ್ದಾರೆ. ಏಕೆಂದರೆ ಅಪಕೀರ್ತಿ ಬರಬಾರದು ಎಂದು, ಆ ದೃಷ್ಟಿಯಿಂದ ನಾನು ಸಲಹೆ ಮಾಡುತ್ತೇನೆ. ಬೇಕಾದರೆ ನಮ್ಮ ಸಲಹೆಯನ್ನು ತೆಗೆದುಕೊಳ್ಳಿ, ಬೇಡವಾದರೆ ಬಿಟ್ಟುಬಿಡಿ. ಆದರೆ ಹಾಸ್ಟೆಲ್‌ಗಳ ಪ್ರೊಪೋಸಲ್ ಗಳನ್ನು ಎಲ್ಲೆಲ್ಲಿ ಬೇಕೋ ಅವುಗಳನ್ನು ಕಳುಹಿಸಿ ಕೊಡಿ. ಯಾರಿಗೆ ಯಾವ ಪ್ರದೇಶದಲ್ಲಿ ಬೇಕು ಎಂಬುದನ್ನು ತಿಳಿದುಕೊಂಡು ಪ್ರಪೋಸಲ್ಸ್ ಅನ್ನು ಕಳುಹಿಸಿಕೊಡಿ. ವಿಮನ್ಸ್ ಹಾಸ್ಟೆಲ್‌ಗಳ ಜೊತೆಗೆ ಇಂತಹ ಬೇರೆ ಯೋಜನೆಗಳು ಇವೆ. ಅದರ ಬಗ್ಗೆಯೂ ಸ್ವಲ್ಪ ಯೋಚನೆ ಮಾಡಿ ಕ್ರಮ ಕೈಗೊಳ್ಳ ಬೇಕೆಂದು ಕೋರುತ್ತೇನೆ.

ಇನ್ನು ಕೊನೆಯದಾಗಿ, ಒಂದು ಮಾತನ್ನು ಹೇಳುತ್ತೇನೆ, ಇವೊತ್ತು ಜನರಲ್ ಅಡ್ಮಿನಿಸ್ಟ್ರೇಶನ್ ತುಂಬಾ ಹದಗೆಟ್ಟಿದೆ. ಬುದ್ಧಿಪೂರ್ವಕವಾಗಿ ನಾನು ಗೃಹಮಂತ್ರಿಯವರ ಸಲುವಾಗಿ ಹೇಳುತ್ತಿಲ್ಲ. ನನ್ನ ಹತ್ತಿರ ಅನೇಕ ಪತ್ರಗಳು ಬಂದಿವೆ. ಇದರಲ್ಲಿ ಪೋಲೀಸರು ಮಾಡಿದಂತಹ ದೌರ್ಜನ್ಯದ ಬಗ್ಗೆ ಬರೆದಿದ್ದಾರೆ. ಹೊಡೆದ ಬಗ್ಗೆ, ಹಿಡಿದು ಹಣ ಕಸಿದುಕೊಂಡಿದ್ದರ ಬಗ್ಗೆ ಬರೆದಿದ್ದಾರೆ. ಪೋಲೀಸರು ತಪ್ಪಿತಸ್ಥರನ್ನು ಹಿಡಿಯುವುದಕ್ಕೆ ಯಾರು ಬೇಡ ಎನ್ನುವುದಿಲ್ಲ. ಪೋಲೀಸ್ ಅಧಿಕಾರಿಗಳು ಮಾಡಿ ದಂತಹ ಅನಾಹುತಗಳನ್ನು ಯಾರು ಪ್ರಶ್ನಿಸದ ಹಾಗೆ ಇದೆ. ಇದಕ್ಕೆ ಕಾರಣ ಏನು ? ನಾವು ಹೇಳಿದ ಕೂಡಲೇ ಮಾನ್ಯ ಗೃಹಮಂತ್ರಿಯವರು ಹೇಳುತ್ತಾರೆ, ಆಕ್ಟನ್ನು ಮಾಡಿಕೊಟ್ಟಾಗಿ, ಆದರೆ ಈ ಗೂಂಡಾ ಗಳನ್ನು ರಕ್ಷಣೆ ಮಾಡುವವರು ಇದ್ದಾರೆ ಎಂದು. ಯಾರ್‍ಯಾರು ರಕ್ಷಣೆ ಮಾಡುತ್ತಾರೆ ಅವರನ್ನು ಹಿಡಿದು ಹಾಕಿ. ಅದಕ್ಕೆ ಯಾರು ಅಡ್ಡಿಯಾಗಿದ್ದಾರೆ ? ಈ ಗೂಂಡಾಗಳನ್ನು ಹಿಡಿಯುವುದರಲ್ಲಿ ನಿಮಗಿಂತ ಯಾರು ಹಿಂದೆ ಇದ್ದಾರೆ ಎಂದು ತಿಳಿದುಕೊಂಡಿದ್ದೀರಾ ? ಈ ಗೂಂಡಾ ಆಕ್ಟನ್ನು ವಿರೋಧ ಮಾಡುವುದಿಲ್ಲ, ನಿಮ್ಮ ಪೊಲಿಟಿಕಲ್ ಆಪೊನೆಂಟ್ಸ್ ಸಲುವಾಗಿ ವಿರೋಧ ಮಾಡುತ್ತೇನೆ ಎಂದು ಹೇಳಿದ್ದೇನೆ. ಅದು ಇನ್ನು ಮೇಲೆ ನಿಲ್ಲಬೇಕು. ಗೂಂಡಾಗಳನ್ನು ಹಿಡಿದು ಹಾಕಿ. ರಾಜಕೀಯವಾಗಿ ಉಪಯೋಗಿಸ ಬೇಡಿ. ಮಾನವಂತರು, ಹೆಣ್ಣುಮಕ್ಕಳು, ರಸ್ತೆಯಲ್ಲಿ ನಿರ್ಭೀತಿಯಿಂದ ಸುಖಿಯಾಗಿ ತಿರುಗಾಡುವಂತಾಗಲಿ. ತಮ್ಮ ಕಡೆಯ ಒಬ್ಬ ಸದಸ್ಯರು ಹೇಳಿದರು ಈಗ ಗೂಂಡಾಗಿರಿ ಇಲ್ಲ, ಎಲ್ಲಾ ಹೋಗಿ ಬಿಟ್ಟಿದೆ ಎಂದು. ಕಾಂಗ್ರೆಸ್ ರಾಜ್ಯ ಇದ್ದಾಗ ಹೆಚ್ಚಿಗೆ ಇತ್ತು ಎಂದು ಹೇಳಿದ್ದಾರೆ. ಒಟ್ಟಿನಲ್ಲಿ ಎಲ್ಲಾ ಜನರೂ ಬೀದಿಗಳಲ್ಲಿ ನಿರ್ಭೀತಿಯಿಂದ ತಿರುಗಾಡುವ ಹಾಗೆ ಮಾಡಿ. ಈಗ ನಾವು ಕದ, ಕಿಟಕಿಗಳನ್ನು ಹಾಕಿಕೊಂಡು ಇರ ಬೇಕಾಗಿಲ್ಲ, ಯಾವುದಕ್ಕೂ ಹೆದರಬೇಕಾಗಿಲ್ಲ, ವಿಜಯನಗರ ಸಾಮ್ರಾಜ್ಯ ಎಂದು ತಿಳಿದುಕೊಂಡು ಸುಖ ವಾಗಿರಬಹುದು ಎಂದ ಹಾಗೆ ಆಯಿತು. ಈ ರೀತಿಯಲ್ಲಿ ಅಮಾನುಷವಾಗಿ ನಿಮ್ಮ ಗೂಂಡಗಳು ನಿಮಗೆ ಅಂಜದೆ ಕೆಲಸ ಮಾಡುವಂತಹ ರೀತಿಯಲ್ಲಿ ಇರುವಾಗ, ನೀವು ಪೋಲೀಸರ ಮೇಲೆ ಯೋಗ್ಯವಾದಂತಹ ಹಿಡಿತವನ್ನು ಇಡಬೇಕು, ಜನರಲ್ ಅಡ್ಮಿನಿಸ್ಟ್ರೇಶನ್ ತುಂಬ ಹದಗೆಟ್ಟು ಹೋಗಿದೆ. ಯಾವ ರಾಜ್ಯ ಇದೆ ಎಂದು ಹೇಳಿದರೆ ಜನತಾ ರಾಜ್ಯ ಇದೆ ಎಂದು ಹೇಳುವುದು ಸರಿಯಲ್ಲ. ಇವೊತ್ತು ಅರಾಜಕತೆಯಂತಹ

ರಾಜ್ಯ ಯಾವುದು ? ಇವೊತ್ತು ಇರತಕ್ಕಂತಹ ರಾಜ್ಯ ಬ್ಯೂರಾಕ್ರೆಟಿಕ್ ರಾಜ್ಯ. ಅವರು ಏನು ಹೇಳುತ್ತಾರೆ, ಅದನ್ನು ಕೇಳುವವರು ನೀವು ಆಗಿದ್ದೀರಿ, ನಿಮ್ಮಲ್ಲಿ ಹಿಡಿತ ಇಲ್ಲದ ಹಾಗೆ ಆಗಿದೆ. ನಾನು ಆಗಲೇ ಒಂದು ಉದಾಹರಣೆ ಕೊಟ್ಟು ಹೇಳಿದೆ, ಕರ್ನಾಟಕ ಭವನದಲ್ಲಿ ಇವೊತ್ತು ನಾನ್‌ಅಫಿಶಿಯಲ್ಸ್‌ಗೆ ಒಂದು ರೇಟು, ಅಫಿಶಿಯಲ್ಸ್‌ಗೆ ಒಂದು ರೇಟು. ನಾವು ಅವರಿಗಿಂತ ಕಡಿಮೆ ತಿಂದರೂ ಕೂಡಾ ನಮಗೆ ಹೆಚ್ಚು ರೇಟು ಇದೆ. ಅವರು ನಮಗಿಂತ ಹೆಚ್ಚು ತಿಂದರೂ ಕೂಡ ಅವರಿಗೆ ಕಡಿಮೆ ರೇಟು. ಇದು ಯಾವ ಮಹಾಧರ್ಮ, ಸ್ವಾಮಿ ? ಇದು ನೀವು ಜನರಿಗೆ ಕೊಟ್ಟಂತಹ ಆಶ್ವಾಸನೆಯೇ ? ಕರ್ನಾಟಕ ರಾಜ್ಯದ ಜನತೆಗೆ ಕೊಟ್ಟಿರತಕ್ಕಂಥ ಆಶ್ವಾಸನೆಗಳ ಬಗ್ಗೆ ತಾವೇನು ಮಾಡಿದ್ದೀರಿ ? ಕರ್ನಾಟಕ ರಾಜ್ಯದ ನಾಲ್ಕು ಕೋಟಿ ಜನತೆಯನ್ನು ಯಾವ ರೀತಿಯಲ್ಲಿ ನಿಮ್ಮ ಹಿಡಿತದಲ್ಲಿ ತರುತ್ತೀರಿ ಎಂಬುದನ್ನು ಆಲೋಚನೆ ಮಾಡಿ. ಕರ್ನಾಟಕ ರಾಜ್ಯದಲ್ಲಿ ಕನ್ನಡ ಕನ್ನಡ ಎಂದು ನಾರಾಯಣಕುಮಾರ್ ಇಲ್ಲಿ ಹೇಳುತ್ತಾರೆ. ಇಲ್ಲಿ ಯಾರು ಕನ್ನಡವನ್ನು ಮಾತನಾಡುವುದಿಲ್ಲವೊ ಅವರನ್ನು ಅವರು ಬೈಯುವುದಕ್ಕೆ ಬರುತ್ತಾರೆ. ಆದರೆ ಆಡಳಿತವನ್ನು ನಡೆಸುವುದಕ್ಕೆ ಎಷ್ಟೋ ಜನ ಕನ್ನಡ ಬರದೆ ಇರತಕ್ಕಂಥ ಅಧಿಕಾರಿಗಳನ್ನು ಇಟ್ಟಿದ್ದೀರಿ. ಇವತ್ತಿನ ದಿವಸ ಐ.ಎ.ಎಸ್ ಮತ್ತು ಐ.ಪಿ.ಎಸ್. ಅಧಿಕಾರಿಗಳಿರಬಹುದು. ಕನ್ನಡ ಬರದೆ ಇರುವಂತಹ ಅಧಿಕಾರಿಗಳನ್ನು ನೇಮಿಸಿರುವುದು ತಪ್ಪಾಗುವುದಿಲ್ಲವೇ ? ಈ ಮಾತುಗಳನ್ನು ಹೇಳುವಾಗ ನಾನು ಸ್ವಲ್ಪ ರಭಸದಿಂದ ಮಾತನಾಡಿರಬಹುದು ತಾವು ಗಂಟೆಯನ್ನು ಹೊಡೆಯುತ್ತಿದ್ದೀರಿ. ಆದರೂ ಸಹ ನಾನು ನನ್ನ ಕರ್ತವ್ಯವನ್ನು ಮಾಡದಿದ್ದರೆ ಗತ್ಯಂತರವಿಲ್ಲ. ನಾನು ಕೆಲವು ಸಲಹೆಗಳನ್ನು ನಿಶ್ಕಲ್ಮಷದಿಂದ ಕೊಟ್ಟಿದ್ದೇನೆ. ತಮಗೆ ತಿಳುವಳಿಕೆ ಇದ್ದರೆ ತಿದ್ದಿಕೊಳ್ಳಿ ಇಲ್ಲದಿದ್ದರೆ ಹೋಗಲಿ ಎಂದು ಹೇಳಿ, ಇದುವರೆಗೆ ಮಾತನಾಡಲು ಅವಕಾಶವನ್ನು ಕೊಟ್ಟಂತಹ ಮಾನ್ಯ ಸಭಾಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SMT. MUKTHARUNNISA (NARRASIMHARAJA) —Respected Chairman, at the outset I thank you for having given me an opportunity to speake a few words on the motion of thanks to Governor's Address, I have gone through the address of His Excellency of Governor of Karnataka but utterly disappointad, In page 6- para 11 the address it is mentioned that my Government"s avowed policy of taking up poverty alleviation programmes, has been the launchings with effect from 1st November, 1985 of a new scheme of supplying subsidised foodgrains to the rural poor, This is a massive operation covaring 24 lakhs families'. In this connection, I would like to express my concen about that programme. In Karnataka we have population of about 4 crores out of this nearly 80% of the population are said to be belwthe poverty line but here they say that this programme has been covered only 24 lakhs families and these families have been supplied with "Green Cards" which entitle them to receive subsidised food-grains. This, I think would cover the poor people residing in rural areas, I would like to know what have you done about the poor people who are residing in urban areas? Are they not entitled to get "Green Cards" under that scheme ? Are they not poor people in the eye of the Government ? I would like to know why the Government has made a distinction between urban and rural poor ? Whether they reside in urban or in rural place, they are always considered as poor. Why the Government makes discrimination while implementing such a scheme ? I want the Government to treat both urban and rural

poor on the same footing and extend the benefits eqally. I urgue upon the Government to remove this disparity and extend the scheme to urban poor also. And,then,even in rural areas also some of the poor people are not given ,Green Cards'. Recently, I have visited a village nearby Mysore and saw a big queue before a Society for receiving 'Green Cards'. Some people told me that though they are identified as poor thep have not been given the ·Green Card'. I therefore appel to the Government to remove this bottlenck and also to identify poor people residing in urban areas and issue them 'Green Cards' I also urge npon the Government remove urban rural discrmination in implementing this schem.

Secondly, at page 12-para 21 of the Governor's Address, it is mentioned that a Government Order has been issued constituting the the Karnataka State Minorities Development Corporation with an initial share capital of Rs. 1 crore. In the last Assembly also, in response to a question, Hon'ble Chief Minister has declared that an initial shara capital of Rs. one crore has been privded to the Karnataka State Minorities Development Corparation and we were happy at that time to hear the news but uptill now, nothing has been done for the welfare of minorities through this Corporation. All those things remained on the paper only. I would like to know from the Government what benefits the minorities have so far gained thrugh this Corporation. Another thing is this Government has formed a Minorities Commission and appointed Mr. Goodawala - a respected person as the Chairman of that Commission. We are very happy to note that but what about the report submitted by the Commission to the Government. As things stand to-day, the Government has not published that report, Why it has not been bublished so far ? Had the Government published, it would have received several suggestions from the public as well from the minorities. When a Commission has been set up for the welfare of a group and when it submits a report to the Government, is it not the duty of the Government to implement it. What is the use of just keeping it in almirah. Does it going to help the minority groups living in Karnataka ? Our Government should know we are also born in Karnataka, brought up in Karnataka only but nodoubt you call us minorities but we to all are Kannadigas. So, we have got every right to ask the Government to provide all welfare measures to all minority groups. I therefore appeal to the Government release more funds to the Minority Development Corporation wich in turn can take up welfate measures for minorities in the State of Karnataka. The present funds provided to the Corporation is very meagre considering the total population in the State. Then, there is a scheme formed to help some of the un-

employed through the Industries Department. Here I would like know from the Government how many minority groups whether it is a Chistian, Muslim, parsi or Jains - are benefited through that scheme. I would like to know this from the Government in its reply. On an earlier occasion also, our Hon'ble Chief Minister has stated that this Corporation has been formed with a view to help the minority groups. Last time I find in a book only three outosikshas were given to them. Is it sufficient. Are there only 3 people among the minority groups live in Karnataka ?

I really pain to know that the step-motherly treatment is being meted out to the minority groups in Karnataka. Anyway, I don't want to deal with that subject further. I only appeal to the Government to take immediate steps to implement the schemes meant for minorities through this Minority Development Corporation and thus help the needy to the maximum extent possible.

Then, I come to page 13 of the Governor' Address wherein it is said that on the labour frout, there has been a renewed awareness of the importance of industrial safety to both workmen and people living in areas surrounding industries. On this I would like to say one thing. Take the example of K R Mills, Mysore - the mill has been closed for the last 20 months leaving 3,000 and odd workers on the street. One has to think about the fate of the families of these workers. Nodoubt the State Government and the Labour Minister have taken some steps to reopen the mill the Hon'ble Labour Ministe has conducted meetings of the Management and also the labour representatives and I was also present in the meeting but unfortunately nothing has come out or no decision has been taken to re-open the mill. In fact there was an agreement between the Management and the labour representatives that the mill will be opened in the month July, but so far it has not re-opened. The result of it is, the labour force is starving day by day and their families have been sufferring a lot. No Government representative has any courtesy to see them and whenever we ask the concerned Minister - the reply is, it will be opened just like 'ನಾಳೆ ಬಾ' story. Just think about the poor workers and their families for a minute - what they should do during this crisis ? Of Course, the Labour Minister had several meetings with the Management but still no fruitful decision has been taken by the management. The Management has asked for funds from IDBI and the same has not been released by the Bank. This is what they say, when we ask the Government they say that there have recommended the loan application of the management to the IDBI. This sort of correspondence is going on between the Management and the Govern-

ment for the last 20 months without any fruitful results, In this process the poor workers are suffering a lot.

SRI J. H. PATEL.— May I request the hon. Member to give facts as they were and as they are. As you know, we held several meeting with the Management and the labour representatives in a bid to open the mill early. The Government of Karnataka tried its level best to put the industry back to life which the hon. Member also know very well, but there is limit. If the management or the private owner are not prepared, what else we can do ? So far as Government was concerned, it has done whatever possible in its authrity to see that the mill starts but it is not possible. In fact we have recommended their case to the IDBI for finance so that mill is reopened early.

SMT. MUKTHARUNNISA.— Then he have got to think of the alternative source available to the 3,000 labourers. As you all know, it is a 100 years old mill and if the management was to think about the closure of mills, one has to think about the employment of the workers who are serving in the mills for the last so many years. Considering all these aspects, I humbly request the Government to initiate steps for reopening the mill early.

Then, there is another thing in the Governor's Address. It is mentioned that it is the desire of the State Government to provide employment, food & clothing besides supply of drinking water, but to our anxiety, on these fronts it has not been done properly. No doubt, the funds of the Central Government has also been utilised but still it is not upto the mark. Even while taking steps to fight drought situation in the State, the Government has failed to implement the schemes properly Even though the Central Government has sanctioned about 53 crores towards drought relief, there is no permanent structure built or proper borewells dug.

Then, there is no encouragement for sports in Karnataka. The Department concerned has not taken steps to construct Stadiums at the district levels. In Mysore City the construction of a stadium is long pending. Sometime back the Divisional Commissioner and the Deputy Commissioner had arranged a 'Rajkumar Nite' and collected about Rs. 25 lakhs but still construction has not been completed. I therefore, urge upon the Government to give serious attention to this aspect and see that more and more stadiums are constructed at the divisional levels and taluka level.

Then, just now, one of our friends said about 'Thali Bhagya'. To-day I read in Deccan Herald that 387 people have received 'Mangalasutra'. I would like to know from the Government whether

it is a welfare measure towards women flok in Karnataka ? Is it in any way useful for their livelihood if you present a 'Mangalasutra' to a women ? It is a only a sign for women that she is married and this 'Thali' is tied by a man an on occasion called marriage but in our Indian tradition if husband dies his wife has to remove the Thali. Is our other sect is so incapable even to purchase a 'Thali' at the time of marriage ? Why does the Government has taken up this responsibility ?

ಶ್ರೀ ಬಿ. ಜಿ. ಕೊಟ್ರಪ್ಪ.— ಸಭಾಧ್ಯಕ್ಷರೇ, ಹಿಂದೂ ಧರ್ಮದ ಬಗ್ಗೆ ಅವರಿಗೆ ಗೊತ್ತಿಲ್ಲ, ಏತಕ್ಕೆ ಕಾಮೆಂಟ್ ಮಾಡಬೇಕು ?

ಶ್ರೀ ಜೆ. ಹೆಚ್. ಪಟೇಲ್,— ಸರಕಾರ, ಕಟ್ಟುವ ಗಂಡನಿಗೆ ತಾಳಿ ಕೊಡುತ್ತದೆಯೇ ಹೊರತು ಸರಕಾರವೇ ತಾಳಿ ಕಟ್ಟುವುದಿಲ್ಲ.

ಶ್ರೀಮಂತಿ ಕೆ. ಎಸ್. ನಾಗರತ್ನಮ್ಮ.— ಅವರ ಪ್ರಶ್ನೆ ಅದಲ್ಲ, ಗಂಡ ಸತ್ತ ಮೇಲೆ ಅದನ್ನು ತೆಗೆಯಬೇಕೇ ಬೇಡವೇ ಎಂಬುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.— ನಿಮ್ಮ ಆಫೀಸರ್ಸ್ ಹೋಗಿ ಅದನ್ನು ವಾಪಸ್ ಕೇಳಿದರೂ ಆಶ್ಚರ್ಯ ಇಲ್ಲ, ಈಗಲೇ ಕ್ಲಾರಿಫೈ ಮಾಡುವುದು ಒಳ್ಳೆಯದು.

SMT. MUKTHARUNNISA.—During the marriage 'Thali' has its own importance and it is a sign i.e. consent of marriage. This tradition is being followed both in Hindu and Muslim religions & there is no difference at all.

೨-00ಪಿ.ಎಂ.

Tali means respect to women. It gives prestige to ladies. We cannot close the mouth of the public and they are asking me about it and that is why I made a mention on the Floor of the House.

(MR. SPEAKER in the chair)

Therefore, Tali gives respect to the person who wears it. Now you are presenting a small Tali with thread. It is not a welfare measure at all. Giving of tali by the Government gives an impression that a particular man is unfit to purchase this small tali also. I there fore, request the Government that instead of presenting a small Tali, kindly consider giving some Cash to start some small scale industry or give some machines which will be useful for their livelihood. The Tali that you are now presenting is not very big and it is not beautiful and not visible also. I am sure that the Hon'ble Lady minister who is incharge for Social welfare Department will look into these things and see that steps are taken to keep up the respect of the ladies.

ಶ್ರೀ ಬಿ. ಜಿ. ಕೊಟ್ರಪ್ಪ —ತಾಳಿ ಬದಲು ಒಂದು ದೊಡ್ಡ ಗಂಟೆ ಕಟ್ಟಿದರೆ ಚೆನ್ನಾಗಿರುತ್ತದೆಂದು ಇವರು ಸಲಹೆ ಮಾಡುತ್ತಾ ಇದ್ದಾರೆಯೇ ?

ಶ್ರೀಮತಿ ಮುಕ್ತಾರ್ ಉನ್ನಿಸಾ.—ನೀವು ಏನು ಹೇಳಿದಿರಿ ಎನ್ನುವುದನ್ನು ಸರಿಯಾಗಿ ಹೇಳಿದರೆ ಗೊತ್ತಾಗುತ್ತದೆ. Let him tell properly and the public is interest to hear his views also.

ಶ್ರೀ ಬಿ. ಜಿ. ಕೊಟ್ರಪ್ಪ.—ಧರ್ಮದ ಬಗ್ಗೆ ಗೊತ್ತಿದ್ದರೆ ಮಾತನಾಡಬೇಕು. ಇಲ್ಲದಿದ್ದರೆ ಈ ರೀತಿ ಮಾತನಾಡುವುದು ಸರಿಯಲ್ಲ.

SMT. MUKTAR UNNISSA.—Then, Sir, nothing has been mentioned about Wakf which is a very vast department. I request the Government to see that in future what is going to be done in important departments like Wakf, women and Children Welfare etc., is mentioned in the Governor's Address. There are number of Centrally Sponsored Schemes but the fact is that the Samajas and other Mahila institutions are not at all receiving any information from the concerned Government Department Last year, they did not take much interest with the results. some gratns had been lapsed. There are number of welfare schemes like Creche destitute homes, Holiday Home Campus, Working Women's Hostel ete., There is lot of literature about these welfare schemes but I don't see any of these literatures in our Mahila Samajes. I therefore request the Hon'ble Minister, who is also a lady, to take more interest and see that these litaratures are being supplied to the Mahila Samajas and Mandals so that they will be in a position to utlist the grants that are available. I hope that during this year, grants will not be lapsed. These Samajas and Mandals are interested to take up these schemes but only thing is you have to provide them necessary help and assistance. Whenever we ask anything, the Hon'ble Minister for Social Welfare Sri V. L. Patil, who is not present now, used to say that he will look into it, but that does not solve the problem. When the voting of demands for the Social Welfare Dept. come before the House, I will speak more and seek specific replies from the Hon'ble Minister.

With these words, I thank the Chair and conclude.

ಶ್ರೀ ಕೆ. ಎಚ್. ಶ್ರೀನಿವಾಸ್(ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮಂಡಿಸಿರುವ ವಂದನಾ ನಿರ್ಣಯವನ್ನು ವಿರೋಧಿಸಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ ಈ ರಾಜ್ಯಪಾಲರ ಭಾಷಣದಲ್ಲಿ ಏನಾದರೂ ಇದೆ ಎನ್ನುವ ಕಾರಣಕ್ಕೋಸ್ಕರ ಭಾಷಣ ಮಾಡತಕ್ಕದ್ದಲ್ಲ. ಇಡೀ ಭಾಷಣದಲ್ಲಿ ಏನು ಇಲ್ಲವಲ್ಲಾ ಎನ್ನುವ ಕಾರಣಕ್ಕೋಸ್ಕರ ಭಾಷಣ ಮಾಡುತ್ತಾ ಇದ್ದೇನೆ. ತಾವು ನೋಡಿದಂತೆ ಇದರಲ್ಲಿ ಸುಮಾರು ೧೦ ಪ್ಯಾರಾಗಳು ಸಂಪೂರ್ಣವಾಗಿ ಬರಗಾಲಕ್ಕೆ ಮೀಸಲಾಗಿದ್ದು, ಇನ್ನುಳಿದಿರತಕ್ಕ ಪ್ಯಾರಾಗಳಲ್ಲಿ ಕೂಡ, ಅಲ್ಲಿರುವ ವಾಕ್ಯಗಳ ಮಧ್ಯದಲ್ಲಿ ಬರಗಾಲವನ್ನು ಸ್ಪಷ್ಟವಾಗಿ ನೋಡಬೇಕಾಗಿದೆ. ಇದು ನಿಜವಾದ ಅರ್ಥದಲ್ಲಿ ಬರಗಾಲ ಪೀಡಿತದ ಭಾಷಣ. ಆದರೆ ಒಂದು ಕೆಲಸ ಏನು ಮಾಡಿದ್ದಾರೆ ಎಂದರೆ ನಮ್ಮ ಶಾಸ್ತ್ರವು ಈ ಗಣಪತಿಯನ್ನು ಸಮೃದ್ಧ ದೇವತೆಯೆಂದು ಬಣ್ಣಿಸಿದ್ದ ಹಾಗೆ ಈ ಬರಗಾಲ ಪೀಡಿತ ಭಾಷಣಕ್ಕೆ ವಂದನಾ ನಿರ್ಣಯವನ್ನು ಮಂಡಿಸುವ ಸಲುವಾಗಿ ಒಂದು ರೀತಿಯ ಸಮೃದ್ಧ ಸಂಕೇತವಾಗಿದೆ. ಇದಕ್ಕಾಗಿ ನನ್ನ ಗೆಳೆಯ ಮಾನ್ಯ ಕೃಷ್ಣಪ್ಪನವರನ್ನು ನೇಮಕ ಮಾಡಿರುವುದು ಒಂದು ಸಮಾಧಾನದ ವಿಚಾರ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಶ್ರೀಮಾನ್ ಖರ್ಗೆಯವರ ನಾನು ಹೇಳಿರುವುದನ್ನು ಸರಿಯಾಗಿ ತಿಳಿದುಕೊಳ್ಳದೇ ಇರುವುದನ್ನು ನೋಡಿದಾಗ ಅವರ ಬುದ್ಧಿಗೆ ಬರಗಾಲ ಬಂದಿದೆ ಎಂದು ನಾನು ಸಂತಾಪ ಪಡಬೇಕಾಗಿದೆ. ಈಗ ಅದಕ್ಕೆ ನೀವು ಕೂಡ ಒಳಗಾಗಿದ್ದೀರೆಂದು ನನಗೆ ಅರ್ಥವಾಗುತ್ತದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಭಾಷಣದಲ್ಲಿರುವಂತಹ ಪರಿಸ್ಥಿತಿಯನ್ನು ಯಾವುದೇ ರೀತಿಯಲ್ಲೂ ಸುಧಾರಿಸಲು ಸಾಧ್ಯವಿಲ್ಲ. ಯಾವ ರೀತಿಯ ಯೋಜನೆ ಮತ್ತು ವಸ್ತುಸ್ಥಿತಿಯನ್ನು ಸರ್ಕಾರ ಬದಲಾಯಿಸಲು ಸಾಧ್ಯವಿಲ್ಲ. ಮಳೆ ಬರಲಿಲ್ಲವೆಂದು ಈ ಸರ್ಕಾರವನ್ನು ಹೊಣೆ ಮಾಡುವುದಕ್ಕೆ ಹೋಗುವುದಿಲ್ಲ. ೩ ವರ್ಷ ಮಳೆ ಬರದಿದ್ದರೆ ಅದಕ್ಕೆ ಸರ್ಕಾರ ಜವಾಬ್ದಾರಿಯೆಂದು ಹೇಳುವುದು ಸರಿಯಲ್ಲ, ಕೆಲವರು ಹೇಳಬಹುದು, ಈ ರಾಜ್ಯವನ್ನು ಆಳುತ್ತಾ ಇದ್ದವರು ಸರಿಯಾಗಿದ್ದರೆ ಮಳೆ ಬೆಳೆ ಬರುತ್ತಿತ್ತು ಎಂದು ಈ ಮಾತನ್ನು ಮಾನ್ಯ ಸದಸ್ಯರಾದ ಇದಿನಬ್ಬನವರು ಹೇಳಿದ್ದಾರೆ. ನಾನು ಮತ್ತು ಗೆಳೆಯ ಮಂತ್ರಿಗಳಾದ ಜೆ. ಎಚ್. ಪಟೇಲ್, ಇಬ್ಬರೂ ಸೇರಿ ಒಂದು ಸಮಾರಂಭದಲ್ಲಿ ಭಾಗವಹಿಸಿದ್ದೆವು. ಯಾವುದೇ ಜಗಳ ಮಾಡಿಕೊಳ್ಳದೆ, ಅವರು ಭಾಷಣ ಮಾಡಿದರು, ನಾನು ಭಾಷಣ ಮಾಡಿದೆ. ಅವರು ಒಂದು ಸಭೆಯಲ್ಲಿ ಹೇಳಿದರು, ಅವರು ಪುಣ್ಯ ಮಾಡಿ ಹುಟ್ಟಿದ್ದರಂತೆ, ಆದರೂ ಕೂಡ ಏತಕ್ಕೆ ಬರಗಾಲ ಬಂತು. ನಾನು ಸುಮ್ಮನೆ ಯೋಚನೆ ಮಾಡುತ್ತಾ ಇದ್ದೇನೆ. ನನ್ನ ದೃಷ್ಟಿಯಲ್ಲಿ ಕೂಡ ಒಂದು ನಂಬಿಕೆ ಏನೆಂದರೆ ಇಷ್ಟೆಲ್ಲಾ ರಾಜ್ಯವನ್ನು ನಡೆಸುವುದಕ್ಕೆ ಅಧಿಕಾರಕ್ಕೆ ಬರಬೇಕಾದರೆ, ಯಾವುದಾದರೂ ಒಂದು ರೀತಿಯ ಪುಣ್ಯ ಇದ್ದರೆ ಮಾತ್ರ ಸಾಧ್ಯ. ಹಿಂದಿನ ಜನ್ಮದಲ್ಲಿ ಪುಣ್ಯ ಮಾಡಿರುವುದರಿಂದ ಅವರು ಈಗ ಮಂತ್ರಿಗಳಾಗಿದ್ದಾರೆ. ಒಮ್ಮಿಂದೊಮ್ಮೆಲೇ ಈ ಬಗ್ಗೆ ವಾದ ವಿವಾದ ಮಾಡಲು ನಾನು ತಯಾರಿಲ್ಲ. ಕೆಲವರು ನಂಬಬಹುದು, ಆದರೆ ಇದರಲ್ಲಿ ಆಸೆ ಇರಬೇಕೆಂದು ಇಲ್ಲ. ಲಾಟರಿ ಸ್ವರೂಪದಲ್ಲಿ ಅಧಿಕಾರದ ಗದ್ದುಗೆ ಏರಿರುವುದರಿಂದ, ಇವರಿಗೆ ಯಾವುದೋ ಧರ್ಮದ ಪುಣ್ಯದನಂಬುಗೆ ಬರುತ್ತದೆ. ಈಗ ಯೋಚನೆ ಮಾಡಿದಾಗ ಇಷ್ಟು ಬೇಗನೆ ಅಷ್ಟು ಪುಣ್ಯ ಹೇಗೆ ಖರ್ಚಾಯಿತು ಎಂಬ ಭಾವನೆ ಬರುತ್ತದೆ. ಅಧಿಕಾರಕ್ಕೆ ಏರಿದ ಕೂಡಲೇ ಪುಣ್ಯವೆಲ್ಲಾ ಖರ್ಚಾಗಿ ಹೋಯಿತೇ ? ನೀವು ಅಧಿಕಾರ ನಡೆಸುತ್ತಾ ಹೋದರೆ ಬಹಳ ಬೇಗ ಪುಣ್ಯ ಓವರ್ ಡ್ರಾಫ್ಟ್ ಆಗುತ್ತಾ ಹೋಗುತ್ತದೆ, ಆದರೆ ಅಷ್ಟು ಬೇಗ ಏತಕ್ಕಾಯಿತು. ಎಂಬುದು ಉಚ್ಚ ನ್ಯಾಯಾಲಯದ ತೀರ್ಪು ಬಂದಾಗ ನನಗೆ ಅರ್ಥವಾಯಿತು.

೧೧ನೇ ಪುಟದಿಂದ ನಿಜವಾಗಿ ಈ ಭಾಷಣ ಶುರುವಾಗುತ್ತದೆ. ಬಡತನ ನಿರ್ಮೂಲನೆಗೋಸ್ಕರ ನೀವು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂಬುದನ್ನು ಮಾನ್ಯ ಸಚಿವರಾದ ಶ್ರೀ ಜೆ. ಹೆಚ್. ಪಟೇಲ್‌ರವರು ಹೇಳಿದರು. ಈ ಕಾರ್ಯಕ್ರಮಗಳು ಎಂದರೆ, ಬಟ್ಟೆ ಹಂಚುವುದು, ಅಕ್ಕಿ ಹಂಚುವುದು. ಬಡತನದ ಕಾವನ್ನು ಆದಷ್ಟು ಕಡಿಮೆ ಮಾಡುವ ಕಾರ್ಯಕ್ರಮಗಳನ್ನು ನಿಜವಾಗಿಯೂ ಕೂಡ ಸಮಾಂತರವಾಗಿ ಪರಿಗಣಿಸಬೇಕು. ಹಿಂದೆ ಶ್ರೀಮತಿ ಇಂದಿರಾಗಾಂಧಿಯವರು ಈ ರೀತಿಯ ಕಾರ್ಯಕ್ರಮಗಳಿಗೆ ಚಾಲನೆ ಕೊಟ್ಟಾಗ, ಅನೇಕ ಜನ ಟೀಕಿಸಿದರು. ಆದರೆ, ಈಗ ಸರ್ಕಾರ ನಡೆಸತಕ್ಕಂತಹ ಇವರಿಗೆ ಇದು ಅರ್ಥವಾಗಿದೆ ಅದಕ್ಕಾಗಿ ನನ್ನ ಅಭಿನಂದನೆಗಳು. ಈ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕಾದರೆ, ಎಷ್ಟು ಜಾಗರೂಕತೆಯಿಂದ ಜಾರಿಗೊಳಿಸಬೇಕೋ ಅಷ್ಟು ಜಾಗರೂಕತೆಯಿಂದ ಜಾರಿಗೊಳಿಸದಿದ್ದರೆ. ಹಾಗೂ ಇದರ ಬಗ್ಗೆ ಕಲ್ಪನೆ ಕೂಡ ಇಲ್ಲದಿದ್ದರೆ, ಈ ಕಾವನ್ನು ಕಡಿಮೆ ಮಾಡುವ ಬದಲು, ಇನ್ನಷ್ಟು ಅದ್ವಾನ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದಂತಾಗುತ್ತದೆ. ಇವತ್ತು ದುರ್ಬಲವರ್ಗದವರ ಬಡತನದ ಕಾವನ್ನು ಕಡಿಮೆ ಮಾಡತಕ್ಕದ್ದು ಇದನ್ನು ನಿಜವಾಗಿಯೂ ಅಲುಗೆಳೆಯುವ ಹಾಗಿಲ್ಲ. ಮಾನ್ಯ ಕೆ. ಹೆಚ್. ಪಾಟೀಲರು ಹೇಳಿದರು, ಈ ಕಾರ್ಯಕ್ರಮಗಳನ್ನು ನಿಜವಾಗಿಯೂ ಕೂಡ, ಬಡತನದ ಕಾವನ್ನು ಕಡಿಮೆ ಮಾಡುವ ಉದ್ದೇಶದಿಂದ ಕಲ್ಪಿಸಿದ್ದೀರೋ, ಅಥವಾ ಚುನಾವಣೆಯ ವಾಗ್ದಾನಗಳನ್ನು ಪೂರೈಸುವ ನಂಬಿಕೆಯನ್ನು ಉಳಿಸಿಕೊಳ್ಳಬೇಕೆಂದು ಜಾರಿಗೊಳಿಸಿದ್ದೀರೋ ಎಂದು. ನನ್ನ ಪ್ರಶ್ನೆಯನ್ನು ಸರ್ಕಾರಕ್ಕೆ ನೇರವಾಗಿ ಕೇಳಲು ಇಷ್ಟಪಡುತ್ತೇನೆ. ಈ ಹಸಿರು ಕಾರ್ಡ್ ಬಗ್ಗೆ ಎಷ್ಟು ತೊಂದರೆಯಾಗಿದೆ ಎಂಬ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ಎಷ್ಟೋ ಸಮೀಕ್ಷೆಗಳಾದವು, ಒಂದೋ ಎರಡೋ ಆಗಲಿಲ್ಲ. ಕೊನೆಗೆ, ಒಂದು ಸಮೀಕ್ಷೆಯಿಂದ ಬಡವರ ಬಗ್ಗೆ ಏನು ಪಟ್ಟಿ ಮಾಡಿದರು, ಅದರ ಬಗ್ಗೆ ಅರ್ಬಿಟ್ರರಿಯಾಗಿ ಯಾವುದೇ ಕಾರಣಗಳನ್ನೂ ಕೊಡದೇ ೪೦ ಪರ್ಸೆಂಟ್ ತೆಗೆದುಹಾಕಬೇಕೆಂದು ಸರ್ಕಾರದ ಅಜೆ

ಹೋಯಿತು. ೪೦ ಪರ್ಸೆಂಟ್ ಯಾವ ರೀತಿ ತೆಗೆದು ಹಾಕಿದರು ಎಂಬುದರ ಬಗ್ಗೆ ಕಾರಣ ಹೇಳಲು ಸಿದ್ಧನಿಲ್ಲ. ಅಲ್ಲಿಯೇ ಪಕ್ಷ. ಪಂಗಡಗಳ ಆರೋಪ ಬರುವುದು. ಯಾರೋ ಸ್ಥಳೀಯ ಮುಖಂಡರು ಹೇಳಿದರು, ಮತ್ತೊಬ್ಬ ಅಧಿಕಾರಿ ಹೇಳಿದರೆಂದು ಅವರ ಹೆಸರುಗಳನ್ನೆಲ್ಲಾ ಪಟ್ಟಿಯಲ್ಲಿ ಸೇರಿಸಿ, ಅವರು ಬೇಡವಾದ ಹೆಸರುಗಳನ್ನು ಬಿಟ್ಟಿದ್ದಾರೆ ಎಂಬ ಆರೋಪ ಮಾಡಲು ಈಗ ಸಿದ್ಧನಿಲ್ಲ. ಆದರೆ, ನೂರು ಜನರನ್ನು ಆಯ್ಕೆ ಮಾಡಿ ಶೇಕಡಾ ೪೦ ರಷ್ಟು ಜನರನ್ನು ಸಾರಾಸಗಟಾಗಿ ತೆಗೆದು ಹಾಕಿರುವುದರ ಔಚಿತ್ಯವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ದೇಶದಲ್ಲಿ ಬಡವರ ಬಗ್ಗೆ ಸರ್ವೆ ಏಕೆ ಮಾಡಬೇಕು ? ಇರತಕ್ಕ ಶ್ರೀಮಂತರನ್ನು ತೆಗೆದುಹಾಕಿಬಿಟ್ಟರೆ, ಉಳಿಯುವವರೆಲ್ಲಾ ಬಡವರೇ. ಬಡವರ ಸರ್ವೆಗೋಸ್ಕರ ಏತಕ್ಕೆ ಪದೇ ಪದೇ ಹಣವನ್ನು ಖರ್ಚು ಮಾಡಬೇಕು ? ಇರುವ ಶ್ರೀಮಂತರನು ಕಳೆದುಬಿಟ್ಟರೆ, ಉಳಿದವರೆಲ್ಲಾ ಬಡವರೇ. ಈಗ ಬ್ರೌನ್ ಕಾರ್ಡ್, ಹಸಿರು ಕಾರ್ಡ್ ಎಂದು ಮಾಡಿದ್ದೀರಿ. ಬ್ರೌನ್ ಕಾರ್ಡಿನಲ್ಲಿ ೪೦ ಪೈಸೆ ಜಾಸ್ತಿ ಮಾಡಿದ್ದೀರಿ. ಗ್ರೀನ್ ಕಾರ್ಡಿನಲ್ಲಿ ತೆಗೆದು ಹಾಕಿದ್ದೀರಿ. ಈಗ ಇದು ಏನಾಗಿದೆ ಎಂದರೆ, ಆ ಬ್ರೌನ್ ಕಾರ್ಡಿನಲ್ಲಿರುವವರೂ ಬಡವರೇ. ಈ ರಾಜ್ಯದಲ್ಲಿ ಬಡವರೇ ಇರೋದು. ಈ ಕಾರ್ಯಕ್ರಮದ ತಾತ್ಪರ್ಯವೇನೆಂದರೆ, ಬಡವರು ಏನಿದ್ದಾರೆ, ಅವರನ್ನು ದೋಚಿ, ಕಡು ಬಡವರಿಗೆ ಕೊಡುವುದು. ಬೇರೆ ಯಾವುದೋ ಶ್ರೀಮಂತರನ್ನು ತಂದೋ, ಅಥವಾ ಶ್ರೀಮಂತರನ್ನು ಬಡಿದೋ ಬಡವರಿಗೋಸ್ಕರ ಉಪಕಾರ ಮಾಡುವ ಕೆಲಸವು ಈ ಕಾರ್ಡಿನಲ್ಲಿ ಆಗಿಲ್ಲ. ಈ ಬ್ರೌನ್ ಕಾರ್ಡಿನಲ್ಲಿದ್ದ ಅಕ್ಕಿ ಅಥವಾ ಇತರೇ ಆಹಾರಧಾನ್ಯಗಳನ್ನು ಒಂದಲ್ಲ ಎರಡು ಸಾರಿ ತೆಗೆದುಕೊಳ್ಳಬಹುದಿತ್ತು. ಆದರೆ ಗ್ರೀನ್ ಕಾರ್ಡಿನಲ್ಲಿ ಹಾಗೆ ಮಾಡಲು ಆಗುವುದಿಲ್ಲ. ಉಳಿದರೆ ಲ್ಯಾಪ್ಸ್ ಆಗುತ್ತದೆ ಅದನ್ನು ಚಲಾವಣೆಗೆ ತಂದರೆ ಬಡವರು ಏನು ಹೇಳುತ್ತಾರೆಂಬುದು ತಿಳಿಯುವುದು ಈಗಿರತಕ್ಕ ವ್ಯವಸ್ಥೆಯಿಂದ ಸಹಾಯಕ್ಕಿಂತ ಅನಾನುಕೂಲವೇ ಹೆಚ್ಚು ಆಗುತ್ತದೆ. ಈ ದೇಶದಲ್ಲಿರತಕ್ಕ ಬಡತನಕ್ಕೆ ಅನುಗುಣವಾಗಿ ನಿಮ್ಮ ಈಗಿರತಕ್ಕ ವ್ಯವಸ್ಥೆಯಿಂದ ಸಹಾಯಕ್ಕಿಂತ ಬಹಳ ಅನಾನುಕೂಲವೇ ಆಗಿದೆ. ದೇಶದಲ್ಲಿರತಕ್ಕ ಬಡತನಕ್ಕೆ ಅನುಗುಣವಾಗಿ ನೀವು ಯೋಜನೆಗಳನ್ನು ಮಾಡುತ್ತಿಲ್ಲ. ನಿಮ್ಮ ಯೋಜನೆಗಳು ಏನಿವೆ, ಅವುಗಳಿಗೆ ತಕ್ಕಂತೆ ಬಡತನವನ್ನು ಹೊಂದಿಸುತ್ತಿದ್ದೀರಿ. ನಿಮ್ಮ ಯೋಜನೆಗಳೇನಿವೆ, ಎಂದರೆ ಹಣಕಾಸಿನ ಪರಿಸ್ಥಿತಿಗನುಗುಣವಾಗಿ ಸರ್ವೆ ಮಾಡಿದ್ದೀರಿ. ನಿಮ್ಮ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಯೋಜನೆ ಮಾಡಿ, ಅದಕ್ಕೆ ಬಡತನವನ್ನು ಹೊಂದಿಸಿಕೊಳ್ಳುವು-ದಾಗಿದೆ. ನೀವು ಬಡತನಕ್ಕೆ ತಕ್ಕಂತೆ ಯೋಜನೆಗಳನ್ನು ಹಾಕುವುದಿಲ್ಲ. ಬಡತನವನ್ನು ಗುರುತಿಸಿ, ಯಾವ ಯೋಜನೆಯನ್ನು ಮಾಡಿದರೆ, ಅದು ಕಮ್ಮಿ ಮಾಡಲು ಸಾಧ್ಯ ಎಂಬ ರೀತಿಯಲ್ಲಿ ನೀವು ಯೋಜನೆ ಮಾಡುವುದನ್ನು ಬಿಟ್ಟು, ಬೇರೆ ರೀತಿಯಲ್ಲಿ ಮಾಡುತ್ತಿದ್ದೀರಿ. ಸರ್ಕಾರದ ವ್ಯವಸ್ಥೆ ಏನು ಎಂಬ ಆಧಾರದ ಮೇಲೆ ಆಡಳಿತ ಯಂತ್ರ ಸಜ್ಜಾಗುತ್ತಿದೆ. ನಿಮ್ಮ ಆಡಳಿತ ಯಂತ್ರ ಬರೀ ಸರ್ವೆಯನ್ನು ಕಳೆದ ಒಂದೂವರೆ ವರ್ಷದಲ್ಲಿ ಮಾಡಿದ್ದಾಗಿದೆ. ನಿಜವಾದ ಅಭಿವೃದ್ಧಿ ಕಾರ್ಯಕ್ರಮಗಳು ಅಥವಾ ಮೂಲಭೂತ ಕಾರ್ಯಕ್ರಮಗಳು ಏನಿವೆ, ಅದನ್ನು ಮಾಡಲು ಪುರುಸೊತ್ತು ಇಲ್ಲದ ಸ್ಥಿತಿಯಲ್ಲಿ ನಿಮ್ಮ ಆಡಳಿತ ಯಂತ್ರ ಇದೆ. ನಿಮ್ಮ ಆರ್ಥಿಕ ಶಕ್ತಿ ಎಷ್ಟಿದೆ, ಎಂಬುದನ್ನು ನೋಡಿಕೊಂಡು ಮತ್ತು ಯಾವ ಯಾವ ಯೋಜನೆಗಳನ್ನು ಕಾರ್ಯಗತ ಮಾಡಬಹುದು ಎಂಬ ಕಲ್ಪನೆಯನ್ನು ಇಟ್ಟುಕೊಂಡು ಈ ಯೋಜನೆಗಳನ್ನು ಹಾಕಿಕೊಳ್ಳಬೇಕು. ಈಗ ಬಡತನದ ಸ್ವರೂಪ ಏನು ಎಂಬುದಕ್ಕೆ ಬದಲು, ನಿಮ್ಮ ಯೋಜನೆ ಹಣಕಾಸಿಗೆ ತಕ್ಕಂತೆ, ಬಡತನವನ್ನು ಜೋಡಿಸುವಂತಹ ಕಾರ್ಯಕ್ರಮವಾಗಿದೆ. ಇದರಿಂದ, ಯಾವುದೇ ವಿಧವಾದ ಪ್ರಯೋಜನವೂ ಆಗುವುದಿಲ್ಲ. ಇದರಿಂದ ಅಂತಿಮವಾಗಿ, ಬಡತನದ ಕಾವನ್ನು ಕೂಡ ಕಡಿಮೆ ಮಾಡುವುದರಲ್ಲಿ ಯಶಸ್ವಿಯಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ಆಡಳಿತ ಯಂತ್ರವನ್ನು ಸಜ್ಜುಗೊಳಿಸುವ ಕಾರ್ಯಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಹೇಳುತ್ತೇನೆ. ಅವರು ಮಾಡಿರುವ ದೊಡ್ಡ ಸಾಧನೆ ಎಂದರೆ, ಲೋಕಾಯುಕ್ತ ಮಾಡಲಾಗಿದೆ, ಅದರಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಒಳಪಡುತ್ತಾರೆ ಎಂದು ದೊಡ್ಡದಾಗಿ ಪ್ರಚಾರ ಮಾಡುತ್ತಿದ್ದಾರೆ. ಇದರಿಂದಾಗಿ. ಈ ದೇಶದಲ್ಲಿ ಎಲ್ಲಾ ಭ್ರಷ್ಟಾಚಾರವನ್ನೂ ನಿರ್ಮೂಲ ಮಾಡಲಾಗಿದೆ ಎಂಬ ಅಭಿಪ್ರಾಯ ಬರುವ ರೀತಿಯಲ್ಲಿ ಭಾಷಣಗಳಲ್ಲಿ ಪ್ರಚಾರ ಮಾಡುತ್ತಾರೆ. ಈ ರೀತಿ ಭಾಷಣ ಮಾಡುತ್ತಲೇ ಇದ್ದಾರೆ. ಇನ್ನೊಂದು ವಿಚಾರವೆಂದರೆ, ಏನಾದರೊಂದು ತಪ್ಪಾದರೆ, ತಕ್ಷಣ ನ್ಯಾಯಾಂಗ ತನಿಖೆ ಎನ್ನುತ್ತಾರೆ. ನಾವು ಕೇಳುವ ಮೊದಲೇ ಆಜ್ಞೆ ಮಾಡುತ್ತಾರೆ. ಆದರೆ, ಈ ನ್ಯಾಯಾಂಗ ತನಿಖೆ ವಿಚಾರ ಆದಮೇಲೆ ಯಾರಿಗೆ ಶಿಕ್ಷೆಯಾಗಿದೆ, ಯಾರು ತಪ್ಪಿತಸ್ಥರು

ಎಂಬುದು ಯಾರಿಗೂ ಗೊತ್ತಿಲ್ಲ. ಇದಲ್ಲದೆ, ಯಾರು ತಪ್ಪಿತಸ್ಥರಾಗಿದ್ದಾರೆ ಅವರಿಗೆ ಔಟ್ ಆಫ್ ಟರ್ನ್ ಪ್ರೊಮೋಷನ್ ಕೊಟ್ಟಿರತಕ್ಕಂತಹ ನಿದರ್ಶನಗಳೂ ಇವೆ. ಇದು ಒಂದು ರೀತಿಯಲ್ಲಿ ಬೀಸೋ ದೊಣ್ಣೆ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯುಸ್ಸು ಎಂಬ ರೀತಿಯಲ್ಲಿ ಆಗಿದೆ. ನ್ಯಾಯಾಂಗ ತನಿಖೆ ವಿಚಾರವು ಒಂದು ರೀತಿಯಲ್ಲಿ ಅಪಮೌಲ್ಯಕ್ಕೆ ಗುರಿಯಾಗಿದೆ ಎಂಬ ವಿಚಾರವನ್ನು ಗಮನಿಸಿದ್ದಾರೆಯೋ ?

ಶ್ರೀ ಜೆ. ಹೆಚ್. ಪಟೇಲ್(ಉದ್ಯಮ ಮಂತ್ರಿಗಳು).—ಶ್ರೀ ವೀರಪ್ಪ ಮೊಯ್ಲಿಯವರ ಟೇಪ್ ಪ್ರಕರಣದಲ್ಲಿ ನೀವು ಏಕೆ ನ್ಯಾಯಾಂಗ ತನಿಖೆ ಕೇಳಿದಿರಿ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀವು ಟೇಪ್ ಪ್ರಕರಣವನ್ನು ಏತಕ್ಕೆ ಮಾಡುವುದಕ್ಕೆ ಹೋದಿರಿ ?

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಮೊಯ್ಲಿಯವರು ಆಪಾದನೆಯನ್ನು ಮಾಡಿದರು. ಅದಕ್ಕಿಂತ ಮೊದಲು ನ್ಯಾಯಾಂಗ ತನಿಖೆ ಮಾಡಿಸಲು ಪ್ರೈಮಾಫೇಸಿ ಕೇಸ್ ಇದ್ದರೆ ಮಾಡಿಸುತ್ತೇವೆ ಇಲ್ಲದಿದ್ದರೆ ಮಾಡಿಸುವುದಿಲ್ಲ, ಎಂದು ಹೇಳಿದ್ದಿರಿ. ಕೇಳಿದ ಕೂಡಲೇ ಮಾಡಲಿಲ್ಲ.

ಶ್ರೀ ಜೆ. ಹೆಚ್. ಪಟೇಲ್— ನಾನು ಹೇಳುವುದು ನ್ಯಾಯಾಂಗ ತನಿಖೆಯಾಗಬೇಕು ಎಂದು ಕೇಳಿದ್ದರಿಂದ ಅದನ್ನು ಮಾಡಬೇಕಾಯಿತು. ಆದರೆ ಮಾನ್ಯ ಸದಸ್ಯರ ಅಭಿಪ್ರಾಯ, ಏನೆಂದರೆ ಸದಕ್ಕೆ ಬಂದಿರತಕ್ಕಂಥ ಸಮಸ್ಯೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಹೀಗೆ ಮಾಡುತ್ತಾರೆಂದು ನಮ್ಮ ಸರ್ಕಾರದ ಮೇಲೆ ಹೇಳಿದರೆ ಅದು ಸರಿಯಲ್ಲ. ಹಾಗಾದರೆ ಮಾನ್ಯ ವೀರಪ್ಪಮೊಯ್ಲಿ ಅವರ ಬಗ್ಗೆ ನ್ಯಾಯಾಂಗ ತನಿಖೆ ಮಾಡಬೇಕೆಂದು ತಾವು ಯಾವ ಉದ್ದೇಶದಿಂದ ಕೇಳಿದಿರಿ?

ಶ್ರೀ ಕೆ. ಹೆಚ್. ಪಾಟೀಲ್— ನೀವು ಎಷ್ಟರ ಮಟ್ಟಿಗೆ ಅರ್ಹರು ಎಂದು ತಿಳಿದುಕೊಳ್ಳಲು ನಾವು ಕೇಳಿದ್ದು ನಿಮ್ಮಲ್ಲಿರತಕ್ಕಂಥ ಮಂತ್ರಿಗಳ ಮೇಲೆ ಇದ್ದಂತಹ ಪ್ರಕರಣಗಳು ಸಾಬೀತಾಗಿಲ್ಲ ಎಂದು ಹೇಳಿ ಅವರನ್ನು ಮಂತ್ರಿಗಳಾಗಿ ತೆಗೆದುಕೊಂಡಿದ್ದೀರಿ. ನಾನು ಕೇಳುತ್ತೇನೆ ಸಾಬಿತಾಗದೇ ಇರುವಂಥ ರೂಲ್ಸನ್ನು ತಾವೇಕೆ ಇಟ್ಟುಕೊಂಡಿದ್ದೀರಿ ಎಂದು,

ಶ್ರೀ ಕೆ ಹೆಚ್ ಶ್ರೀನಿವಾಸ್— ಅವರು ಈ ಉದ್ದೇಶವನ್ನು ತಿಳಿದುಕೊಂಡು ಅವರಿಗೆ ಬೇಕಾದ ವ್ಯಕ್ತಿಯನ್ನು ತೆಗೆದುಕೊಂಡಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ— ಮಾನ್ಯ ಸದಸ್ಯರು ಹೇಳಿದರು. ಅಧಿಕಾರಿಗಳು ತಪ್ಪು ಮಾಡಿದ್ದರೂ ಕೂಡ ಅವರಿಗೆ ಪ್ರಮೋಷನ್ ಕೊಟ್ಟಿದ್ದಾರೆ ಎಂದು ಹಾಗೆಯೇ ಇವರಿಗೂ ಪ್ರಮೋಷನ್ ಕೊಟ್ಟಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್— ಒಬ್ಬ ಮಂತ್ರಿಗೆ ಪ್ರಮೋಷನ್ ಕೊಟ್ಟಿದ್ದಾರೆ. ಈ ಒಂದು ಟೇಪ್ ಪ್ರಕರಣ ಅವರಿಗೆ ಒಂದು ಇನ್‌ಸೆಂಟೀವ್ ಇದ್ದ ಹಾಗಾಯಿತು. ನಾವು ನ್ಯಾಯಾಂಗ ತನಿಖೆಗೆ ಆಗ್ರಹ ಮಾಡಿದ್ದು ಈ ಬಗ್ಗೆ ಏನಾದರೂ ಸಾರ್ಥಕವಾಗುತ್ತದೋ ಏನೋ, ಇದರ ಬಗ್ಗೆ ಏನಾದರೂ ಒಂದು ಪ್ರತಿಫಲ ಬರಬಹುದು ಎಂದು ತಿಳಿದುಕೊಂಡು ಮಾಡಿದ್ದು. ಈ ಬಗ್ಗೆ ನಾವು ಹೇಳಿದ ತಕ್ಷಣ ಸರ್ಕಾರದವರು ದಿಢೀರನೆ ನ್ಯಾಯಾಂಗ ತನಿಖೆಗೆ ಒಪ್ಪಿದರು. ಇದನ್ನು ನೋಡಿದರೆ ನನಗೆ ಏನು ಅನಿಸುತ್ತದೆ ಎಂದರೆ ಈ ನ್ಯಾಯಾಂಗ ತನಿಖೆಯಲ್ಲಿ ಏನೋ ಇರಬೇಕೆಂದು ಕಾಣುತ್ತದೆ.

ಶ್ರೀ ಜೆ. ಹೆಚ್. ಪಟೇಲ್— ಈ ಸಂದರ್ಭದಲ್ಲಿ ನನಗೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಅದೇನೆಂದರೆ ಪರಶುರಾಮನ ಹತ್ತಿರ ಒಬ್ಬ ಶಿಷ್ಯ ಇದ್ದ. ಅವನಿಗೆ ಪರಶುರಾಮ ಏನು ಹೇಳಿದ ಎಂದರೆ ನಿನಗೆ ಕಷ್ಟ ಬಂದಾಗ ನನ್ನನ್ನು ಕರೆ. ಆದರೆ ಸುಮ್ಮ ಸುಮ್ಮನೆ ಕರೆಯುವುದಕ್ಕೆ ಹೋಗಬೇಡ. ನನ್ನನ್ನು ಮೂರು ಸಾರಿ ಕರೆ ಎಂದು ಹೇಳಿದ. ಆದರೆ ಆ ಶಿಷ್ಯ ಏನು ಮಾಡಿದ ಎಂದರೆ ಆ ಪರುಶರಾಮನನ್ನು ಸುಮ್ಮ ಸುಮ್ಮನೆ ಕರೆಯಲು ಪ್ರಾರಂಭ ಮಾಡಿದ. ಮೊದಲನೇ ಸಾರಿ ಕರೆದ, ಅವನು ಬಂದ. ಎರಡನೇ ಸಾರಿ ಕರೆದ ಪುನ: ಪರಶುರಾಮ ಬಂದ. ಮತ್ತೆ ಅದನ್ನೇ ಮುಂದುವರೆಸಿ ಮೂರನೇ ಸಾರಿ ಕರೆದ. ಆಗ ಅವನು ಬರಲೇ ಇಲ್ಲ ಹಾಗೆ, ಈಗ ನೀವು ಪರಶುರಾಮನ ಕೆಲಸ ಮಾಡಿದ್ದೀರಿ. ಇನ್ನು ಮೇಲಾದರೂ ಹಾಗೆ ಹೇಳುವುದನ್ನು ಬಿಟ್ಟುಬಿಡಿ.

ಶ್ರೀ ಕೆ. ಹೆಚ್. ಶ್ರೀನಿವಾಸ್— ನೀವು ಪರಶುರಾಮರಂತೆ ಬರುವುದು ಬೇಡ, ನಿಮ್ಮಲ್ಲಿ ಪರಶುರಾಮ ಬಂದರೆ ಆಗಬಾರದೇ ಇದ್ದ ಕೆಲಸ ಆಗುತ್ತದೆ. ಆದುದರಿಂದ ಇನ್ನು ಮುಂದೆ ನೀವು ಬರುವುದೇ ಬೇಡ. ನಾನು ಹೇಳಿದ ಇನ್ನೊಂದು ಅಂಶ ಏನೆಂದರೆ ಈ ನ್ಯಾಯಾಂಗ ತನಿಖೆಗೆ ಏನಾದರೂ ನೀವು ಬೆಲೆ ಕೊಟ್ಟಿದ್ದೀರಾ ಎಂದು. ಈವೊತ್ತಿನ ವರ್ತನೆ ಏನು ಇದೆ ಅದನ್ನು ಎಷ್ಟರಮಟ್ಟಿಗೆ ಸಾಬೀತು ಮಾಡುತ್ತೀರಿ ಅನ್ನುವುದು ಗೊತ್ತಾಗುತ್ತದೆ. ಇನ್ನು ಮೇಲೆ ನಿಮ್ಮನ್ನು ನಾವು ಯಾವುದೇ ತನಿಖೆಯನ್ನು ಕೇಳುವುದಕ್ಕೆ ಬರುವುದಿಲ್ಲ. ಈ ನ್ಯಾಯಾಂಗ ತನಿಖೆ ಬಗ್ಗೆ ಉಚ್ಚ ನ್ಯಾಯಾಲಯದವರು ಕೊಟ್ಟಂಥಾ ತೀರ್ಪಿಗೆ ತಾವು ಎಷ್ಟರಮಟ್ಟಿಗೆ ಬೆಲೆ ಕೊಟ್ಟಿದ್ದೀರಿ ಎನ್ನುವುದು ಗೊತ್ತಿದೆ.

ಶ್ರೀ ವೇದಾಂತ ಹೆಮ್ಮಿಗೆ— ತಾವು ಅಲಹಾಬಾದ್‌ನ ತೀರ್ಪಿಗೆ ಏನು ಬೆಲೆ ಕೊಟ್ಟರಿ?

ಶ್ರೀ ಕೆ. ಹೆಚ್. ಶ್ರೀನಿವಾಸ್— ಈವೊತ್ತಿನ ಹೈಕೋರ್ಟಿನ ತೀರ್ಪಿಗೆ ನೀವು ಏನು ಬೆಲೆ ಕೊಟ್ಟಿದ್ದೀರಿ ಹೇಳಿ? ನಾವೂ ನೀವೂ ಬಂದಿರುವುದು ಎಲ್ಲರಿಗೂ ಗೊತ್ತಿದೆ, ನೀವು ಈ ನ್ಯಾಯಾಂಗ ತನಿಖೆಗಳಿಂದ ಬಂದಂತಹ ಶಿಫಾರಸುಗಳಿಗೆ ಎಷ್ಟೆಷ್ಟು ಬೆಲೆ ಕೊಟ್ಟಿದ್ದೀರಿ ಎನ್ನುವುದು ನಮಗೆ ಗೊತ್ತಿದೆ. ನಾವು ಇದ್ದಾಗ ಈ ನ್ಯಾಯಾಂಗಕ್ಕೆ ಏನು ಬೆಲೆ ಕೊಡಬೇಕಾಗಿತ್ತು, ಅದನ್ನು ಕೊಟ್ಟಿದ್ದೇವೆ ಈಗ ನೀವು ಏನು ಮಾಡಿದ್ದೀರಿ? ನೀತಿ ನ್ಯಾಯಾಂಗದ ಬಗ್ಗೆ ಯಾವಾಗಲೂ ವಿಚಾರಗಳನ್ನು ಜನಗಳ ಮುಂದೆ ಇಡಂತ್ತಾ ಬಂದಿದ್ದೀರಿ. ಈ ಒಂದು ಜವಾಬ್ದಾರಿ ನಿಮಗೆ ಇಲ್ಲದೇ ಹೋದರೂ ಕೂಡ ಜನಗಳು ಜವಾಬ್ದಾರರಾಗಿರುತ್ತಾರೆ. ಆ ಜನಗಳು ಏನು ಮಾಡಬೇಕು ಎನ್ನುವುದು ಗೊತ್ತಿರುತ್ತದೆ. ೫ ವರ್ಷಕ್ಕೊಂದು ಸಾರಿ ಚುನಾವಣೆ ಬರುತ್ತದೆ ಅನ್ನುವುದು ಆ ಜನಗಳಿಗೆ ಗೊತ್ತು. ಆ ಒಂದು ಜವಾಬ್ದಾರಿ ಅವರಲ್ಲಿರುವುದರಿಂದ ಈಗ ನೀವು ಅವರ ಮುಂದೇ ಹೋದರೂ ಆವಾಗ ಬರುತ್ತೀರಿ, ಆವಾಗ ನಾವೇನು ಮಾಡಬೇಕು ಎನ್ನುವುದರ ಬಗ್ಗೆ ಆತ್ಮ ವಿಶ್ವಾಸ ಇರತಕ್ಕಂಥಾ, ಜವಾಬ್ದಾರಿ ಉಳ್ಳಂಥಾ ನಾವು ಅವರ ಮುಂದೆ ಈ ಮಾತನ್ನು ಹೇಳಲೇಬೇಕಾಗುತ್ತದೆ. ಈವೊತ್ತು ವಿಚಾರಣಾ ಆಯೋಗ ಮಾಡುವುದರಿಂದ ಅಥವಾ ಲೋಕಾಯುಕ್ತ ಮಾಡಿರುವುದರಿಂದ ಅದಕ್ಕೆ ತಕ್ಕಂತೆ ಪ್ರತಿಫಲ ಸಿಗಬೇಕು. ಮಾನ್ಯ ಅಧ್ಯಕ್ಷರೇ. ನನಗೆ ಈ ಲೋಕಾಯುಕ್ತದ ಕಾನೂನಿನ ಪ್ರತಿ ಇದುವರೆಗೂ ಸಿಕ್ಕಿಲ್ಲ, ಅದನ್ನು ಕೊಡಿಸಿಕೊಡಬೇಕೆಂದು ಕೇಳುತ್ತೇನೆ. ಈ ಒಂದು ಕಾನೂನಿನಿಂದ ಯಾವ ರೀತಿಯಾಗಿ ಭ್ರಷ್ಟಾಚಾರ, ಎಷ್ಟರ ಮಟ್ಟಿಗೆ ಕಡಿಮೆಯಾಗುತ್ತದೆ ಎನ್ನುವುದು ಇನ್ನು ಮುಂದೆ ಗೊತ್ತಾಗುತ್ತದೆ ಯಾವ ರೀತಿ ಮಾಡಿದರೂ ಆರೋಪ ಬರುತ್ತದೆ. ಸಾರ್ವಜನಿಕ ಜೀವನದಲ್ಲೂ ಆರೋಪಗಳು ಇವೆ, ಈವೊತ್ತಿನ ದಿವಸ ಈ ಭ್ರಷ್ಟಾಚಾರ ಅನ್ನುವುದು ಅಷ್ಟು ಲಘುವಾಗಿ ಸಾರ್ವಜನಿಕ ಜೀವನದಲ್ಲಿ ಬೇರೂರಿರುವುದರಿಂದ ಇದರ ಬಗ್ಗೆ ಬಿಗಿ ಬರಬೇಕು ಅನ್ನುವುದನ್ನು ನಾನು ಒಪ್ಪುತ್ತೇನೆ. ಸಾರ್ವಜನಿಕ ರಂಗದಲ್ಲಿ ಆರೋಪಗಳು ವ್ಯಕ್ತಿ ಮೇಲೆ ಮಾಡುವುದು ಬಹು ಸುಲಭ. ಉದಾಹರಣೆಗೆ ಹೇಳುವುದಾದರೆ, ಶ್ರೀ ಜೆ. ಹೆಚ್. ಪಟೇಲರ ಮನೆಗೆ ಯಾವನೋ ಒಬ್ಬ ಒಂದು ಬ್ಯಾಗ್ ಇಡುವುದಕ್ಕೆ ಹೋದನು ಎಂದರೆ ಅವನು ಅದರಲ್ಲಿ ತನ್ನ ಕಡತವನ್ನೇ ಇಟ್ಟಿರಬಹುದು, ಇನ್ನೇನಾದರೂ ಇಟ್ಟಿರಬಹುದು ಅದನ್ನೇ ದೊಡ್ಡದನ್ನಾಗಿ ಮಾಡಿ ಏನೋ ಇದೆ ಎಂದು ಹೇಳಿಬಿಡುತ್ತಾರೆ. ಹೀಗೆ ಮಂತ್ರಿಗಳ ಮೇಲೆ ಆರೋಪ ಮಾಡುವುದು ಬಹಳ ಲಘುವಾದ ವಿಚಾರವಾಗಿರುತ್ತದೆ. ಆದುದರಿಂದ ಇಂಥ ಲಘುವಾದ ಆರೋಪಗಳನ್ನು ಮಾಡುವುದಕ್ಕೆ ಅವಕಾಶವಿರಬಾರದು. ಅದಕ್ಕೆ ಆಡಳಿತದಲ್ಲಿ ಒಂದು ಬಿಗಿ ಬರಬೇಕು, ಆಡಳಿತದಲ್ಲಿ ಬಿಗಿ ಬರಬಾರದು ಎಂದು ನಾನು ಹೇಳುವುದಿಲ್ಲ. ಆದರೆ ಭ್ರಷ್ಟಾಚಾರದ ನಿರ್ಮೂಲನಾ ವ್ಯವಸ್ಥೆಯ ಒಂದು ನೀತಿ ಬಹಳ ದಿವಸದಿಂದ ಏನು ಇದೆ ಅದನ್ನು ಬಿಗಿಗೊಳಿಸುವ ಹಾಗೆ ಒಂದು ವ್ಯವಸ್ಥೆ ಮಾಡದೇ ಹೋದರೆ ಇದರಿಂದ ಅನುಮಾನ ಬರುತ್ತದೆ. ಆದ ಕಾರಣ ಈ ಬಗ್ಗೆ ನಾವು ವಿಧಾನಸಭೆಯಲ್ಲಿ ಧೈರ್ಯವಾಗಿ ಆಪಾದನೆ ಮಾಡುತ್ತೇವೆ, ಇನ್ನು ಲೋಕಾಯುಕ್ತದ ಬಗ್ಗೆ ಹೇಳುವುದಾದರೆ. ಸರ್ವೇ ಸಾಮಾನ್ಯವಾಗಿ ಅವರು ಇಲ್ಲಿ ಉತ್ತರ ಕೊಡತಕ್ಕಂಥಾ ಕಾಲದಲ್ಲಿ ಅವರು ಎದ್ದು ನಿಂತುಕೊಂಡು ಒಂದು ಅಂಶ ಹೇಳುವುದೇನೆಂದರೆ ಪ್ರತಿಯೊಂದಕ್ಕೂ ಕೂಡ ಲೋಕಾಯುಕ್ತಕ್ಕೆ ಹಾಕಿ ಎಂದು ಹೇಳಿ ಈ ಮೌಲ್ಯದ ಉದ್ದೇಶದಿಂದ ಜಾರಿಕೊಳ್ಳುವ ಹಾಗೆ. ತಪ್ಪಿಸಿಕೊಳ್ಳುವ ಹಾಗೆ ವ್ಯವಸ್ಥೆ ಆಗಬಾರದು ಎಂದು ನಾನು ಹೇಳುತ್ತೇನೆ. ಈ ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ತೆಗೆದು ಹಾಕುತ್ತೇವೆಂದು ಹೇಳುತ್ತಿದ್ದಾರೆ ಆಮೇಲೆ ಏನು ಹೇಳುತ್ತಾರೆಂದರೆ, ಈ ಭ್ರಷ್ಟಾಚಾರ ಮೇಲ್ಮಟ್ಟದಲ್ಲಿ ಇಲ್ಲ, ಕೆಳಮಟ್ಟದಲ್ಲಿ ಸ್ವಲ್ಪ ಇದೆ ಅದನ್ನು ತೆಗೆದು ಹಾಕುತ್ತೇವೆಂದು ಹೇಳುತ್ತಾರೆ. ಇದು ಇನ್ನೂ ೧೦ ವರ್ಷ

ವಾದರೂ ಸಾಧ್ಯವಿಲ್ಲದ ವಿಚಾರ. ಈ ಬಗ್ಗೆ ಏನೂ ಪ್ರಯತ್ನವೇ ಮಾಡಲಿಲ್ಲಾ ಎಂದು ಹೇಳುತ್ತೇನೆ. ಇದರ ಬಗ್ಗೆ ಬರೀ ಭಾಷಣ ಮಾಡುವುದೊಂದನ್ನು ಬಿಟ್ಟರೆ ಇನ್ಯಾವ ಕೆಲಸವೂ ಆಗಿಲ್ಲ. ಮೊದಲು ಈ ಭ್ರಷ್ಟಾಚಾರವನ್ನು ಬಿಗಿ ಮಾಡತಕ್ಕಂಥಾದ್ದು ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ಆಯಾಯ ಮಟ್ಟದಲ್ಲಿ ಮಾಡಬೇಕು. ಅನಂತರ ಯಾವ ಯಾವ ರೀತಿ ಭ್ರಷ್ಟಾಚಾರ ನಡೆಯುತ್ತಾ ಇದೆ ಎನ್ನುವುದರ ಬಗ್ಗೆ ಗಮನಹರಿಸಬೇಕು. ಈ ದಿಸೆಯಲ್ಲಿ ಸರ್ಕಾರದಿಂದ ಯಾವ ಪ್ರಯತ್ನವೂ ಇದುವರೆಗೂ ನಡೆದಿಲ್ಲ. ಈ ಭ್ರಷ್ಟಾಚಾರದ ಬಗ್ಗೆ ಹೇಳುವುದಾದರೆ, ಪಂಚಾಂಗದಲ್ಲಿ ಶುಕ್ಲ ಪಕ್ಷ, ಕೃಷ್ಣ ಪಕ್ಷ ಇದ್ದ ಹಾಗೆ ಕೆಲವು ಕಡೆ ಜಾಸ್ತಿ ಭ್ರಷ್ಟಾಚಾರ ಇದೆ, ಇನ್ನು ಕೆಲವು ಕಡೆ ಕಡಿಮೆ ಇರಬಹುದು. ಎಲ್ಲಿ ಜಾಸ್ತಿ ಭ್ರಷ್ಟಾಚಾರ ಇದೆ ಮತ್ತು ಎಲ್ಲಿ ಕಡಿಮೆ ಇದೆ ಎಂದು ಆಪಾದನೆ ಮಾಡುವುದಕ್ಕೆ ನಾನು ಈಗ ತಯಾರಾಗಿಲ್ಲ. ನಾವೇ ಆಗಲಿ ನಾವು ಬಂದ ತಕ್ಷಣ ಇದು ಕಡಿಮೆಯಾಗುತ್ತದೆ ಎಂದು ಹೇಳುವುದಕ್ಕೆ ತಯಾರಾಗಿಲ್ಲ. ನಾವೂ ಸಹ ಭ್ರಷ್ಟಾಚಾರವನ್ನು ನಿರ್ಮೂಲ ಮಾಡುತ್ತೇವೆಂದು ಹೇಳುತ್ತೇವೆ. ಜನಗಳು ಏನು ತಿಳಿದುಕೊಂಡಿದ್ದಾರೆಂದರೆ ಕಾಂಗ್ರೆಸ್ಸಿನವರೂ ಸಹ ಭ್ರಷ್ಟಾಚಾರವನ್ನು ನಿರ್ಮೂಲ ಮಾಡುತ್ತೇವೆಂದು ಹೇಳಿದರೂ ಹಾಗೆಯೇ ನೀವು ಬಂದರೂ ಕೂಡ ಹಾಗೆಯೇ ಹೇಳುತ್ತೀರಿ, ಯಾರು ಬಂದರೂ ಕೂಡ ಹೀಗೆಯೇ ಹೇಳುತ್ತಾರೆ. ಇದು ಒಂದು ನೀತಿಯಾಗಿ ಬಿಟ್ಟಿದೆ ಎಂದು ತಿಳಿದು ಆ ಜನಗಳು ಈವೊತ್ತಿನ ದಿವಸ ತಿರುಗಿ ಬೀಳುವ ವ್ಯವಸ್ಥೆ ಬಂದಿದೆ. ಆದುದರಿಂದ ಈ ಭ್ರಷ್ಟಾಚಾರದ ಬಗ್ಗೆ ಭಾಷಣ ಮಾಡುವುದನ್ನು ಬಿಟ್ಟು ಯಾವ ರೀತಿಯಾಗಿ ಇದರ ಬಗ್ಗೆ ಕೆಲಸ ಮಾಡಬೇಕೋ ಆ ರೀತಿಯಾಗಿ ಸರ್ಕಾರ ಕೆಲಸ ಮಾಡಬೇಕು. ನೀವು ಆ ರೀತಿ ಮಾಡುತ್ತಾ ಇಲ್ಲ. ನಾನು ಕೇಳುತ್ತೇನೆ ನೀವು ಇದರ ಬಗ್ಗೆ ಭಾಷಣ ಮಾಡುವುದೊಂದನ್ನು ಬಿಟ್ಟು ಕೆಳ ಹಂತದಲ್ಲಿ ಭ್ರಷ್ಟಾಚಾರ ಕಡಿಮೆ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಅನ್ನುವುದನ್ನು ಹೇಳುತ್ತೀರಾ ? ಇನ್ನು ಈಗ ಲೋಕಾಯುಕ್ತ ಮಾಡಿದ್ದೀರಿ. ಅಲ್ಲಿಗೆ ಈ ಭ್ರಷ್ಟಾಚಾರ ಹೋಯಿತು ಎಂತಲೇ? ಇನ್ನೊಂದು ವಿಚಾರ ಏನೆಂದರೆ ಈ ಭ್ರಷ್ಟಾಚಾರವನ್ನು ನಿರ್ಮೂಲ ಮಾಡುವುದು ಬಹಳ ಕಷ್ಟಕರವಾದ ಕೆಲಸ. ಅದಕ್ಕೆ ಮೊದಲು ನೀವು ಸದಾಚಾರ ಬೆಳೆಸಿದರೆ ಈ ಭ್ರಷ್ಟಾಚಾರ ಕಡಿಮೆಯಾಗುತ್ತದೆ. ತಮಗೆ ಹೇಳಬೇಕಾದರೆ ನಾವು ಕತ್ತಲೆ. ಕತ್ತಲೆ ಎಂದು ಗುದ್ದಾಡಿದರೆ ಬೆಳಕು ಬರುವುದಿಲ್ಲ. ಅಲ್ಲಿ ಒಂದು ದೀಪ ಇಟ್ಟರೆ ಆಗ ಬೆಳಕು ಬರುತ್ತದೆ. ಪ್ರಾಮಾಣಿಕ ಅಧಿಕಾರಿಗಳು ಜನರಿಗೆ ಸಹಾಯ ಮಾಡಿದರೆ ಅವನಿಗೆ ಸಸ್ಪೆಂಡ್ ಆಗುತ್ತದೆ, ಆದುದರಿಂದ ಈವೊತ್ತಿನ ದಿವಸ ಪ್ರಾಮಾಣಿಕ ಅಧಿಕಾರಿಗಳು ಕೆಲಸ ಮಾಡುವುದಿಲ್ಲ. ಈ ಆಡಳಿತದಲ್ಲಿ ಅವರಿಗೆ ವಿಶ್ವಾಸ ಹೋಗಿದೆ. ಆದರೆ ರೂಲ್ಸ್‌ನಲ್ಲಿದೆ, ಫೈಲಿನಲ್ಲಿ ಇದೆ. ನಿಮ್ಮ ಮುಂದೆ ವಿಶ್ವಾಸ ಇಲ್ಲ. ಬ್ರಿಟಿಷರ ಕಾಲದಲ್ಲಿ ಚೆಕ್ಸ್ ಅಂಡ್ ಬ್ಯಾಲೆನ್ಸ್ ರೀತಿ ಪ್ರತಿಯೊಂದರಲ್ಲೂ ಮಾಡಿದ್ದರಿಂದ ಅವರು ತಮ್ಮದೇ ಆದಂಥ ಹೊಸ ಆಡಳಿತವನ್ನು ಮಾಡುವುದಕ್ಕೆ ನಿರ್ಮಾಣವಾಯಿತು ಎನ್ನುವ ಮಾತು ಇದೆ. ಆದರೆ ಈಗ ಅದೇ ಯಂತ್ರ ಇದ್ದಾಗೂ ಕೂಡ ನಿಮ್ಮಲ್ಲಿ ಕೆಲಸ ಮಾಡಲು ಅನುಮಾನ ಬಂದಿದೆ, ನಿಮ್ಮ ಗ್ಲೋರಿಫೈ ನೋಡಿದರೆ ಅವರಿಗೆ ವಿಶ್ವಾಸ ಇಲ್ಲ. ನಿಮ್ಮ ಹಿಂಸೆ ಬಹಳ ದೊಡ್ಡದಾಗಿದೆ. ಇದನ್ನು ಸರಿ ಮಾಡುವುದಕ್ಕೆ ತಾವು ಏನು ವ್ಯವಸ್ಥೆ ಮಾಡಿದ್ದೀರಾ? ಈವೊತ್ತು ಯಾವುದೇ ಫೈಲು ಸಮರ್ಪಕವಾಗಿ ಇದೆಯೋ, ಅದರಲ್ಲಿ ಬರೆದಿರುವ ಎಲ್ಲಾ ನೋಟಿಂಗ್ಸ್ ಸಮರ್ಪಕವಾಗಿದೆಯೇ? ಈವೊತ್ತು ಫೈಲ್ ನೋಡಿದರೆ ತಹಸೀಲ್ದಾರರಿಂದ ಹಿಡಿದು ಮೇಲ್ಪಟ್ಟವರೆಗೂ ಕೂಡ ಆ ಫೈಲ್ ಸರಿಯಾಗಿರುವುದಿಲ್ಲ, ಆದುದರಿಂದ ಯಾರು ಬಂದರೂ ಕೂಡ ಏನು ಮಾಡುವುದಕ್ಕಾಗುವುದಿಲ್ಲ.

೧-೩೦ ಪಿ. ಎಂ

ಆ ಫೈಲ್ ಏನಾದರೂ ಸ್ವಲ್ಪ ವ್ಯತ್ಯಾಸವಾಗಿದ್ದರೆ ನ್ಯಾಯವಾಗಿ ಪ್ರಾಮಾಣಿಕ ಒಳ್ಳೆಯ ಉದ್ದೇಶಕ್ಕೋಸ್ಕರವಾಗಿ ಅಧಿಕಾರಿ ಕೆಲಸ ಮಾಡಿದರೆ ಅವರ ತಲೆ ಹೊರಟುಹೋಗುತ್ತದೆ ಅಷ್ಟು ಜನಕ್ಕೂ ಅವನು ಒಳ್ಳೆಯವನೆಂದು ಗೊತ್ತಿದ್ದರೂ ಅದನ್ನು ತಪ್ಪಿಸಲಿಕ್ಕೆ ಸಾಧ್ಯವಿಲ್ಲ. ಆದುದರಿಂದ ಆಡಳಿತದಲ್ಲಿ ಬೇರೆ ಬದಲಾವಣೆ ತರುವ ಧೈರ್ಯ ಮಾಡಿದರೆ, ಆಡಳಿತ ಯಂತ್ರದ ಸ್ವರೂಪದಲ್ಲಿ ಬದಲಾವಣೆ ತಂದರೆ ಒಳ್ಳೆಯದು ನಿಮ್ಮ ರೂಲ್ಸ್, ಫೈಲ್ ಇವುಗಳಲ್ಲಿ ನಿಮ್ಮ ವಿಶ್ವಾಸವನ್ನು ಕಡಿಮೆ ಮಾಡಿ ಅದರ ಬದಲು ಸರಿಯಾದ ವ್ಯಕ್ತಿಗಳನ್ನು ಆಯ್ಕೆ ಮಾಡಿ ವ್ಯಕ್ತಿಗಳಲ್ಲಿ ವಿಶ್ವಾಸ ಇಡತಕ್ಕ ಬದಲಾವಣೆ ತಂದರೆ ಆಡಳಿತದಲ್ಲಿ ಭ್ರಷ್ಟಾಚಾರ ಕಡಿಮೆಯಾಗಬಹುದು. ತಾಲ್ಲೂಕು ಆಫೀಸಿನಲ್ಲಿ

ಯಾರಾದರೂ ಸಿಕ್ಕಿಕೊಂಡರೆ ಮಂತ್ರಿಗಳಿಗೆ ಸಂಬಂಧಪಟ್ಟವರಾಗಿದ್ದರೆ ಕ್ರಮ ತೆಗೆದುಕೊಳ್ಳುವುದೇ ಇಲ್ಲ ಮೊಟ್ಟಮೊದಲನೆಯದಾಗಿ, ಅವನಿಗೇ ನನ್ನ ಮೇಲೆ ಯಾರೂ ಕ್ರಮ ತೆಗೆದುಕೊಳ್ಳುವುದಿಲ್ಲ ಎನ್ನುವ ದಾರ್ಷ್ಟ್ಯ ಬಂದುಬಿಡುತ್ತದೆ. ಮೇಲಿನ ಅಧಿಕಾರಿಗಳು ಕೆಳಗಿನ ಅಧಿಕಾರಿಗಳನ್ನು ಕೇಳುವುದಿಲ್ಲ, ಮನಸೋಇಚ್ಛೆ ನಡೆಯಬಹುದು. ಕೆಲವರು ಮೂಗಿಗೆ ದಾರ ಕಟ್ಟಿಕೊಂಡು ಕೆಲಸ ಮಾಡಿದರೂ ಅವರಿಗೆ ಪ್ರಮೋಷನ್ ಏನೂ ಇಲ್ಲ ಯಾರೂ ಇಲ್ಲಿ ಬಂದು ವಸೂಲಿಬಾಜಿ ಮಾಡುತ್ತಾರೆ ಅವರಿಗೆ ಪ್ರಾಮುಖ್ಯತೆ ಇದೆ. ಕಚೇರಿಯಲ್ಲಿ ಕೆಲಸ ಮಾಡತಕ್ಕವನ್ನು ಅಲ್ಲಿ ಏನಾದರೂ ವ್ಯತ್ಯಾಸವಾದರೆ ಪಾತಳಕ್ಕೆ ಹೋಗುತ್ತಾನೆ. ಆದ್ದರಿಂದ ಇದರ ಬಗ್ಗೆ ಭಾಷಣ ಮಾಡಿದರೆ ಪ್ರಯೋಜನವಿಲ್ಲ. ಇದರ ಬಗ್ಗೆ ಪ್ರಾಮಾಣಿಕವಾಗಿ ಚಿಂತನೆ ಮಾಡಬೇಕಾಗಿದೆ. ರಾಜಕೀಯ ಪಕ್ಷಗಳ ಜೊತೆಯಲ್ಲಿ ತಮ್ಮ ಚಿಂತನೆಯನ್ನು ಹಂಚಿಕೊಂಡು ಕೆಲವು ವಿಷಯಗಳಲ್ಲಾದರೂ ಒಪ್ಪಂದಕ್ಕೆ ಬರುವ ಅಗತ್ಯವಿದೆ. ಅದಕ್ಕೆ ಉಪಕ್ರಮವನ್ನು ಸರ್ಕಾರದವರು ಮನಸ್ಸಿದ್ದರೆ ಕೈಗೊಳ್ಳಬೇಕು ಹೊರತು ಈ ರೀತಿ ಭಾಷಣ ಮಾಡಿದರೆ ಬಹಳ ದೂರ ತೆಗೆದುಕೊಂಡು ಹೋಗಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಬಯಸುತ್ತೇನೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ "ಕಳೆದ ವರ್ಷ ಕಾನೂನು ಮತ್ತು ಸುವ್ಯವಸ್ಥೆ ಪರಿಣಾಮಕಾರಿಯಾಗಿತ್ತು" ಎಂದು ಹೇಳಿದ್ದಾರೆ. ಮಾನ್ಯ ಗೃಹಸಚಿವರ ಬಗ್ಗೆ ನನಗೆ ಗೌರವವಿದೆ ತಾವು ನೋಡುತ್ತಿದ್ದೀರಿ. ಹಲವಾರು ಪ್ರಶ್ನೆಗಳಿಗೆ ಅವರು ಯಾವರೀತಿಯಲ್ಲಿ ಉತ್ತರಿಸುತ್ತಿದ್ದಾರೆಂದು. ಒಂದು ವಿಕ್ಷಕ ವಿವರಣೆಯನ್ನು ಕೊಡುವುದರಲ್ಲಿ ತೃಪ್ತರಾಗುತ್ತಿದ್ದಾರೆಯೇ ಹೊರತು ಸರ್ಕಾರ ಇದೆ, ಹೇಳುವವರು, ಕೇಳುವವರಿದ್ದಾರೆ ಎನ್ನುವ ಭಾವನೆ ಬರುವ ರೀತಿಯಲ್ಲಿ ಸರ್ಕಾರದ ಕೆಲಸ ನಡೆಯುತ್ತಿಲ್ಲ ಅವರಿಗೆ ಏನು ತೊಂದರೆಯೋ ಗೊತ್ತಿಲ್ಲ. ಈ ಸರ್ಕಾರ ಏನಾಗಿದೆಯೆಂದರೆ ಇದು ಹಲವಾರು ಜನಗಳು ಹಲವಾರು ಕಾರಣಕ್ಕಾಗಿ ಒಟ್ಟು ಸೇರಿ ಒಂದು ಪಕ್ಷವಾಗಿರತಕ್ಕ ಸರ್ಕಾರ. ಅದರಲ್ಲಿ ಏನು ಸಮ್ಮಿಳಿತ ಬೇಕೋ ಅದನ್ನು ನಾಯಕರಾದ ಮಾನ್ಯ ರಾಮಕೃಷ್ಣ ಹೆಗಡೆಯವರು ತಂದಿದ್ದಾರೆಂದು ನನಗನ್ನಿಸುವುದಿಲ್ಲ. ಒಂದು ರೀತಿಯಲ್ಲಿ ಅವರು ಮುಖ್ಯಮಂತ್ರಿಯಾಗುವ ಬದಲು ಅಂಪೈರ್ ತರಹ ಇದ್ದಾರೆ. ಯಾವು ಯಾವುದೋ ಗಲಾಟೆ ಇದೆ, ಅವರಿಗೂ ಸುಧಾರಿಸುವುದು, ಮತ್ತೊಬ್ಬರಿಗೂ ಸುಧಾರಿಸುವುದು. ಮಾನ್ಯ ರಾಚಯ್ಯನವರಿಗೆ ಯಾವುದೇ ಫೈಲ್ ಮುಟ್ಟುವುದಕ್ಕೂ ಧೈರ್ಯವಿಲ್ಲದ ಪರಿಸ್ಥಿತಿ ಇದೆ. ಮುಟ್ಟುವುದಕ್ಕೆ ಹೋದರೂ ವಸೂಲಿ ಬಾಜಿ ಬರುತ್ತದೆ. ತೀರ್ಥಹಳ್ಳಿಯಲ್ಲಿ ಒಬ್ಬ ಸಬ್‌ಇನ್ಸ್‌ಪೆಕ್ಟರ್ ರೆವಿನ್ಯೂ ಇನ್ಸ್‌ಪೆಕ್ಟರಿಗೂ ಹೊಡೆದಿದ್ದಾನೆ, ಜನಗಳಿಗೂ ಹೊಡೆದಿದ್ದಾನೆ, ಜನತಾಪಕ್ಷದವರಿಗೂ ಹೊಡೆದಿದ್ದಾನೆ, ಕಾಂಗ್ರೆಸ್ ಪಕ್ಷದವರಿಗೂ ಹೊಡೆದಿದ್ದಾನೆ. ಇಷ್ಟಾದರೂ ಕೂಡ ಪ್ರಭಾವಶಾಲಿಗಳ ಬೆಂಬಲವಿದೆ ಎನ್ನುವ ಕಾರಣಕ್ಕೆ ಎಸ್ ಪಿ ಡೆಪ್ಯುಟಿ ಕಮಿಷನರ್, ಡಿವಿಜನಲ್ ಕಮಿಷನರ್ ಎಲ್ಲರೂ ರೆಕಮೆಂಡ್ ಮಾಡಿ ಕಳಿಸಿದರೂ ಕಮಿಷನರ್ ಹತ್ತಿರ ಕೊಳೆಯುತ್ತಾ ಬಿದ್ದಿದೆಯೋ ಹೊರತು ಒಂದು ವರ್ಷವಾದರೂ ಸ್ಥಳಾಂತರಗೊಳಿಸುವುದಕ್ಕೆ ಸಾಧ್ಯವಾಗಿಲ್ಲ. ಅವನು ಇರುವುದು ಬಿಡುವುದು ಯ. ಕಶ್ಚಿತ ವಿಚಾರ. ಒಬ್ಬ ಸರ್ಕಲ್ ಇನ್ಸ್‌ಪೆಕ್ಟರಿಗೆ ಮೇಲಿನವರ ಬೆಂಬಲವಿದ್ದರೆ, ಅವನ್ನು ಎಸ್. ಪಿ. ಯನ್ನೂ ಕೇರ್ ಮಾಡಬೇಕಾಗಿಲ್ಲ. ಡೆಪ್ಯುಟಿ ಕಮೀಷನರಿಗೆ ಡಿವಿಜನಲ್ ಕಮಿಷನರನ್ನೂ ಕೇರ್ ಮಾಡಬೇಕಾಗಿಲ್ಲ. ಹೀಗಾದರೆ ಆಡಳಿತದಲ್ಲಿ ಬಿಗಿ ಉಳಿಯುವುದಕ್ಕೆ ಸಾಧ್ಯವಿದೆಯೇ. ಆದುದರಿಂದ ಕಾನೂನು ಸುವ್ಯವಸ್ಥೆ ಬಗ್ಗೆ ತಾವು ಸರ್ಕಾರ ವಿಶೇಷವಾಗಿ ಗಮನ ಹರಿಸದೆ ಇದೇರೀತಿ ನಡೆದುಕೊಂಡು ಹೋದರೆ ಸ್ಫೋಟವಾಗತಕ್ಕ ಪರಿಸ್ಥಿತಿ ಇದೆ, ಗೂಂಡಾ ಕಾಯಿದೆ ಬೇಕು ಆದರಿಂದ ಏನಾಯಿತು. ರಾಜ್ಯದಲ್ಲಿ ಒಟ್ಟು ೨೬ ಜನ ಗೂಂಡಾಗಳಿದ್ದಾರೆ ಎಂತಲೂ ಅದರಲ್ಲಿ ೧೫ ಜನರು ಗೂಂಡಾಗಳಲ್ಲವೆಂದು ತೀರ್ಮಾನ ಸರ್ಕಾರ ಮಾಡಿದೆ ನಂತರ ಉಳಿದವರಲ್ಲಿ ೯ ಜನರು ಗೂಂಡಾಗಲ್ಲ ಎಂದು ಹೈಕೋರ್ಟ್ ತೀರ್ಮಾನಮಾಡಿದೆ. ಹಾಗಾದರೆ ಎರಡು ಜನರು ಮಾತ್ರ ಗೂಂಡಾಗಳು ಉಳಿದಿದ್ದಾರೆ. ಏಂದಾಯಿತು ಈ ಎರಡು ಜನರನ್ನು ಹಿಡಿಯುವುದಕ್ಕೋಸ್ಕರ ಒಂದು ಕಾನೂನು ಮಾಡಿದೆವು ಅಂದರೆ ಆಡಳಿತದಲ್ಲಿ ಏನು ದಕ್ಷತೆ ಇದೆ ಎಂದು ಹೇಳಬೇಕು. ಆದುದರಿಂದ ಕಾನೂನು ಸುವ್ಯವಸ್ಥೆ ಪರಿಣಾಮಕಾರಿಯಾಗಿದೆ ಎಂದು ಬರೆದುಕೊಂಡು ಬಿಟ್ಟರೆ ಆಗುವುದಿಲ್ಲ. ಇದರ ಬಗ್ಗೆ ವಿಶೇಷವಾದ ಪ್ರಯತ್ನ ಅಗತ್ಯವಿದೆ.

ಇನ್ನು ಇವತ್ತಿನ ದಿವಸ ವಿದ್ಯುತ್ ಕೊರತೆ ಇದೆ, ಇವರ ಬಗ್ಗೆ ನಾನು ಮಾತನಾಡಲಿಕ್ಕೆ ತಯಾರಿಲ್ಲ ಇರುವಂಥ ವಿದ್ಯುತ್‌ನ್ನು ನಿರ್ವಹಣೆ ಮಾಡುವಂಥ ವಿಚಾರದಲ್ಲಿ ನಿಮ ಮಂತ್ರಿ ಮಂಡಲದ ಮಟ್ಟದಲ್ಲಿ

ದಿನನಿತ್ಯ ಕಾಳಜಿ ಇದ್ದರೆ ಇದ್ದಕ್ಕಿಂತ ಉತ್ತಮ ವ್ಯವಸ್ಥೆ ಕೊಡುವುದಕ್ಕೆ ಸಾಧ್ಯವಿದೆ. ಒಂದು ಕಡೆ ಎಲೆಕ್ಟ್ರಿಸಿಟಿ ಬೋರ್ಡ್, ಇನ್ನೊಂದು ಕಡೆ ಪವರ್ ಕಾರ್ಪೊರೇಷನ್ ಈ ಎರಡು ಬಿಳಿ ಆನೆಗಳು ಮಾನಸೋಯಿಚ್ಛೆ ಮಾಡುತ್ತಿವೆ. ಇವು ಹೇಗೆ ಮಾಡುತ್ತಿವ ಎನ್ನುವುದನ್ನು ಈ ಇಲಾಖೆ ಬಗ್ಗೆ ಮಾತನಾಡುವಾಗ ಹೇಳುತ್ತೇನೆ. ಒಂದು ವಿಷಯವನ್ನು ಹೇಳುತ್ತೇನೆ ಈ ವಿಚಾರದಲ್ಲಿ ಸರ್ಕಾರದ ಮಟ್ಟದಲ್ಲಿ ನೀವು ನಿಕಟವಾಗಿ ಪರಿವೀಕ್ಷಣೆಮಾಡಿದರೆ ಇನ್ನಷ್ಟು ಉತ್ತಮಪಡಿಸುವುದಕ್ಕೆ ಸಾಧ್ಯವಿದೆ, ಇದರ ಕಡೆ ಗಮನಹರಿಸಬೇಕೆಂದು ಹೇಳುತ್ತೇನೆ.

ಇನ್ನು ಕನ್ನಡವನ್ನು ಉದ್ಧಾರ ಮಾಡತಕ್ಕ ಬಗ್ಗೆ ಹೇಳಿದ್ದೀರಿ. ಕನ್ನಡವನ್ನು ಎಲ್ಲಾಕಡೆ ತರುವುದಕ್ಕೆ ಪ್ರಯತ್ನಿಸಲಾಗುತ್ತಿದೆ. ಇದರ ಬಗ್ಗೆ ಸಂತೋಷಪಡುತ್ತೇನೆ ಕನ್ನಡದ ಅಭಿಮಾನಿಯಾಗಿ ಆದರೆ ಅದು ಕಾರ್ಯಗತವಾಗುತ್ತಾ ಇಲ್ಲ. ಒಂದು ತಿಂಗಳಹಿಂದೆ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿದ್ದ ಇಂಗ್ಲೀಷ್ ಬೆರಳಚ್ಚು ಯಂತ್ರಗಳನ್ನು ವಾಪಸ್ ತೆಗೆದುಕೊಂಡುಬಿಟ್ಟರು ಅಲ್ಲಿ ಬರೀ ಕನ್ನಡ ಬೆರಳಚ್ಚು ಯಂತ್ರಗಳು ಉಳಿದುವು; ಆಂಗ್ಲ ಬೆರಳಚ್ಚುಗಾರರು ಉಳಿದರು ಅವರು ಹೋಗಿ ಅಲ್ಲಿ ಕನ್ನಡ ಮಾಡಬೇಕಾದ ಅಗತ್ಯವಿಲ್ಲ, ನಾವು ಟೈಪು ಮಾಡಬೇಕಾಗಿಲ್ಲ ಎಂದು ಕುಳಿತರು. ಇರುವ ಯಂತ್ರಗಳನ್ನು ಕನ್ನಡದ್ದು, ಆಂಗ್ಲ ಬೆರಳಚ್ಚುಗಾರರು ಇರುವುದು ಹೀಗಾಗಿ ಕಚೇರಿ ಕೆಲಸಗಳು ನಡೆಯದೇ ಇರುವಂಥ ಸ್ಥಿತಿಗೆ ಬಂದಿದೆ. ಈ ವಿಷಯವನ್ನು ಶ್ರೀಮಾನ್ ಪಾಟೀಲಪುಟ್ಟಪ್ಪನವರ ಹತ್ತಿರ ಪ್ರಸ್ತಾಪ ಮಾಡಿದೆ ಈ ರೀತಿ ಒಂದಕ್ಕೊಂದು ರದ್ದುಪಡಿಸತಕ್ಕ ಕ್ರಮಗಳಿಂದ ಸಾಧ್ಯವಿಲ್ಲ ಒಳ್ಳೆಯ ವ್ಯವಸ್ಥಿತ ರೀತಿಯಲ್ಲಿ ಆಗಬೇಕು ಇದರ ಬಗ್ಗೆ ಇನ್ನೂ ಹೆಚ್ಚಿನ ಗಮನ ಅಗತ್ಯವಿದೆ. ಇಲ್ಲದೇ ಹೋದರೆ ಇನ್ನು ಸ್ವಲ್ಪ ದಿವಸಗಳಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡುವುದೇ ಒಂದು ಅವ್ಯವಹಾರಿಕ ವಿಚಾರ ಎನ್ನುವ ಸ್ಥಿತಿ ಬಂದುಬಿಡುತ್ತದೆ. ಇದರ ಬಗ್ಗೆ ಕೆಲವರ ಪಿತೂರಿ ಇರಬಹುದು. ಆ ಬಗ್ಗೆ ಕಾಳಜಿ ಅಗತ್ಯ ಎಂದು ಸೂಚಿಸಲಿಕ್ಕೆ ಬಯಸುತ್ತೇನೆ.

ಇನ್ನು ಮಂಡಲಿಗಳಿಗೆಲ್ಲಾ ನೇಮಕ ಮಾಡಿದರು. ಈಗ ಮಂತ್ರಿಗಳಾಗಿರತಕ್ಕ ಮಾನ್ಯ ಲಕ್ಷ್ಮೀಸಾಗರ್‌ವರು ಮಾನ್ಯ ಬೊಮ್ಮಾಯಿಯವರು ಇಲ್ಲಿ ಒಟ್ಟಿಗೆ ಇದ್ದ ಕಾಲದಲ್ಲಿ ಮತ್ತು ಅದಕ್ಕಿಂತ ಹಿಂದೆ ನಾವು ಅಲ್ಲಿದ್ದವರು ಇಲ್ಲಿದ್ದಾಗ ಶ್ರೀಮಾನ್ ದೇವರಾಜ ಅರಸ್‌ರವರು ಹುಚ್ಚುಚ್ಚಾಗಿ ಮಂಡಲಿಗಳನ್ನು ಮಾಡಿ ಬಿಟ್ಟಿದ್ದಾರೆ, ಆ ಮಂಡಲಿಗಳನ್ನು ರದ್ದುಪಡಿಸಬೇಕು ಎನುವ ವಾದ ಇಟ್ಟಿದ್ದರು. ಈಗ ಅದಕ್ಕೆ ಇನ್ನೊಂದು ಕೆಲಸವನ್ನು ಸೇರಿಸಿದಿರಿ. ಈ ಮಂಡಲಿಗಳ ನೇಮಕಗಳ ಬಗ್ಗೆ ಮಾನ್ಯ ಪಟೇಲರು ಅಪ್ಪಣೆ ಕೊಡಿಸಿದರ ಇವು ರಾಜಕೀಯ ನೇಮಕಗಳೇ ಸಂಕೋಚ ಬೇಕಾಗಿಲ್ಲ, ಈವು ರಾಜಕೀಯ ನೇಮಕಗಳೇ ಅಥವಾ ರಾಜಕೀಯಕ್ಕಾಗಿ ನೇಮಕಗಳೇ ಎನ್ನುವುದಕ್ಕೆ ಅವರದೇ ಆದ ಶೈಲಿಯಲ್ಲಿ ಉತ್ತರ ಕೊಟ್ಟರು.

ಶ್ರೀ ಜೆ. ಹೆಚ್ ಪಟೇಲ್.– ನಾನು ಆವತ್ತು ಹೇಳಿದ್ದಿಷ್ಟು, ಇವು ರಾಜಕೀಯ ನೇಮಕಗಳು ನಿಮ್ಮ ಕಾಲದಲ್ಲಿ ರಾಜಕೀಯಕ್ಕಾಗಿ ಮಾಡುತ್ತಿದ್ದೀರಿ, ಈ ರಾಜಕೀಯ ನೇಮಕಗಳೇ ರಾಜ್ಯದ ಹಿತಕ್ಕಾಗಿ ಎಂದು ಹೇಳಿದೆ.

ಶ್ರೀ ಕೆ. ಹೆಚ್ ಪಾಟೀಲ್.—ಅವರು ಮುಂದುವರೆದು ನಿಮ್ಮ ಪಕ್ಷದಲ್ಲಿರತಕ್ಕವರನ್ನೂ ಅಧ್ಯಕ್ಷರನ್ನಾಗಿ ನೇಮಿಸಿದ್ದೇವೆ, ಇನು ಕೆಲವರನ್ನು ನೇಮಿಸುತ್ತೇವೆ, ಇನ್ನು ನಿಮ್ಮ ಪಕ್ಷಕ್ಕೆ ಸಿಕ್ಕುವುದಿಲ್ಲ ಎಂದು ಹೇಳಿದರು.

ಶ್ರೀ ಕೆ. ಹೆಚ್ ಶ್ರೀನಿವಾಸ್.—ನಿಮ್ಮ ಮಂಡಲಿಗಳಿಗೋಸ್ಕರ ಕಾಯುದ್ದು ಕುಳಿತಿಲ್ಲ. ನಿಮ್ಮದು ಮುಂಗಿಯಲಿ ಒಂದು ಪರ್ವ ಮುಂಗಿಯಲಿ. ಈಗ ನಿಮ್ಮ ಸರ್ಕಾರ ಒಂದು ಮೆಟ್ಟಲು ಕೆಳಗೆ ಇಳಿದಿದೆ, ಈಗ ಪ್ರಶ್ನೆ ಏನೆಂದರೆ, ಪಕ್ಷ ಆಧಾರದ ಪ್ರಭುತ್ವ ಬಂದಾಗ ನಿಮ್ಮ ಪಕ್ಷದವರನ್ನು ಆಡಳಿತದಲ್ಲಿ ತೊಡಗಿಸಬಾರದು ಎಂದು ಹೇಳುವುದಿಲ್ಲ.

ಆದರೆ ರಾಜ್ಯದ ಅವಶ್ಯಕತೆಗಳಿಗನುಸಾರವಾಗಿ ನಿಮ್ಮ ಪ್ರತಿಭೆಯನ್ನು ತೊಡಗಿಸಬೇಕೇ ಹೊರತು ನಿಮ್ಮ ಪಕ್ಷದ ಪ್ರತಿಭೆಗೋಸ್ಕರ ಅಲ್ಲ. ನಿಮ್ಮ ಪಕ್ಷದಲ್ಲಿ ಪ್ರತಿಭೆ ಇಲ್ಲವೆಂದು ನಾನು ಹೇಳುವುದಿಲ್ಲ. ನೇಮಕವಾದವರು ಲಾಯಕ್ಕಿಲ್ಲವೆಂದು ಹೇಳುವುದಿಲ್ಲ. ರಾಜ್ಯದ ಅವಶ್ಯಕತೆಗಳಿಗನುಸಾರವಾಗಿ ನೀವು ನಿಮ್ಮ ಪಕ್ಷದ ಪ್ರತಿಭೆಯನ್ನು ಬೆಳೆಸಿಕೊಳ್ಳಬೇಕೇ ಹೊರತು ನಿಮ್ಮ ಪಕ್ಷದ ಸಮಸ್ಯೆಗಳನ್ನು ಬಗೆಹರಿಸುವುದಕ್ಕಲ್ಲ. ಮತ್ತು ರಾಜ್ಯದ ಅವಶ್ಯಕತೆಗಳನ್ನು ತಿರುಚುವುದಕ್ಕಲ್ಲ ಅಂತಹ ಕೆಲಸಗಳನ್ನು ನೀವು

ಮಾಡುತ್ತಿದ್ದೀರಿ. ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ಈ ಸದನದ ಒಬ್ಬ ಗೌರವಾನ್ವಿತ ಸದಸ್ಯರನ್ನು ನೇಮಕ ಮಾಡುವ ಅಗತ್ಯವೇನಿತ್ತು ? ನಿಮ್ಮ ಪಕ್ಷದಲ್ಲಿ ಯಾರೂ ಇರಲಿಲ್ಲವೇ, ಏನಾಯಿತೆಂದರೆ ನಿಮ್ಮ ಪಕ್ಷದಲ್ಲಿ ತೊಂದರೆ ಬಂದರೆ ಬರೀ ಎಮ್ ಎಲ್.ಎ. ಆಗಿ ಇಟ್ಟುಕೊಳ್ಳುವುದಕ್ಕಾಗದೇ ಮಂತ್ರಿ ಮಂಡಲಕ್ಕೆ ಸೇರಿಸಿಕೊಳ್ಳುವುದಕ್ಕೆ ಇಷ್ಟವಿಲ್ಲದಿದ್ದಲ್ಲಿ, ಕೂಡಲೇ ಒಂದು ಜಾಗ ಕೊಡುತ್ತೀರಿ. ನೀರಾವರಿ ಸಲಹಾ ಮಂಡಲಿಗೆ ಒಬ್ಬರನ್ನು ನೇಮಕ ಮಾಡಿದ್ದೀರಿ. ನೀರಾವರಿಗೆ ಹೇಗೆ ಹಣ ತರಬೇಕು ಇಲ್ಲವೇ ಯಾವುದಾದರೂ ಬೇರೆ ಬೇರೆ ಬ್ಯಾಂಕುಗಳಿಂದ ಹಣ ತರುವ ವಿಚಾರವೋ ಇಲ್ಲವೇ ಕೇಂದ್ರ ಸರ್ಕಾರದಿಂದ ಜಾಸ್ತಿ ಅನುದಾನ ಕೇಳುವ ವಿಚಾರವೇ ಆಯಿತು, ಅದಕ್ಕೆ ತಜ್ಞತೆ ಇರುವವರನ್ನು ನೇಮಕ ಮಾಡಿದ್ದರೆ ಒಪ್ಪಿಕೊಳ್ಳುತ್ತೇನೆ ಯಾರನ್ನು ನೇಮಕ ಮಾಡಿದ್ದೀರಿ. ಅವರ ಬಗ್ಗೆ ಗೌರವವಿಲ್ಲವೆಂದಲ್ಲ, ಅವರ ಯೋಗ್ಯತೆ ಬಗ್ಗೆ ಪ್ರಶ್ನೆ ಇಲ್ಲ. ಒಂದೊಂದು ಯೋಗ್ಯತೆ ಒಂದೇ ಆಗುವುದೇ ? ಮಾನ್ಯ ಶ್ರೀ ಜೆ. ಹೆಚ್. ಪಟೇಲ್‌ರವರು ಮಂತ್ರಿಗಳಾಗಬಹುದು, ಎಲೆಕ್ಟ್ರಿಸಿಟಿ ಚೇರ್ಮನ್ ಆದರೆ, ಅವರು ಆ ಕೆಲಸ ಮಾಡುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ಬೇರೆ ರೀತಿಯ ತಜ್ಞ ಯೋಗ್ಯತೆ ಇರಬೇಕು. ಚೇರ್ಮನ್ ಕೆಲಸ ಅವರಿಗೆ ಕೊಟ್ಟರೆ, ಅವರಿಂದ ಮಾಡುವುದಕ್ಕಾಗುತ್ತದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಶ್ರೀ ದೇವೇಗೌಡರ ಬಗ್ಗೆ ಯಾವುದೇ ಆರೋಪ ಪ್ರತ್ಯಾರೋಪ ಇರಬಹುದು ಆದರೆ ನೀರಾವರಿ ವಿಷಯದಲ್ಲಿ ಅವರ ತಜ್ಞತೆಯ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಅವರಿಗೆ ಸಲಹೆ ಕೊಡುವುದಕ್ಕೆ ಇನ್ನೊಬ್ಬರನ್ನು ನೇಮಕ ಮಾಡಿ ಒಂದು ಕಟ್ಟಿಗೆ ಎರಡು ಸಮಸ್ಯೆ ಎಂದು ಮಾಡಿದ್ದೀರಿ. ಅದರಿಂದ ಏನು ಪುರುಷಾರ್ಥ ಸಾಧನೆಯಾಗುತ್ತದೆ ? ನಿಮ್ಮ ರಾಜಕೀಯ ಕ್ಕೋಸ್ಕರ ಇದನ್ನು ಮಾಡಿದ್ದೀ ಹೊರತು, ರಾಜ್ಯದ ಅವಶ್ಯಕತೆಗಳಿಗೋಸ್ಕರ ಅಲ್ಲ. ಯಾರ್ಯಾರಿಗೆ ಸ್ಥಾನ ಕೊಡಬೇಕೋ ಅವರಿಗೆ ಕೊಡಬೇಕಾದರೆ ವಿವೇಚನೆ ಮಾಡಿ ಕೊಡಬೇಕು. ಬೆಂಗಳೂರು ಡೆವಲಪ್‌ಮೆಂಟ್ ಪ್ರಾಧಿಕಾರವನ್ನು ಹಾಗೇ ಇಟ್ಟುಕೊಂಡಿದ್ದೀರಿ. ಅದನ್ನು ಮಾಡುವುದು ಯಾವಾಗ ಎಂದರೆ ಮಂತ್ರಿ ಮಂಡಲದಲ್ಲಿ ತೊಂದರೆ ಬರಬೇಕು, ಯಾವುದನ್ನು ಕೊಟ್ಟರೂ, ಅದು ಕೊಡಿ, ಇದು ಕೊಡಿ ಎಂದು ಅನೇಕ ಜನ ಕೇಳಿದರೆ ಆಗ ಕೊಡುತ್ತೀರಿ ಅಲ್ಲಿಯವರೆಗೆ ಇದನ್ನು ಮಾಡುವದಿಲ್ಲ. ರಿಸರ್ವ್‌ನಲ್ಲಿ ಹಾಗೇ ಇಟ್ಟುಕೊಂಡಿದ್ದೀರಿ. ಮಂಡಲಿಗಳು ಎಷ್ಟು ಬೇಕು ಎಂಬುದನ್ನು ತೀರ್ಮಾನ ಮಾಡುವುದು ನಿಮಗೇ ಬಿಟ್ಟಿದ್ದು, ನಿಮ್ಮ ಸರ್ಕಾರಕ್ಕೆ ಬಿಟ್ಟಿದ್ದು ನಿಮ್ಮ ಆಡಳಿತದ ಅವಶ್ಯಕತೆಗನುಸಾರವಾಗಿ ಯಾವ ಮಂಡಲಿ ಇರಬೇಕು ಯಾವುದು ಹೋಗಬೇಕು, ಅದು ನಿಮಗೆ ಬಿಟ್ಟಿರತಕ್ಕಂತಾದ್ದು ಅದರಲ್ಲಿ ನಾನು ತಲೆಹರಟೆ ಮಾಡುವುದಕ್ಕೆ ತಯಾರಿಲ್ಲ. ಯಾರನ್ನು ನೇಮಕ ಮಾಡಬೇಕು ಅನ್ನತಕ್ಕಂಥಾದ್ದನ್ನು ಅವಶ್ಯಕತೆಗನುಸಾರವಾಗಿ ಮಾಡಬೇಕೇ ಹೊರತು, ನಿಮ್ಮ ರಾಜಕೀಯ ಅವಶ್ಯಕತೆಗೋಸ್ಕರ ನೇಮಕ ಮಾಡಿದ್ದೇ ಆದರೆ, ಅದರ ಉದ್ದೇಶ ವಿಫಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅನೇಕ ವಿಷಯಗಳನ್ನು ಇವರು ಹೇಳಿದ್ದಾಗೆ, ಕಳೆದ ಮೂರು ವರ್ಷದಿಂದ ಕೆಲಸ ಮಾಡುತ್ತಾ ಬಂದಿದ್ದಾರೆ, ನಾನು ಮೊದಲೇ ಹೇಳಿದಂತೆ......

ಶ್ರೀ ಜೆ. ಹೆಚ್. ಪಟೇಲ್.—ಬೇರೆಯವರ ಹೆಣ್ಣು ಮಗಳು ಹೆತ್ತರೆ, ತನಗೆ ಏನೂ ಸಂಬಂಧವಿಲ್ಲ ಎನ್ನುತ್ತಾನೆ. ಪಕ್ಕದ ಮನೆಯಲ್ಲಿ ಹೆಣ್ಣುಮಗಳು ಹೆತ್ತರೆ ಏನು ನೋವಾಗುವುದು, ಅದನ್ನು ಅಂದಾಜು ಮಾಡಿ, ಆ ನೋವಿನಿಂದ ಮಾತನಾಡುತ್ತಿದ್ದಾರೆ,

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈಗ ಅದಕ್ಕೆ ಉತ್ತರ ಕೊಡುವ ಗೋಜಿಗೆ ಹೋಗುವುದಿಲ್ಲ. ಮಾನ್ಯ ಜೆ. ಹೆಚ್. ಪಟೇಲ್‌ರವರ ಮಾತುಗಳು ಹಾಗೇ ಉಳಿಯಬೇಕೆಂಬ ಉದ್ದೇಶವಿದೆ. ಚಿಂದಿ ಮಾಡುವುದಕ್ಕೆ ಆಸೆಯಿಲ್ಲ. ಅವರು ಚೆಂದವಾಗಿ ಮಾತನಾಡುತ್ತಾರೆ. ನಾನು ಕೇಳುತ್ತಿರುವುದೇನೆಂದರೆ ಈ ಸರ್ಕಾರದ ನೀತಿ, ನೆಲೆಗಳೇನು ಎಂಬುದು ನಮಗೆ ಅರ್ಥವಾಗುವುದಿಲ್ಲ. ಬಡವರು ಅಂತೀರಿ, ಕೈಗಾರಿಕೇ ಅಂತೀರಿ, ಒಂದು ಸಾರ್ತಿ ಭ್ರಷ್ಟಾಚಾರ ನಿರ್ಮೂಲನ ಅಂತೀರಿ ಸದಾಚಾರ ಅಂತೀರಿ. ಈಗ ನಿಮಗೆ ಯಾವ ನೀತಿಯು ನೆಲೆ ಇದೆ ? ನನಗೆ ಕಂಡ ಮಟ್ಟಿಗೆ ನಿಮ್ಮಲ್ಲಿ ಸ್ವಂತ ನೀತಿಯು ನೆಲೆ ಇಟ್ಟಹಾಗೆ ಕಾಣುವುದಿಲ್ಲ. ಕಾಂಗ್ರೆಸ್‌ನವರಿಗೆ ತದ್‌ವಿರುದ್ಧವಾಗಿ, ಕಾಂಗ್ರೆಸ್‌ನವರು ೨೦ನೇ ಶತಮಾನ ಎಂದರೆ, ನೀವು ೧೯ನೇ ಶತಮಾನ ಎಂದು ಹೇಳುತ್ತೀರಿ. ಅವರು ಎಲೆಕ್ಟ್ರಾನಿಕ್ಸ್ ಎಂದರೆ, ನೀವು ಎತ್ತಿನ ಗಾಡಿ ಅಂತೀರಿ. ಪವರ್‌ಲೂಮ್ಸ್ ಎಂದರೆ ಹ್ಯಾಂಡ್‌ಲೂಮ್ಸ್ ಅಂತೀರಿ, ಇಷ್ಟನ್ನೇ ಕಲಿತಹಾಗೆ ಕಾಣುತ್ತದೆಯೋ ಹೊರತು ರಾಜ್ಯದ ಸಮಸ್ಯೆಗಳ ಕಲ್ಪನೆ ಇದೆಯೋ ? ಈ ನೀತಿಗೆ, ಇಂತಿಂಥ ವಿಚಾರಗಳಿಗೆ

ಇಂತಿಂಥಾದ್ದನ್ನು ಜೋಡಿಸಬೇಕು, ಇಂತಹ ರೀತಿಯಲ್ಲಿ ಆಡಳಿತಾತ್ಮಕ ಸ್ವರೂಪವನ್ನು ಕೊಡಬೇಕೆನ್ನುವ ಯಾವ ಖಚಿತವಾದ ನೀತಿಯೂ ಇಲ್ಲ. ನಾನು ಒಬ್ಬೊಬ್ಬರನ್ನು ಕೇಳುತ್ತಿಲ್ಲ. ಸರ್ಕಾರವನ್ನು ಕೇಳುತ್ತಿದ್ದೇನೆ. ಮಾನ್ಯ ಜೆ.ಹೆಚ್. ಪಟೇಲ್‌ರವರು ಲೋಹಿಯಾರವರ ಬಗ್ಗೆ ಭಾಷಣ ಹೆಚ್ಚಾಗಿ ಮಾಡುತ್ತಾರೆ. ನೀವು ಮಾಡಿದ್ದನ್ನು ನಾವು ಮಾಡುವುದಕ್ಕಾಗುವುದಿಲ್ಲ.

ಶ್ರೀ ಜೆ.ಹೆಚ್ ಪಟೇಲ್.—ಎಲ್ಲಾ ಮಾಡಿ ಬಿಟ್ಟ ಮೇಲೆ ಏನು......

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಜೆ.ಹೆಚ್. ಪಟೇಲ್‌ರವರಿಗೆ ಕಥೆ ಎಂದರೆ ಬಹಳ ಇಷ್ಟ. ಈ ಸರ್ಕಾರ ಹುಚ್ಚೂರಾಯನ ತೇರಾಗಿದೆ. ಇದು ಶಿಕಾರಿಪುರದ್ದು, ಮಾನ್ಯ ಯಡಿಯೂರಪ್ಪನವರಿಗೆ ಗೊತ್ತಿದೆ. ಹುಚ್ಚೂರಾಯನ ಸಂತೆ ಇದೆ. ಅಲ್ಲಿನ ರಥೋತ್ಸವದ ವೈಶಿಷ್ಟ್ಯ ಏನೆಂದರೆ, ರಥೋತ್ಸವ ಪ್ರಾರಂಭವಾಗಬೇಕಾದರೆ, ಇಂತಿಷ್ಟು ಊರಿನವರು ಬಂದು ರಥವನ್ನು ಎಳೆಯುವುದಕ್ಕೆ ಅಧಿಕಾರವಿದೆ. ಅಷ್ಟು ಜನ ಒಂದೇ ದಿವಸ ಬಂದು ಎಳೆಯುವುದಿಲ್ಲ. ಅವರವರಿಗೆ ಪುರುಸೊತ್ತಾದಾಗ ಬಂದು ಎಳೆಯುತ್ತಾರೆ. ಒಬ್ಬ ಬಂದು ಒಂದು ಮಾರು ಎಳೆದು ಹೋಗುತ್ತಾನೆ, ನಂತರ ಇನ್ನೊಬ್ಬ ಬಂದು 10 ಮಾರು ಎಳೆದು ಹೋಗುತ್ತಾನೆ, ಮತ್ತೊಬ್ಬ ಬಂದು ಅದನ್ನು ತಿರುಗಿಸಿ ಅಡ್ಡ ದಾರಿಗೆ ಎಳೆಯುತ್ತಾನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಈಗ ಸ್ವಲ್ಪ ಬದಲಾಗಿದೆ.

ಶ್ರೀ ಜೆ.ಹೆಚ್. ಪಟೇಲ್.—ನ್ಯಾಯವಾಗಿ ಆ ತೇರು ಅವರಲ್ಲಿ ಇರಬೇಕಿತ್ತು.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಇದು ನಿಮಗೆ ಸ್ವಲ್ಪ ಹತ್ತಿರ ಬಂತು. ಇಂದು ನಿಮ್ಮ ನೀತಿ ಯಾರಿಗೂ ಗೊತ್ತಾಗುವುದಿಲ್ಲ. ಒಂದೇ ದಿವಸ ಅಷ್ಟು ಜನ ಬಂದು ಎಳೆದಿದ್ದರೆ, ೧೫ ದಿವಸ ಎಳೆದಾಡಿದ್ದರೆ ಆಗುತ್ತಿತ್ತು. ಆ ರೀತಿಯಾಗಿದೆ ನಿಮ್ಮ ಸರ್ಕಾರ. ನೀವು ಒಂದು ಕಡೆ ಎಳೆಯುತ್ತೀರಿ ಮಾನ್ಯ ರಘುಪತಿಯವರು ಇನ್ನೊಂದು ಕಡೆ ಎಳೆಯುತ್ತಾರೆ. ಇತರೇ ಕಾರ್ಯಕ್ರಮಗಳ ಜೋಡಣೆ ಇಲ್ಲ. ವಸ್ತ್ರ ಒಬ್ಬರು, ಟೆಕ್ಸ್ಟ್ ಬುಕ್ ಒಬ್ಬರು, ಹೀಗೆ ನಿಮ್ಮ ಕಾರ್ಯಕ್ರಮವಾಗಿದೆ. ಕಾರ್ಯಕ್ರಮಗಳಲ್ಲಿ ಒಂದು ಸಾಂಗತ್ಯವಿರಬೇಕು. ನಿಮ್ಮ ನೀತಿಯಲ್ಲಿ ಧೃಡವಾದಂತಹ ಮುನ್ನೋಟವಿರಬೇಕು ನೀತಿ ನೆಲೆ ಯಾವುದೂ ಇದರಲ್ಲಿ ಕಾಣುತ್ತಿಲ್ಲ. ಭಾಷಣ ಚೆನ್ನಾಗಿ ಮಾಡುವುದನ್ನು ಕಲಿತುಕೊಂಡಿದ್ದೀರಿ, ಅದರಿಂದ ಬಹಳ ದಿವಸ ನಿಲ್ಲುತ್ತೇವೆಂದು ತಿಳಿದುಕೊಂಡಿದ್ದರೆ ಬಹಳ ತಪ್ಪಾಗುತ್ತದೆ. ಸರ್ಕಾರದ ನೀತಿ ನೆಲೆಗಳನ್ನು ಭದ್ರಗೊಳಿಸದೆ ನಿಮ್ಮ ಆತ್ಮವನ್ನು ಸಾಕ್ಷಾತ್ಕಾರ ಮಾಡಿಕೊಳ್ಳದೆ ಇದ್ದರೆ ಅಧಿಕಾರದಲ್ಲಿ ಉಳಿಯಲು ಕಷ್ಟವಾಗುತ್ತದೆ. ಚುನಾವಣೆಯಲ್ಲಿ ಹೇಳಿದ್ದೀರಿ ನಿಜ. ಚುನಾವಣೆಯಲ್ಲಿ ಹಾಗೆ ಹೇಳಿದ್ದೀರಿ ಏಕೆ ಮಾಡಲಿಲ್ಲವೆಂದು ಕೇಳುವುದರಲ್ಲಿ ವಿಶ್ವಾಸವಿಲ್ಲ. ಅಂಥಾ ಸಂದರ್ಭದಲ್ಲಿ ಹೆಚ್ಚೂ ಕಡಿಮೆ ತಿದ್ದುಪಾಟು ಮಾಡಿಕೊಂಡು, ಅದಕ್ಕೆ ಒಂದು ನೀತಿಯನ್ನು ಕೊಡಿ ಎಂದು ಕೇಳಿದೆವು, ನೀವು ಅದನ್ನು ಮಾಡಲಿಲ್ಲ. ಚುನಾವಣಾ ಪ್ರಣಾಳಿಕೆ ಸರ್ಕಾರದ ನೀತಿಯಾಗಿದೆಯೆಂದು ಕಳೆದ ವರ್ಷ ಮುಖ್ಯ ಮಂತ್ರಿಗಳು ಹೇಳಿದ್ದರು. ಚುನಾವಣ ಪ್ರಣಾಳಿಕೆಯೇ ನೀತಿಯಾಗುವುದಿಲ್ಲ. ಆ ಪ್ರಣಾಳಿಕೆಯನ್ನು ನೀವು ಸರ್ಕಾರವಾಗಿ ಪರಿಷ್ಕಾರ ಮಾಡಿ, ಅದಕ್ಕೆ ನೀತಿಯ ರೂಪನ್ನು ಕೊಡಬೇಕು. ಅದನ್ನು ಕೊಡುವ ಪ್ರಯತ್ನವನ್ನೇ ಮಾಡಿಲ್ಲ. ಪ್ರಣಾಳಿಕೆಯನ್ನು ಇಟ್ಟುಕೊಂಡು ಹುಚ್ಚೂರಾಯನ ತೇರಿನ ತರದ ಈ ಸರ್ಕಾರ ನಡೆದಿದೆ. ಇದು ಎಲ್ಲಿಗೆ ನಿಲ್ಲುತ್ತದೆ ಎಂಬುದರ ಬಗ್ಗೆ ತೀವ್ರವಾದಂತಹ ಅನುಮಾನವನ್ನು ವ್ಯಕ್ತಪಡಿಸಿ, ಈ ವಂದನಾ ನಿರ್ಣಯ ಏನಿದೆ ಅದಕ್ಕೆ ನನ್ನ ಖಂಡನೆಗಳನ್ನು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ. ತಮಗೆ ವಂದನೆಗಳು.

ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬಿಳಗಿ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣವನ್ನು ಸಮರ್ಥಿಸುತ್ತಾ, ಅವರಿಗೆ ವಂದನಾರ್ಪಣೆಯನ್ನು ಸಲ್ಲಿಸುವ ಸಮಯದಲ್ಲಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನನ್ನ ದೃಷ್ಟಿಯಲ್ಲಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ವಾಸ್ತವಿಕವಾದಂತಹ ವರದಿಯು ಸೂಕ್ಷ್ಮ ಸ್ಥಿತಿಯು ಸ್ಪಷ್ಟವಾದಂತಹ ವಿವರ ಅದರಲ್ಲಿ ಇದೆ. ಆದರೆ, ನಮ್ಮ ವಿರೋಧಪಕ್ಷದ ಅನೇಕ ಸದಸ್ಯರು ಬೇರೆ ಬೇರೆಯ ರೀತಿಯಲ್ಲಿ ಅರ್ಥ ಮಾಡಿಕೊಂಡಿದ್ದಾರೆ. ಅವರು ಆ ಕಡೆ ಇರುವುದರಿಂದ ಅದಕ್ಕೆ ಅವರು ಬೇರೆ ಬೇರೆ ಅರ್ಥ ಕಲ್ಪಿಸುವುದು ಸ್ವಾಭಾವಿಕ. ಮತ್ತೆ ಕೆಲವು ಜನ ನಮ್ಮ ಸ್ನೇಹಿತರು ಮುಂದೆ ಹೋಗಿ ಮಾನ್ಯ ರಾಮಕೃಷ್ಣ ಹೆಗಡೆಯವರು ತಾವು ಹೇಳಬೇಕಾದಂಥಾ

ದ್ದನ್ನು ರಾಜ್ಯಪಾಲರ ಬಾಯಲ್ಲಿ ಹೇಳಿಸಿದ್ದಾರೆಂದು ಹೇಳಿದರು. ಇದೇ ವಾದವನ್ನು ಒಪ್ಪುವುದಾದರೆ, ನಾಳೆ ರಾಜೀವ್‌ಗಾಂಧಿಯವರು ರಾಷ್ಟ್ರಾಧ್ಯಕ್ಷರ ಕಡೆಯಿಂದ ಹೇಳಿಸುತ್ತಾರೆ, ಆಗ ಮತ್ತೊಂದು ಅರ್ಥವನ್ನು ಕಲ್ಪಿಸಬೇಕಾಗುತ್ತದೆ. ಈಗ ತಾನೆ ಮಾತನಾಡಿದ ಹಿರಿಯ ಸದಸ್ಯರಾದ ಹಾಗೂ ಅನುಭವೀ ಸದಸ್ಯರಾದ ಶ್ರೀ ಶ್ರೀನಿವಾಸ್‌ರವರು ಒಂದು ಮಾತನ್ನು ಹೇಳಿದರು. ರಾಜ್ಯಪಾಲರ ಭಾಷಣದಲ್ಲಿ ಸುಮಾರು ೧೦ ಪ್ಯಾರಾಗ್ರಾಫ್‌ಗಳನ್ನು ಬರಗಾಲದ ಸಲುವಾಗಿ ವಿನಿಯೋಗ ಮಾಡಿದ್ದಾರೆಂದು. ಈಗ ಬಂದಿರುವಂತಹ ಸ್ಥಿತಿ ಅದು. ಅದಕ್ಕೆ ೧೦ ಏಕೆ, ಇನ್ನೊಂದು ೧೨ ಪ್ಯಾರಾವನ್ನು ಉಪಯೋಗ ಮಾಡಿದ್ದರೂ ಕಡಿಮೆಯಿಲ್ಲ ಎಂಬುದು ನನ್ನ ಅಭಿಪ್ರಾಯ. ಬಂದಿರುವಂಥ ಭೀಕರ ಬರಗಾಲದ ಸ್ಥಿತಿಯನ್ನು ಹೇಗೆ ಎದುರಿಸಬೇಕು ಎನ್ನುವ ಬಗ್ಗೆ ಸರ್ಕಾರದವರು ಹಲವಾರು ಕ್ರಮಗಳನ್ನು ಹೇಳಿದ್ದಾರೆ. ಈ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ ರಾಜ್ಯಪಾಲರ ಭಾಷಣದಲ್ಲಿ ಬರಗಾಲ ಕಾಮಗಾರಿಗಳು ಮುಂದಿನ ಮಳೆಗಾಲದವರೆವಿಗೂ ನಡೆಯುತ್ತವೆ ಎಂದು ಹೇಳಿದ್ದಾರೆ, ನಮ್ಮ ಅಧಿಕಾರಿಗಳು ಸರ್ಕಾರವನ್ನು ದಿಕ್ಕು ತಪ್ಪಿಸುವಂಥ ರೀತಿಯಲ್ಲಿ ವರದಿಗಳನ್ನು ಕೊಡುತ್ತಾರೆ. ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಬರಗಾಲದ ಕಾಮಗಾರಿಗಳು ಬರೀ ಮಳೆಗಾಲದವರೆಗೆ ಅಲ್ಲ. ಮುಂದಿನ ಮುಂಗಾರಿನ ಪೀಕು ರೈತರ ಮನೆಗೆ ಬರುವವರೆವಿಗೂ ಬರಗಾಲ ಕಾಮಗಾರಿಗಳ ಕೆಲಸವನ್ನು ಮುಂದುವರಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಅಧಿಕಾರಿಗಳು ಸರ್ಕಾರವನ್ನು ದಿಕ್ಕು ತಪ್ಪಿಸುವ ವಿಚಾರದಲ್ಲಿ ಹೋಗುತ್ತಿರುವುದರ ಬಗ್ಗೆ ಸರ್ಕಾರದವರು ಗಂಭೀರವಾಗಿ ಯೋಚನೆ ಮಾಡಬೇಕು. ಮುಂದಿನ ಮುಂಗಾರುವರೆಗೆ ಮುಂಜಾಗ್ರತೆ ಕ್ರಮಗಳನ್ನು ಹಾಗೂ ವ್ಯವಹಾರಿಕ ಯೋಜನೆಗಳನ್ನು ಹಾಕಿದರೆ ಮಾತ್ರ ಬರಗಾಲವನ್ನು ಎದುರಿಸುವುದಕ್ಕೆ ಸಾಧ್ಯವಾಗುತ್ತದೆ. ನಾನು ಕಳೆದ ಅಧಿವೇಶನದಲ್ಲಿಯೂ ಕೂಡ ಈ ಬಗ್ಗೆ ಮಾತನಾಡಿದ್ದೇನೆ. ನನ್ನ ಜಿಲ್ಲೆಯಲ್ಲಿ ಕಳೆದ ೫೨ ವರ್ಷಗಳಲ್ಲಿ ೩೩ನೇ ಬಾರಿಗೆನನ್ನ ಜಿಲ್ಲೆ ಬರಗಾಲಕ್ಕೆ ತುತ್ತಾಗಿದೆ, ಇದರ ಬಗ್ಗೆ ಸರಿಯಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಿಳಿಸಿದ್ದೆ. ಸತ್ಯಾಸತ್ಯತೆಯನ್ನು ಇಟ್ಟಿದ್ದರೂ ಕೂಡ ಸರ್ಕಾರ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿಲ್ಲ. ಇವತ್ತು ಬರಗಾಲ ಕಾಮಗಾರಿಗಳಲ್ಲಿ ಲೋಪದೋಷಗಳು ಇವೆ, ಅವುಗಳನ್ನು ಹೇಳಬೇಕಾಗುತ್ತದೆ. ರಾಜಕೀಯದಲ್ಲಿ ಕೆಲವೊಂದು ಸತ್ಯಗಳನ್ನು ಹೇಳಲೇಬೇಕಾಗುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಬರಗಾಲ ಕಾಮಗಾರಿಗಳ ಬಗ್ಗೆ ಹೇಳಿದ್ದಾರೆ, ಅದರ ಬಗ್ಗೆ ಕೆಲವು ಸೂಚನೆಗಳನ್ನು ಹೇಳುತ್ತೇನೆ. ಒಂದು ಉದ್ಯೋಗ ಅರಸಿಕೊಂಡು ಬಂದಂಥ ಎಲ್ಲರಿಗೂ ಉದ್ಯೋಗ ಕೊಡಬೇಕೆನ್ನುವ ವಿಚಾರದಲ್ಲಿ ನನ್ನ ಸರ್ಕಾರ ಬದ್ಧವಾಗಿದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಇದನ್ನು ನಾನು ಒಪ್ಪಲಾರೆ. ಇವತ್ತು ಬರಗಾಲ ಕಾಮಗಾರಿಗಳನ್ನು ನಾವು ನೋಡಿದಾಗ, ವಾರದಲ್ಲಿ ನಾಲ್ಕು ದಿನ ಮತ್ತು ಮೂರುದಿನ ಕೆಲಸ ಕೊಡುತ್ತಿದ್ದಾರೆ. ಉದ್ಯೋಗ ಅರಸಿಕೊಂಡು ಬಂದಂಥ ಎಲ್ಲರಿಗೂ ಉದ್ಯೋಗ ಕೊಡುವುದಕ್ಕಾಗಿಲ್ಲ. ಅಧಿಕಾರಿಗಳು, ಸತ್ಯಕ್ಕೆ ದೂರವಾದಂಥ ವರದಿಯನ್ನು ಸರ್ಕಾರಕ್ಕೆ ಕೊಡುತ್ತಿದ್ದಾರೆ. ಸರ್ಕಾರದ ವರಿಷ್ಠರು ಅದಕ್ಕೆ ಒಳಗಾಗಬಾರದೆಂದು ಹೇಳುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿದ್ದರು)

ಬಡವರು ಮಾಡಿದಂಥ ಕೆಲಸಗಳಿಗೆ ಕೂಲಿಯನ್ನು ಕೂಡ ಸರಿಯಾಗಿ ಕೊಡುತ್ತಿಲ್ಲ, ಇವತ್ತು ಕೂಲಿಗಾರರು ಲ್ಯಾಂಡ್ ಆರ್ಮಿ, ಮತ್ತಿತರ ಇಲಾಖೆಗೆ ಮಾಡಿದಂಥ ಕೂಲಿ ಪಡೆಯಲಿಕ್ಕಾಗಿ ಅಲೆದಾಡುತ್ತಿರುವುದನ್ನು ನಾವು ಕಣ್ಣಿನಿಂದ ನೋಡಿದ್ದೇವೆ. ಇನ್ನು ಕೆಲಸಗಾರರನ್ನು ಎನ್.ಎಂ.ಆರ್ ಮೂಲಕ ತೆಗೆದುಕೊಳ್ಳುವಂಥ ವ್ಯವಸ್ಥೆ ಇದೆ. ಮಾನ್ಯ ಬಂಗಾರಪ್ಪನವರು ಪಿ.ಡಬ್ಲ್ಯು.ಡಿ. ಮಂತ್ರಿಗಳಾಗಿರಲಿ, ಮಾನ್ಯ ದೇವೇಗೌಡರು ಪಿ.ಡಬ್ಲ್ಯು.ಡಿ. ಮಂತ್ರಿಗಳಾಗಿರಲೀ ಈ ವ್ಯವಸ್ಥೆ ಮಾತ್ರ ಹೋಗಿಲ್ಲ. ೪೦ ಜನಕ್ಕೆ ಕೆಲಸ ಕೊಟ್ಟು, ೪೦೦ ಜನ ಕೆಲಸ ಮಾಡುತ್ತಿದ್ದಾರೆಂದು ಲೆಕ್ಕ ತೋರಿಸಿ, ಮಿಕ್ಕ ಹಣವನ್ನು ಅಧಿಕಾರಿಗಳು ತಮ್ಮ ಕಿಸೆಗೆ ಹಾಕಿಕೊಳ್ಳತಕ್ಕ ಕೆಲಸ ನಡೆದಿದೆ. ಬರಗಾಲ ಕಾಮಗಾರಿ ಅಂದರೆ ಕೇವಲ ರಸ್ತೆ ಕೆಲಸವಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಬರಗಾಲ ಕಾಮಗಾರಿಯಲ್ಲಿ ಖರ್ಚು ಮಾಡಿದ್ದಕ್ಕೆ ಮುಂದಿನ ವರ್ಷ ಅದರ ಪ್ರತಿಫಲ ಸಿಗುವಂತಿರಬೇಕು. ಜನತೆಗೆ ಅನುಕೂಲವಾಗುವಂಥ ಶಾಶ್ವತ ಕೆಲಸಗಳನ್ನು ತೆಗೆದುಕೊಳ್ಳುವಂತಿರಬೇಕು. ಕೆರೆಕಟ್ಟೆಗಳ, ಕೆಲಸ ಏತ ನೀರಾವರಿ ಕೆಲಸ ತೆಗೆದುಕೊಳ್ಳುವಂತಿಲ್ಲ, ಇವತ್ತು ರೈತರಿಗೆ ಕಷ್ಟ ಇದೆ. ಅವರಿಗೆ ಸಾಲ ಕೊಡುತ್ತಿಲ್ಲ, ಇವತ್ತು ನಮ್ಮ ಭಾಗದಲ್ಲಿ ಉತ್ಕೃಷ್ಟವಾದಂಥ

ನೀರು ವ್ಯರ್ಥ ಅರಬ್ಬೀ ಸಮುದ್ರಕ್ಕೆ ಹೋಗುತ್ತಿದೆ. ಅದನ್ನು ತಡೆಗಟ್ಟಿ ನಮ್ಮ ಜಿಲ್ಲೆಯಲ್ಲಿ ಪ್ರತ್ಯೇಕವಾದಂಥ ಏತ ನೀರಾವರಿ ನಿಗಮವನ್ನು ಮಾಡಬೇಕೆಂದು ನಮ್ಮ ಒತ್ತಾಯ ಇದೆ. ಅದು ಸರ್ಕಾರದ ಕಲ್ಪನೆಗೂ ಬಂದಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸದನದಲ್ಲಿ ಸದಸ್ಯರು ಯಾರೂ ಇಲ್ಲ. ಸದನ ಹೇಗೆ ನಡೆಸಿಕೊಂಡು ಹೋಗುತ್ತೀರಿ.

ಉಪಾಧ್ಯಕ್ಷರು.—ಹೇಳಿ ಕಳುಹಿಸಿದ್ದೇನೆ.

ಶ್ರೀ ಎಂ. ರಾಮಪ್ಪ.—ಮನೆಯನ್ನು ಅಡ್ಜರ್ನ್ ಮಾಡಿ, ಅವರಿಗೆ ಜವಾಬ್ದಾರಿ ಇಲ್ಲವೇ?

ಉಪಾಧ್ಯಕ್ಷರು.—ಎಲ್ಲರೂ ಸೇರಿ ಸಭೆ ನಡೆಸಬೇಕು. ಈಗ ಕೋರಂ ಇದೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಏತ ನೀರಾವರಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದಕ್ಕೆ ಒಂದು ನಿಗಮವನ್ನು ಮಾಡಲೇಬೇಕು. ಇವತ್ತು ನಮ್ಮ ಭಾಗದ ರೈತರು ಏತ ನೀರಾವರಿ ಕಾರ್ಯಕ್ಕೆ ೩೦೦ ರಿಂದ ೫೦೦ ರೂಪಾಯಿವರೆಗೆ ಮುಂಗಡವಾಗಿ ರೊಕ್ಕ ಕೊಡುವುದಕ್ಕೆ ಸಿದ್ಧರಿದ್ದಾರೆ. ನಮ್ಮ ಸರ್ಕಾರ ಅದನ್ನು ಉದಾರವಾಗಿ ಸ್ವೀಕಾರ ಮಾಡಬೇಕು. ರೈತರು ಸ್ವತಃ ಮುಂದೆ ಬಂದಾಗ ಐ.ಎ.ಎಸ್. ಅಧಿಕಾರಿಗಳ ಕೊಕ್ಕೆ ಹಾಕುವುದಕ್ಕೆ ಬಂದರೆ ಸರ್ಕಾರದವರು ಗಮನ ಕೊಡಬಾರದೆಂದು ಹೇಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆಗೆ ಸಂಬಂಧಪಟ್ಟಂತೆ ಹಾಗೂ ಮಂಗಳೂರು ತೈಲ ಶುದ್ಧೀಕರಣ ಕೇಂದ್ರಕ್ಕೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡಿಲ್ಲ. ಇದರ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಪಕ್ಷಭೇಧವಿಲ್ಲದೆ ಒತ್ತಾಯ ತರಬೇಕೆಂದು ಹೇಳುತ್ತೇನೆ. ಇನ್ನು ಭೀಕರ ಬರಗಾಲದ ಜೊತೆಗೆ, ವಿದ್ಯುಚ್ಛಕ್ತಿ ಅಭಾವ ಬೇರೆ ಇದೆ. ಮಾನ್ಯ ಜೆ.ಹೆಚ್. ಪಟೇಲರು ಮಿನಿ ವಿದ್ಯುತ್ ಘಟಕಗಳಿಗೆ ಉತ್ತೇಜನ ಕೊಡುತ್ತೇವೆಂದು ಹೇಳಿದ್ದಾರೆ. ರಾಜ್ಯದ ಬೇರೆ ಬೇರೆ ಕಡೆಗಳಿಗೆ ಜನರೇಟರುಗಳನ್ನು ಮಾಡಲಾಗುವುದೆಂದು ಕಳೆದ ವರ್ಷ ಅಂದಾಜು ಪತ್ರವನ್ನು ಮಂಡಿಸುವಾಗ ಹೇಳಿದ್ದೀರಿ, ಅದರಂತೆ ಜಮಖಂಡಿ, ಇಂಡಿ ತಾಲ್ಲೂಕಿನಲ್ಲೂ ವಿದ್ಯುತ್ ಜನರೇಟರುಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದಿರಿ, ಆದರೆ ಇವತ್ತು ಕೇವಲ ಬರೀ ಸಮೀಕ್ಷೆ ಮಾತ್ರ ನಡೆಯುತ್ತಿದೆ. ಇವತ್ತು ಇಂಡಿ ತಾಲ್ಲೂಕಿನಲ್ಲಿ ೧೭,೦೦೦ ನೀರಾವರಿ ಬಾವಿಗಳಿದ್ದು ವಿದ್ಯುತ್ ಜನರೇಟರುಗಳ ಅವಶ್ಯಕತೆ ಬಹಳ ಇದೆ. ಜನರೇಟರುಗಳ ಘೋಷಣೆ ಬರೀ ಮಾತಿನಲ್ಲಿ ಮಾತ್ರ ಇದೆ. ಅಮಲಿನಲ್ಲಿ ತರಬೇಕೆಂದು ಹೇಳುತ್ತೇನೆ. ನಮ್ಮ ಜಿಲ್ಲೆಯ ಜನರಿಗೆ ಯಾವುದೇ ರೀತಿಯ ಅಣೆಕಟ್ಟುಗಳಿಂದ ಉಪಯೋಗವಾಗುವುದಿಲ್ಲ. ಆಲಮಟ್ಟಿ, ಅಪ್ಪರ್ ಕೃಷ್ಣ ಯೋಜನೆಗಳಿಂದ ಉಪಯೋಗವಿಲ್ಲ, ಕೃಷ್ಣ ಮೇಲ್ದಂಡೆ ಯೋಜನೆಯಿಂದ ಬಿಜಾಪುರ ಜಿಲ್ಲೆ ಶ್ರೀಮಂತರ ಜಿಲ್ಲೆ ಎನ್ನುವ ಕಲ್ಪನೆ ಈ ಭಾಗದ ಜನರಿಗೆ ಇದೆ. ಅದು ಸುಳ್ಳು. ಕೃಷ್ಣ ಮೇಲ್ದಂಡೆಯಿಂದ ಸಂಪೂರ್ಣವಾಗಿ ನೀರಾವರಿ ಅನುಕೂಲ ಪಡೆಯುವ ಜಿಲ್ಲೆ, ಗುಲ್ಬರ್ಗ. ನಮ್ಮ ಜಿಲ್ಲೆಗೆ ಮುಳವಾಡ ಏತ ನೀರಾವರಿಯಿಂದ ತುಂಬ ಅನುಕೂಲವಾಗುತ್ತದೆ. ಈ ವಿಚಾರದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಮುಳವಾಡ ಏತ ನೀರಾವರಿ ಯೋಜನೆ ಬಗ್ಗೆ ಸರ್ಕಾರದ ಮೇಲೆ ಒತ್ತಾಯ ತಂದಿವೆ. ಸುಮಾರು ೬೦೧ ಕೋಟಿ ರೂಪಾಯಿ ಈ ಬೃಹತ್ ಯೋಜನೆಯ ವಿಚಾರದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು. ದುರ್ದೈವದಿಂದ ಪ್ರಸ್ತಾಪ ಮಾಡಿಲ್ಲ. ಅದಕ್ಕಾಗಿ ನಾನು ತೀವ್ರವಾದಂಥ ನಿರಾಶೆಯನ್ನು ವ್ಯಕ್ತಪಡಿಸುತ್ತೇನೆ. ಇದೀ ವಿಜಾಪುರ ಜಿಲ್ಲೆಯ ಬಾಗಿಲು ತೆರೆಸುವಂಥ ಈ ಬೃಹತ್ ಯೋಜನೆ ಬಗ್ಗೆ ಸರ್ಕಾರದವರು ಹೆಚ್ಚು ಒತ್ತು ಕೊಡಬೇಕೆಂದು ಹೇಳುತ್ತೇನೆ.

೩-೦೦ ಪಿ. ಎಂ

ಭಾಷೆಯ ವಿಚಾರದಲ್ಲಿ ಹೇಳುತ್ತಾ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. 'ಅದೇನೆಂದರೆ' ರಾಜ್ಯದಲ್ಲಿ ಒಂದು ಸಂಸ್ಕೃತ ಅಕಾಡೆಮಿಯನ್ನು ಸ್ಥಾಪಿಸುವ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಎಂದು ಹೇಳಿದ್ದಾರೆ. ಸಂಸ್ಕೃತದ ಸಲುವಾಗಿ ಪ್ರತ್ಯೇಕ ಅಕಾಡೆಮಿ ಯಾರಿಗೆ ಬೇಕಾಗಿದೆ ? ಸಂಸ್ಕೃತ ಭಾಷೆ ಎಷ್ಟು ಮಂದಿಗೆ ಅರ್ಥವಾಗುತ್ತದೆ ? ನೂರಕ್ಕೆ ಇಂಶಿಷ್ಟು ಜನ ಕನ್ನಡ ಮಾತನಾಡುವವರು ತಮಿಳು ಮಾತನಾಡುವವರು ಉರ್ದು ಮಾತನಾಡು

ನವರು ತೆಲಗು ಮಾತನಾಡುವವರು ಮಲಯಾಳಂ ಮಾತನಾಡುವವರು ಇಂತಿಷ್ಟು ಇದ್ದಾರೆಂದು ಹೇಳಬಹುದು. ಆದರೆ ಸಂಸ್ಕೃತ ಮಾತನಾಡುವವರು ನೂರರಲ್ಲಿ ಇಬ್ಬರು ಸಿಗುವುದಿಲ್ಲ. ನೀವು ಏತಕ್ಕೆ ಇಂತಹ ಸಾಹಸ ಮಾಡಬೇಕು ? ಸಂಸ್ಕೃತ ಯಾರಿಗೂ ಅರ್ಥವಾಗುವುದಿಲ್ಲ. ನಾನು ನನ್ನ ಗಮನಕ್ಕೆ ಬಂದ ಒಂದು ವಿಚಾರವನ್ನು ಹೇಳುತ್ತೇನೆ ವಿನೋದಕ್ಕೆ ಹೇಳುತ್ತೇನೆಂದು ತಿಳಿಯಬಾರದು. ರೇಡಿಯೋದಲ್ಲಿ ಐದು ನಿಮಿಷಗಳ ಕಾಲ ಸಂಸ್ಕೃತ ವಾರ್ತೆ ಬರುತ್ತದೆ. ನನ್ನ ತಮ್ಮನ ಮಗ ಲಕ್ಷ್ಮೀಕಾಂತ ಸಂಸ್ಕೃತ ತೆಗೆದುಕೊಂಡು ಎಸ್‌ಎಸ್‌ಎಲ್‌ಸಿ ಓದುತ್ತಿದ್ದಾನೆ. ಅವನನ್ನು ರೇಡಿಯೋದಲ್ಲಿ ಬರತಕ್ಕ 'ಇಯಂ ಆಕಾಶವಾಣಿ ವಾರ್ತಾಂಶ್ರು ಯಂತಃ ಪ್ರವಾಚಕಃ ಬಲದೇವನಂದಸಾಗರ: ಇದರ ಅರ್ಥ ಹೇಳು ಎಂದು ಕೇಳಿದಾಗ ಆತ ಏನು ಹೇಳಿದ ಅಂದರೆ 'ಆಕಾಶ ವಾಣಿಯಲ್ಲಿ ಬಂದ ವಾರ್ತೆಯನ್ನು ಕೇಳಿದ ಬಲದೇವಾನಂದ ಸಾಗರಕ್ಕೆ ಹೋದನು' ಎಂದು ಹೇಳಿದ ಇದು ಅದರ ಅರ್ಥ ಸಂಸ್ಕೃತ ಯಾರಿಗೆ ಬೇಕು ಸ್ವಾಮಿ ? ಕನ್ನಡದ ಬಗ್ಗೆ ಎಲ್ಲರೂ ಮಾತನಾಡುತ್ತೇವೆ, ಸಂಸ್ಕೃತ ಅಕಾಡೆಮಿಯನ್ನು ಏತಕ್ಕೆ ಸ್ಥಾಪನೆ ಮಾಡುತ್ತೀರಿ. ನೀವು ಏನಾದರೂ ಮಾಡುವುದು ಇದ್ದರೆ ಕನ್ನಡದ ಬಗ್ಗೆ ಮಾಡಿ, ನನಗೆ ಬಡ್ತಿ ಕೊಡಿಯೆಂದು ಕನ್ನಡದಲ್ಲಿ ಅರ್ಜಿಯನ್ನು ಮೇಲಾಧಿಕಾರಿಗಳವರಿಗೆ ಕೊಟ್ಟರೆ, ಕನ್ನಡದಲ್ಲಿ ಅರ್ಜಿಕೊಟ್ಟಿದ್ದರಿಂದ ಇದುವರೆಗೆ ಆತನಿಗೆ ಬಡ್ತಿ ಸಿಕ್ಕಿಲ್ಲ. ಸ್ಟೋರ್‌ಕೀಪರ್ ಒಬ್ಬ ನನಗೆ ಬಡ್ತಿ ಸಿಗಲಿಲ್ಲವೆಂದು ನನ್ನ ಹತ್ತಿರ ಬಂದಿದ್ದ. ಕನ್ನಡದಲ್ಲಿ ಅರ್ಜಿಯನ್ನು ಕೊಟ್ಟ ಕಾರಣಕ್ಕಾಗಿ ಇದುವರೆಗೆ ಬಡ್ತಿ ಸಿಕ್ಕಿಲ್ಲ ಅಂದರೆ ಕರ್ನಾಟಕ ರಾಜ್ಯದಲ್ಲಿ ಕನ್ನಡಕ್ಕೆ ಆಗತಕ್ಕ ಅನ್ಯಾಯ ಇದಾಗಿದೆ. ಕರ್ನಾಟಕ ರಾಜ್ಯದಲ್ಲಿ ಕನ್ನಡಕ್ಕೋಸ್ಕರ 'ಕನ್ನಡ ಕಾವಲು ಸಮಿತಿ' ನೇಮಕ ಮಾಡಿರುವುದು ನಾಚಿಕೆಯಿಂದ ತಲೆತಗ್ಗಿಸಬೇಕಾಗಿದೆ ಕರ್ನಾಟಕ ರಾಜ್ಯವಾಗಿ ೩೦ ವರ್ಷಗಳಾದರೂ ಕನ್ನಡಕ್ಕೆ ಕಾವಲು ಸಮಿತಿಯನ್ನು ಮಾಡಬೇಕೆ ಇದಕ್ಕಿಂಥ ನಾಚಿಕೆ ಗೇಡಿನ ಕೆಲಸ ಯಾವುದು ಇಲ್ಲವೆಂದು ನಾನು ಹೇಳಬೇಕಾಗಿದೆ. ಕರ್ನಾಟಕದಲ್ಲಿ ಯಾವ ಅಧಿಕಾರಿ ಕನ್ನಡದ ಬಗ್ಗೆ ಅಸಡ್ಡೆಯನ್ನು ತೋರಿಸುತ್ತಾನೆ ಅಗೌರವದಿಂದ ಕನ್ನಡವನ್ನು ಕಾಣುತ್ತಾನೆ, ಯಾರು ಕನ್ನಡ ಪರಿಪತ್ರಗಳನ್ನು ಮಾಡಬೇಕಾಗಿಲ್ಲವೆಂದು ಕನ್ನಡವನ್ನು ಅಲಕ್ಷ್ಯದಿಂದ ನೋಡುತ್ತಾನೆ ಅಂತಹವನು ಯಾವ ಅಧಿಕಾರಿಯೇ ಇರಲಿ ಅವನ ಬಗ್ಗೆ ಕಟ್ಟುನಿಟ್ಟಾದ ಕ್ರಮವನ್ನು ಕೈಗೊಳ್ಳಬೇಕು. ಹಾಗೆ ಮಾಡದಿದ್ದರೆ ಕನ್ನಡವನ್ನು ಇಲ್ಲಿ ಪೂರ್ಣವಾಗಿ ಜಾರಿಗೆ ತರುವುದಕ್ಕೆ ಆಗುವುದಿಲ್ಲ. ನಾನು ಇತಿಹಾಸ ಓದಿದ್ದೇನೆ. ತುರ್ಕಿದೇಶ ಸಣ್ಣದೇಶ ಅಲ್ಲಿ ಕ್ರಾಂತಿಯಾಯಿತು. ತುರ್ಕಿದೇಶ ಸ್ವತಂತ್ರವಾಗು ವುದಕ್ಕಿಂತ ಮೊದಲು ಎಲ್ಲರೂ ಕೂಡ ಇಂಗ್ಲೀಷ್ ಭಾಷೆಯನ್ನು ಬಳಸುತ್ತಿದ್ದರು. ತುರ್ಕಿದೇಶ ಸ್ವತಂತ್ರ ಆದಮೇಲೆ ಅದರ ರಾಜನಾದ ಕಮಲ್‌ಪಾಶಾ ೨೧ ವರ್ಷದವ ರಾಜನಾದಾಗ ಕ್ರಾಂತಿ ಮಾಡಿರುವ ನೀವುಗಳೆಲ್ಲಾ ಒಂದು ವರ್ಷದಲ್ಲಿ ತುರ್ಕಿಭಾಷೆಯನ್ನು ಕಲಿಯದಿದ್ದರೆ ನಿಮ್ಮನ್ನು ಬೀದಿ ದೀಪದ ಕಂಬಕ್ಕೆ ನೇಣುಹಾಕುತ್ತೇನೆಂದು ಹುಕುಂ ಹೊರಡಿಸಿದ. ಎಲ್ಲರೂ ಭಯಪಟ್ಟುಕೊಂಡು ತುರ್ಕಿಭಾಷೆಯನ್ನು ಕಲಿತರು. ಇಂಗ್ಲೀಷ್ ಮಯವಾಗಿದ್ದ ತುರ್ಕಿದೇಶ ಒಂದೇ ವರ್ಷದಲ್ಲಿ ತುರ್ಕಿ ಮಯವಾಯಿತು. ಕನ್ನಡ ಭಾಷೆಯನ್ನು ಜಾರಿಗೆ ತರುವ ವಿಷಯದಲ್ಲಿ ಸರ್ಕಾರ ಹಿಂದುಮುಂದು ನೋಡದೆ ಕೆಲಸ ಮಾಡಬೇಕು. ಇದರ ಬಗ್ಗೆ ಆ ಕಡೆಯವರಾಗಲಿ ಈ ಕಡೆಯವರಾಗಲಿ ಯಾರದೂ ವಿರೋಧವಿಲ್ಲ. ಇದನ್ನು ಅರಿತುಕೊಂಡು ಕೆಲಸಮಾಡಿ ಕನ್ನಡವನ್ನು ಎಲ್ಲಾ ಮಟ್ಟದಲ್ಲಿ ಆಡಳಿತ ಭಾಷೆ ಯನ್ನಾಗಿ ಜಾರಿಗೆ ತರುವುದಕ್ಕೆ ಮಳಿಯಾಳಂ ಮತ್ತು ತಮಿಳುಭಾಷೆಯ ಅಧಿಕಾರಿಗಳು ಅಡ್ಡಿಯಾಗಿ ದ್ದಾರೆ. ಇವರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕು. ಮಾನ್ಯಸದಸ್ಯರಾದ ಕೆ. ಎಚ್. ಶ್ರೀನಿವಾಸ್ ರವರು ಹೇಳಿದಹಾಗೆ ಕಚೇರಿಗಳಲ್ಲಿ ಆಂಗ್ಲ ಬೆರಳಚ್ಚು ಮತ್ತು ಕನ್ನಡ ಬೆರಳಚ್ಚು ಯಾವ ವೇಗದಲ್ಲಿ ಹೋಗುತ್ತಿದೆ ಎಂಬುದನ್ನು ಹೇಳಿದ್ದಾರೆ. ಕನ್ನಡ ಬೆರಳಚ್ಚು, ಅದು ಏನೂ ಆಗಿಲ್ಲ ಅದರ ಬಗ್ಗೆ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕು. ಇವತ್ತು ನಾನಾಗಲಿ ಮಾನ್ಯ ನಾರಾಯಣಕುಮಾರ್ ಅವರಾಗಲಿ ಬೆಳಗಾವಿಗೆ ಹೋಗುವುದು ದುಸ್ತರವಾಗಿದೆ. ನಾವು ಕನ್ನಡ ನಾಡಿನ ಕಿರೀಟ ಬೆಳಗಾವಿ ಎಂದು ನಾವು ಕರೆಯುತ್ತಿದ್ದೇವೆ, ಇವತ್ತು ಅಲ್ಲಿ ನಮ್ಮಲ್ಲಿ ಇರುವವರೇ ಕನ್ನಡದ ಬಗ್ಗೆ ಅವಹೇಳನ ಮಾಡುತ್ತಿದ್ದಾರೆ. ಕನ್ನಡದ ಬಗ್ಗೆ ಗೂಂಡಾಗಿರಿ ಮಾಡುತ್ತಿದ್ದಾರೆ. ಇಲ್ಲಿ ವಿಧಾನಸೌಧದ ಮುಂದೆ ತ್ರಿವರ್ಣ ರಾಷ್ಟ್ರಧ್ವಜವನ್ನು ಹಾರಿಸಿದ್ದರೆ, ಬೆಳಗಾವಿಯ ನಗರ ಪಾಲಿಕೆಯ ಕಟ್ಟಡದ ಮೇಲೆ ಭಗವ ಜಂಡಾ ಹಾರಿಸಿದ್ದಾರೆ. ಅಲ್ಲಿ ಕನ್ನಡ ಭಾಷೆ ಜಾರಿಯಾಗುತ್ತಿಲ್ಲ. ಅಲ್ಲಿರುವ ಕನ್ನಡ ಜನ ಎಲ್ಲಾ ತರಹ ನೋವನ್ನು ಅನುಭವಿಸುತ್ತಿದ್ದಾರೆ.

ಬೆಳಗಾವಿಯಲ್ಲಿ ಏನೇನು ನಡೆಯುತ್ತಿದೆ ಎನ್ನುವುದು ಪತ್ರಿಕೆಗಳಲ್ಲಿ ಬಂದಿದೆ. ಬೆಳಗಾವಿ ನಗರಪಾಲಿಕೆಯ ಸದಸ್ಯರು ಕನ್ನಡ ಮತ್ತು ಉರ್ದು ಭಾಷೆಯಲ್ಲಿ ಮಾತನಾಡಿದರೆ ಅವರು ಸದಸ್ಯತ್ವಕ್ಕೆ ಡಿಸ್‌ಕ್ವಾಲಿಫೈ ಆಗುತ್ತಾರೆನ್ನುವ ಮಟ್ಟಕ್ಕೆ ನಗರಪಾಲಿಕೆಯ ಮೇಯರ್ ಹೋಗಬೇಕಾದರೆ ಅಲ್ಲಿ ಕನ್ನಡಿಗರು ಯಾವ ರೀತಿ ಬಾಳಬೇಕು ? ಇಲ್ಲಿ ಶಾಸಕರಾಗಿರತಕ್ಕ ಬೆಳಗಾವಿ ಜಿಲ್ಲೆಯವರು ಖಾನಾಪುರ ಮಹಾರಾಷ್ಟ್ರಕ್ಕೆ ಹೋಗಬೇಕು, ನಿಪ್ಪಾಣಿ ಮಹಾರಾಷ್ಟ್ರಕ್ಕೆ ಹೋಗಬೇಕೆಂದು ಅದನ್ನೇ ಪದೇ ಪದೇ ಪ್ರಸ್ತಾಪ ಮಾಡು ತ್ತಾರೆ. ಅದು ಮುಗಿದ ವಿಚಾರ, ಮಹಾಜನ್ ವರದಿ ಜಾರಿಯಾಗಲೇಬೇಕು. ಇಂದಿನ ಪರಿಸ್ಥಿತಿಯಲ್ಲಿ ಅಂದಿನ ವರದಿಯೇ ತಮ್ಮ ಕಡೆಯ ತೀರ್ಮಾನವೆಂದು ಹೇಳಬೇಕು. ಮಾನ್ಯ ಪ್ರಧಾನಮಂತ್ರಿಗಳು ಮಾನ್ಯ ಹೆಗಡೆಯವರನ್ನು ಮತ್ತು ಮಾನ್ಯ ನಿಳಂಗೇಕರ್ ಅವರನ್ನು ಕರೆಸಿ ಮಾತನಾಡಿದರೆ ನಮ್ಮ ಸರ್ಕಾರ ಮಹಾಜನ್ ವರದಿ ಏನಿದೆ ಅದಕ್ಕಿಂಥ ಒಂದು ಹೆಜ್ಜೆ ಹಿಂದೆ ಸರಿದರೂ ಕೂಡ ಕ್ರಾಂತಿ ಯಾದೀತು, ಹಿಂದೆ ಕೂಡ ಮುನ್ನಾಲ್ಕು ಜನ ಮುಖ್ಯಮಂತ್ರಿಗಳು ಕೂಡ ಮಹಾಜನ್ ವರದಿಯೇ ಅಂತಿಮವಾದ ತೀರ್ಮಾನವೆಂದು ಹೇಳಿದ್ದಾರೆ. ಅದೇ ತೀರ್ಮಾನಕ್ಕೆ ಈಗಿನ ಮುಖ್ಯಮಂತ್ರಿಗಳು ಬರ ಬೇಕು. ಬೆಳಗಾವಿ ನಗರಪಾಲಿಕೆಯ ಕಟ್ಟಡದ ಮೇಲೆ ಏರಿಸಿರತಕ್ಕ ಭಗವ ಜಂಡಾ ಏನಿದೆ ಮತ್ತು ನಗರಪಾಲಿಕೆಯ ಸದಸ್ಯರು ಕನ್ನಡ ಮತ್ತು ಉರ್ದು ಭಾಷೆಗಳಲ್ಲಿ ಮಾತನಾಡಿದರೆ ಸದಸ್ಯತ್ವಕ್ಕೆ ಡಿಸ್ ಕ್ವಾಲಿಫೈಡ್ ಆಗುತ್ತಾರೆನ್ನುವ ಮೇಯರ್ ವಾದಕ್ಕೆ ಸರ್ಕಾರ ಸೂಚನೆ ಕೊಟ್ಟು ಎಚ್ಚರಿಸಬೇಕು.

ದಿನಗೂಲಿ ನೌಕರರನ್ನು ಪುನರ್ ನೇಮಿಸಿಕೊಳ್ಳಬೇಕೆಂಬ ಸುಪ್ರೀಂಕೋರ್ಟಿನ ಐತಿಹಾಸಿಕ ತೀರ್ಪು ಏನಿದೆ ಅದನ್ನು ಎಷ್ಟೋ ಜನ ಅಧಿಕಾರಿಗಳು ಧಿಕ್ಕರಿಸಿ ಇವರನ್ನು ಇಲ್ಲಿಯವರೆಗೆ ನೇಮಿಸಿ ಕೊಂಡಿಲ್ಲ. ಜನವರಿ ೬ನೇ ತಾರೀಖಿನೊಳಗೆ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದವರು ತೆಗೆದು ಹಾಕಲ್ಪಟ್ಟಿದ್ದರೆ ಪುನ: ಕೆಲಸಕ್ಕೆ ಹಾಜರಾಗಬೇಕೆಂಬ ಸುಪ್ರೀಂಕೋರ್ಟಿನ ಆಜ್ಞೆಯನ್ನು ಧಿಕ್ಕರಿಸು ವಂತಹ ಉದ್ಧಟತನ ವರ್ತನೆಯನ್ನು ಅಧಿಕಾರಿಗಳು ಮಾಡುತ್ತಿದ್ದಾರೆ. ಮಾನ್ಯ ರಾಜ್ಯಪಾಲರ ಭಾಷಣ ದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಲಾಗಿದೆ. ಕಾರ್ಮಿಕರ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಿದ್ದಾರೆ. ಕೆಲವೊಂದು ದೋಷಗಳು ಇರಬಹುದು, ನಮ್ಮ ರಾಜ್ಯದ ಸತ್ಯಚಿತ್ರವನ್ನು ನಮ್ಮ ಮುಂದಿಟ್ಟಿದ್ದಾರೆ. ಹಲವಾರು ದೋಷಗಳಿದ್ದರೂ ಅವನ್ನು ಮುಚ್ಚಿಡುವಂತಹ ಕೆಲಸವನ್ನು ಮಾಡದೇ ಸತ್ಯಚಿತ್ರವನ್ನು ನಮಗೆ ತೋರಿಸಿದ್ದಾರೆ. ಮಾನ್ಯ ರಾಜ್ಯಪಾಲರ ಭಾಷಣವನ್ನು ನಾನು ಸಮರ್ಥನೆ ಮಾಡುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ಸದಸ್ಯರು ಬಹಳವಾಗಿ ಚರ್ಚೆ ಮಾಡಿದ್ದಾರೆ. ಇದರ ಮೇಲೆ ಬೆಳಕನ್ನೂ ಕೂಡ ಚೆಲ್ಲಿದ್ದಾರೆ. ರಾಜ್ಯಪಾಲರು ೧೯೮೬ನೇ ಜನವರಿ ೨೦ನೇ ತಾರೀಖು ಮತ್ತು ೧೯೮೫ನೇ ಇಸವಿ ಮಾರ್ಚಿ ೨೫ನೇ ತಾರೀಖು ಇಲ್ಲಿ ಭಾಷಣವನ್ನು ಮಾಡಿದ್ದಾರೆ. ಆ ಎರಡನ್ನೂ ನಾವು ಹೋಲಿಸಿ ನೋಡಿದರೆ ವಿಶೇಷವಾದ ವ್ಯತ್ಯಾಸ ಏನೂ ಕಾಣಲಿಲ್ಲ ವ್ಯತ್ಯಾಸ ಅಂದರೆ ಬರಗಾಲದ ವಿಚಾರದಲ್ಲಿ ಬಹಳ ದೀರ್ಘ ವಾಗಿ ಭಾಷಣ ಮಾಡಿರುವುದನ್ನು ಬಿಟ್ಟರೆ, ಉಳಿದದ್ದರಲ್ಲಿ ವ್ಯತ್ಯಾಸ ಏನು ಕಾಣಲಿಲ್ಲ. ಮತ್ತು ೧೯೮೫ನೇ ಇಸವಿಯಲ್ಲಿ ಏನು ನಿಲುವನ್ನು ತಾಳಿದ್ದರು, ರಾಜ್ಯ ಸರ್ಕಾರದ ಧ್ಯೇಯಧೋರಣೆಯನ್ನು ಏನು ವಿಶ್ಲೇಷಣೆ ಮಾಡಿದ್ದರು, ಅದನ್ನೆಲ್ಲಾ ಕೈಬಿಟ್ಟಿದ್ದಾರೆ. ಬಡವರ ಬಗ್ಗೆಯಾಗಲಿ, ಅತಿ ಬಡವರ ಬಗ್ಗೆಯಾಗಲಿ, ಕಾರ್ಮಿಕರ ಬಗ್ಗೆಯಾಗಲಿ ಮತ್ತು ವ್ಯವಸಾಯ ಕಾರ್ಮಿಕರ ಬಗ್ಗೆಯಾಗಲಿ ಸಹಕಾರಿ ಸಂಘಗಳ ಮುಖಾಂತರ ಯಾವ ರೀತಿಯಿಂದ ಪ್ರಜಾಪ್ರಭುತ್ವದ ಕೆಲಸಕಾರ್ಯಗಳನ್ನು ಮಾಡಬಹು ದಾಗಿತ್ತು, ಅದರ ಬಗ್ಗೆ ಏನನ್ನು ೧೯೮೫ನೇ ಇಸವಿಯಲ್ಲಿ ಹೇಳಿದ್ದರು, ಅದನ್ನೆಲ್ಲಾ ರಾಜ್ಯಪಾಲರು ಕೈಬಿಟ್ಟಿದ್ದಾರೆ. ರಾಜ್ಯಪಾಲರು ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಣೆ ಮಾಡುವುದರಲ್ಲಿ ತಪ್ಪಿದ್ದಾರೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಹಿಂದೆ ನಾನು ಹಲವಾರು ಭಾರಿ ರಾಜ್ಯಪಾಲರು ಭಾಷಣವನ್ನು ಏತಕ್ಕೆ ಮಾಡಬೇಕು ? ರಾಜ್ಯಪಾಲರ ಭಾಷಣದ ಮೇಲೆ ಏತಕ್ಕೆ ವಂದನೆಯನ್ನು ಅರ್ಪಿಸಬೇಕು, ಎನ್ನುವುದರ ಬಗ್ಗೆ ವಿಶ್ಲೇಷಣೆಯನ್ನು ಮಾಡಿದ್ದೆ. ಮತ್ತೆ ಮಾನ್ಯ ಸದಸ್ಯರ ಗಮನ ಕ್ಕಾಗಿ ಅವರ ಧ್ಯೇಯಧೋರಣೆಗಳ ಬಗ್ಗೆ ಅವರ ಕರ್ತವ್ಯದ ಬಗ್ಗೆ ನಾನು ಹೇಳಬಯಸುವುದೇನೆಂದರೆ, ರಾಜ್ಯಾಂಗದ ೧೭೬ನೇ ಕಲಮಿನ ಪ್ರಕಾರ,--

> "At the commencement of the first session after each general election to the Legislative Assembly and at the commencement of the first session of each year, the Governor shall address the Legislative Assembly, in the case of a State having a Legislative Council, both House assembled together and inform the Legislature of the causes of its summons."

ಕಾಸಸ್ ಆಫ್ ಇಟ್ಸ್ ಸಮನ್.--ಇದರ ಮೇಲೆ ಸಮನ್ ಮಾಡಬೇಕು. ಇಲ್ಲದಿದ್ದರೆ ಕರೆಯುವುದಕ್ಕಾಗುವುದಿಲ್ಲ. Further there is a provision.--

> "Provision shall be made by the rules regulating the procedure of the House or either House for the allotment of time for discussion of the matters referred to in such Address".

Keith in the Seventh Edition of Ridges' Constitutional Law has written as follows ;

"The business of each session is invariably opened by a speech from the Throne, dealing with the general political situation, and indicating in outline the purposes for which the Parliament has been summoned. The speech is read either by the Sovereign in person, or, if Parliament is opened by commission, by the Lord Chancellor, the Commons having been in the one case commanded, or in the other case desired, to attend at the bar of the House of Lords. The speech deals in outline with the general political outlook, the legislative measures to be introduced during the session, and in a portion addressed to the Commons alone calls attention to the requirements of the Crown for supplies to carry on the government of the country. The speech having been read, the Commons retire. and in each House an obsolete bill is read for the first time in order to mark the right of the two Houses to initiate legislation independently of the King's speech" ,ರಾಜ್ಯಪಾಲರು ಇಲ್ಲಿ ಭಾಷಣ ಮಾಡುವಾಗ ಈ ಸರ್ಕಾರ ಯಾವ ಯಾವ ಕಾನೂನುಗಳನ್ನು ತರುವುದಕ್ಕೆ ಇಚ್ಛೆಪಟ್ಟಿದೆ. ಈ ಸರ್ಕಾರ ಮುಂದಿನ ಸಾಲಿನಲ್ಲಿ ಯಾವ ಯಾವ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಇಚ್ಛೆಪಟ್ಟಿದೆ.ಸರ್ಕಾರದ ಧ್ಯೇಯಧೋರಣೆಗಳೇನು ಹಾಗೂ ಅವರಕಾರ್ಯಕ್ರಮಗಳಿಂದ ಯಾರಿಗೆ ಅನುಕೂಲವಾಗುವುದು ಸಮಾಜದಲ್ಲಿರತಕ್ಕ ಬಡವರನ್ನು ಉದ್ಧಾರ ಮಾಡುವುದಕ್ಕಾಗಿ ಅಥವಾ ಕಾರ್ಮಿಕರ ಉನ್ನತಿಯ ಬಗ್ಗೆ ಕೆಲಸ ಮಾಡುವುದಕ್ಕಾಗಿ ಯಾವರೀತಿಯ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ ಎಂಬ ಎಲ್ಲಾ ವಿಚಾರಗಳನ್ನು ಅವರ ಭಾಷಣದಲ್ಲಿ ಅಳವಡಿಸಲೇಬೇಕು. ಅದನ್ನು ಮಾಡದಿದ್ದರೆ ಅವರ ಕರ್ತವ್ಯ ಲೋಪವಾಗುತ್ತದೆ. ನಾನೂ ಅವರ ಭಾಷಣವನ್ನು ನೋಡಿದ್ದೇನೆ. ತಾವು ಓದಿದ್ದೀರಿ. ಮಾನ್ಯಸದಸ್ಯರಿಗೆಲ್ಲರಿಗೂ ಗೊತ್ತಿದೆ. ಈ ಭಾಷಣದಲ್ಲಿ ಇಂತಹ ಧ್ಯೇಯಧೋರಣೆಗಳು ಇವೆ, ಇಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ, ಇಂತಹ ಕಾನೂನನ್ನು ತರುತ್ತೇವೆ, ಇಂತಹ ಉದ್ದೇಶವಿದೆ ಎಂಬುದನ್ನು ನಾನು ನೋಡಿಯೇ ಇಲ್ಲ. ಆದ್ದರಿಂದ ಇಂತಹ ಭಾಷಣವನ್ನು ಮಾಡಿದಕ್ಕಾಗಿ ರಾಜ್ಯಪಾಲರಿಗೆ ವಂದನೆಯನ್ನು ಅರ್ಪಿಸಬೇಕೇ ಎನ್ನುವುದೇ ನನ್ನ ಪ್ರಶ್ನೆ. ಕರ್ತವ್ಯದ ಬಗ್ಗೆ ಲೋಪದ ಬಗ್ಗೆ ಇನ್ನೊಂದು ಮಾತನ್ನು ತಮಗೆ ಹೇಳುತ್ತಿದ್ದೇನೆ. According to Article 154.--Executive Power of State.-

"The executive power of the State shall be vested in the Governor and shall be exercised by him either directly or through officers subordinate to him in accordance with this Constitution"

ಇದರಲ್ಲಿ ರಾಜ್ಯಪಾಲರ ಕರ್ತವ್ಯವೇನು ಹಾಗೂ ಅವರ ಜವಾಬ್ದಾರಿ ಏನು ಎಂಬುದನ್ನು ನೋಡಬೇಕು. ಈ ಸರ್ಕಾರದವರು ರಾಜ್ಯಾಂಗದ ಪ್ರಕಾರ ಕರ್ತವ್ಯ ನಿರ್ವಹಣೆ ಮಾಡಿದ್ದಾರೆಯೋ ಅಥವಾ ಇಲ್ಲವೇ ಎಂಬುದನ್ನು ಅವರು ನೋಡಬೇಕು. ಸರ್ಕಾರದವರೇನಾದರೂ ರಾಜ್ಯಾಂಗದ ವಿರುದ್ಧವಾಗಿ ಹೋಗಿದ್ದರೆ ಅದನ್ನು ತಡೆಹಾಕುವಂತಹದ್ದು ಅವರ ಕರ್ತವ್ಯ ಉಂಟು. ಇಂತಹ ಕೆಲಸವನ್ನು ಅವರು ಯಾವ ರೀತಿ ಮಾಡಿದ್ದಾರೆಂಬುದನ್ನು ಪರಿಶೀಲನೆ ಮಾಡಬೇಕು. ಅವರು ಈ ದಿಸೆಯಲ್ಲಿ ವಿಫಲರಾಗಿದ್ದಾರೆಂಬುದು ನನ್ನ ಭಾವನೆ. ಈ ರಾಜ್ಯಾಂಗದಲ್ಲಿ "Directive Principles of State policy" ಬಗ್ಗೆ ಇದರಲ್ಲಿ ಹಲವಾರು ಕಲಮುಗಳಿವೆ. ಬಡವರ ಬಗ್ಗೆ ಇದೆ. ಮಕ್ಕಳ ಬಗ್ಗೆ ಇದೆ. ರಾಜ್ಯದ ಬಗ್ಗೆ ಇದೆ. ರಾಜ್ಯದ ಅಭಿವೃದ್ಧಿಯ ಬಗ್ಗೆ ಇದೆ. ಆದರ ಬಗ್ಗೆ ಒಂದು ಚಕಾರ ಕೂಡ ಶಬ್ದ ಈ ಭಾಷಣದಲ್ಲಿ ಅವರು ಹೇಳಲಿಲ್ಲ. ಆದ್ದರಿಂದ ಈ ಒಂದು ರಾಜ್ಯಾಂಗದ ಪ್ರಕಾರ ಉದ್ದೇಶ ಕಾಸಸ್ ಆಫ್ ಇಟ್ಸ್ ಸಮನ್ ಅಸೆಂಬ್ಲಿ ಎಂದು ಏನು ಹೇಳಿದ್ದಾರೆ, ಅಂದರೆ ಇವರ ಉದ್ದೇಶ ಏನಿದೆ, ಇವರು ಮುಂದೆ ಮಾಡತಕ್ಕದ್ದು ಏನಿದೆ, ಅವೆಲ್ಲಕ್ಕೂ ತದ್ವಿರುದ್ಧವಾಗಿದೆ. ಆದ್ದರಿಂದ ನಾವು ಅವರಿಗೆ ವಂದನೆಯನ್ನು ಅರ್ಪಿಸತಕ್ಕಂತಹ ಅವಶ್ಯಕತೆ ನನಗಂತೂ ಕಾಣಲಿಲ್ಲ. ಇವರು ರಾಜ್ಯಾಂಗದ ವಿರುದ್ಧ ಹೋದರೆ.........

ಶ್ರೀ ಡಿ ಮಂಜುನಾಥ್.—Governor is the Head of the State Headof the Executive ತಾವು ಮಂತ್ರಿಗಳಾಗಿದ್ದಂತಹವರು, ತಾವೇ ಈ ರೀತಿ ಹೇಳಿದರೆ ಹೇಗೆ ಸ್ವಾಮಿ ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಭಾಷಣ ಮಾಡುವಾಗ ಶ್ರೀಮಾನ್ ಮಂಜುನಾಥ್‌ರವರು ಇದನ್ನು ಬಹಳ ಮಹತ್ವವಾದ ವಿಷಯವೆಂದು ತಿಳಿದುಕೊಂಡು ಹಗುರವಾದ ವಿಷಯವನ್ನು ನಮ್ಮ ಮುಂದೆ ಹೇಳಿದ್ದಾರೆ. ಮಂತ್ರಿಯಾಗಿದ್ದಕ್ಕೂ ನಾನು ಇಲ್ಲಿ ಭಾಷಣ ಮಾಡುವುದಕ್ಕೂ ಏನು ಸಂಬಂಧ ? ರಾಜ್ಯಪಾಲರಾಗುವುದಕ್ಕೂ, ನಾನು ಈ ಮನೆಯ ಸದಸ್ಯನಾಗಿರುವುದಕ್ಕೂ ಏನು ಸಂಬಂಧ ? ನಾನು ಈ ಸಭೆಯಲ್ಲಿದ್ದುಕೊಂಡು ನನ್ನ ಕರ್ತವ್ಯವನ್ನು ಮಾಡುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ.—ಮಹತ್ವವಾದ ವಿಷಯದ ಬಗ್ಗೆ ತಾವು ಭಾಷಣ ಮಾಡುತ್ತಿದ್ದೀರಿ. ಅದನ್ನು ಕೇಳುವುದಕ್ಕೆ ನಿಮ್ಮ ಹಿಂದುಗಡೆ ನೋಡಿಕೊಂಡು ಮಾತನಾಡಿ (ಕಾಂಗ್ರೆಸ್ ಸದಸ್ಯರು ಹೆಚ್ಚು ಸಂಖ್ಯೆಯಲ್ಲಿ ಇಲ್ಲದಿರುವುದಕ್ಕೆ)

ಶ್ರೀ ಬಿ. ಬಸವಲಿಂಗಪ್ಪ.—ನೀವೊಬ್ಬರೇ ಸಾಕು, ಟೇಪು ಮಾಡಿಕೊಂಡಿಲ್ಲವೇನು ?

ಉಪಾಧ್ಯಕ್ಷರು.—ಅವರು ಪ್ರತ್ಯೇಕವಾಗಿ ಟೇಪು ಮಾಡಿಕೊಳ್ಳಬೇಕಾಗಿಲ್ಲ. ಇಲ್ಲಿ ಎಲ್ಲವೂ ಟೇಪ್ ಆಗುತ್ತದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಿಮ್ಮ ಟೇಪ್‌ನಿಂದ ಎಲ್ಲ ಜನಗಳಿಗೂ ಗೊತ್ತಾಗಲಿ ಅಂತ.

ಶ್ರೀ ಬಿ. ಬಸವಲಿಂಗಪ್ಪ.—ರಾಜ್ಯಾಂಗದ ಪ್ರಕಾರ ಘಟನಾತ್ಮಕವಾಗಿರಬಹುದು. ಅವರು ತಮ್ಮ ಕರ್ತವ್ಯ ಪಾಲನೆ ಮಾಡದೇ ಹೋದರೆ ಸರ್ಕಾರದವರು ಉದ್ದೇಶಪೂರ್ವಕವಾಗಿ ಡೈರೆಕ್ಟೀವ್ ಪ್ರಿನ್ಸಿಪಲ್ ಆಫ್ ದಿ ಸ್ಟೇಟ್, ರಾಜ್ಯಾಂಗದ ನಿರ್ದೇಶನಗಳನ್ನು ಅಳವಡಿಸದೆ ಹೋದರೆ ಸೂಕ್ತ ಸಲಹೆಯನ್ನು ಕೊಡತಕ್ಕಂತಹದ್ದು ಅವರ ಕರ್ತವ್ಯ ಉಂಟು. ರಾಜ್ಯಾಂಗದಲ್ಲಿ ಮಾಡಿರತಕ್ಕ ಕಲಮುಗಳಲ್ಲಿ ಹೇಳಿರುವಂತೆ ಜಾರಿಗೆ ಕೊಡಿ, ಒಂದು ವೇಳೆ ಜಾರಿಗೆ ಕೊಡದಿದ್ದರೆ ಜಾರಿಗೆ ಕೊಡುತ್ತಿಲ್ಲ ವಿರುದ್ಧವಾಗಿ ನಡೆಯುತ್ತಿದ್ದಾರೆ ಎಂದು ಹೇಳತಕ್ಕಂತಹ ಹಕ್ಕು ಅವರಿಗೆ ಉಂಟು. ಅದ್ಯಾವುದನ್ನೂ ನಾನು ನೋಡಿಲ್ಲ. ನಿಮ್ಮ ವರ್ಗದವರ ಬಗ್ಗೆ ನಾನು ಎಂದೆಂದೂ ಮಾತನಾಡಿರಲಿಲ್ಲ. ಈ ಸಾರಿ ಪ್ರಾರಂಭ ಮಾಡಿದ್ದೇನೆ. ಅದಕ್ಕೆ ಕಾರಣವೇನೆಂದರೆ, ನನ್ನ ಯುವಕ ಸದಸ್ಯರು ಬಂದಿದ್ದಾರೆ, ಅವರು ನನ್ನಿಂದ ಅದನ್ನು ಕೇಳಿ

ತಿಳಿದುಕೊಂಡು ಅವರೂ ಅದರ ಬಗ್ಗೆ ಏನಾದರೂ ಸಹಾಯ ಮಾಡಬಹುದು, ಅವರೂ ಕೂಡ ಹೋರಾಟ ಮಾಡುವುದಕ್ಕೆ ಪ್ರಯತ್ನಪಡಲಿ ಎಂಬುದೇ ನನ್ನ ಉದ್ದೇಶ. ಇಲ್ಲದಿದ್ದರೆ ನಾನು ಹೇಳುತ್ತಿರಲಿಲ್ಲ. ರಾಜ್ಯಾಂಗ ಜಾರಿಗೆ ಬಂದು ೨೮ ವರ್ಷಗಳಾದವು. ನಿಮ್ನವರ್ಗದವರಿಗೆ ಸರ್ಕಾರಿ ನೌಕರಿಯಲ್ಲಿ ಮೀಸಲಾತಿಯನ್ನು ಇಡಲಾಗಿದೆ. ಅದನ್ನು ಸರ್ಕಾರದವರು ಮಾಡಲಿಲ್ಲವೆಂದು ಆಪಾದನೆ ಮಾಡಿದಾಗ ಅದನ್ನು ಮಾಡಿ ಎಂದು ಹೇಳತಕ್ಕಂತಹದ್ದು ರಾಜ್ಯಪಾಲರ ಕರ್ತವ್ಯ ಹೌದೋ ಅಲ್ಲವೋ? ಅವರು ಇದನ್ನು ಅರಿತು ಕೊಂಡು ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರೆಯೋ ಎಂದು ನಾನು ತಮ್ಮನ್ನು ಕೇಳುತ್ತಿದ್ದೇನೆ.

ಅವರ ಕರ್ತವ್ಯ ಉಂಟು. ಅವರು ಮಾಡಲೇಬೇಕು, ನಿರ್ದೇಶನ ಕೊಡಲೇಬೇಕು. ಸಂವಿಧಾನಕ್ಕೆ ವಿರುದ್ಧವಾಗಿ ನಡೆಯುತ್ತಿದೆ ಎಂದು ಹೇಳಲೇಬೇಕು. ಇನ್ನೊಂದು ಉದಾಹರಣೆ ಹೇಳುತ್ತೇನೆ. ಮೊನ್ನೆ ಸುಳ್ಳು ಜಾತಿ ಪತ್ರಗಳನ್ನು ತೆಗೆದುಕೊಂಡು ಸರ್ಕಾರೀ ನೌಕರರಾಗುವುದಕ್ಕೆ ಹೊರಟ್ಟಿದ್ದಾರೆ. ಅವರು ಸುಳ್ಳು ಜಾತಿ ಪತ್ರವನ್ನು ತೆಗೆದುಕೊಳ್ಳಲು ಪ್ರಯತ್ನಪಟ್ಟರೆ ಅದನ್ನು ತಡೆಯತಕ್ಕದ್ದು ಸರ್ಕಾರದ ಕರ್ತವ್ಯ ಅಲ್ಲವೆ ? ಸರ್ಕಾರದ ಮಂತ್ರಿ ಮಂಡಲದವರು ನಿರ್ಣಯ ಮಾಡಿ ಯಾರು ಯಾರು ಸುಳ್ಳು ಜಾತಿ ಪತ್ರಗಳನ್ನು ತೆಗೆದುಕೊಂಡು ನೌಕರಿಗೆ ಸೇರಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳುವುದು ಬೇಡವೆ ? ಅದನ್ನು ಬಿಟ್ಟು ಯಾರ್ಯಾರು ಈ ರೀತಿ ನೌಕರಿಗೆ ಸೇರಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದ್ದಾರೆ ಅವರ ಮೇಲೆ ನಿರ್ಬಂಧ ಹಾಕಬೇಡಿ ಎಂದು ನಿರ್ಣಯ ಮಾಡಿದ್ದಾರೆ. ಇದು ರಾಜ್ಯಾಂಗಕ್ಕೆ ವಿರುದ್ಧವಾದ ನೀತಿ. ಸಂವಿಧಾನದ ಷೆಡ್ಯೂಲ್-೩ರ ಪ್ರಕಾರ ರಾಜ್ಯಾಂಗದ ನಿಷ್ಠೆಗೆ ಬದ್ಧರಾಗಿರುತ್ತೇವೆಂದು ಏನು ನೀವು ಪ್ರಮಾಣ ಮಾಡಿದ್ದೀರಿ ಅದಕ್ಕೆ ತದ್ವಿರುದ್ಧವಾಗುತ್ತದೆ ನಿಮ್ಮ ಈ ನೀತಿ. ನೀವು ನಿರ್ಣಯ ಮಾಡಿರುವುದು ಕಂಟೆಂಪ್ಟ್ ಆಫ್ ದಿ ಕಾನ್‌ಸ್ಟಿಟ್ಯೂಷನ್ ಆಗುತ್ತದೆ. ಇಂಥದ್ದನ್ನೆಲ್ಲ ಸರ್ಕಾರ ಹೇಗೆ ನಿರ್ಣಯ ಮಾಡುತ್ತದೆ. ರಾಜ್ಯಪಾಲರು ಇದನ್ನೆಲ್ಲ ಏಕೆ ತಡೆಹಿಡಿಯು ವುದಿಲ್ಲ. ಇದರಲ್ಲಿ ಅವರ ಕರ್ತವ್ಯ ಲೋಪ ಆಗುವುದಿಲ್ಲವೆ ? ಸರ್ಕಾರದವರು ಈ ಸಾರಿ ಹೀಗೆ ಮಾಡಿದ್ದಾರೆ. ಮುಂದಿನ ಸಾರಿಯಾದರೂ ಒಳ್ಳೆಯ ರೀತಿಯಲ್ಲಿ ನಡೆದುಕೊಂಡು ಇದ್ದರೆ ಒಳ್ಳೆಯದು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಮನ್ನಣೆ ಇದ್ದರೆ ನೀವು ಇರುತ್ತೀರಿ. ಅವರು ಮನ್ನಣೆ ವಾಪಸ್ಸು ತೆಗೆದುಕೊಂಡರೆ ನೀವು ಇರುವುದಿಲ್ಲ, ಬೇರೆಯವರು ಬರುತ್ತಾರೆ. ಆದರೆ ಸರ್ಕಾರ ನಡೆಸುವಾಗ ತಮ್ಮ ಕರ್ತವ್ಯವನ್ನು ಚಾಚೂ ತಪ್ಪದೆ ನಿರ್ವಹಿಸತಕ್ಕದ್ದು ಒಳ್ಳೆಯದೆಂದು ಹೇಳುತ್ತೇನೆ,

ಎರಡನೆಯದಾಗಿ, ೨೦ ಅಂಶಗಳ ಕಾರ್ಯಕ್ರಮದಲ್ಲಿ ಇಂಡಿಯಾ ದೇಶದಲ್ಲಿ ಕರ್ನಾಟಕ ಸರ್ಕಾರದವರು ೨ನೇ ಸ್ಥಾನಗಳಿಸಿದ್ದಾರೆಂದು ರಾಜ್ಯಪಾಲರು ಹೇಳಿದ್ದಾರೆ. ಈ ಬಗ್ಗೆ ಸಂದರ್ಶನ ಮಾಡುವ ಅಧಿಕಾರಿಗಳು ಕೇಂದ್ರದಿಂದ ಬರುತ್ತಾರೆ, ಪ್ರಜಾಪ್ರತಿನಿಧಿಗಳು ಸಂದರ್ಶನ ಮಾಡುವುದಿಲ್ಲ. ಹಣದ ವಿಚಾರದಲ್ಲಿ ಮತ್ತು ಖರ್ಚಿನ ಬಾಬಿನ ವಿಚಾರದಲ್ಲಿ ಏನು ಅಂಕಿ ಅಂಶಗಳನ್ನು ಕೊಟ್ಟಿರುತ್ತಾರೆ ಅದರ ಮೇಲೆ ೨ನೇ ಸ್ಥಾನ ಪಡೆದಿದೆ. ಹಣ ಖರ್ಚಾಗಿರಬಹುದು, ಅಂಕಿ ಅಂಶಗಳನ್ನು ಕೊಟ್ಟಿರಬಹುದು, ಆದರೆ ವಾಸ್ತವಿಕವಾಗಿ ಜನಗಳಿಗೆ ಅನುಕೂಲವಾಗಿದೆಯೋ ಇಲ್ಲವೇ ಎಂಬುದನ್ನು ನೋಡುವುದಾದರೆ ಅನುಕೂಲವಾಗಿಲ್ಲ. ನನ್ನ ತಾಲ್ಲೂಕಿನಲ್ಲಿ ೨೦ ಅಂಶಗಳ ಕಾರ್ಯಕ್ರಮದ ಪ್ರಕಾರ ಏನು ಅನುಕೂಲ ವಾಗಿದೆ ಎಂದು ಪ್ರಶ್ನೆ ಹಾಕಿದರೆ, ನಮ್ಮ ತಾಲ್ಲೂಕಿಗೆ ಎಷ್ಟು ಹಣವನ್ನು ಸರ್ಕಾರದವರು ಮಂಜೂರ್ಮಾಡಿದ್ದಾರೆ ಅದನ್ನು ಇವತ್ತಿನವರೆಗೆ ಖರ್ಚು ಮಾಡಲಿಕ್ಕೆ ಪ್ರಾರಂಭ ಮಾಡಿಲ್ಲ. ಯಾವ ಯಾವುದೋ ಬಾಬುಗಳಿಗೆ ಮಂಜೂರಾಡಿರುವ ಹಣವನ್ನು ಖರ್ಚು ಮಾಡಬೇಡಿ ಎಂದು ವಾಪಸ್ಸು ತೆಗೆದುಕೊಂಡಿದ್ದಾರೆ. ನೀವು ಕಾಗದದ ಮೇಲೆ ಮಂಜೂರಾತಿ ಮಾಡಿದ್ದೇವೆಂದು ಹೇಳಿ ಮತ್ತೆ ಹಣವನ್ನು ವಾಪಸ್ಸು ತೆಗೆದುಕೊಂಡು (ನಿಮ್ಮ ಲಿಕ್ವಿಡೇಟ್ ಪೊಷಿಷನ್ ಮೆಯಿಂಟೇನ್ ಮಾಡುವುದ ಕ್ಕೋಸ್ಕರ ವಾಪಸ್ಸು ತೆಗೆದುಕೊಂಡು) ಹಣ ಇದೆ ಎಂದು ಜಗತ್ತಿಗೆ ತೋರಿಸಲಿಕ್ಕೆ ಮಾಡಿರುವ ಸಾಹಸವಾಗಿದೆ. ಇದನ್ನೆಲ್ಲ ನೋಡಿದಾಗ ನಿಮ್ಮದು ೨ನೇ ಸ್ಥಾನ ಅಲ್ಲ, ಯಾವ ಸ್ಥಾನದಲ್ಲಿದೆ ಎಂದು ಅರ್ಥವಾಗುವುದಿಲ್ಲ. ನಿಜವಾಗಿ ಸ್ಥಳ ಪರಿಶೀಲನೆ ಮಾಡಿ ಎಷ್ಟು ಹಣ ಕೊಟ್ಟಿದ್ದಾರೆ, ಎಷ್ಟು ಹಣ ಖರ್ಚು ಮಾಡಿದ್ದಾರೆಂಬುದನ್ನು ನೋಡಿದರೆ ನಿಮಗೆ ೧೦ನೇ ಸ್ಥಾನ ಬರುತ್ತದೆ. ಯಾವ ಬಾಬಿಗೂ ಸರಿಯಾಗಿ ಖರ್ಚು ಮಾಡಿಲ್ಲ. ಕೇಂದ್ರ ಸರ್ಕಾರದವರು ಏನು ಹಣ ಕೊಟ್ಟಿದ್ದಾರೆ ಅದೆಲ್ಲವನ್ನು ನಿಯಮಗಳಿಗೆ ವಿರುದ್ಧವಾಗಿ ಖರ್ಚು ಮಾಡಿದ್ದೀರೆಂದು ಹಿಂದೆಯೂ ಹೇಳಿದ್ದೇನೆ ಮತ್ತು

ಇವತ್ತು ಹೇಳುತ್ತಿದ್ದೇನೆ. ಈಗ ಸಮಯಾಭಾವ ಇರುವುದರಿಂದ ವಿವರವನ್ನು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ವೀರಣ್ಣ.—ಸಮಯ ತೆಗೆದುಕೊಂಡೇ ಹೇಳಿ. ಕೇಂದ್ರ ಸರ್ಕಾರದಿಂದ ಯಾವ ಯಾವ ಬಾಬುಗಳಿಗೆ ಖರ್ಚು ಮಾಡುವುದಕ್ಕೆ ಹಣವನ್ನು ಕೊಟ್ಟಿದ್ದರು. ಅದನ್ನು ನಾವು ಬೇರೆ ಯಾವುದಕ್ಕೆ ಖರ್ಚು ಮಾಡಿದ್ದೇವೆಂದು ವಿವರವಾಗಿ ಪಟ್ಟಿ ಮಾಡಿ ಹೇಳಿದರೆ ಎಲ್ಲರಿಗೂ ಗೊತ್ತಾಗುತ್ತದೆ. ನಾವು ತಿಳಿದುಕೊಳ್ಳೋಣ.

ಶ್ರೀ ಬಿ. ಬಸವಲಿಂಗಪ್ಪ.—ಬಹಳ ಸಂತೋಷ. ಆ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ, ಉತ್ತರ ಕೊಡುತ್ತಾರೆ. ಆದರೆ ನಾನು ಈಗ ಮಾತನಾಡುತ್ತಿರುವುದಕ್ಕೆ ಆಧಾರ ಇಲ್ಲವೆಂದು ತಿಳಿದುಕೊಳ್ಳಬೇಡಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಬಸವಲಿಂಗಪ್ಪನವರು ಮಾಡಿದ ಆರೋಪಗಳಿಗೆ ಬಸವಲಿಂಗಪ್ಪನವರೇ ಆಧಾರ ಎಂದು ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಕೃಷ್ಣಪ್ಪನವರು ನಾನು ಆಧಾರವೆಂದು ತಿಳಿದುಕೊಂಡಿದ್ದರೆ ಅಷ್ಟೇ ಸಂತೋಷ. ಅಷ್ಟು ನಂಬಿಕೆ, ಭರವಸೆ ಇಟ್ಟುಕೊಂಡು ವ್ಯವಹಾರ ಮಾಡಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಕೆಲವು ವಿಚಾರಗಳಲ್ಲಿ ನಂಬಿಕೆ ಇದೆ. ಯಾರಾದರೂ ಸರ್ಕಾರದ ಮೇಲೆ ಆರೋಪಗಳನ್ನು ಮಾಡಿದರೆ ಆಧಾರದ ಸಹಿತ ಮಾಡಿ ಎಂದು ಹೇಳುತ್ತೇನೆ. ಒಂದು ಪಕ್ಷ ನಾವು ಏನಾದರೂ ಆಧಾರಗಳನ್ನು ಹೇಳದೆ ಆರೋಪ ಮಾಡಿದಾಗ ಯಾರಾದರೂ ನಮ್ಮನ್ನು ಕೇಳಿದರೆ ಬಸವಲಿಂಗಪ್ಪನವರು ಹೇಳಿದರು ಎಂದು ಹೇಳುವುದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಬಿ. ಬಸವಲಿಂಗಪ್ಪ.—ರಾಜ್ಯಪಾಲರ ಭಾಷಣವನ್ನು, ನೀವು ತಿಳಿದುಕೊಳ್ಳಬೇಕು. ಈಗ ತಾನೇ ಸಂವಿಧಾನವನ್ನು ಓದಿ ಹೇಳಿದೆ. ಧ್ಯೇಯ ಧೋರಣೆಗಳನ್ನು, ಕಾರ್ಯಕ್ರಮಗಳನ್ನು ಸ್ಪಷ್ಟೀಕರಿಸಬೇಕು. ಅಂಕಿ ಅಂಶಗಳ ವಿವರಗಳಿಗೆ ಪ್ರಶ್ನೆ ಕೇಳಿದ್ದೇನೆ, ಅವರಿಂದ ಉತ್ತರ ಬಂದಮೇಲೆ ಹೇಳುತ್ತೇನೆ. ಸರ್ಕಾರ ತನ್ನ ಆಡಳಿತ ಯಂತ್ರವನ್ನು ಸ್ವಚ್ಛಗೊಳಿಸುವ ಕಾರ್ಯಕ್ರಮ ಹಾಕಿಕೊಂಡಿದೆ, ಲಂಚ ನಿರೋಧ ನೀತಿಗಳನ್ನು ಇಟ್ಟುಕೊಂಡಿದೆ, ನೌಕರರನ್ನು ಸತ್ಯಸಂಧರನ್ನಾಗಿ ಮಾಡುವ ಕಾರ್ಯಕ್ರಮ ಹಾಕಿಕೊಂಡಿದೆ, ಯಾವ ನೌಕರರೂ ಲಂಚ ತೆಗೆದುಕೊಳ್ಳಬಾರದು, ಜನಸೇವೆ ಮಾಡಬೇಕು ಹೀಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆಂದು ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಂಡಿದ್ದಾರೆ. ಹೈಕೋರ್ಟಿನಿಂದ ಬಂದ ತೀರ್ಪಿನ ಬಗ್ಗೆ ಈಗ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅದು ಪುನಃ ಇಲ್ಲ ಚರ್ಚೆಗೆ ಬರುವುದಿದೆ. ಆ ತೀರ್ಪಿನ ಆಧಾರದ ಮೇಲೆ ಸತ್ಯಸಂಧರು ಇದ್ದಾರೆಯೋ ಇಲ್ಲವೇ ಎಂಬುದನ್ನು ಹೇಳಬಹುದು. ನೀವು ಯಾರು ಎಂಬ ಬಗ್ಗೆ ಅವರು ತೀರ್ಪು ಕೊಟ್ಟಿದ್ದಾರೆ. ನಿಮಗೆ ಆಡಳಿತ ಮಾಡಲಿಕ್ಕೆ ನಿಮಗೆ ಇನ್ನೂ ಎಷ್ಟು ಸಮಯ ಬೇಕು ? ಆಕಸ್ಮಿಕವಾಗಿ ಅಧಿಕಾರಕ್ಕೆ ಬಂದಿದ್ದೀರಿ. ಕಾಂಗ್ರೆಸ್ಸಿನಲ್ಲಿ ಇದ್ದು ತರಬೇತಿ ಹೊಂದಿದವರು ನಿಮ್ಮಲ್ಲಿ ಇದ್ದಾರೆ. ನಿಮಗೆ ಆಡಳಿತವನ್ನು ಹೇಗೆ ನಡೆಸಬೇಕೆಂಬುದನ್ನು ಕಲಿಯುವುದಕ್ಕೆ ಇನ್ನು ಎಷ್ಟು ದಿವಸಬೇಕು ? ಇನ್ನೂ ಕಲಿಯುವುದಕ್ಕೆ ಆಗಿಲ್ಲವೆ ? ಸ್ವಲ್ಪ ಅಭ್ಯಾಸ ಮಾಡಿ. ಯಾವ ರೀತಿ ಅಧಿಕಾರಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕೆಂಬುದನ್ನು ಕಲಿಯಬೇಕು. ಕಲಿತು ಕೆಲಸ ಕಾರ್ಯಗಳನ್ನು ಅವರಿಂದ ಮಾಡಿಸಬೇಕು. ಯಾವ ರೀತಿ ಅವರನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು, ಯಾವ ರೀತಿ ಅವರಿಗೆ ಸೂಚನೆ, ನಿರ್ದೇಶನಗಳನ್ನು ಕೊಡಬೇಕೆಂಬುದನ್ನು ತಿಳಿದುಕೊಳ್ಳಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಬಸವಲಿಂಗಪ್ಪನವರು ಉಚ್ಚ ನ್ಯಾಯಾಲಯದ ತೀರ್ಮಾನಗಳ ಬಗ್ಗೆ ಹಲವಾರು ಸಂದರ್ಭಗಳಲ್ಲಿ ಯಾವ ರೀತಿ ಮಾತನಾಡಿದ್ದಾರೆಂಬುದು ನನ್ನ ಮನಸ್ಸಿನಲ್ಲಿ ಹಸಿರಾಗಿದೆ. ನಾವು ನ್ಯಾಯಾಂಗದ ತೀರ್ಪಿಗೆ ಗೌರವಕೊಡತಕ್ಕ ವಿಚಾರದಲ್ಲಿ ಯಾರೂ ಹಿಂದೆ ಇಲ್ಲ. ಆದರೆ ಬಸವಲಿಂಗಪ್ಪನವರು ಯಾವುದೋ ಒಂದು ಸಂದರ್ಭದಲ್ಲಿ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುತ್ತಾ ಕೆಲವು ತೀರ್ಪುಗಳನ್ನು ಬಹಳ ಕಟುವಾಗಿ ಟೀಕೆ ಮಾಡಿರತಕ್ಕದ್ದನ್ನು ನೋಡಿದ್ದೇನೆ. ಅವರು ಉಚ್ಚ ನ್ಯಾಯಾಲಯದ ಬಗ್ಗೆ ಎಷ್ಟು ಗೌರವ ಇಟ್ಟುಕೊಂಡಿದ್ದಾರೆಂಬುದನ್ನು ನೋಡಿದರೆ ಈಗಿನ ಮಾತಿಗೂ ಆಗಿನ ಮಾತಿಗೂ ವ್ಯತ್ಯಾಸ ಕಾಣುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಧನ್ಯವಾದಗಳು. ನನ್ನ ಅಭಿಪ್ರಾಯ ಅವರು ಹೇಳಿದ ಪ್ರಕಾರ ಉಂಟು. ಉಚ್ಚ ನ್ಯಾಯಾಲಯದಲ್ಲಿರತಕ್ಕ ನ್ಯಾಯಾಧೀಶರು ಏನಿದ್ದಾರೆ ಅವರ ಪಟ್ಟಿ ನನ್ನ ಹತ್ತಿರ ಇದೆ. ಅವರು ನ್ಯಾಯಾಧೀಶರಾಗುವುದಕ್ಕೆ ಮುಂಚೆ ಆಸ್ತಿಗಳು ಅವರ ಹೆಸರಿನಲ್ಲಿದ್ದವು. ನ್ಯಾಯಾಧೀಶರಾದ ತಕ್ಷಣ ಹೆಂಡತಿ, ಮಕ್ಕಳ ಹೆಸರಿಗೆ ಮಾಡಿ, ಮನೆಗಳನ್ನು ಪರಭಾರೆ ಮಾಡಿಕೊಂಡು ರೆಂಟ್ ಕಂಟ್ರೋಲ್ ಆ್ಯಕ್ಟ್ ಪ್ರಕಾರ ಅಲಾಟ್ ಮಾಡಿಸಿಕೊಂಡರು.

೩—೩೦ ಪಿ.ಎಂ.

ಉಪಾಧ್ಯಕ್ಷರು.—ನೀವು ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು. ಆದರೆ ಡೈರೆಕ್ಟಾಗಿ, ಜಡ್ಜ್‌ಗಳ ಬಗ್ಗೆ ಹೇಳುವುದು ಅಷ್ಟಾಗಿ ಸರಿಹೋಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಒಂದು ನೀತಿಯನ್ನು ಹಾಕಿಕೊಂಡು ನಡೆಯಬೇಕು. ಇಲ್ಲದೇ ಹೋದರೆ ನ್ಯಾಯಾಲಯ ಕೊಟ್ಟಂಥ ತೀರ್ಪಿಗೆ ತಕ್ಕಂತೆ ಮಾಡಬೇಕು. ಮಾನ್ಯ ಕೃಷ್ಣಪ್ಪನವರು ಹೇಳಿದ್ದು ಸರಿ, ನಾನು ಒಪ್ಪುತ್ತೇನೆ. ಇಂತಹವರು ಮಾರ್ಗದರ್ಶನ ಹಾಕಿಕೊಡಬೇಕು. ಪ್ರಜಾಪ್ರಭುತ್ವ ಮತ್ತು ಉಚ್ಚ ನ್ಯಾಯಾಲಯಗಳಿಗೆ ಮರ್ಯಾದೆ ಕೊಡತಕ್ಕಂಥವರು, ಆ ಪೀಠದಿಂದ ಎಷ್ಟು ಕೊಡಬೇಕೋ, ಅಷ್ಟು ಕೊಡುತ್ತಾರೆ, ನೀವು ಅದಕ್ಕೆ ತಲೆಬಾಗಿ ಹೊರಗೆ ಹೋಗಬೇಕು.

ಶ್ರೀ ವೇದಾಂತ ಹೆಮ್ಮಿಗೆ.—ಯಾವುದೇ ಬರಲೀ, ಮುಖ್ಯಮಂತ್ರಿಗಳಿಂದ ಹಿಡಿದು, ಎಲ್ಲರೂ ಲೋಕಾಯುಕ್ತಕ್ಕೆ ಬರುವುದಾಗಿ ಹೇಳಿದ್ದಾರೆ. ತಾವು ರಾಜ್ಯಾಂಗವನ್ನು ತಿದ್ದುಪಡಿ ಮಾಡಿ, ಪ್ರಧಾನಿಯಿಂದ ಹಿಡಿದು, ರಾಷ್ಟ್ರಾಧ್ಯಕ್ಷರು, ಉಪರಾಷ್ಟ್ರಾಧ್ಯಕ್ಷರವರೆಗೂ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾಡಿದಿರಿ ?

ಶ್ರೀ ಬಿ. ಬಸವಲಿಂಗಪ್ಪ.—ಇದು ವೇದಾಂತ ಹೆಮ್ಮಿಗೆಯವರ ಮಾತು.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಇವರ ಕೈಗೆ ಇನ್ನೂ ರಾಜ್ಯಾಂಗ ಸಿಕ್ಕಿಲ್ಲ. ಸಿಕ್ಕಿದರೆ ಮಾಡುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಕೃಷ್ಣಪ್ಪನವರು ಮಧ್ಯೆ ಬಂದುದರಿಂದ ನಾನು ದಾರಿಯನ್ನು ಬಿಟ್ಟೆ. ಸರ್ಕಾರಿ ನಿರ್ದೇಶನ ಮತ್ತು ಹತೋಟಿ ಇಟ್ಟುಕೊಳ್ಳುವುದನ್ನು ಕಲಿಯಲಿಲ್ಲ, ಇದನ್ನು ಕಲಿಯಬೇಕೆಂದು ನಾನು ಒತ್ತಾಸೆ ಮಾಡುತ್ತೇನೆ.

ಉಪಾಧ್ಯಕ್ಷರು.- ಪಟೇಲರು ಹೇಳಿದ ಕುದುರೆ ವಿಚಾರ ಹೇಳಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಕುದುರೆ ವಿಚಾರ ಬಿಡಿ. ಅವರ ಕುದುರೆ, ಇವರ ಕುದುರೆ ಯಾರಾದರೂ ಹತ್ತಿಕೊಂಡು ಹೋಗಲಿ. ಮಾನ್ಯ ಪಟೇಲರು ಸಾಯಂಕಾಲ ಒಂದು ಕುದುರೆ ಹತ್ತುತ್ತಾರೆ, ಬೆಳಿಗ್ಗೆ ಒಂದು ಕುದುರೆ ಹತ್ತುತ್ತಾರೆ. ಈ ಸರ್ಕಾರಿ ನೌಕರರು ಏನಿದ್ದಾರೆ, ಅವರಲ್ಲಿ ಗುಮಾಸ್ತರು ಇದ್ದಾರೆ, ಜವಾನರು ಇದ್ದಾರೆ. ಜವಾನರಿಗೆ ಸಂಘ ಸಂಸ್ಥೆಗಳಿಗೆ ಅವಕಾಶ ಮಾಡಿಕೊಡುತ್ತೀರಿ. ಕ್ಲಾಸ್–೧ ಕ್ಲಾಸ್–೨ ನೌಕರರು ಸಂಘ ಮಾಡಿದರೆ ಅವರಿಗೂ ಮನ್ನಣೆ ಕೊಡುತ್ತೀರಿ. ಗುಮಾಸ್ತರಿಗೂ ಮನ್ನಣೆ ಕೊಡುತ್ತೀರಿ. ಹೀಗಾದರೆ ಹೇಗೆ ಸರ್ಕಾರವನ್ನು ನಡೆಸುವುದಕ್ಕಾಗುತ್ತದೆ, ಇಂಡಸ್ಟ್ರೀಸ್ ಡಿಸ್‌ಪ್ಯೂಟ್ ಆಕ್ಟ್ ಬರುತ್ತದೆಯೋ ? ನಾನು ವಿರೋಧವಾಗಿ ಮಾತನಾಡುತ್ತಿದ್ದೇನೆ ಎಂದಲ್ಲ. ನೀವು ಸರ್ಕಾರ ನಡೆಸಿ, ಆದರೆ ಸಾರ್ವಜನಿಕರಿಗೆ ಅನುಕೂಲವಾಗಬೇಕು. ಅನುಕೂಲ ಆಗಬೇಕಾದರೆ ಎಲ್ಲರನ್ನೂ ಹತೋಟಿಯಲ್ಲಿಟ್ಟುಕೊಳ್ಳಬೇಕು ಈಗ ಚೀಫ್ ಸೆಕ್ರೆಟರಿಯನ್ನು ಇಟ್ಟುಕೊಂಡಿದ್ದೀರಿ. ಅವರು ತಮ್ಮ ಅಧೀನದಲ್ಲಿರತಕ್ಕ ಎಲ್ಲ ನೌಕರರನ್ನೂ ಹತೋಟಿಯಲ್ಲಿಟ್ಟುಕೊಳ್ಳಬೇಕು. ಅವರಿಗೆ ಏನೇನು ಅನುಕೂಲ ಮಾಡಬೇಕೆಂಬ ಬಗ್ಗೆ ನನ್ನ ವಿರೋಧವಿಲ್ಲ. ನಿಷ್ಠೆಯಿಂದ ಸರ್ಕಾರದ ಕಾರ್ಯಭಾರಗಳನ್ನು ನಿರ್ವಹಿಸತಕ್ಕಂಥ ಕರ್ತವ್ಯದೃಷ್ಟಿ ಇಲ್ಲದೇ ಹೋದರೆ ಯಾವರೀತಿ ಸರ್ಕಾರ ನಡೆಸುವುದು ? ಇವತ್ತು ಬರಗಾಲ ಬಂದಿದೆ. ಬರಗಾಲ ಭೀಕರವಾಗಿದೆ. ಇದು ಬರಗಾಲವಲ್ಲ ಕ್ಷಾಮ. ನನ್ನ ಹತ್ತಿರ ಜನವರಿ ೨೬ರ ಇಲ್ಯುಸ್ಟ್ರೇಟೆಡ್ ವೀಕ್ಲಿ ಪತ್ರಿಕೆ ಇದೆ. ಅದರಲ್ಲಿ ಒಂದು ಪಿಚ್ಚರ್ ನೋಡಬೇಕು. ನಿಮಗೆ ಏನಾದರೂ ಕನಿಕರ ಇದ್ದರೆ, ಮಾನವೀಯತೆ ಇದ್ದರೆ ನೀವು ನೋಡಬೇಕು. ಇದರಲ್ಲಿ ಒಬ್ಬ ತಾಯಿ

ಒಂದು ತುತ್ತನ್ನು ಬಾಯಲ್ಲಿ ಇಟ್ಟುಕೊಳ್ಳುವುದನ್ನೂ, ಪಕ್ಕದಲ್ಲಿ ಹಸಿವು ಇರತಕ್ಕಂಥ ಒಂದು ಮಗು ಇರುವ ಚಿತ್ರ ಇದೆ. ಇಂತಹ ಚಿತ್ರವನ್ನು ನಾವು ಕರ್ನಾಟಕದಲ್ಲಿ ನೋಡುತ್ತಿದ್ದೇವೆ.

ಶ್ರೀ ರಮೇಶ್ ಸಿ. ಜಿಗಜಿನಗಿ.—ಕರ್ನಾಟಕದಲ್ಲಿ ಮಾತ್ರವೇ ಅಲ್ಲ, ಬೇರೆ ರಾಜ್ಯಗಳಲ್ಲಿಯೂ ಈ ತರಹ ಚಿತ್ರಗಳನ್ನು ನೋಡುತ್ತಿದ್ದೇವೆ, ಬೇರೆ ರಾಜ್ಯಗಳಲ್ಲೂ ಕ್ಷಾಮ ಇದೆ.

ಶ್ರೀ ಕೆ. ಹೆಚ್. ಪಾಟೀಲ್.—ವಿಜಯನಗರದಲ್ಲಿ, ಒಂದು ಕಾಲದಲ್ಲಿ ಮುತ್ತು, ರತ್ನ, ಹವಳ ಇಟ್ಟುಕೊಂಡು ಮಾರುತ್ತಿದ್ದರು, ಕರ್ನಾಟಕಕ್ಕೆ ಅಧಿಕವಾದ ಹೆಮ್ಮೆ ಇದೆ. ಆದ್ದರಿಂದ ಈ ರಾಜ್ಯವನ್ನು ಬೇರೆ ರಾಜ್ಯಗಳಿಗೆ ಹೋಲಿಸುವುದು ಬೇಡ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಜಿಗಜಿನಗಿಯವರು ಬಡತನದ ಕುಟುಂಬಕ್ಕೆ ಸೇರಿದವರು. ಈಗ ಮಂತ್ರಿಗಳಾಗಿದ್ದಾರೆ. ಅವರು ಸುಖವಾಗಿ ಇರಲಿ. ಆದರೆ ಅನುಭವಿಸಿದ ಬಡತನವನ್ನು ಮರೆಯಬಾರದು. ಅವರು ಚೆನ್ನಾಗಿರಲಿ, ಆದರೆ ಕಷ್ಟವನ್ನು ಮರೆಯಬಾರದು. ಇವತ್ತು ಹೆಣ್ಣುಮಕ್ಕಳು, ವ್ಯವಸಾಯ ಕಾರ್ಮಿಕರು ಸುಮಾರು ೩೫ ಲಕ್ಷ ಜನ ಕೆಲಸವಿಲ್ಲದೆ ಇದ್ದಾರೆ. ನೀವು ಅವರ ಕಡೆ ಯಾವ ರೀತಿಯಾದ ಗಮನ ಕೊಟ್ಟಿದ್ದೀರಿ ? ಬಡತನದ ಬೇಗೆಯಿಂದ ಬಳಲಿ ಕಷ್ಟಪಡುತ್ತಿರುವಾಗ, ನೀವು ನಗುತ್ತಿರುವುದು. ಇವತ್ತು ಈ ಸದನ ನಡೆಯುವುದೇ ನನಗೆ ವಿರೋಧ. ಪ್ರತಿಯೊಬ್ಬರಿಗೂ ಸರ್ಕಾರದ ಹಣ ವಿನಿಯೋಗವಾಗಬೇಕು. ಎಲ್ಲಾ ನೌಕರರನ್ನು ಬಗ್ಗುಬಡಿದು ಜನಗಳ ಸೇವೆ ಮಾಡಬೇಕೆಂಬುದು ನನ್ನ ಸಲಹೆ. ಕರ್ನಾಟಕದ ಬಗ್ಗೆ ಒಂದು ಮಾತು.

I am quoting from the Illustrated weekly dated January 26th 1986.

> "For Karnataka it is worst famine of this Century. The calamity on which the Centre and the State Governments. have already spent Rs. 193 crores on relief works. 16.8 million people and 93 lakh heads of cattle in 18 districts. are today reeling from the consequences of the famine. There consecutive years of drought have abviously taken its toll. Last fortnight, the Hegde Government which seemed and show about what course to follow, finally rolled down by setting up 38 cattle camps, hundreds of such camps will be operational by summar to protect the livestock which could have made its way to slaughter houses. Initiating relief work that will cost the State exchequer Rs. 1 crore a day until mid June".

ಇದು ಆದರಲ್ಲಿರತಕ್ಕಂಥಾದ್ದು ಮಂತ್ರಾಲಯಗಳಿಂದ ಜನ ಸಮೀಕ್ಷೆ ಮಾಡುವುದಕ್ಕೆ ಬರುತ್ತಿದ್ದಾರೆ. ಅವರ ಅಭಿಪ್ರಾಯ ಏನಿದೆ ಎಂದರೆ, ಒಂದು ಸೆಂಟೆನ್ಸ್ ಹೇಳುತ್ತೇನೆ.

> "We do not think anybody starve. There has been no food shortage in drought areas. What has happened in certain States is that they have squandered their money on populist schemes." I think my friends will listen. "They have squandered their money on populist scheme. And have no resilience left."

ಇದು ಬರಗಾಲದ ವಿಚಾರ. ನಾನು ಇವರಿಗೆ ವಿನಯಪೂರ್ವಕವಾಗಿ ಹೇಳುತ್ತಿದ್ದೇನೆ. ಇವರು ಪಾಪ್ಯುಲಿಸ್ಟ್ ಸ್ಕೀಮ್ಸ್‌ಗಳ ಮೇಲೆ ಎಷ್ಟೆಷ್ಟು ಖರ್ಚು ಮಾಡಿದ್ದಾರೆ ಎಂಬುದನ್ನು ನೋಡಬೇಕು. ಮೊನ್ನೆ ಡಾ॥ ಜೀವರಾಜ ಆಳ್ವರವರು ಮಾತನಾಡುತ್ತಾ, ವಿಶ್ವ ಕನ್ನಡ ಸಮ್ಮೇಳನಕ್ಕೆ ೭-೮ ಕೋಟಿ

ರೂಪಾಯಿಗಳನ್ನು ಖರ್ಚು ಮಾಡಿಲ್ಲ, ೩೫ ಲಕ್ಷ ಮಾತ್ರ ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ದಿನಾಂಕ ೨೩–೧–೮೬ರಂದು ನಾವು ಕೇಳಿದ ಪ್ರಶ್ನೆ ೯೩(ಎ)ಗೆ ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ವಿಶ್ವ ಕನ್ನಡ ಸಮ್ಮೇಳನಕ್ಕೆ ಅಂದರೆ ರಂಗಮಂದಿರ ಕಟ್ಟುವುದಕ್ಕೆ ೨,೭೭,೬೧,೭೩೦ ರೂಪಾಯಿಗಳು, ಇತರೆ ಕಟ್ಟಡಗಳಿಗೆ ೪,೪೧,೪೬,೨೧೨ ರೂಪಾಯಿಗಳು, ಪುಸ್ತಕ ಬಿಡುಗಡೆಗಾಗಿ ೩೫,೫೯,೮೪೩ ರೂಪಾಯಿಗಳು. ಒಟ್ಟು ೭,೫೬,೭೩,೭೮೫ ರೂಪಾಯಿಗಳು. ಮತ್ತೆ ಪ್ರಶ್ನೆ ೫೬(ಎ) ೪–೧–೨೬ನೇ ದಿವಸ ಉತ್ತರ ಕೊಟ್ಟಿದ್ದಾರೆ. ಜಾಹಿರಾತಿಗಾಗಿ ೧೯,೧೬,೦೦೦ ರೂಪಾಯಿಗಳು, ಸಿಬ್ಬಂದಿ ವರ್ಗಕ್ಕಾಗಿ ೧೫,೦೦೦ ರೂಪಾಯಿಗಳು, ಊಟ ಮತ್ತಿತರ ವೆಚ್ಚಕ್ಕಾಗಿ ೧೨,೬೮,೦೦೦ ರೂಪಾಯಿಗಳು, ಹೀಗೆ ಒಟ್ಟು ೩೧,೯೯,೦೦೦ ರೂಪಾಯಿಗಳು. ಅಂದರೆ ೩೨ ಲಕ್ಷ. ಎಲ್ಲಾ ಸೇರಿ ಒಟ್ಟು ವೆಚ್ಚ ೭,೮೬,೨೨,೭೮೫ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಈ ಹಣವನ್ನು ಈ ವರ್ಷ ಖರ್ಚು ಮಾಡಿದ್ದಲ್ಲ. ಆ ರಂಗಮಂದಿರವನ್ನು ಕಟ್ಟಬೇಕಾದ್ದರಿಂದ ಅದು ಖರ್ಚಾಗಿರುವುದು. ಹಿಂದಿನ ಸರ್ಕಾರದವರು ಅದನ್ನು ಪ್ರಾರಂಭ ಮಾಡಿದ್ದು. ಇದನ್ನು ಈ ವರ್ಷ ಪೂರ್ತಿಯಾಗಿ ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಇದು ನಂದಲ್ಲ ಫಿಗರ್. ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿರುವುದು.

ಶ್ರೀ ಆರ್. ಎಲ್. ಜಾಲಪ್ಪ.—ನೀವು ಅನುಭವಸ್ಥರು ಇದ್ದೀರಿ. ನೀವೇನೂ ಹೊಸಬರಲ್ಲ. ನಿಮಗೆ ಗೊತ್ತಿದೆ. ಅದೇನೋ ಹೇಳುತ್ತಾರಲ್ಲ "ಜಗವನ್ನು ತೂಗುವವರಿಗೆ ಮಗುವನ್ನು ತೂಗುವುದು ಗೊತ್ತಿಲ್ಲವೇ'' ಸುಮ್ಮ ಸುಮ್ಮನೆ ಮಲಗಿರುವವರನ್ನು ನಾವು ಹೇಗೆ ಎಬ್ಬಿಸುವುದು? ನಿಜವಾಗಿ ಮಲಗಿರುವವರನ್ನು ನಾವು ಎಬ್ಬಿಸಬಹುದು. ಈ ಹಣವನ್ನು ಈ ವರ್ಷ ಖರ್ಚು ಮಾಡಿದ್ದಲ್ಲ.

ಒಬ್ಬ ಮಾನ್ಯ ಸದಸ್ಯರು.—ಸುಮ್ಮನೆ ಮಲಗಿರುವವರನ್ನು ಎಬ್ಬಿಸುವುದು ಕಠಿಣ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಜಾಲಪ್ಪನವರ ವಿಶ್ಲೇಷಣೆಯನ್ನು ಕೇಳಿದ್ದೇನೆ. ನಾನು ಎರಡು ಪ್ರಶ್ನೆಗಳನ್ನು ಕೇಳಿದ್ದೆನು. ಎಷ್ಟೆಷ್ಟು ಖರ್ಚು ಮಾಡಿದರು ಎಂದು ಉತ್ತರ ಕೊಟ್ಟಿದ್ದಾರೆಂದು ಹೇಳಿದ್ದೇನೆ. ಯಾವಾಗ ಖರ್ಚು ಮಾಡಿದರು, ಯಾವಾಗ ಬಿಟ್ಟರು ಆಮೇಲೆ ನೋಡೋಣ. ಎಂಟು ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. ಇದರಿಂದ ಯಾರಿಗೆ ಪ್ರಯೋಜನವಾಯಿತು? ಸರ್ಕಾರದ ಹಣವನ್ನು ಈ ಹಾಡುವವರಿಗೆ, ಕುಣಿಸುವವರಿಗೆ, ಬಾರಿಸುವವರಿಗೆ ಖರ್ಚು ಮಾಡಬೇಕೆಂದಲ್ಲ. ಯಾರಿಗೋಸ್ಕರ ಈ ವಿಶ್ವ ಕನ್ನಡ ಸಮ್ಮೇಳನ? ಈ ಸಮ್ಮೇಳನಕ್ಕೆ ೭೩ ಜನ ಬಂದಿದ್ದರು, ತಿರುಪೆ ಬೇಡುವವರು ಬಂದಿರಬೇಕು. ಕನ್ನಡದ ಬೆಳವಣಿಗೆಗೆ ನೀವು ಯಾವ ಉತ್ತೇಜನವನ್ನು ಕೊಟ್ಟಿದ್ದೀರಿ? ೭೬ ಜನಕ್ಕೆ ಕನ್ನಡವನ್ನು ಕಲಿಸಿಕೊಟ್ಟರೇನು? ಇದರಿಂದ ನಿಮಗೆ ಏನು ಪ್ರಯೋಜನವಾಯಿತು? ಕನ್ನಡದ ಸಂಪತ್ತನ್ನು ಅಭಿವೃದ್ಧಿ ಮಾಡಲಿಕ್ಕೆ ಯಾರೂ ಪ್ರಯತ್ನ ಮಾಡಿಲ್ಲ. ವಿಶ್ವಕನ್ನಡ ಸಮ್ಮೇಳನವನ್ನು ಹಿಂದಿನವರು ಅಂದರೆ ಕಾಂಗ್ರೆಸ್‌ನವರು ಪ್ರಾರಂಭ ಮಾಡಿದರು, ನಾವು ಅದನ್ನು ಸಂಪೂರ್ಣವಾಗಿ ಮಾಡಿದ್ದೇವೆ ಎಂದು ತಾವು ಹೇಳಬಹುದು. ಆದರೆ ಕಾಂಗ್ರೆಸ್‌ನವರು ನಿಮ್ಮ ಭಾವನೆಯಲ್ಲಿ ತಪ್ಪು ಎಂದು ಹೇಳಿದರೆ ನೀವು ಏಕೆ ನಿಲ್ಲಿಸಲಿಲ್ಲ? ಬಂದವರಿಗೆ ಊಟ ಹಾಕಿಸಿದ್ದೀರಿ. ವಸತಿ ಕೊಟ್ಟಿದ್ದೀರಿ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಪುಸ್ತಕಗಳನ್ನು ಯಾರಿಗೆ ಹಂಚಿದ್ದೀರಿ? ಆ ಸಾಹಿತ್ಯದಲ್ಲಿ ಏನು ಇದೆ? ಯಾರಾದರೂ ಸಾಹಿತ್ಯ ಓದಿದರೆ ಪ್ರಯೋಜನವಾಗಬೇಕು. ಬಡವರು ಸಾಹಿತ್ಯ ಓದಿದರೆ........

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಒಂದು ನಿದರ್ಶನವನ್ನು ತಾವು ಜ್ಞಾಪಿಸಿಕೊಳ್ಳಬೇಕೆಂದು ನನ್ನ ಪ್ರಾರ್ಥನೆ. ಸುಮಾರು ಮೂರು ವರ್ಷಗಳ ಹಿಂದೆ ಮಹಾ ಮಸ್ತಕಾಭಿಷೇಕ ನಿಮಿತ್ತ ಕೋಟ್ಯಂತರ ರೂಪಾಯಿ ಹಣ ಖರ್ಚು ಮಾಡಿರುವುದು ತಮ್ಮ ಜ್ಞಾಪಕದಲ್ಲಿದೆ. ಆ ಕಾರ್ಯಕ್ರಮದ ಒಂದು ಮಹತ್ವವನ್ನೂ ಹಾಗೂ ವಿಶ್ವ ಕನ್ನಡದ ಸಮ್ಮೇಳನದ ಮಹತ್ವವನ್ನೂ ಅಂದರೆ ಇವೆರಡನ್ನೂ ತುಲನೆ ಮಾಡಿ ನೋಡಿದರೆ ಈ ಖರ್ಚು ತುಂಬಾ ಜಾಸ್ತಿಯಾಯಿತು ಎಂದು ನಿಮ್ಮ ಮನಸ್ಸಿಗೆ ತೋರುತ್ತದೆಯೋ? ಪ್ರಾಮಾಣಿಕವಾಗಿ ಇದಕ್ಕೆ ಉತ್ತರಿಸಿ.

ಶ್ರೀ ಕೆ. ಹೆಚ್. ಪಾಟೀಲ್.—ನಾವು ಕೇಳುತ್ತಿರುವುದು ಮಾನ್ಯ ಜಾಲಪ್ಪನವರು ಮಾನ್ಯ ಕೃಷ್ಣಪ್ಪನವರು ಎಂದು ಅಲ್ಲ. ಸರ್ಕಾರ ಎಂದು ಕೇಳುತ್ತಿರುವುದು. ಪಾಟೀಲರು ತಪ್ಪು ಮಾಡಿದರೆ ಅದರ ಬಗ್ಗೆ ವಿಚಾರ ಮಾಡಿ ದಡದಡನೆ ಬಯಲಿಗೆ ಎಳೆಯಿರಿ, ಲೋಕಾಯುಕ್ತಕ್ಕೆ ಕಳಿಸಿ ವಿಚಾರಣೆ ಮಾಡಿ.

ಶ್ರೀ ಆರ್. ಎಲ್. ಜಾಲಪ್ಪ.—ದುರುಪಯೋಗವಾಗಿದೆ, ತಿಂದು ಹಾಕಿದ್ದಾರೆ ಎಂದು ಹೇಳಿಲ್ಲ. ಖರ್ಚಾಗಿದೆ ಎಂದು ಹೇಳಿದ್ದು. ಮಾನ್ಯ ಬಸವಲಿಂಗಪ್ಪನವರಿಗೆ ಒಂದನ್ನು ನೆನಪು ಮಾಡಿಕೊಡುತ್ತೇನೆ. ಅವರು ಹಿಂದೆ ಬೂಸಾ ಸಾಹಿತ್ಯ ಎಂದು ಹೇಳಿದ್ದಕ್ಕೆ ರಾಜೀನಾಮೆ ಕೊಡಬೇಕಾಗಿ ಬಂತು. ಮತ್ತೆ ಸಾಹಿತ್ಯದ ಬಗ್ಗೆ ಏತಕ್ಕೆ ಮಾತನಾಡುವುದಕ್ಕೆ ಶುರು ಮಾಡಿದ್ದಾರೆ ?

ಶ್ರೀ ಕೆ. ಹೆಚ್. ಪಾಟೀಲ್.—ಹಿಂದಿನ ಸರ್ಕಾರದವರು ಚೌಡಯ್ಯ ಮೆಮೋರಿಯಲ್ ಹಾಲ್‌ಗೆ ಗ್ರಾಂಟ್ ಕೊಟ್ಟರು. ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಹೈಕೋರ್ಟಿಗೆ ಏತಕ್ಕೆ ಹೋಗಿದ್ದೀರಿ ? ನಿಮಗೆ ಯಾವುದು ಬೇಕೋ ಅದನ್ನು ಚಲೋ ಎಂದು ಹೇಳುತ್ತೀರಿ. ನಿಮಗೆ ಬೇಡವಾದ್ದನ್ನು ಬಿಟ್ಟು ಬಿಡುತ್ತೀರಿ.

ಶ್ರೀ ಆರ್.. ಎಲ್. ಜಾಲಪ್ಪ.—ನಾವು ಇಂಗ್ಲೆಂಡ್‌ನವರಿಗೆ ಮಾರಾಟ ಮಾಡುವುದಕ್ಕೋಸ್ಕರ ಮಾಡಿಲ್ಲ. ಸರ್ಕಾರವೇ ತೆಗೆದುಕೊಳ್ಳಬೇಕೆಂದು ಆ ತರಹ ಮಾಡಿದ್ದೇವೆ.

ಶ್ರೀ ಸಿ. ಬೈರೇಗೌಡ.—ಕನ್ನಡ ಸಾಹಿತ್ಯದಲ್ಲಿ ಇರತಕ್ಕ ಉತ್ಕೃಷ್ಟ ಪುಸ್ತಕಗಳನ್ನು ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ಪ್ರಕಾಶನ ಮಾಡಲಾಗಿದೆ. ಈ ಪುಸ್ತಕಗಳನ್ನು ಸುಲಭ ದರದಲ್ಲಿ ಮಾರಲಾಗಿದೆ. ಆ ಪುಸ್ತಕಗಳಲ್ಲಿ ಏನು ಇದೆ ಎಂದು ಮಾತನಾಡುವುದಾದರೆ ಅದು ಕನ್ನಡಕ್ಕೇ ಅವಮಾನ. ಕನ್ನಡ ಸಾಹಿತ್ಯಕ್ಕೂ ಅವಮಾನ. ದಯವಿಟ್ಟು ಆ ರೀತಿ ಮಾತನಾಡಬಾರದು.

ಶ್ರೀ ಪಟವರ್ಧನ ರತ್ನಾಕರ್.—ಹಿಂದಿನ ಸರ್ಕಾರದವರು ಹಾಗೆ ಮಾಡಿದರು, ಹೀಗೆ ಮಾಡಿದರು ಎಂದು ಹೇಳುತ್ತೀರಿ. "ಅಪ್ಪ ಹಾಕಿದ ಆಲದ ಮರಕ್ಕೆ ನೇಣು ಹಾಕಿಕೊಳ್ಳುವುದು ಬೇಡ" ನಿಮಗೆ ಅಧಿಕಾರ ಸಿಕ್ಕಿದೆಯಲ್ಲ, ನಿಮ್ಮಲ್ಲಿ ಹೊಸ ಚಿಂತೆ ಏನು ಇದೆ ಎಂಬುದನ್ನು ತಿಳಿಸಿ ಎಂದು ಮಾನ್ಯ ಬಸವಲಿಂಗಪ್ಪನವರು ಕೇಳುತ್ತಿರುವುದು. ನಿಮ್ಮಲ್ಲಿ ಹೊಸ ಚಿಂತನೆ ಏನು ಇದೆ ? "ಅಪ್ಪ ಹಾಕಿದ ಆಲದ ಮರಕ್ಕೆ ನೇಣು ಹಾಕಿಕೊಳ್ಳುವುದು ಬೇಡ" ಹೊಸದು ಏನು ಎನ್ನುವ ಬಗ್ಗೆ ಉತ್ತರ ಕೊಡಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಬೈರೇಗೌಡರಿಗೆ ಸಾಹಿತ್ಯ ಎಂದರೆ ಏನು ಗೊತ್ತು ? ಪ್ರಕಟಣೆಯಾದ ಪುಸ್ತಕಗಳನ್ನು ನೀವು ಓದಿದ್ದೀರಾ ? ಏನು ಪ್ರಯೋಜನವಾಯಿತು ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರು ಓದಿಲ್ಲ. ಟೇಪ್ ರೆಕಾರ್ಡ್ ಮಾಡಿದ್ದಾರೆ.

ಶ್ರೀ ಸಿ. ಬೈರೇಗೌಡ.—ಪುಸ್ತಕದ ಹೆಸರಾದರೂ ನನಗೆ ಗೊತ್ತಿದೆ. ನೀವು ಅದನ್ನೂ ತಿಳಿದುಕೊಳ್ಳದೇ ಮಾತನಾಡುತ್ತೀರಲ್ಲಾ ಎಂದು ಚಿಂತೆ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಇನ್ನೂ ಬಹಳ ರಾಗಿ ಬೀಸಬೇಕು. ಸಮಾಜ ಬದಲಾವಣೆ ಮಾಡಬೇಕು. ಸಮಾಜ ಬದಲಾವಣೆ ಮಾಡಬೇಕಾದರೆ ವಿಚಾರ ಬದಲಾವಣೆಯಾಗಬೇಕು. ವಿಚಾರವನ್ನು ಬದಲಾವಣೆ ಮಾಡಬೇಕಾದರೆ ವಿಚಾರಕ್ಕೆ ತಕ್ಕ ಸಾಹಿತ್ಯ ಸೃಷ್ಟಿ ಆಗಬೇಕು. ಗತಕಾಲದ ಸಮಾಜದ ಸಾಹಿತ್ಯವನ್ನು ಸೃಷ್ಟಿಸಿ ನೀವು ಓದಿ ಏನು ಮುಂದೆ ಬರುತ್ತೀರಿ ? ಏನು ಸಮಾಜ ಬದಲಾವಣೆ ಮಾಡುತ್ತೀರಿ ? ಸೋಷಿಯಲ್ ಛೇಂಜ್ ಎಂದು ಏನು ಹೇಳುತ್ತೀರಿ, ಅದನ್ನು ಹೇಗೆ ಮಾಡುತ್ತೀರಿ ? ಈ ಸಾಹಿತ್ಯ ಓದಿದರೆ ಆಗುತ್ತದೆಯೋ ? ಮಹಾಭಾರತ ರಾಮಾಯಣ ಓದಿ. ಅದರಲ್ಲಿ ನಾಯಕರು ಯಾರು ಯಾರಿದ್ದಾರೆ ಅವರು ಯಾರು ಯಾರಿಗೆ ಹುಟ್ಟಿದ್ದಾರೆ ನೋಡಿಕೊಳ್ಳಿ. ಇದನ್ನು ನಮ್ಮ ಅಪ್ಪ ಆಗಲೀ ತಾತ ಆಗಲೀ ಬರೆದಿಲ್ಲ. ಯಾರ್ಯಾರು ನಾಯಕರು ಇದ್ದಾರೆ, ಅವರು ಯಾರು ಯಾರಿಗೆ ಹುಟ್ಟಿದ್ದಾರೆ ? ಅವರಿಗೆ ಮದುವೆ ಆಯಿತಾ ? ಅವರ ತಂದೆ ತಾಯಿಗಳಿಗೆ ಮದುವೆ ಆಗಿತ್ತಾ ? ಅದನ್ನು ಓದಿ ಮಕ್ಕಳಿಗೆ ಸಾಹಿತ್ಯ ಕಲಿಸಿಕೊಡಲೇ ? ಇಂಥ ಸಾಹಿತ್ಯಗಳನ್ನು ದೂರ ಇಡುವುದೇ ಒಳ್ಳೆಯದು. ಇಂಥ ಬೂಸಾ ಸಾಹಿತ್ಯ ಬೇಡ. ಈ ದೇಶಕ್ಕೆ ಎಂತಹ ಸಾಹಿತ್ಯ ಬೇಕು ಎಂದರೆ ನಾಗರೀಕತೆಯನ್ನು ಬೆಳೆಸಬೇಕು, ರಾಷ್ಟ್ರಭಕ್ತಿ ಬೆಳೆಸಬೇಕು; ರಾಷ್ಟ್ರದಲ್ಲಿ ಐಕ್ಯತೆಯನ್ನು ಸಾಧಿಸಬೇಕು, ಸಂಘಟನೆ ಆಗಬೇಕು, ಒಗ್ಗಟ್ಟು ಬರಬೇಕು ಇಂತಹ ಸಾಹಿತ್ಯ ಬೇಕು. ಈ ದೇಶದ

ಸಾರ್ವಭೌಮತ್ವವನ್ನು ಕಾಪಾಡಬೇಕು ಎಂಬ ಹಿನ್ನೆಲೆಯಲ್ಲಿ ಆ ಮಾತು ಹೇಳಿದೆ. ಈಗ ಮಕ್ಕಳಿಗೆ ಏನು ಕಲಿಸುತ್ತಿದ್ದೀರಿ ?

ಶ್ರೀ ವೇದಾಂತ ಹೆಮ್ಮಿಗೆ.— ನೀವು ನಿಜ ಹೇಳಿ ಬಲಿ ಪಶು ಆಗಿಬಿಟ್ಟಿರಿ

ಶ್ರೀ ಬಿ. ಬಸವಲಿಂಗಪ್ಪ — ಬಲಿಯೂ ಇಲ್ಲ. ಪಶುವೂ ಇಲ್ಲ. ನೀವು ಪಶುವಾಗಿದ್ದರೆ ಇನ್ನೂ ಎರಡು ಕಾಲುಗಳನ್ನು ಸೇರಿಸಿಕೊಳ್ಳಿ. ನಾನೊಬ್ಬ ಇನ್‌ಸ್ಪೈರ್ಡ್ ಪರ್ಸನ್. I will go my way. I will try to change the society if I can during my life time and if you like me it is O. K you come with me. If you do not like, you have got right to live in the society and criticise me. I have got every right to say anything I like in this society.

ಶ್ರೀ ವೇದಾಂತ ಹೆಮ್ಮಿಗೆ.— ನಾನು ಟೀಕೆ ಮಾಡಲಿಲ್ಲ. ನಿಜ ಹೇಳಿ ಬಲಿ ಪಶು ಆಗಿಬಿಟ್ಟಿರಿ ಎಂದು ಹೇಳಿದೆ.

ಶ್ರೀ ಬಿ. ಬಸವಲಿಂಗಪ್ಪ — ಎಂಟು ಕೋಟಿ ರೂಪಾಯಿಗಳನ್ನು ನೀವು ವಿಶ್ವ ಕನ್ನಡ ಸಮ್ಮೇಳನಕ್ಕೆ ಖರ್ಚು ಮಾಡಲಿಕ್ಕೆ ನಿಮಗೆ ಮನಸ್ಸು ಬರುತ್ತದೆ ಇಂತಹ ದೃಶ್ಯ (ಫೋಟೋ ತೋರಿಸುತ್ತಾ) ಕರ್ನಾಟಕದಲ್ಲಿರುವಾಗ, ಕ್ಷಾಮದ ಬವಣೆ ಬಡವರಿಗೆ ಇರುವಾಗ ಇಂತಹ ಕರಾಳ ದೃಶ್ಯ ಇಲ್ಲಿ ಇರುವಾಗ, ಎಂಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಕುಣಿಸುವುದು, ಬಾರಿಸುವುದು, ಸಂಗೀತ ಕೇಳುವುದು ಮಾಡುತ್ತೀರಿ. ಈ ಬೂಸಾ ಸಾಹಿತ್ಯನನ್ನು ಪ್ರಿಂಟ್ ಮಾಡಿ ಹಂಚುವುದಕ್ಕೆ ಬರುತ್ತೀರಿ. ಏನಿದು ಸಮಾಚಾರ ? ಇದರಿಂದ ಯಾರ ಬಡತನ ಉದ್ಧಾರವಾಗುತ್ತದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ಬಸವಲಿಂಗಪ್ಪನವರು ಈಲ್ಡ್ ಆದರೆ......

ಶ್ರೀ ಬಿ. ಬಸವಲಿಂಗಪ್ಪ.— ನಾನು ಈಲ್ಡ್ ಆಗುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ದಯವಿಟ್ಟು ಈಲ್ಡ್ ಆಗಿ ಎಂಟು ಕೋಟಿ ರೂಪಾಯಿಗಳನ್ನು ಇದಕ್ಕೆಲ್ಲಾ ಖರ್ಚು ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ೧೯೮೩ರಲ್ಲಿ ನಾವು ಅಧಿಕಾರಕ್ಕೆ ಬರುವುದಕ್ಕೆ ಮುಂಚಿತವಾಗಿಯೇ ಬಿಲ್ಡಿಂಗ್‌ಗಳನ್ನು ಕಟ್ಟಿದ್ದರು. ಅದನ್ನು ಮುಗಿಸದೇ ಹಾಗೆಯೇ ಬಿಡುವುದಕ್ಕಾಗುತ್ತದೆಯೇ ? ನಾವು ಸಮ್ಮೇಳನಕ್ಕೆ ಖರ್ಚು ಮಾಡಿರುವುದು ೭೦-೭೫ ಲಕ್ಷ ರೂಪಾಯಿ ಮಾತ್ರ ಪುಸ್ತಕಗಳನ್ನು ಏನು ಪ್ರಿಂಟ್ ಮಾಡಿಸಿದ್ದೇವೆ. ಅದು ಕನ್ನಡ ಪರಂಪರೆ, ಸಂಸ್ಕೃತಿ ಬೆಳೆದು ಬಂದಿರುವ ಬಗ್ಗೆ ಇದೆ. ಮತ್ತೆ ಕರ್ನಾಟಕದ ಖನಿಜ ಸಂಪತ್ತು ಏನು ಎಂಬುದರ ಬಗ್ಗೆ ಇದೆ. ಅವನ್ನು ನಾನು ಪೂರ್ತಿಯಾಗಿ ಓದಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.— ೧೦೦ ಪುಸ್ತಕಗಳು ಇವೆ. ಇವೆಲ್ಲವನ್ನೂ ಓದಿದ್ದೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮುಖ್ಯವಾಗಿ ಪ್ರಕಟಣೆ ಮಾಡಿರತಕ್ಕಂಥದ್ದು ಎರಡು ಪುಸ್ತಕಗಳು. ಅದನ್ನು ನಾನು ಓದಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಸಾಹಿತ್ಯದ ಬಗ್ಗೆ ಬಸವಲಿಂಗಪ್ಪನವರ ಅಭಿಪ್ರಾಯ ಒಂದಿದೆ. ಅದನ್ನು ಒಪ್ಪತಕ್ಕ ಕೆಲವು ಜನ ಇದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.— ನಾನು ಹೇಳುತ್ತೇನೆ. ರಾಜಕಾರಣದಲ್ಲಿ ಯಾವಾಗಲೂ ಮನುಷ್ಯ ಪ್ರೊಡಕ್ಟೀವ್ ಉದ್ದೇಶಗಳಿಗೆ ಹೆಚ್ಚು ಖರ್ಚು ಮಾಡಬೇಕು. ನಮ್ಮಲ್ಲಿ ತೆಗೆಯಬೇಕಾದ ಕಾಲುವೆಗಳನ್ನು ತೆಗೆದಿಲ್ಲ. ಅಣೆಕಟ್ಟುಗಳನ್ನು ಕಟ್ಟುವುದಕ್ಕೆ ರೊಕ್ಕ ಇಲ್ಲ ಆದರೆ ವಿಶ್ವಕನ್ನಡ ಸಮ್ಮೇಳನಕ್ಕೆ ಹಣ ಖರ್ಚು ಮಾಡುವುದು ಯಾವ ಧರ್ಮ ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ನಾನು ಹೇಳಿದ್ದು ಅದು ಬೂಸಾ ಸಾಹಿತ್ಯ ಅಲ್ಲ ಎಂದು. ಸಾಹಿತ್ಯದ ಬಗ್ಗೆ ನಿಮ್ಮ ಅಭಿಪ್ರಾಯ (ಬಸವಲಿಂಗಪ್ಪನವರಿಗೆ) ಇಟ್ಟುಕೊಳ್ಳಿ. ಆದರೆ ನಿಮ್ಮ ಪಕ್ಕದಲ್ಲಿರುವವರೇ ಅದನ್ನು ಒಪ್ಪುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.— ನನಗೇತಕ್ಕೆ ಬೇಕು ಅವರು ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ವಿಶ್ವಕನ್ನಡ ಸಮ್ಮೇಳನ ಸಂದರ್ಭದಲ್ಲಿ ತಂದಿರತಕ್ಕ ಪುಸ್ತಕಗಳು ರಾಜ್ಯದ ಬಗ್ಗೆ, ರಾಜ್ಯದ ಸಂಪತ್ತು ಏನು, ಭೌಗೋಳಿಕ ಮತ್ತು ಚಾರಿತ್ರಿಕ ವಿಚಾರಗಳು ಏನು ಎಂಬುದನ್ನು ತಿಳಿಸುವಂಥ ಪುಸ್ತಕಗಳು. ಅದನ್ನು ರಾಜ್ಯದಲ್ಲಿ ಬಂದಿರತಕ್ಕವರಿಗೆ ಮತ್ತು ನಮ್ಮ ಮಕ್ಕಳಿಗೆ ತಿಳಿಸುವ ದೃಷ್ಟಿಯಿಂದ ಮಾಡಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ.— ಇಂಟರ 'ಫಿಯರೆನ್ಸ್' ಜಾಸ್ತಿಯಾಯಿತು, ಕ್ಷಮಿಸಿ. ಒಂದೇ ಒಂದು ವಿಷಯವನ್ನು ಪಾಟೀಲರ ಗಮನಕ್ಕೆ ತರುತ್ತೇನೆ. ಕ್ಷಾಮ ತಲೆದೋರಿ ಇರುವಾಗ ಕೋಟ್ಯಾಂತರ ರೂಪಾಯಿ ಏತಕ್ಕೆ ಖರ್ಚು ಮಾಡುತ್ತೀರಿ ಎಂದು ಹೇಳಿದರು. ನಮ್ಮ ರಾಷ್ಟ್ರದಲ್ಲಿ ಸಹಸ್ರಾರು ಗ್ರಾಮಗಳಿಗೆ ಕುಡಿಯುವ ನೀರಿಲ್ಲ ಆದರೆ ೧೫೦೦ ಕೋಟಿ ರೂಪಾಯಿಗಳನ್ನು ಏಷ್ಯಾಡ್‌ಗೆ ಏತಕ್ಕೆ ಖರ್ಚು ಮಾಡಿದ್ದೀರಿ ? ಕಾಮನ್ ವೆಲ್ತ್ ಸಮ್ಮೇಳನಕ್ಕೆ ೪೦೦ ಕೋಟಿ ರೂಪಾಯಿ ಏತಕ್ಕೆ ಖರ್ಚು ಮಾಡಿದ್ದೀರಿ ? ಅಲಿಪ್ತ ರಾಷ್ಟ್ರಗಳ ಸಮ್ಮೇಳನಕ್ಕೆ ೬೦೦ ಕೋಟಿ ರೂಪಾಯಿಗಳನ್ನು ಏತಕ್ಕೆ ಖರ್ಚು ಮಾಡಿದ್ದೀರಿ ? ಗೋವಾದಲ್ಲಿ ಒಂದು ದಿವಸಕ್ಕೆ ೪೦ ಕೋಟಿ ರೂಪಾಯಿ ಏತಕ್ಕೆ ಖರ್ಚು ಮಾಡಿದ್ದೀರಿ ? ಅದನ್ನೆಲ್ಲಾ ಮರೆಯುತ್ತೀರಲ್ಲ ಸ್ವಾಮಿ.

ಶ್ರೀ ಬಸವರಾಜ್ ರಾಯರೆಡ್ಡಿ.— ೧೦೦ ವರ್ಷದ ಕಾಂಗ್ರೆಸ್ ಉತ್ಸವಕ್ಕೆ ೫೦ ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ.

ಶ್ರೀ ಪಟಮಕ್ಕಿ ರತ್ನಾಕರ್.— ಒಂದು ಪ್ರಶ್ನೆ......

ಉಪಾಧ್ಯಕ್ಷರು.— ದಯಮಾಡಿ ಕುಳಿತುಕೊಳ್ಳಿ. ಭಾಷಣ ಮಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಬಸವರಾಜ್ ರಾಯರೆಡ್ಡಿ.— ನೀವು ಗುಡಿ ಕಟ್ಟಿದ್ದೀರಿ. ನಾವು ಕಳಸ ಇಟ್ಟಿದ್ದೇವೆ.

ಶ್ರೀ ಪಟಮಕ್ಕಿ ರತ್ನಾಕರ್.— ಕರ್ನಾಟಕ ರಾಜ್ಯದಲ್ಲಿ ಕುಡಿಯುವ ನೀರಿಲ್ಲ. ಬಾವಿಗಳಿಲ್ಲ. ಇಂಥ ಸಮಸ್ಯೆ ಇರಬೇಕಾದರೆ, ಕರ್ನಾಟಕ ರಾಜ್ಯದಲ್ಲಿ ಭೀಕರ ಬರಗಾಲ ಇರಬೇಕಾದರೆ ಈ ವಿಶ್ವಕನ್ನಡ ಸಮ್ಮೇಳನಕ್ಕೆ ಇಷ್ಟೊಂದು ಖರ್ಚು ಏತಕ್ಕೆ ಮಾಡಿದ್ದೀರಿ ಎಂದು ಬಸವಲಿಂಗಪ್ಪನವರು ಕೇಳಿದ್ದು.

ಶ್ರೀ ಆರ್. ಎಲ್. ಜಾಲಪ್ಪ.—ಕೆಲವರಿಗೆ ಏನು ಮಾತನಾಡುತ್ತೇವೆ ಎಂಬುದೇ ಗೊತ್ತಾಗುವುದಿಲ್ಲ. ಒದ್ದು ಕೆಡವಿದರೂ ಒಂದೇ ಹಾಗೇ ಕೆಡವಿದರೂ ಒಂದೇ ಇಷ್ಟೆಲ್ಲಾ ಬರಗಾಲ ಇರುವಾಗ ಏತಕ್ಕೆ ಖರ್ಚು ಎಂದು ಕೇಳಿದ್ದಾರೆ. ಬರಗಾಲ ಎಂದರೆ ಏನರ್ಥ ?......

ಶ್ರೀ ಕೆ. ಎಚ್. ಪಾಟೀಲ್.— ರಾಷ್ಟ್ರದ ಹಿತದೃಷ್ಟಿಯಿಂದ ರಾಷ್ಟ್ರದ ಅಭ್ಯುದಯವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿಸುವ ಸಲುವಾಗಿ ಕ್ರೀಡಾಂಗಣ ಮಾಡಿದ್ದು ತಪ್ಪೇ ? ವಿಶ್ವಕನ್ನಡ ಸಮ್ಮೇಳನಕ್ಕೆ ಶಾಸಕರಿಗೆ ಆಹ್ವಾನಪತ್ರಿಕೆಯನ್ನೂ ಕಳುಹಿಸದೆ ಒಂದು ಗುಂಪಿನವರು ಮಾತ್ರ ಹೋಗಿ ಸಮಾರಂಭ ಮಾಡಿದ್ದಾರೆ. ಅದರಲ್ಲಿ ದೇಶದ, ರಾಜ್ಯದ ಅಭ್ಯುದಯದ ಬಗ್ಗೆ ಏನು ಮಾಡಿದ್ದೀರಿ ?

ಶ್ರೀ ಆರ್. ಎಲ್. ಜಾಲಪ್ಪ.— ಒಲಂಪಿಕ್ ಆಯಿತು. ಒಂದೇ ಒಂದು ತಾಮ್ರದ ಪದಕವೂ ನಮಗೆ ಸಿಗಲಿಲ್ಲ. ಅದರ ಬದಲು ನಮ್ಮ ಯುವಕರ ಮೇಲೆ ಖರ್ಚು ಮಾಡಿದ್ದರೆ ಎಲ್ಲಾ ಗೆದ್ದುಕೊಂಡು ಬರುತ್ತಿದ್ದರು.

ಉಪಾಧ್ಯಕ್ಷರು.— ಇನ್ನು ಮಾನ್ಯ ಬಸವಲಿಂಗಪ್ಪನವರು ಮಾತನಾಡಲಿ. ಬಸವಲಿಂಗಪ್ಪನವರೇ ನೀವು ಇನ್ನು ಯಾರಿಗೂ ಈಲ್ಡ್ ಆಗಬೇಡಿ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಸದಸ್ಯರು ಏನೋ ಒಂದು ಅಭಿಪ್ರಾಯ ಹೇಳುತ್ತೇನೆ ಎಂದು ಹೇಳಿದಾಗ ಈಲ್ಡ್ ಆಗಬೇಕಾಗುತ್ತದೆ. ಮಾನ್ಯ ಸಿಂಧ್ಯ ಅವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಅವರು ಹಳ್ಳಿ ಕಡೆಯಿಂದ ಬಂದಿದ್ದಾರೆ. ಹಳ್ಳಿ ಪರಿಸ್ಥಿತಿ ಅವರಿಗೆ ಗೊತ್ತು. ಸಮಾಜ ವನ್ನು ಎಲ್ಲರೂ ಸೇರಿ ಬದಲಾವಣೆ ಮಾಡಬೇಕು. ಎಲ್ಲರೂ ಸಹೋದರರಾಗಿ ಬಾಳಬೇಕು. ಈ ಜಾತಿ ಗೊಂದಲ, ಹಿರಿಯ ಕಿರಿಯ, ದೊಡ್ಡವನು ಚಿಕ್ಕವನು ಎಂಬ ತಾರತಮ್ಯ ಇಲ್ಲದಂಥ, ಹುಟ್ಟಿನ ಆಧಾರದ ಮೇಲೆ ತಿರಸ್ಕಾರ ಮಾಡದಂಥ, ಹೀಯಾಳಿಸದಂಥ ಸಮಾಜವನ್ನು ಸೃಷ್ಟಿ ಮಾಡಬೇಕಾಗುತ್ತದೆ.

ಆ ಸಾಹಿತ್ಯ ನಿಜವಾದ ಸಾಹಿತ್ಯ. ಈ ಸಾಹಿತ್ಯ ಸಾಹಿತ್ಯವೇ ಅಲ್ಲ. ಹೊಟ್ಟೆ ಹೊರೆದು ಕೊಳ್ಳುವುದಕ್ಕೆ ಒಬ್ಬ ಮನುಷ್ಯನ ಭಾಷೆ ಇದು ಸಾಹಿತ್ಯ ಅಲ್ಲ. ಅದಕ್ಕೋಸ್ಕರ ಹೇಳುತ್ತಿದ್ದೇನೆ. ಜಾಲಪ್ಪನವರು ಸ್ಪೋರ್ಟ್ಸ್ ಬಗ್ಗೆ ದುಡ್ಡು ಖರ್ಚು ಮಾಡಿದರು ಎಂದು ಹೇಳಿದರು. ಅದನ್ನು ಈ ದೇಶ ಸಮೃದ್ಧಿಯಾಗಿದ್ದಾಗ ಖರ್ಚು ಮಾಡಿದರು. ಆದರೆ ದೇಶ ಕ್ಷಾಮಕ್ಕೆ ಒಳಪಟ್ಟಾಗ ಖರ್ಚು ಮಾಡಬಾರದು ಎಂದು ನಾನು ಹೇಳುತ್ತಿದ್ದೇನೆ. ಅಷ್ಟೇ ನನ್ನ ಉದ್ದೇಶ, ಇನ್ನೇನಿಲ್ಲ, ಕುಡಿಯುವ ನೀರಿಗೆ ಜಾಸ್ತಿ ಖರ್ಚು ಮಾಡಿ. ಬಡಜನಗಳ ಕಷ್ಟಕ್ಕೆ ನೆರವಾಗಿ. ಯಾರು ಯಾರು ಕ್ಷಾಮ ಪೀಡಿತ ಪ್ರದೇಶದಲ್ಲಿ ಕ್ಷಾಮಕ್ಕೆ ಒಳಗಾಗಿದ್ದಾರೆ. ಹೊಟ್ಟೆ ಹಸಿವಿನಿಂದ ಬಳಲುತ್ತಿದ್ದಾರೆ......

(ಅಧ್ಯಕ್ಷರು ಪೀಠವನ್ನಲಂಕರಿಸಿದರು.)

ಅಧ್ಯಕ್ಷರು.-- ಬಸವಲಿಂಗಪ್ಪನವರೇ, ಅರ್ಧ ಗಂಟೆ ಆಯಿತು. ದಯವಿಟ್ಟು ಮುಗಿಸಿ.

ಶ್ರೀ ಬಿ. ಬಸವಲಿಂಗಪ್ಪ.— ದಯಮಾಡಿ ನಿಮ್ಮ ಮಾತನ್ನು ಕಡಿಮೆ ಮಾಡಿದರೆ ನಿಮಗೆ ಗೌರವ ಕೊಟ್ಟು ಮುಗಿಸುತ್ತೇನೆ. ನಾನು ಮುಗಿಸುತ್ತಿದ್ದೆ. ಆದರೆ ಜಾಲಪ್ಪನವರು ಸ್ಪೋರ್ಟ್ಸ್‌ಗೆ ಖರ್ಚು ಮಾಡಿದ್ದಾರೆ ಎಂದು ಹೇಳಿದರು.

ಅಧ್ಯಕ್ಷರು.-- ಜಾಲಪ್ಪನವರ ವಿಷಯ ಬಿಡಿ. ಮುಗಿಸಿ.

ಶ್ರೀ ಬಿ. ಬಸವಲಿಂಗಪ್ಪ.— ಸಮೃದ್ಧಿಯಾಗಿದ್ದಾಗ ಮಾಡಿ. ಆದರೆ ಕಷ್ಟ ಕಾಲದಲ್ಲಿ ಖರ್ಚು ಮಾಡಬೇಡಿ, ಜನರಿಗೆ ಸಂಕಟ ಬರುತ್ತದೆ ಎಂದು ಹೇಳುತ್ತಿದ್ದೇನೆ. ಜನತಾ ಪಕ್ಷದವರು ಏನೇನೋ ಹೇಳಿದರು, ಆಶ್ವಾಸನೆ ಕೊಟ್ಟರು, ಆದರೆ ಏನೂ ಮಾಡಲಿಲ್ಲ ಎಂದು ಹೇಳುತ್ತಾರೆ. ಉದ್ಯೋಗದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಉದ್ಯೋಗ ಯಾರು ಯಾರಿಗೆ ಕೊಡಬೇಕು, ಬಿಡಬೇಕು ? ಅದೇ ಕಥೆಯನ್ನೇ ಹೇಳಿದ್ದಾರೆ ಕೊಟ್ಟು ಮುಗಿಸಿಬಿಡಿ. ಎಷ್ಟು ಹುದ್ದೆಗಳು ಖಾಲಿ ಇವೆ ? ಪ್ರಶ್ನೆ ಕೇಳಿದಾಗ ಸದನದಲ್ಲಿ ೧೨೧೧ನೇ ಸಂಖ್ಯೆ ಪ್ರಶ್ನೆಗೆ ಉತ್ತರ ಕೊಡುತ್ತಾ ಈ ರೀತಿ ಹೇಳಿದ್ದಾರೆ. "As on 1.3.85, 45,935 vacancies were there in Government service". Now you have filled up 26,664 vacancies. So, the number remaining of vacancies is 19, 271. ೧೯-೨೦ ಹುದ್ದೆಗಳು ಇವತ್ತಿನ ವರೆಗೂ ಖಾಲಿ ಇದೆ. ಇದು ಸರ್ಕಾರಿ ನೌಕರಿಯಲ್ಲಿ ಭರ್ತಿ ಮಾಡತಕ್ಕ ವಿವರ. ಇದಲ್ಲದೆ ಎಸ್.ಎಸ್.ಎಲ್.ಸಿ., ಬಿ. ಎ. ಪಾಸ್ ಮಾಡಿರುವವರು, ಟೆಕ್ನಿಕಲ್ ಎಜುಕೇಷನ್ ಮಾಡಿರುವವರು ಎಷ್ಟು ಜನ ಇದ್ದಾರೆ ? ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ಏಳೂವರೆ ಲಕ್ಷ ಜನ ರಿಜಿಸ್ಟರ್ ಮಾಡಿರುವವರಿದ್ದಾರೆ. ಇಷ್ಟು ಸರ್ಕಾರಿ ಹುದ್ದೆಗಳನ್ನು ಇನ್ನೂ ಭರ್ತಿ ಮಾಡಿಲ್ಲ. ಯಾರಿಗೆ ಮೋಸ ಮಾಡಬೇಕು ಎಂದು ಮಾಡಿದ್ದೀರಿ ? ನಾನು ಹೇಳುತ್ತಿದ್ದೇನೆ ತಮಗೂ. ಇದು ಸರಿಯಲ್ಲ. ತಾವು ಏನೇನು ವಾಗ್ದಾನ ಮಾಡಿದ್ದೀರಿ, ಈಗ ಏನೇನು ಮಾಡಿದ್ದೀರಿ ? ಉದ್ಯೋಗ ಕೊಡಬೇಕು ಎಂದು ಹೇಳಿದ್ದೀರಿ. ಉದ್ಯೋಗ ಕೊಡಿ ಶಹಭಾಸ್‌ಗಿರಿ ಕೊಡುತ್ತೇವೆ. ಜನಗಳ ಸೇವೆ ಮಾಡಿ, ಕಾರ್ಯವಿಮುಖರಾಗಬೇಡಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು —ಕನ್‌ಕ್ಲೂಡ್ ಮಾಡಿ. ತಮ್ಮ ಹತ್ತಿರ ಇರುವ ಆ ಪುಸ್ತಕ ಕೆಳಗಿಡಿ. ಸಾಕಷ್ಟು ಹೇಳಿದ್ದೀರಿ. ಇನ್ನೂ ನಾಲ್ಕು ಜನ ಮಾತನಾಡುವವರಿದ್ದಾರೆ. ೫ ಗಂಟೆಗೆ ಮುಗಿಸಬೇಕು. ಒಬ್ಬೊಬ್ಬರಿಗೆ ಕನಿಷ್ಠ ೧ ನಿಮಿಷವಾದರೂ ಕೊಡಬೇಕಾಗುತ್ತದೆ. ಪುಸ್ತಕ ಕೆಳಗಿಟ್ಟು ಕನ್‌ಕ್ಲೂಡ್ ಮಾಡಿ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಮುಗಿಸುತ್ತಿದ್ದೆ. ನಾಲ್ಕು ಐದು ಜನ ಮಧ್ಯೆ ಪ್ರವೇಶ ಮಾಡಿದರು. ಅದಕ್ಕೋಸ್ಕರ ಸಮಯ ಜಾಸ್ತಿಯಾಯಿತು.

ಶ್ರೀ ಕೆ. ಎಚ್. ಶ್ರೀನಿವಾಸ್.—ಕೆ. ಎಸ್. ಆರ್. ಟಿ ಸಿ. ಬಂದಾಗ ಈಲ್ಡ್ ಆಗಲೇಬೇಕು. ಇಲ್ಲದಿದ್ದರೆ ಬಸ್ ಮೇಲೆ ಬಂದುಬಿಡುತ್ತದೆ. (ಸಿಂಧ್ಯ ಅವರು ಮಾತನಾಡಿದ್ದರ ಬಗ್ಗೆ)

ಅಧ್ಯಕ್ಷರು.—ಬಸವಲಿಂಗಪ್ಪನವರೇ, ಆ ಪುಸ್ತಕ ಇಡಿ ಕೆಳಗೆ.

ಶ್ರೀ ಬಸವಲಿಂಗಪ್ಪ.—ಕೊನೆಯದಾಗಿ ಹೇಳುತ್ತೇನೆ. ಕಾನೂನು ವ್ಯವಸ್ಥೆ ಬಗ್ಗೆ ಎರಡು ಮಾತುಗಳನ್ನು ಆಡುತ್ತೇನೆ. ರಾಜ್ಯಪಾಲರು ಇದರ ಬಗ್ಗೆ ವಿವರವಾಗಿ ಹೇಳಿದ್ದಾರೆ. ನಾನು ಈ ಸರ್ಕಾರದ ಒಬ್ಬ ಮಂತ್ರಿ ಬಗ್ಗೆ ಮಾತನಾಡುವುದಿಲ್ಲ. ಒಟ್ಟಿನಲ್ಲಿ ಈ ಸರ್ಕಾರ ಶಾಂತಿಪಾಲನೆ ಮಾಡುವುದಕ್ಕೆ ವಿಫಲವಾಗಿದೆ, ಮಾಡುವುದಕ್ಕಾಗಲಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೀದ್ದೇನೆ. ೧೯೮೪ನೇ ಇಸವಿಯಲ್ಲಿ ೮೮,೮೬೫ ಗುನ್ನೆಗಳಿದ್ದವು. ೧೯೮೫ ರಲ್ಲಿ ೮೭,೬೯೧ ಆಗಿವೆ, ೧೦೦–೨೦೦ ಕಡಿಮೆ ಆಯಿತು. ಶಹಬಾಸ್‌ಗಿರಿ ತೆಗೆದುಕೊಂಡು ಬೆನ್ನು ಚಪ್ಪರಿಸಿಕೊಳ್ಳುವುದಕ್ಕೆ ಕಡಿಮೆ ಮಾಡಿದ್ದಾರೆ. ಕೊಲೆಗಳು ಎಷ್ಟಾಗಿವೆ ? ೧೯೮೧ ರಲ್ಲಿ ೧,೧೯೭ ಕೊಲೆಗಳಾಗಿದ್ದರೆ ೧೯೮೫ ರಲ್ಲಿ ೧,೧೦೨ ಆಗಿವೆ.

೪–೦೦ ಪಿ. ಎಂ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಕೇಸೇ ರಿಜಿಸ್ಟರ್ ಆಗಿಲ್ಲ ಎಂದರೆ ಸಂಖ್ಯೆ ಕೂಡಾ ಕಡಿಮೆಯಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಗೃಹ ಮಂತ್ರಿಗಳು ಕೊಟ್ಟಿರತಕ್ಕ ಅಂಕಿ ಸಂಖ್ಯೆಗಳು ಈ ರೀತಿ ಇವೆ, ಇದು ೧,೯೮೯ ಆಗಿಬಿಟ್ಟಿದೆ ಎಂದು ಹೇಳತಕ್ಕದ್ದು ಸರಿಯಲ್ಲ.

ಅಧ್ಯಕ್ಷರು.—ತಮ್ಮ ಭಾಷಣವನ್ನು ಮುಕ್ತಾಯ ಮಾಡಿ. ಇಲ್ಲದಿದ್ದರೆ ರಿಪೋರ್ಟ್ ಮಾಡಬೇಡಿ ಎಂದು ಹೇಳಬೇಕಾಗುತ್ತದೆ.

ಶ್ರೀ ಬಸವಲಿಂಗಪ್ಪ.—ಆಯಿತು, ಕನ್‌ಕ್ಲೂಡ್ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಸರ್ಕಾರ ಇದನ್ನೆಲ್ಲಾ ಸುಧಾರಿಸುತ್ತದೆ ಎಂದು ಹೇಳಿಬಿಟ್ಟರೆ ಅವರು ಮುಂದೆ ಮಾತನಾಡುವುದಿಲ್ಲ. ಇಷ್ಟಕ್ಕೆ ತಮ್ಮ ಭಾಷಣವನ್ನು ಮುಕ್ತಾಯ ಮಾಡುತ್ತಾರೆ.

ಅಧ್ಯಕ್ಷರು.—ತಾವು ಹಿಡಿದಿರುವ ಪುಸ್ತಕವನ್ನು ಕೆಳಗೆ ಇಟ್ಟು ಮಾತನಾಡಿ. ಆಗ ಭಾಷಣವನ್ನು ಬೇಗ ಮುಗಿಸಬಹುದು.

ಶ್ರೀ ಬಿ. ಬಸವಲಿಂಗಪ್ಪ.—ಆಯಿತು, ಅದನ್ನು ಕೆಳಗೆ ಇಟ್ಟುಬಿಡುತ್ತೇನೆ. ಅಧ್ಯಕ್ಷರೇ, ನಾನು ಬಹಳ ವಿನಯಪೂರ್ವಕವಾಗಿ ಹೇಳುತ್ತಿದ್ದೇನೆ. ಈ ಸರ್ಕಾರದಲ್ಲಿ ಒಬ್ಬರನ್ನು ಗೃಹ ಮಂತ್ರಿಗಳನ್ನಾಗಿ ಮಾಡಿದ್ದಾರೆ. ಗೃಹ ಮಂತ್ರಿಗಳು ಆ ಕೆಲಸವನ್ನು ನಿರ್ವಹಣೆ ಮಾಡುತ್ತಿದ್ದಾರೆಯೋ ? ಇವರು ಅಧಿಕಾರವನ್ನು ತೆಗೆದುಕೊಂಡಮೇಲೆ ಎಷ್ಟು ಪುಂಡಾಟಿಕೆ, ಎಷ್ಟು ಗೂಂಡಾಗಿರಿ, ಎಷ್ಟು ಜನ ಕೊಲೆಯನ್ನು ಗಂತ್ತಿಗೆಗೆ ತೆಗೆದುಕೊಂಡಿದ್ದಾರೆ, ಎಷ್ಟು ಜನ ಹೊಡೆದಾಟವನ್ನು ಗುತ್ತಿಗೆಗೆ ತೆಗೆದುಕೊಂಡಿದ್ದಾರೆ ಎಂಬುದನ್ನು ನೋಡಿದ್ದಾರೆಯೋ ? ಮಾನ್ಯ ರಂಗನಾಥ್ ಅವರನ್ನು ಕೊಲೆ ಮಾಡುವುದಕ್ಕೆ ಹೋಗಿರಲಿಲ್ಲವೇ ? ಅದನ್ನು ಗುತ್ತಿಗೆಗೆ ತೆಗೆದುಕೊಂಡಿರಲಿಲ್ಲವೇ ? ಅವರನ್ನು ಗುಂಡು ಹಾಕುವುದಕ್ಕೆ ಗುತ್ತಿಗೆಗೆ, ಏನು ಅಪರಾಧವನ್ನು ಮಾಡಿದರೂ ಗುತ್ತಿಗೆ. ಈ ಬಗ್ಗೆ ನಾನು ಹಿಂದೆಯೂ ಹೇಳಿದ್ದೇನೆ ಈ ಗುತ್ತಿಗೆ ತೆಗೆದುಕೊಳ್ಳುವವರು, ಕಾರ್ ಇಟ್ಟುಕೊಂಡಿದ್ದಾರೆ, ಸೈಕಲ್ ಮೋಟರ್ ಇಟ್ಟುಕೊಂಡಿದ್ದಾರೆ, ಸ್ಕೂಟರ್ ಇಟ್ಟುಕೊಂಡಿದ್ದಾರೆ. ಭವ್ಯವಾದ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಹಾಗೂ ಎಲ್ಲಾ ಫ್ಯಾಕ್ಟರಿಗಳಿಂದ, ವ್ಯಾಪಾರಸ್ತರಿಂದ ಹಣವನ್ನು ವಸೂಲಿ ಮಾಡುತ್ತಿದ್ದಾರೆ. ಇವತ್ತು ಅಂತಹವರು ಕೊಲೆಗಳನ್ನು, ಅಪರಾಧಗಳನ್ನು ಗುತ್ತಿಗೆ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಇಂತಹದ್ದನ್ನು ನಾನು ಹಿಂದೆ ಯಾವಾಗಲೂ ಕೇಳಿದ್ದು ಇಲ್ಲ. ನಾನು ಹಿಂದೆ ಉಪಗೃಹ ಮಂತ್ರಿ ಕೂಡಾ ಆಗಿದ್ದೆ, ಆಗ ಇಂತಹ ಒಂದೂ ಕಂಪ್ಲೇಂಟನ್ನೂ ಸಹಾ ನಾನು ಕೇಳಿಲ್ಲ. ಒಂದು ಫಿರ್ಯಾದಿಯೂ ಇಲ್ಲ. ಅಪರಾಧವನ್ನು ಮಾಡುವುದು ಆಗ ಕಡಿಮೆ ಇತ್ತು. ಬಡಜನರಿಗೆ ತೊಂದರೆ ಕೊಟ್ಟಿದ್ದು ಆಗ ಗೊತ್ತೇ ಇಲ್ಲ. ಆದರೆ ಇವತ್ತು ಬಡವರು ಗೋಳಿಡುತ್ತಿದ್ದಾರೆ. ನಿಮ್ಮ ವರ್ಗದವರು ಯಾರು ಇದ್ದಾರೆ ಅಂತಹವರಿಗೆ ಎಷ್ಟೋ ಅನ್ಯಾಯಗಳು ಆಗಿವೆ. ಎಷ್ಟೋ ತೊಂದರೆಗಳು ಆಗಿವೆ. ಸ್ವಾತಂತ್ರ್ಯ ಪಡೆಯುವುದಕ್ಕಿಂತಾ ..

ಅಧ್ಯಕ್ಷರು.—ದಯವಿಟ್ಟು ತಮ್ಮ ಭಾಷಣವನ್ನು ಮುಕ್ತಾಯ ಮಾಡಿ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಈ ಒಂದು ಸಿಟಿಯಲ್ಲಿ ಇವತ್ತು ಸರಿಯಾದಂತಹ ಕಾನೂನು ನಿರ್ವಹಣೆ ಇಲ್ಲ. ಕಾನೂನು ಗೊತ್ತಿರತಕ್ಕ ಅಧಿಕಾರಿಗಳು ಬಹಳ ಕಡಿಮೆ ಇದ್ದಾರೆ. ಈ ವಿಷಯವನ್ನು ಮಾನ್ಯ ಲಕ್ಷ್ಮೀಸಾಗರ್ ಅವರೂ ಕೂಡಾ ಒಪ್ಪಿದ್ದಾರೆ. ನಾನು ತಮಗೆ ಹೇಳುತ್ತಿದ್ದೇನೆ ಒಬ್ಬ ಮಾಲೀಕನ ಮೇಲೆ...

ಅಧ್ಯಕ್ಷರು.—ಈಗ ತಮ್ಮ ಭಾಷಣವನ್ನು ಮುಗಿಸಿ. ಇಲ್ಲದಿದ್ದರೆ ರೆಕಾರ್ಡ್ ಮಾಡಬೇಡಿ ಎಂದು ಹೇಳಬೇಕಾಗಿದೆ. ಮಾರ್ವಾಡಿ ಎಂದರೆ ಉದ್ದಕ್ಕೆ ಭಾಷಣ ಎಂದಹಾಗೆ ಆಯಿತು. ನಿಮ್ಮ ಭಾಷಣ ವೇನೋ ಕೇಳುವುದಕ್ಕೆ ಚೆನ್ನಾಗಿರುತ್ತದೆ. ನನಗೆ ತಮ್ಮ ಭಾಷಣವನ್ನು ಕೇಳ ಬೇಕೆನಿಸುತ್ತದೆ. ಆದರೆ ವೇಳೆ ಇಲ್ಲ. ದಯಮಾಡಿ ಮುಗಿಸಿ ಸ್ವಾಮಿ.

ಶ್ರೀ ಬಿ. ಬಸವಲಿಂಗಪ್ಪ.—ಮಾಲೀಕ ಫಿರ್ಯಾದಿ ಕೊಟ್ಟರೆ, ಅತಿಕ್ರಮಣ ಪ್ರವೇಶ ಎಂದು ಹೇಳಿದರೆ, ಅತಿಕ್ರಮಣ ಮಾಡಿದವನ ಮೇಲೆ ಟ್ರಸ್‌ಪಾಸ್ ಕೇಸ್ ಹಾಕುವುದು, ಅತಿಕ್ರಮಣ ಪ್ರವೇಶ ಮಾಡಿದವನೇ ಮಾಲೀಕನ ಮೇಲೆ ಹಾಕಿದರೆ ಆತನ ಮೇಲೆ ೧೪೪ ಕೇಸ್ ಹಾಕುವುದು. ನಂತರ ಅದು ಸರಿಯಿಲ್ಲವೆಂದು ಹೇಳಿದರೆ ೧೦೭ ಕೇಸ್ ಹಾಕುವುದು. ಒಂದೇ ಕೇಸ್‌ನಲ್ಲಿ ಮಾಲೀಕನ ಮೇಲೆ ೧೦೭ ಕೇಸ್, ೧೪೫ ಕೇಸ್ ಹಾಕುವುದು, ಟ್ರಸ್‌ಪಾಸ್ ಕೇಸ್ ಹಾಕುವುದು, ಆಮೇಲೆ ಮರ್ಡರ್ ಕೇಸ್ ಹಾಕುವುದು ಇದೆಲ್ಲಾ ಒಬ್ಬರ ಮೇಲೆ ಹಾಕುವುದು. ಈ ಒಂದು ಸಿಟಿಯ ಪೋಲೀಸರಿಗೆ ಕಾನೂನು ಗೊತ್ತಿತ್ತೆಂದರೆ ಇಂತಹ ಕೆಲಸಕ್ಕೆ ಹೋಗುತ್ತಾ ಇರಲಿಲ್ಲ. ಇಂತಹ ಒಬ್ಬ ಸಬ್ ಇನ್ಸ್‌ಪೆಕ್ಟರ್ ಇವತ್ತು ಉನ್ನತ ಅಧಿಕಾರಿಯಾಗಿದ್ದಾರೆ.

ಅಧ್ಯಕ್ಷರು.—ಈ ರೀತಿ undue advantage ತೆಗೆದುಕೊಳ್ಳುವುದು ಸರಿಯಲ್ಲ. ದಯವಿಟ್ಟು ಕುಳಿತುಕೊಳ್ಳಿ.

SRI B. BASAVALINGAPPA.—Please do not use those words " Undue advantage ". I have not taken undue advantage.

SRI K. H. SRINIVAS.—Sir, it won't fit into your personality.

ಅಧ್ಯಕ್ಷರು.—ನಾನು ತಮಗೆ ಮಾತನಾಡಲು ಅರ್ಧ ತಾಸು ಅವಕಾಶ ಕೊಟ್ಟಿದ್ದೆನು. ತಾವು ಈಗ ಒಂದು ತಾಸು ತೆಗೆದುಕೊಂಡಿದ್ದೀರಿ. ತಾವು ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧ್ಯಕ್ಷರೇ, ಕಳೆದ ಒಂದೆರಡು ದಿವಸಗಳಿಂದ ನಿಮ್ಮ ಬಾಯಿಂದ ಇಂತಹ ಶಬ್ದಗಳು ಬರುತ್ತಾ ಇವೆ.

ಅಧ್ಯಕ್ಷರು.—ತಾವು ಚೆಂದ ಭಾಷಣವನ್ನು ಮಾಡುತ್ತಿದ್ದೀರಿ. ಆದರೆ ಇಲ್ಲಿ ಟೈಮ್ ಇಲ್ಲ. ಸೌಜನ್ಯತೆಯು ದುರುಪಯೋಗ ಆಗಿದೆ ಎಂದು ಹೇಳಿದೆ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಈ ರೀತಿ ಹೇಳಿದರೆ ನಾವು ಇಷ್ಟು ಹೊತ್ತು ಹೇಳಿದ್ದೆಲ್ಲಾ ಗಾಳಿಗೆ ಹೋಗುತ್ತದೆ. ಆದರಿಂದ ಏನು ಪ್ರಯೋಜನವಾಗುವುದಿಲ್ಲ.

ಅಧ್ಯಕ್ಷರು.—ತಾವು ದಯವಿಟ್ಟು ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಬಿ. ಬಸವಲಿಂಗಪ್ಪ.—ಇವತ್ತು ಬೆಂಗಳೂರು ನಗರದಲ್ಲಿ ಶಾಂತಿಭಂಗವಾಗಿದೆ. ಇವತ್ತು ಯಾರನ್ನು ಸಹಾ ಹಿಡಿಯುವುದಕ್ಕೆ ಹೋಗಿಲ್ಲ. ಯಾರು ಯಾರು ಕಂಪ್ಲೇಂಟ್ ಕೊಡುವುದಕ್ಕೆ ಹೋಗುತ್ತಾರೋ ಅವರನ್ನೇ ತಪ್ಪಿತಸ್ಥರು ಎಂದು ಹೇಳಿ ಅವರ ಮೇಲೆ ಕೇಸ್ ಹಾಕತಕ್ಕ ಪೋಲೀಸ್ ಸಿಬ್ಬಂಧಿ ಇದೆಯೋ ಇದನ್ನು ಸರಿ ಮಾಡಬೇಕೆಂದು ಹೇಳುತ್ತೇನೆ. ಇದನ್ನು ಸರಿ ಮಾಡದೇ ಹೋದರೆ ಜನರು ದಂಗೆ ಏಳುವ ಕಾಲ ಬರುತ್ತದೆ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಇದಕ್ಕಾಗಿ ತಮಗೆ ಧನ್ಯವಾದ ಕೊಡುತ್ತಿದ್ದೇನೆ.

SRI B. BASAVALINGAPPA.—Thank you.

ಶ್ರೀ ಜಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಅಧ್ಯಕ್ಷರೇ ಈ ರಾಜ್ಯಪಾಲರ ಭಾಷಣಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತಾ ನಾಲ್ಕು ಮಾತುಗಳನ್ನು ಈ ಬಗ್ಗೆ ಮಾತನಾಡುತ್ತಿದ್ದೇನೆ.

ಬಹುತೇಕ ಈ ಭಾಷಣದಲ್ಲಿ ಸಾಧಾರಣ ೧೦-೧೧ ಪುಟಗಳು ಭೀಕರ ಬರಗಾಲಕ್ಕೆ ತುತ್ತಾಗಿದೆ ಆದರೆ, ಇದರಲ್ಲಿ ಕೆಲವು ಮಾತುಗಳನ್ನೂ ಕೂಡಾ ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಅದು ಏನೆಂದರೆ. (೧) ಉದ್ಯೋಗಾರ್ಥಿಗಳಿಗ ಉದ್ಯೋಗ ಒದಗಿಸುವುದು, (೨) ಕುಡಿಯುವ ನೀರಿನ ಪೂರೈಕೆ (೩) ಜಾನುವಾರುಗಳಿಗೆ ಮೇವು ಪೂರೈಕೆ; ಮತ್ತು (೪) ಸಾಕಷ್ಟು ಆಹಾರ ಧಾನ್ಯಗಳ ಪೂರೈಕೆ. ಈ ಬಿಂಗಡಣೆಯನ್ನು ನೋಡಿದಾಗ ನಾವು ಎಷ್ಟರಮಟ್ಟಿಗೆ ಕಾರ್ಯಶೀಲರಾಗಿದ್ದೇವೆ ಎನ್ನುವುದನ್ನು ನಾವು ನೋಡಿಕೊಳ್ಳಬೇಕಾಗುತ್ತದೆ. ಆದರೆ ಒಂದು ಮಾತು ಮಾತ್ರ ನಿಜ. ನಾವೇನೋ ಚೆನ್ನಾಗಿ ಆಲೋಚನೆಯನ್ನು ಮಾಡಿದ್ದೇವೆ. ಆದರೆ, ಒಂದು ಮಾತನ್ನು ಯಾರೂ ಕೂಡಾ ಹೇಳುವುದಕ್ಕೆ ಮರೆಯಬಾರದು. ನಡೆಯುತ್ತಿರುವವನು ಎಡುವುದು ಸ್ವಾಭಾವಿಕ. ಹಾಗೆ ಕುಳಿತುಕೊಂಡಿರುವವರು ಯಾವತ್ತೂ ಎಡುವುದಿಲ್ಲ. ಕುಳಿತಿರುವವನೂ ಎಡವಿದರೆ ಆತನಿಗೆ ಏನೋ ರೋಗ ಬಂದಿದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರ ಅಲ್ಪಸ್ವಲ್ಪ ದೋಷಗಳು ಆಗಿವೆ, ಆದರೆ ಆಡಳಿತದಲ್ಲಿ ನಾವು ಹಿಡತವನ್ನು ತರಬೇಕಾದರೆ ಅಲ್ಲಿಯ ಶಾಸಕರನ್ನು ಮೊದಲ್ಗೊಂಡು ಎಲ್ಲರೂ ಕೂಡಾ ಜವಾಬ್ದಾರರಾಗಬೇಕೆಂದು ನಾನು ಹೇಳುತ್ತೇನೆ. ಇನ್ನು ಜಾನುವಾರುಗಳ ಮೇವನ್ನು ಒದಗಿಸುವ ಕಾರ್ಯಕ್ರಮದಲ್ಲಿ ನಾವು ಇನ್ನೂ ಮೊದಲಿನಿಂದಲೂ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೆ ನೆಟ್ಟಗಿತ್ತೇನೋ ಎಂದು ಹೇಳುತ್ತೇನೆ. ಆದರೂ ಕೂಡಾ ಮೇವನ್ನು ಬೆಳೆಯುತಕ್ಕ ರೈತರೂ ಕೂಡಾ ಆಲೋಚನೆಯನ್ನು ಮಾಡಬೇಕು. ಎಲ್ಲರೂ ಹಣದ ಬಗ್ಗೆ ಗಮನ ಕೊಡದೇ ದವಸಧಾನ್ಯ ಕಾಳುಕಡ್ಡಿ, ಮೇವನ್ನು ಬೆಳೆಯಿರಿ ಎಂದು ಹೇಳಿದ್ದೇವೆ. ಆದರೆ ಇನ್ನೂ ಕೂಡಾ ಅವರ ಮನವೊಲಿಸಿ ಕಾಳುಕಡ್ಡಿ ಮೇವು ಬೆಳೆಯಿಂದ ಇಂದು ಹೇಳಿದ್ದರೂ ಕೂಡಾ ಕೆಲವು ಕಡೆ ಅದಕ್ಕೆ ಅವರು ಒಪ್ಪುತ್ತಾ ಇಲ್ಲ. ನಾವು ಯಾವತ್ತೂ ಹಣ ಮಾತ್ರ ಸಂಪತ್ತು ಎಂದು ತಿಳಿಯದೇ ಆಹಾರಧಾನ್ಯ ಮಾತ್ರ ನಮ್ಮ ಸಂಪತ್ತು ಎಂದು ತಿಳಿಯುತ್ತೇವೆಯೋ ಅವತ್ತು ನಮಗೆ ಒಳ್ಳೆಯದಾಗುತ್ತದೆಂದು ಹೇಳಿದ್ದೇವೆ. ಇವತ್ತು ಆಡಳಿತದ ಬಗ್ಗೆ ಮಾನ್ಯ ಸದಸ್ಯರುಗಳು ಅನೇಕ ಟೀಕೆಗಳನ್ನು ಮಾಡಿದರು. ಇವತ್ತು ಹಸಿರು ಕಾರ್ಡ್ ಮತ್ತು ಬಟ್ಟೆಗಳ ಹಂಚಿಕೆ ವಿಷಯದಲ್ಲಿ ನಾಲ್ಕು ಮಾತುಗಳನ್ನು ಹೇಳಬೇಕೆಂದರೆ, ಈ ಕಾರ್ಯಕ್ರಮಗಳು ಕೇವಲ ಅಗ್ಗದ ಪ್ರಚಾರಕ್ಕಾಗಿ ಅಲ್ಲ ಎಂಬುದನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರು ತಿಳಿದುಕೊಳ್ಳಬೇಕು. ಸಾಮಾನ್ಯ ಜನರ ಮೂಲ ಜೀವನಕ್ಕೆ ಹತ್ತಿಕೊಂಡ ಸಮಸ್ಯೆಗಳು ಏನಿವೆ ಅವನ್ನು ಪೂರ್ಣವಾಗಿ ನಿವಾರಣೆ ಮಾಡುವುದಕ್ಕಾಗದಿದ್ದರೂ ಕೂಡಾ ಈ ರೀತಿಯ ಕಾರ್ಯಕ್ರಮಗಳಿಂದ ಅವರಿಗೆ ಪರಿಹಾರವನ್ನು ಕೊಟ್ಟಿದ್ದೇವೆ ಎಂಬುದನ್ನು ಮಾನ್ಯ ಸದಸ್ಯರು ನೆನಪಿನಲ್ಲಿಡಬೇಕೆಂದು ಹೇಳುತ್ತೇನೆ ಇನ್ನು ಪಂಚಾಯಿತಿಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಅಧಿಕಾರ ಕೇಂದ್ರೀಕೃತವಾಗಿ ಹೆಪ್ಪುಗಟ್ಟಿ ಏನು ಹಲವಾರು ವರ್ಷಗಳಿಂದ ನಿಂತಿತ್ತು ಅದು ಎಲ್ಲರಲ್ಲೂ ಸಮವಾಗಿ ವಿತರಣೆಯಾಗಲಿ ಎನ್ನುವ ದೃಷ್ಟಿಯಿಂದ ತಾಲ್ಲೂಕು ಪಂಚಾಯಿತಿ, ಮಂಡಲ್ ಪಂಚಾಯಿತಿಗಳನ್ನು ಮಾಡಿದ್ದು ಆಗಿದೆ. ಆದರೆ ಇನ್ನೂ ಚುನಾವಣೆಗಳು ಆಗಿಲ್ಲ. ಮುಂದೆ ಆಗುತ್ತವೆ. ಆದರೆ ಈ ಒಂದು ಬರಗಾಲದ ಭೀಕರ ಪರಿಸ್ಥಿತಿಯಲ್ಲಿ ಈ ಚುನಾವಣೆಗಳನ್ನು ಮುಂದೂಡುವುದು ಒಂದು ರೀತಿಯಲ್ಲಿ ಒಳ್ಳೆಯದೆಂದು ಅನಿಸುತ್ತದೆ.

ಇನ್ನು ಕೆಲವು ಅಭಿವೃದ್ಧಿಯ ವಿಚಾರಕ್ಕೆ ಸಂಬಂಧಪಟ್ಟಂತೆ ಪುರಸಭಾ ಪರಿಷತ್ತುಗಳನ್ನೂ ಕೂಡ ಪಂಚಾಯಿತಿ ಆಡಳಿತಕ್ಕೆ ಒಳಪಡಿಸಬೇಕು. ಇದು ೧೦ ಸಾವಿರ ಜನಸಂಖ್ಯೆಗಿಂತ ಕಡಿಮೆ ಇರಬೇಕೆಂದು ಕೆಲವು ಮಾನ್ಯ ಸದಸ್ಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಇದನ್ನು ಇನ್ನೂ ಸ್ವಲ್ಪ ವಿಸ್ತರಿಸಿ ೧೨ ಸಾವಿರ ಜನಸಂಖ್ಯೆ ಎಂದು ಮಾಡಿದರೆ ಒಳ್ಳೆಯದೆಂದು ಅನಿಸುತ್ತದೆ.

ಇನ್ನು ಭ್ರಷ್ಟಾಚಾರದ ಬಗ್ಗೆ ವ್ಯಾಖ್ಯಾನ ಮಾಡುವುದು ಬಹಳ ಕಷ್ಟ. ಏಕೆಂದರೆ ಈ ಭ್ರಷ್ಟಾಚಾರದ ಬಗ್ಗೆ ನಾನು ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದೇನೆ. ಇದು ಯಾವುದೋ ಮೂಲೆಯಲ್ಲಿ ಏನೂ ಕುಳಿತಿಲ್ಲ. ಇದನ್ನು ಎಲ್ಲೂ ಹೋಗಿ ಹುಡುಕಬೇಕಾಗಿಲ್ಲ. ಇದು ನಮ್ಮ, ನಿಮ್ಮ ಕಿಸೆಯಲ್ಲೇ ಇದೆ. ನಮ್ಮ, ನಿಮ್ಮ ಜೇಬುಗಳನ್ನು ಹುಡುಕಿ ನೋಡಿಕೊಂಡರೆ ಇದು ಕಂಡು ಬರುತ್ತದೆ. ನಾವು ತಂದಿರುವ ಲೋಕಾಯುಕ್ತ ಮಸೂದೆ ಈ ಭ್ರಷ್ಟಾಚಾರವನ್ನು ಪೂರ್ಣವಾಗಿ ತೊಡೆದುಹಾಕುತ್ತದೆಯೋ ಎಂದು ಕೇಳಬಹುದು. ಇದು ಭ್ರಷ್ಟಾಚಾರವನ್ನು ನಿಗ್ರಹ ಮಾಡತಕ್ಕ ಒಂದು ಅಂಕುಶ. ಈ ಭ್ರಷ್ಟಾಚಾರವನ್ನು ಪೂರ್ಣವಾಗಿ ಜಾಲಾಡಿಸಿ ಹೊರಗೆ ಹಾಕುತ್ತೇವೆಂದು ಹೇಳುವುದು ಸ್ವಲ್ಪ ಕಷ್ಟ.

ಇದರ ಬಗ್ಗೆ ನಾವೆಲ್ಲರೂ ನಮ್ಮ ನಮ್ಮ ಆತ್ಮಶೋಧನೆ ಮಾಡಿಕೊಳ್ಳಬೇಕು. ಲೋಕಾಯುಕ್ತದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನೂ ಸೇರಿಸಿ ಮಾಡಿರುವುದರಿಂದ ಈ ಮಸೂದೆಯನ್ನು ಎಲ್ಲರೂ ಮೆಚ್ಚುತ್ತಾರೆ. ಆಡಳಿತವನ್ನು ನಡೆಸುವವರು ತಮ್ಮ ತಲೆಯಮೇಲೆಯೇ ಖಡ್ಗವನ್ನು ತೂಗಿಬಿಟ್ಟುಕೊಂಡು ಕೆಲಸ ಮಾಡುವುದಿಲ್ಲ. ಅಥವಾ ಆಡಳಿತವನ್ನು ಮಾಡುವುದಿಲ್ಲ ಆದರೆ ನಾವು ಲೋಕಾಯುಕ್ತವನ್ನು ನಮ್ಮ ಮೇಲೆ ಇಟ್ಟುಕೊಂಡು ಅದರ ನೆರಳಿನಲ್ಲಿ ಆಡಳಿತವನ್ನು ನಡೆಸುತ್ತಿದ್ದೇವೆ. ಅದು ಬೀಳ ಬಹುದು ಅಥವಾ ಬೀಳದಿರಬಹುದು. ಆದರೂ ಇದರ ಒಂದು ಹೆದರಿಕೆಯಿಂದ ನಾವು ಆಡಳಿತವನ್ನು ಮಾಡುತ್ತಿರುವುದರಿಂದ ನಮ್ಮ ನೈತಿಕ ಶಕ್ತಿಯನ್ನು ಹೆಚ್ಚು ಮಾಡಿಕೊಳ್ಳ ತಕ್ಕ ದಿಸೆಯಲ್ಲಿ ಲೋಕಾಯುಕ್ತ ಮಸೂದೆ ಪೂರಕವಾಗಿದೆ ಎಂಬುದನ್ನು ಯಾರೂ ಕೂಡ ಮರೆಯ ಬಾರದು. ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಮಾನ್ಯ ಸದಸ್ಯರಾದ ಕೆ. ಹೆಚ್. ಶ್ರೀನಿವಾಸ್‌ರವರು ಒಂದು ಮಾತನ್ನು ಬಹಳ ಚೆನ್ನಾಗಿ ಹೇಳಿದರು. ಅವರು ಆ ಮಾತನ್ನು ಹೇಳಿದ್ದಕ್ಕೋಸ್ಕರ ನಾನು ಮಾತನಾಡುವುದಕ್ಕೆ ನಿಂತುಕೊಂಡಿದ್ದೇನೆ. ಮಾನ್ಯ ಸದಸ್ಯರು ಮಾತನಾಡುವಾಗ ಇದು 'ಹುಚ್ಚುರಾಯನ ತೇರು ಇದ್ದಹಾಗೆ' ಎಂದು ಹೇಳಿದರು. ಈ ಮಾತನ್ನು ನಾನು ಯೋಚನೆ ಮಾಡಿ ನಮ್ಮಲ್ಲಿ ಎಷ್ಟು ಜನ ಹುಚ್ಚರಿದ್ದೇವೆ ಎಂದು ನೋಡಿದೆ. ಬಹುತೇಕ ನಮ್ಮ ಕರ್ನಾಟಕ ರಾಜ್ಯದಲ್ಲಾಗಲಿ ಅಥವಾ...... ......

ಶ್ರೀ ಕೆ. ಹೆಚ್. ಶ್ರೀನಿವಾಸ್.—''ಹುಚ್ಚುರಾಯ ಎಂದರೆ ಆಂಜನೇಯ'' ಅಂತ. ಅಂದರೆ ಆಂಜನೇಯನಂತೆ ನೀವು ಬಹಳ ಪರಾಕ್ರಮಶಾಲಿಗಳು, ಎನ್ನುವ ಅರ್ಥದಲ್ಲಿ ನಾನು ಹೇಳಿದ್ದು.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಆಂಜನೇಯನು ಇನ್ನೊಬ್ಬರ ಪಾದದ ಅಡಿಯಲ್ಲಿ ಬದುಕುವ ವ್ಯಕ್ತಿಯಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಶ್ರೀರಾಮಚಂದ್ರನ ಪಾದದ ಅಡಿಯಲ್ಲಿ.. ....

ಶ್ರೀ ಜ್ಞಾನದೇವ ದೊಡ್ಡಮೇಟಿ.—ಹುಚ್ಚುರಾಯನ ತೇರಿನ ಬಗ್ಗೆ ಬಹಳ ಚೆನ್ನಾಗಿ ಹೇಳಿದಿರಿ. ಜಾಣರು ಒಬ್ಬರಿಗೊಬ್ಬರು ಸೇರಿ ತೇರನ್ನು ಸರಿಯಾಗಿ ಎಳೆದರೆ ಅದು ಯಾವ ನೆಲೆಯಲ್ಲಿ ನಿಲ್ಲಬೇಕೋ ಅಲ್ಲಿ ನಿಲ್ಲುತ್ತದೆ. ಆದರೆ ಹುಚ್ಚರು ಸೇರಿಕೊಂಡು ಅಡ್ಡಾದಿಡ್ಡಿಯಾಗಿ ತೇರನ್ನು ಎಳೆದರೆ ಅದು ಇನ್ನೆಲ್ಲೋ ಹೋಗಿ ನಿಲ್ಲುತ್ತದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ ಆದರೆ ಕೆಲವು ಸಂದರ್ಭದಲ್ಲಿ ಜಾಣರಿಗಿಂತ ಹುಚ್ಚರೇ ಎಷ್ಟೋ ಪಾಲು ಮೇಲು ಎಂಬುದಕ್ಕೆ ಒಂದು ಉದಾಹರಣೆ ಕೊಡುವುದಾದರೆ ರಾಮಕೃಷ್ಣ ಪರಮಹಂಸರಿಗೂ ಒಂದು ಹುಚ್ಚು ಹಿಡಿದಿತ್ತು. ಅವರು ಏನು ಹೇಳಿದರು ಎಂದರೆ, ''ನನಗೆ ದೇವರ ಹುಚ್ಚು ಹಿಡಿದಿದೆ" ಎಂದು ಅದೇ ರೀತಿ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರಿಗೂ ಒಂದು ಹುಚ್ಚು ಹಿಡಿದಿದೆ. ಅವರಿಗೆ ಹಿಡಿದಿರತಕ್ಕ ಹುಚ್ಚು ಯಾವುದು ಎಂದರೆ ಈ ರಾಜ್ಯವನ್ನು ಒಳ್ಳೆಯ ಅಭಿವೃದ್ಧಿ ದಿಸೆಯಲ್ಲಿ ಕೊಂಡೊಯ್ಯಬೇಕು ಎಂಬುದು. ಅಷ್ಟೇ ಹೊರತು ಈ ರಾಜ್ಯವನ್ನು ಇನ್ನೊಬ್ಬರ ಅಡಿಯಲ್ಲಿ ತೆಗೆದುಕೊಂಡುಹೋಗಿ ಬಿಡಬೇಕೆಂಬ ಹುಚ್ಚು ಅಲ್ಲ ಇಲ್ಲಿ ಹುಚ್ಚರು ಎಂಬುದಕ್ಕೆ ಒಂದು ದೊಡ್ಡ ವ್ಯಾಖ್ಯಾನವನ್ನೇ ಕೊಡಬಹುದು.

ಶ್ರೀ ಬಿ. ಬಸವಲಿಂಗಪ್ಪ.—ರಾಮಕೃಷ್ಣ ಪರಮಹಂಸರಿಗೆ ಹುಚ್ಚು ಹಿಡಿದಿತ್ತು ಎಂದು ಹೇಳಿದಿರಿ. ಅದು ಯಾವುದೇ ಹುಚ್ಚು ಇರಲಿ. ಆದರೆ ಅವರಿಗೆ ಮದುವೆಯಾಗತಕ್ಕ ಹುಚ್ಚು ಏತಕ್ಕೆ ಬಂತು? ಅವರು ಏತಕ್ಕೆ ಮದುವೆ ಆದರು?

ಶ್ರೀ ಜ್ಞಾನದೇವ ದೊಡ್ಡಮೇಟಿ.—ಹೆಂಡತಿಯನ್ನು ಪೂಜೆ ಮಾಡಬೇಕೆಂಬ ಮನಸ್ಸು ಬಂದಿರಬಹುದು. ಮಾನ್ಯ ಶ್ರೀನಿವಾಸ್‌ರವರೇ ಒಬ್ಬರು ಹುಚ್ಚರು ಎಂದು ನಾನು ತಿಳಿದುಕೊಂಡಿದ್ದೆ. ಆದರೆ ನಮ್ಮ ತಾಲ್ಲೂಕಿನಲ್ಲಿ......

ಶ್ರೀ ಕೆ. ಹೆಚ್. ಶ್ರೀನಿವಾಸ್.—ಎಲ್ಲರೂ ಹಳ್ಳಿಯವರು. ಎಲ್ಲರೂ ಒಳ್ಳೆಯವರು ಆದರೆ ತೇರನ್ನು ಎಳೆಯುವಾಗ ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ಎಳೆಯುತ್ತಾರೆ. ಅದೇ ರೀತಿ ನಿಮ್ಮ ಸರ್ಕಾರದಲ್ಲಿ ಒಬ್ಬೊಬ್ಬ ಮಂತ್ರಿಗಳೂ ಒಂದೊಂದು ಕಡೆ ಎಳೆದರೆ ಏನಾಗಬಹುದು ?

ಶ್ರೀ ಜ್ಞಾನದೇವ ದೊಡ್ಡಮೇಟಿ.—ಅಂದರೆ ಅವರೆಲ್ಲರೂ ಹುಚ್ಚರೆ ? ನಾವು ಆಡಳಿತವನ್ನು ಮಾಡುವಾಗ ಜನರ ಮನಸ್ಸನ್ನು ಸ್ಪಂದಿಸುವಂಥ ಉತ್ತಮ ಕೆಲಸಗಳನ್ನು ಮಾಡುತ್ತಿದ್ದೇವೆ. ನಾವು

ಮಾಡುವ ಕೆಲಸ ಕೆಲವರ ಕಣ್ಣಿಗೆ ಒಂದು ರೀತಿಯಲ್ಲಿ ಕಾಣಬಹುದು. ಆದರೆ ಕೆಲವರು ಜನರ ಮನಸ್ಸನ್ನು ಅರಿಯದೆ, ಅವರ ಮನಸ್ಸನ್ನು ಸ್ಪಂದಿಸದೆ ಆಕಾಶದಲ್ಲೇ ನಡೆದು ಆಡಳಿತವನ್ನು ಕಳೆದುಕೊಂಡರಲ್ಲಾ ಅವರು ಹುಚ್ಚರು. ಈ ಕರ್ನಾಟಕ ರಾಜ್ಯವನ್ನು ಸಮೃದ್ಧ ರಾಜ್ಯವನ್ನಾಗಿ ಮಾಡಬೇಕೆಂಬ ಬಲವಾದ ಆಸೆ ನಮ್ಮ ಸರ್ಕಾರಕ್ಕೆ ಇದೆ ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಉಲ್ಲೇಖ ಮಾಡಬೇಕಾಗಿದೆ. ಹುಚ್ಚಿನಲ್ಲಿ ಎರಡು ರೀತಿಯ ಹುಚ್ಚು ಇರುತ್ತದೆ. ಒಂದು ಅಧಿಕಾರವನ್ನು ಇಟ್ಟುಕೊಂಡಿದ್ದ ಹುಚ್ಚು, ಇನ್ನೊಂದು ಅಧಿಕಾರವನ್ನು ಕಳೆದುಕೊಂಡ ಹುಚ್ಚು. ಆದರೆ ಅಧಿಕಾರವನ್ನು ಇಟ್ಟುಕೊಂಡ ಹುಚ್ಚಿಗಿಂತಲೂ ಅಧಿಕಾರವನ್ನು ಕಳೆದುಕೊಂಡ ಹುಚ್ಚು ಬಹಳ ಕೆಟ್ಟ ಹುಚ್ಚು ಇದು ತಮಗೆ ಗೊತ್ತಿರಬಹುದು.

ಇನ್ನು ಹಣಕಾಸಿನ ಸಂಗ್ರಹದ ಬಗ್ಗೆ ಮತ್ತು ಸಂಗ್ರಹಿಸಿದ ಹಣವನ್ನು ನಾವು ಯಾವರೀತಿ ವಿನಿಯೋಗ ಮಾಡಬೇಕೆಂಬ ಬಗ್ಗೆ ಕೆಲವರು ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಮಿತವ್ಯಯವನ್ನು ಒಪ್ಪತಕ್ಕ ಮನುಷ್ಯ. ಈ ಮನೆಯ ಹಿರಿಯ ಸದಸ್ಯರಾದ ಮಾನ್ಯ ಕೆ. ಹೆಚ್. ಪಾಟೀಲ್ ರವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಹಣವನ್ನು ಎತ್ತುವುದನ್ನು ಮಾನ್ಯ ಸದಸ್ಯರಾದ ಕೆ. ಹೆಚ್. ಪಾಟೀಲ್ ರವರಿಂದ ಕಲಿಯಬೇಕು. ಹಣವನ್ನು ಎತ್ತುವ ಕಲೆ ಮಾನ್ಯ ಪಾಟೀಲ್‌ರವರಿಗೆ ಚೆನ್ನಾಗಿ ಗೊತ್ತಿದೆ. ಅವರು ಮಂತ್ರಿಗಳಾಗಿದ್ದಾಗ ಹುಲ್ಕೋಟಿ ಒಂದೇ ಒಂದು ಅವರ ದೃಷ್ಟಿಯಲ್ಲಿದ್ದುದು. ಅವರು ಎತ್ತಿದ ಹಣದನ್ನು ಇಡೀ ಕರ್ನಾಟಕ ರಾಜ್ಯಕ್ಕೆ ಹಂಚಿದ್ದರೆ ಬಹಳ ಒಳ್ಳೆಯ ಕೆಲಸವನ್ನು ಮಾಡಿದಂತಾಗುತ್ತಿತ್ತು...

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ನಾನು ಕೇವಲ ಹುಲ್ಕೋಟಿಯಲ್ಲಿ ಮಾತ್ರ ಕೆಲಸ ಮಾಡಿಲ್ಲ. ಹರಿಹರದಲ್ಲಿ ಏನು ಕೆಲಸ ಮಾಡಿದ್ದೇನೆ. ಕೂರ್ಗ್‌ನಲ್ಲಿ ಏನು ಕೆಲಸ ಮಾಡಿದ್ದೇನೆ. ಅದೇರೀತಿ ಗುಲ್ಬರ್ಗಾ, ಬೀದರ್‌ನಲ್ಲಿ ನಾನು ಏನೇನು ಕೆಲಸಮಾಡಿದ್ದೇನೆ ಅವನ್ನು ಮಾನ್ಯ ಸದಸ್ಯರು ತಿಳಿದಿಲ್ಲ. ನಾನು ಮಾಡಿದಂಥ ಕೆಲಸವನ್ನು ಅವರು ಮಾಡಿದರೆ ಸಾಕು. ನನಗೆ ಅವರು ಏನೂ ಮಾಡುವುದು ಬೇಡ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಇನ್ನು ಕನ್ನಡ ಆಡಳಿತ ಭಾಷಾ ವರ್ಷ ಎಂದು ಮಾನ್ಯ ರಾಜ್ಯಪಾಲರು ಏನು ಹೇಳಿದ್ದಾರೆ ಇದು ಮೆಚ್ಚತಕ್ಕ ಮಾತು. ಕನ್ನಡದ ಬಗ್ಗೆ ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ಯಾವುದೇ ಒಂದು ಒತ್ತಾಯ ಮಾಡಿದರೆ ಯಾವ ಭಾಷೆಯೂ ಬೆಳೆಯುವುದಿಲ್ಲ. ಆಡಳಿತ ನಡೆಸುವವರಲ್ಲಿ ಪ್ರೀತಿ ವಿಶ್ವಾಸ ಇರಬೇಕು ಆಗ ಮಾತ್ರ ಕನ್ನಡದ ಬಳಕೆಗೆ ಒಂದು ಶಕ್ತಿ ಬರುತ್ತದೆ. ಇನ್ನೊಂದು ವಿಚಾರವನ್ನು ಹೇಳುವುದಾದರೆ ರಾಜ್ಯದಲ್ಲಿ ಸಂಸ್ಕೃತ ಅಕೆಡೆಮಿಯನ್ನು ಸ್ಥಾಪಿಸುವ ವಿಚಾರ ಏನಿದೆ ಅದು ಕನ್ನಡದ ಅಭಿವೃದ್ಧಿಗೆ, ಕನ್ನಡದ ಬಳಕೆಗೆ ಅಡ್ಡಿ ಬರದಿದ್ದರೆ ಅದಕ್ಕೆ ನನ್ನ ಅಭ್ಯಂತರವಿಲ್ಲ ಆದರೆ ಎಷ್ಟೋ ಕಡೆ ಇವತ್ತಿಗೂ ಏನಾಗಿದೆ ಎಂದರೆ ಕನ್ನಡವನ್ನು ಬಳಸುವುದೇ ಕಡಿಮೆ ಆಗಿದೆ. ಆದ್ದರಿಂದ ಅಂತಹ ಅಧಿಕಾರಿಗಳ ಮೇಲೆ ಕ್ರಮ ಕೈಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಮತ್ತೊಂದು ವಿಚಾರವೇನೆಂದರೆ ಕೇಂದ್ರ ಸರ್ಕಾರದವರು ಶಾಲೆಗಳನ್ನು ತೆಗೆಯುತ್ತಾರೆ. ಅದು ಹಿಂದಿ ಭಾಷೆಯನ್ನು ಕಲಿಸತಕ್ಕಂಥ ಶಾಲೆಗಳು. ಆದ್ದರಿಂದ ಕನ್ನಡವನ್ನೇ ಮುಖ್ಯವಾಗಿ ಇಟ್ಟುಕೊಂಡು ತೆಗೆಯತಕ್ಕಂಥ ಶಾಲೆಗಳಿಗೆ ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳುತ್ತೇನೆ.

ಇಂದು ಬಹಳವಾಗಿ ಹಣಕಾಸಿನ ವ್ಯವಹಾರಗಳು ನಡೆಯತಕ್ಕಂಥದ್ದು ಎಂದರೆ ಬ್ಯಾಂಕ್‌ಗಳಲ್ಲಿ. ಕೆನರಾಬ್ಯಾಂಕ್ ಇನ್ನಿತರೇ ಬ್ಯಾಂಕುಗಳಲ್ಲಿ ಜನಸಾಮಾನ್ಯರು ಬಳಸತಕ್ಕಂಥ ಕನ್ನಡ ಭಾಷೆಯಲ್ಲಿ ವ್ಯವಹಾರವನ್ನು ನಡೆಸುತ್ತಿಲ್ಲ, ಇಂಗ್ಲೀಷ್ ಮತ್ತು ಹಿಂದಿಯಲ್ಲಿಯೇ ವ್ಯವಹಾರಗಳನ್ನು ನಡೆಸುತ್ತಿರುತ್ತಾರೆ. ಇದು ಬಹಳ ತಪ್ಪು. ಕನ್ನಡವನ್ನು ಓದಲಿಕ್ಕೆ ಬರದೇ ಇರತಕ್ಕಂಥ ಜನರು ನಮ್ಮ ಜನರಿಗೆ ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಫಾರಂಗಳನ್ನು ಕೊಟ್ಟರೆ ಯಾವ ರೀತಿ ಅವರು ಅರ್ಥಮಾಡಿಕೊಳ್ಳಲು ಸಾಧ್ಯ ? ಆದ್ದರಿಂದ ಪ್ರಾದೇಶಿಕ ಭಾಷೆಯಾದ, ಮಾತೃ ಭಾಷೆಯಾದ ಕನ್ನಡದಲ್ಲಿಯೇ ಫಾರಂಗಳನ್ನು ಪ್ರಿಂಟ್ ಮಾಡಿಸಿ ಒದಗಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಸಮಗ್ರ ಕನ್ನಡ ಭಾಷಾ ವರ್ಷವೆಂದು ಆಚರಣೆ ಮಾಡುತ್ತಿರುವ ಸಂದರ್ಭದಲ್ಲಿ ಕೇವಲ ಆಡಳಿತಕ್ಕೆ ಸೀಮಿತವಾಗಿರತಕ್ಕಂಥ

ಇನ್ನಿತರ ಬ್ಯಾಂಕುಗಳ ವ್ಯವಸ್ಥೆಯಲ್ಲೂ ಕೂಡ ಹಿಡಿತವನ್ನು ಇಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಅಲ್ಲೂ ಕೂಡ ಕನ್ನಡದ ಕಂಪು ಅರಿದುಂಬರಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ನೀರಾವರಿ ಮತ್ತು ಒಣಬೇಸಾಯ ಪದ್ಧತಿಯ ಬಗ್ಗೆ ಹೆಚ್ಚಿನ ಲಕ್ಷವನ್ನು ಕೊಡಬೇಕೆಂದು ಹೇಳುತ್ತೇನೆ. ದುರ್ದೈವದಿಂದ ರಾಜ್ಯವು ನಿರಂತರ ಕ್ಷಾಮಕ್ಕೆ ತುತ್ತಾಗುತ್ತಿದೆ. ಮಾನ್ಯ ಹಾರ್ಡಿಕರ್ ರವರು ಬರೆದಂಥ ಪುಸ್ತಕವನ್ನು ಓದಿದಾಗ ಏನು ಗೊತ್ತಾಗುತ್ತದೆ ಎಂದರೆ ೧೯೪೪೨ನೇ ಇಸವಿಯಲ್ಲಿ ಭೀಕರ ಬರಗಾಲ ಇದ್ದಾಗ ಆಗಿನ ಆಡಳಿತ ವ್ಯವಸ್ಥೆಯಲ್ಲಿ ರೈತರಿಗೆ ನೀವು ಕಡ್ಡಾಯವಾಗಿ ಜೋಳ, ರಾಗಿಯನ್ನು ಬೆಳೆಯಲೇಬೇಕೆಂದು ಕಾನೂನು ಮಾಡಿದ್ದರು. ಆದ್ದರಿಂದ ಕಾನೂನನ್ನು ಮಾಡಬೇಕು ಎನ್ನುವ ವಿಚಾರ ಅಂದು ಇತ್ತು. ಹಾಗೆಯೇ ನಾವು ಕೂಡ ಕಡ್ಡಾಯವಾಗಿ ರೈತರು ದವಸ ಧಾನ್ಯಗಳನ್ನು ಬೆಳೆಯಲೇ ಬೇಕು ಎನ್ನುವ ಕಾನೂನನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಇನ್ನು ಹಸಿರು ಕಾರ್ಡುಗಳನ್ನು ಹಂಚುವ ಬಗ್ಗೆ ಬಹಳವಾಗಿ ಮಾನ್ಯ ಸದಸ್ಯರು ಹೇಳಿದರು ನಿಜವಾಗಿಯೂ ಕೂಡ ಯಾರು ಬಡವರು ಇದ್ದಾರೆ ಅವರಿಗೆ ಈ ಸೌಲಭ್ಯಗಳು ಮುಟ್ಟಿಲ್ಲವೆಂದು ಹೇಳಿದರು. ಯಾವುದೇ ಸರ್ಕಾರದವರು ಮಾಡತಕ್ಕಂಥ ವ್ಯವಸ್ಥೆಯಲ್ಲಿ ಗ್ರಾಮದ ಮುಖ್ಯಸ್ಥರು ಇರುತ್ತಾರೆ, ಹಲವರು ಇರುತ್ತಾರೆ, ಅವರ ಪ್ರಭಾವಕ್ಕೆ ಒಳಗಾಗಿ ಅನೇಕ ಅಡೆತಡೆಗಳು ಆಗುತ್ತವೆ, ಅದನ್ನೆಲ್ಲ ತಗೆದುಕೊಂಡು ನೇರವಾಗಿ ಸರ್ಕಾರದ ಮೇಲೆ ಗೂಬೆ ಕೂರಿಸತಕ್ಕಂಥದ್ದು ಸಾಧುವಾದುದಲ್ಲ. ನಮ್ಮ ತಾಲ್ಲೂಕಿನಲ್ಲಿ ಏನೇನು ನಡೆದಿದೆ ಎನ್ನುವ ಬಗ್ಗೆ ಹಾಗೂ ಇರತಕ್ಕ ಅನೇಕ ಅಡೆ ತಡೆಗಳ ಬಗ್ಗೆ ಪರಿಶೀಲಿಸಿ ಅವುಗಳನ್ನು ಸರಿಪಡಿಸತಕ್ಕಂಥ ಶಕ್ತಿ ಪಡೆದುಕೊಂಡಿದ್ದೇವೆ. ಕಾರ್ಡುಗಳು ಬಡವರಿಗೆ ಸರಿಯಾಗಿ ಕೊಟ್ಟಿಲ್ಲವೆಂದರೆ ಅದನ್ನು ನಾವೇ ಸರಿಪಡಿಸಬಹುದು. ಇನ್ನು ಫೆಬ್ರುವರಿ ಕೊನೆಯವರೆವಿಗೂ ಪುನರ್ ವಿಮರ್ಶೆ ಮಾಡಲು ಸರ್ಕಾರದವರು ಆಜ್ಞೆಯನ್ನು ಮಾಡಿರುವ ಬಗ್ಗೆ ಎಲ್ಲರೂ ಸ್ವಾಗತಿಸಿದ್ದಾರೆ.

ಇನ್ನು ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಸಲ್ಲಿಸಿ, ರಾಜ್ಯಪಾಲರ ಭಾಷಣ ರಾಜ್ಯದ ಅಭಿವೃದ್ಧಿ ಚಿತ್ರದ ರೇಖೆಗಳನ್ನೇ ಎಳೆದಿದೆ. ಈ ಚಿತ್ರದ ರೇಖೆಗೆ ಆಡಳಿತದ ಜೀವನವನ್ನು ತುಂಬಬೇಕು. ಈ ಕಾರ್ಯವನ್ನು ಸರ್ಕಾರ ಮಾಡುತ್ತದೆ ಎನ್ನುವ ಆಶಯವನ್ನು ಇಟ್ಟುಕೊಂಡು ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನು ನಾನು ನನ್ನ ಗುರುಗಳಾದ ಶ್ರೀ ಗೋಪಾಲಗೌಡರು ವಿರೋಧಿಸಿದ ರೀತಿಯಲ್ಲಿ ವಿರೋಧಿಸಲಿಕ್ಕೆ ಆಗದಿದ್ದರೂ ನನ್ನದೆ ಆದ ರೀತಿಯಲ್ಲಿ ರಾಜ್ಯಪಾಲರ ಭಾಷಣವನ್ನು ವಿರೋಧಿಸುತ್ತೇನೆ. ಈ ರಾಜ್ಯಪಾಲರ ಭಾಷಣ ನಿಸ್ಸಾರವಾಗಿದೆ. ಮಾನ್ಯ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಹಾಡಿದ ಹಾಡನ್ನೇ ಕ್ಯಾಸೆಟ್ ತಯಾರಿಸಿ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿ ನಮ್ಮ ಕೈಯಲ್ಲಿ ಕೊಟ್ಟಿದ್ದಾರೆ. ಅದರ ಬ್ಯಾಕ್‌ಗ್ರೌಂಡ್ ಬೇರೆ ಇದ್ದರೂ ರಾಜ್ಯಪಾಲರ ಹೆಸರಿನಲ್ಲಿ ಜನರ ಶೋಷಣೆ ಮಾಡತಕ್ಕಂಥದ್ದು ಸರಿಯಲ್ಲ. ಇಲ್ಲಿ ನಾವು ಏನೇ ಹೇಳಿದರೂ ಕೂಡ ಅದನ್ನು ಬಹಳ ಚೆನ್ನಾಗಿ ಸಮರ್ಥನೆ ಮಾಡಿಕೊಳ್ಳುತ್ತೀರಿ. ಕಳೆದ ಎರಡು ವರ್ಷಗಳ ಹಿಂದೆ ಒಂದು ಪ್ರಕರಣ ನಡೆಯಿತು. ಪಾವಗಡ ಒಂದು ಸಣ್ಣ ಹಳ್ಳಿಯಲ್ಲಿ ಸಣ್ಣ ಮಕ್ಕಳನ್ನು ಹೊತ್ತು ಹೋಗುತ್ತಿದ್ದಾರೆಂದು ಹೇಳಿ ಮಕ್ಕಳ ತಂದೆತಾಯಿಗಳು ಬೊಬ್ಬೆ ಹಾಕಿದರು. ಕ್ಷೇತ್ರದ ಜನರು ಬೊಬ್ಬೆ ಹಾಕಿದರು. ಹೆಣ್ಣು ಮಕ್ಕಳನ್ನು ಹಾರಿಸಿಕೊಂಡು ಹೋಗುತ್ತಿದ್ದಾರೆ. ಬೊಬ್ಬೆ ಹಾಕಿದರು. ಇದಕ್ಕೆ ಆ ಕಡೆ ಕುಳಿತಂತಹ ಸದಸ್ಯರುಗಳು, ಮಾನ್ಯ ಮುಖ್ಯಮಂತ್ರಿಗಳು, ಮತ್ತು ಅಧಿಕಾರಿ ವರ್ಗದವರು, ಪೋಲೀಸ್ ಅಧಿಕಾರಿಗಳು, ಎಲ್ಲರೂ ತೋಳ ತೋಳ ಎಂದು ಹೇಳಿಕೆಯನ್ನು ಕೊಟ್ಟು ಸಾಧನೆ ಮಾಡಿಯೇ ಬಿಟ್ಟರು. ಯಾವುದೋ ಒಂದು ಕಾಡು ಪ್ರಾಣಿ, ವನ್ಯ ಪ್ರಾಣಿಯಾದ ತೋಳವನ್ನು ಹಿಡಿದು ಕೊಂಡು ಅದರ ಬಾಯಿಗೆ ಕಡ್ಡಿಯನ್ನು ತುರುಕಿ ಜೀಪಿನಲ್ಲಿಟ್ಟುಕೊಂಡು, ಅದರ ಮೇಲ್‌ಗಡೆ ಪಾವಗಡದ ತೋಳ ಎಂದು ಬರೆದು, ವಿಧಾನ ಸೌಧದ ಮುಂಭಾಗದಲ್ಲಿ ತಂದು ನಿಲ್ಲಿಸಿಕೊಂಡು ಪ್ರದರ್ಶನ ಮಾಡಿದರು. ಈವತ್ತು ಜನ ಏನು ಹೇಳುತ್ತಾರೆಂದರೆ ಮಕ್ಕಳನ್ನು ಹಿಡಿದು ಕೊಂಡು ಹೋದಂಥದ್ದು ಪಾವಗಡದ ತೋಳವಲ್ಲ. ಸರ್ಕಾರದ ಬೆಂಬಲವನ್ನು ಪಡೆದಂಥ ಜನ, ಸರ್ಕಾರದ ಆಶ್ರಯದಲ್ಲಿರತಕ್ಕಂಥ ಜನ ಕೊಲೆ ಮಾಡಿದರು ಎಂದು ಈವತ್ತಿನ ದಿವಸ ಎಲ್ಲರಿಗೂ ಗೊತ್ತಾಗಿದೆ. ತಾವು ಅವತ್ತಿನ ದಿವಸ ಏನು ಹೇಳಿದಿರಿ ಅದಕ್ಕೆ ತದ್ವಿರುದ್ಧವಾಗಿ ಈವತ್ತು ಹೇಳುತ್ತಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಸರ್ಕಾರದ ಬೆಂಬಲವನ್ನು ಪಡೆದಂಥ ಜನ ಮಕ್ಕಳನ್ನು ಕೊಲೆ ಮಾಡಿದರು ಎಂದು ಹೇಳಿದರು. ಕೊಲೆ ಯಾರು ಮಾಡಿದವರು ಸರ್ಕಾರದ ಬೆಂಬಲವನ್ನು ಪಡೆದವರು ಯಾರು ಎಂಬುದನ್ನು ದಯಪಿಟ್ಟು ವಿವರವಾಗಿ ಹೇಳಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.— ನಾವು ಅಂದೇ ಹೇಳಿದೆವು. ಶಿಕಾರಿದಾರರನ್ನು ಆಂಧ್ರದಿಂದ ಕರೆಸಬೇಕಾಗಿಲ್ಲ. ಪತ್ತೆಗಾರರನ್ನು ಕರೆಸಬೇಕಾಗಿಲ್ಲ, ನಾವು ಎಲ್ಲರೂ ಇದ್ದೇವೆ, ರೈತರು ಇದ್ದಾರೆ, ನಮ್ಮ ಹತ್ತಿರ ಬಂದೂಕು ಇದೆ, ಲೈಸೆನ್ಸ್ ಇದೆ, ಅದನ್ನು ಆಪರೇಟ್ ಮಾಡುವುದು ಗೊತ್ತಿದೆ, ಶಾಸಕರ ತಂಡವನ್ನು ಕಳುಹಿಸಿಕೊಡಿ ಅಲ್ಲಿಗೆ ಎಂದು ಅಂದೇ ಹೇಳಿದೆವು. ತಮ್ಮ ಸರ್ಕಾರದವರು, ತಮ್ಮ ಮುಖ್ಯಮಂತ್ರಿಗಳು ಕಳುಹಿಸಿಕೊಡಲಿಲ್ಲ. ಈಪತ್ತು ಯಾರು ಹಿಡಿದುಕೊಂಡು ಬನ್ನಿ ಎಂದು ಮಾನ್ಯ ಜಾಲಪ್ಪನವರು ಈಪತ್ತು ಕೇಳಿದರೆ ಎಲ್ಲಿಂದ ಹಿಡಿದುಕೊಂಡುಬಂದು ಕೊಡುವುದು.

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಸದಸ್ಯರು ಸ್ಪೆಸಿಫಿಕ್ ಆಗಿ ಸರ್ಕಾರದ ಬೆಂಬಲವನ್ನು ಪಡೆದವರು ಮಕ್ಕಳನ್ನು ಕೊಂದರು ಎಂದು ಹೇಳಿರುತ್ತಾರೆ. ಯಾರು ಬೆಂಬಲವನ್ನು ಕೊಟ್ಟವರು, ಮಕ್ಕಳನ್ನು ಕೊಂದವರು ಯಾರು ಎಂಬುದನ್ನು ಹೇಳಲಿ. ಸ್ಪೆಸಿಫಿಕ್ ಆಗಿ ಚಾರ್ಜ್ ಮಾಡಿರುವುದರಿಂದ ಸ್ಪೆಸಿಫಿಕ್ ಆಗಿ ಮಾನ್ಯ ಸದಸ್ಯರು ಹೇಳಬೇಕು.

೪–೩೦ ಪಿ. ಎಂ.

(ಗೊಂದಲ)

ಅಧ್ಯಕ್ಷರು.— ಸ್ವಾಮಿರಾವ್‌ರವರೇ, ನೀವು ಸಲಹೆ ಕೊಡುವುದಾದರೆ ಲೋಪದೋಷಗಳನ್ನು ಎತ್ತಿತೋರಿಸುವಂಥ ಸಲಹೆಗಳನ್ನು ಕೊಟ್ಟರೆ ಒಳ್ಳೆಯದು.

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಅಧ್ಯಕ್ಷರೇ, ಆಪಾದನೆಗಳನ್ನು ಮಾಡುವಾಗ ಸ್ಪೆಸಿಫಿಕ್ ಆಗಿ ಹೇಳಬೇಕಾಗುತ್ತದೆ. ಮಾನ್ಯ ಶ್ರೀ ಬಸವಲಿಂಗಪ್ಪನವರು ಕೆಲವು ವಿಷಯಗಳನ್ನು ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಜವಾಬ್ದಾರಿ ಇರತಕ್ಕಂಥ ಜನ ಇದನ್ನು ಹೇಳುತ್ತಿರುವುದು. ತೋಳ ಕೊಂದಿದ್ದು ಅಲ್ಲ, ಸರ್ಕಾರದ ಆಶ್ರಯಪಡೆದು, ಸರ್ಕಾರದ ಬೆಂಬಲದಿಂದ ಕೆಲವಾರು ಮಕ್ಕಳನ್ನು ಕೊಂದಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇಂತಹ ಆಪಾದನೆ ಮಾಡುವಾಗ ಅವರು ನಿರ್ದಿಷ್ಟವಾಗಿ ಹೇಳಬೇಕಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.— ಮಾನ್ಯ ಸದಸ್ಯರು ಶ್ರೀ ಜಾಲಪ್ಪನವರು ಇದರ ಹಿನ್ನೆಲೆಯಲ್ಲಿ ಇದ್ದಾರೆ ಎಂದು ಹೇಳಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ಇದರ ಹಿಂದೆ ಇದ್ದಾರೆ ಎಂದು ಹೇಳಿಲ್ಲ. ಸರ್ಕಾರದ ಆಶ್ರಯ ಪಡೆದು ಇದನ್ನು ಮಾಡಿದ್ದಾರೆ ಎಂದು ಹೇಳಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.— ನಾನು ಕೂಡ ಸರ್ಕಾರದ ಒಂದು ಭಾಗವಾಗಿದ್ದೇನೆ. ಆದ್ದರಿಂದ ನನಗೂ ಕೂಡ ಜವಾಬ್ದಾರಿ ಇರುತ್ತದೆ.

ಒಬ್ಬರು ಮಾನ್ಯ ಸದಸ್ಯರು.— ಮಾನ್ಯ ಅಧ್ಯಕ್ಷರೇ...

ಶ್ರೀ ಆರ್. ಎಲ್. ಜಾಲಪ್ಪ. ಕನ್ನಡದಲ್ಲಿ ಒಂದು ಗಾದೆ ಇದೆ. ಆದನ್ನು ಈಗ ಇಲ್ಲಿ ಹೇಳುವುದು ಬೇಡ. ವಿರೋಧ ಪಕ್ಷದವರು ನಮ್ಮನ್ನು ಏನು ಇಲ್ಲಿ ಕೊಂಡಾಡುವುದಕ್ಕೆ ಬರುತ್ತಾರೆಯೇ? ವಿರೋಧ ಪಕ್ಷದವರು ಎಂದರೆ ಅವರಿಗೆ ನಮ್ಮನ್ನು ಬಯ್ಯುವುದೇ ಅವರ ಉದ್ದೇಶವಾಗಿರುತ್ತದೆ, ಅದು ಬಿಟ್ಟು ನಮ್ಮನ್ನು ಮುತ್ತಿಕ್ಕಿ ಎಂದು ನಾವು ಕೇಳುತ್ತೇವೆಯೆ? ಬಯ್ಯುವುದು ನಿಮ್ಮ ಡ್ಯೂಟಿ ಆದರೆ ಬೈಯುವಾಗ ಇದರಲ್ಲಿ ಸತ್ಯಾಂಶ ಇದೆಯೋ ಎಂದು ನೋಡಬೇಕೆಂಬುದು ನನ್ನ ವಿನಂತಿ.

(ಗೊಂದಲ)

ಅಧ್ಯಕ್ಷರು.— ಇಲ್ಲಿಯವರೆಗೆ ಎಷ್ಟು ಜನ ಮಾತನಾಡಿದ್ದಾರೆ, ಆದರೆ ಒಬ್ಬರೂ ಕೂಡ ನಡುವೆ ಅಡ್ಡಿ ಮಾಡಲಿಲ್ಲ ಚೆನ್ನಾಗಿ ಲೋಪದೋಷಗಳನ್ನು ಎತ್ತಿ ತೋರಿಸಿ ಸಲಹೆಗಳನ್ನು ಕೊಟ್ಟರು. ಆದರೆ ಶ್ರೀ ಸ್ವಾಮಿರಾವ್ ಮಾತನಾಡುವಾಗ ಈ ಗೊಂದಲ ಏಕೆ? ಇಂಥಾ ಕಡೆ ತಪ್ಪಾಗಿದೆಯೆಂದು ಹೇಳಿ, ಲೋಪದೋಷಗಳನ್ನು ಎತ್ತಿ ತೋರಿಸಿ ಸಲಹೆ ಕೊಡಿ.

ಶ್ರೀ ಬಿ. ಸ್ವಾಮಿರಾವ್.— ಅದನ್ನೇ ನಾನು ಹೇಳುತ್ತಿರುವುದು ..

ಶ್ರೀ ರಾಜವರ್ಧನ್.— ಶ್ರೀ ಸ್ವಾಮಿರಾವ್ ಅವರು ಮಾತನಾಡುವಾಗ ಸರ್ಕಾರದ ಬೆಂಬಲ ಪಡೆದು ಮಕ್ಕಳ ಕೊಲೆಯಾಗಿದೆಯೆಂದು ಹೇಳಿದರು. ಇದು ನಿಜವಾಗಿಯೂ ಸರ್ಕಾರದ ಮೇಲೆ ಮಾಡಿರುವ ಸೀರಿಯಸ್ ಆದಂಥ ಆಪಾದನೆ. ನಾಳೆ ಪತ್ರಿಕೆಯಲ್ಲಿ ಇದು ಪ್ರಕಟವಾದರೆ ಜನರು ಏನೆಂದು ತಿಳಿದುಕೊಳ್ಳುತ್ತಾರೆ? ಮಾನ್ಯ ಸದಸ್ಯರು ತಾವು ಹೇಳಿದ್ದನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಬಿ. ಸ್ವಾಮಿರಾವ್.— ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.— ನೋಡಿ. ಶ್ರೀ ರತ್ನಾಕರ್ ಅವರು ಎಷ್ಟು ಚೆನ್ನಾಗಿ ಮಾತನಾಡಿದರು ಯಾರೂ ಗಲಾಟೆ ಮಾಡಲಿಲ್ಲ. ರತ್ನಾಕರ್‌ರವರೇ. ನೀವು ಸ್ವಲ್ಪ ಸ್ವಾಮಿರಾವ್ ಅವರಿಗೆ ಹೇಳಿಕೊಡಿ.

(ಗೊಂದಲ)

ಅಧ್ಯಕ್ಷರು.— ಶ್ರೀ ಸ್ವಾಮಿರಾವ್, ನೀವು ಮಾತನಾಡಿ.

ಶ್ರೀ ಬಿ. ಸ್ವಾಮಿರಾವ್.— ಇದನ್ನು ಏಕೆ ಹೇಳುತ್ತಿದ್ದೇನೆ, ಎಂದರೆ ಮಾನ್ಯ ಸಚಿವರು ಇವತ್ತು ಪಾಪಗಡದ ಮಕ್ಕಳನ್ನು ಕಳೆದುಕೊಂಡಂಥ ತಂದೆತಾಯಿಗಳು ಹೇಳುವುದನ್ನು ಹೋಗಿ ಕೇಳಿಕೊಂಡು ಬರಲಿ. ನನ್ನ ಸಾಕ್ಷಿಯೂ ಬೇಡ. ಯಾವ ರುಜುವಾತೂ ಬೇಡ,

ಶ್ರೀ ಆರ್.ಎಲ್. ಜಾಲಪ್ಪ.— ನಮಗೆ ಆಗ ಅವಕಾಶವನ್ನೇ ಕೊಡಲಿಲ್ಲ. ಎಂದು ಹೇಳಿದಿರಿ. ಈಗ ಎಲ್ಲಾ ಕಡೆ ದರೋಡೆ ಆಗುತ್ತದೆ, ನಿಮ್ಮ ಹತ್ತಿರ ಕ್ಯಕೋವಿಗಳು ಇವೆ, ನಿಮಗೆ ಶಿಕಾರಿ ಕೂಡ ಬರುತ್ತದೆ. ನಾನು ನಿಮ್ಮನ್ನು ಆಥೋರೈಸ್ ಮಾಡುತ್ತೇನೆ, ನೀವು ಹೋಗಿಬನ್ನಿ.

ಶ್ರೀ ಬಿ. ಸ್ವಾಮಿರಾವ್.— ನಾವು ಶಿಕಾರಿ ಮಾಡುವುದಾದರೆ ನಿಮ್ಮನ್ನೇ.

ಅಧ್ಯಕ್ಷರು.— ಇನ್ನೂ ಇಬ್ಬರು ಸದಸ್ಯರು ಮಾತನಾಡುವವರಿದ್ದಾರೆ. ಐದು ಗಂಟೆಗೆ ನಾನು ಸಭೆಯನ್ನು ಮುಗಿಸಬೇಕಾಗಿದೆ. ದಯುವಿಟ್ಟು ನೀವು ಆ ಕಡೆಗೆ ನೋಡದೆ ಮಾತನಾಡಿ.

ಶ್ರೀ ಬಿ. ಸ್ವಾಮಿರಾವ್.— ಮಾನ್ಯ ಅಧ್ಯಕ್ಷರೇ, ನಾನು ಹೇಳುವುದನ್ನು ಹೇಳಬೇಕಾಗುತ್ತದೆ. ನನ್ನ ಅಭಿಪ್ರಾಯ ವನ್ನು ಹೇಳುವ ಅಧಿಕಾರ ನನಗೆ ಇಲ್ಲವೆ?

ಶ್ರೀ ಆರ್.ಎಲ್. ಜಾಲಪ್ಪ.— ಮಾನ್ಯ ಸದಸ್ಯರು ಮತ್ತೊಂದು ಮಾತನ್ನು ಹೇಳಿದರು. ಅದೇನೆಂದರೆ, ನಾಳೆ ಶಿಕಾರಿ ಮಾಡುವುದಾದರೆ ನಿಮ್ಮನ್ನೇ ಎಂದು. ಆ ಕಾಲ ಹೋಯಿತು, ಹಿಂದೆ ಅಮಾಯಕ ೧೩ ಜನ ರೈತರನ್ನು ನೀವು ಶಿಕಾರಿ ಮಾಡಿದ ಹಾಗೆ ಅಲ್ಲ. ಒಂದು ಸಲ ಟ್ರೈ ಮಾಡಿ ನೋಡಿ. ನಿಮಗೆ ಗೊತ್ತಾಗುತ್ತದೆ.

ಶ್ರೀ ಪಟಮಕ್ಕಿ ರತ್ನಾಕರ್.— ಮಾನ್ಯ ಶ್ರೀ ಜಾಲಪ್ಪನವರು ಭಾಷಣದ ಜಾಡನ್ನು ಬದಲಾಯಿಸುತ್ತಿದ್ದಾರೆ. ಮಾನ್ಯ ಅಧ್ಯಕ್ಷರು ದಯವಿಟ್ಟು ಅವರಿಗೆ ಬುದ್ಧಿ ಹೇಳಬೇಕು.

ಶ್ರೀ ಬಿ. ಸ್ವಾಮಿರಾವ್.— ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಬಡವರ ಕಾರ್ಯಕ್ರಮ ಇಲ್ಲ. ಮತ್ತೆ ದುರ್ಬಲರ ಬಗ್ಗೆ ಕಾರ್ಯಕ್ರಮ ಇಲ್ಲ. ಹಸಿರು ಕಾರ್ಡು ಶುದ್ಧಿಯನ್ನು ಹೇಳಿದ್ದಾರೆ ಮತ್ತು ಹಲವಾರು ವಿಷಯಗಳನ್ನು ಹೇಳಿದ್ದಾರೆ. ಈ ಹಸಿರು ಕಾರ್ಡುಗಳನ್ನು ಯಾವ ರೀತಿ ಕೊಟ್ಟಿದ್ದಾರೆ ಎಂದರೆ, ನನ್ನ ಕ್ಷೇತ್ರದಲ್ಲಿ ಅನುಕೂಲಸ್ಥರಿಗೆ, ಮನೆ ಮೇಲೆ ಟಿ. ವಿ. ಅಂಟೇನಾ ಇಟ್ಟುಕೊಂಡಿರುವವರಿಗೆ ಕೂಡ ಹಸಿರು ಕಾರ್ಡುಗಳನ್ನು ಕೊಟ್ಟಿದ್ದಾರೆ. ಆದರೆ ಬಡವರಿಗೆ, ಜನತಾ ಪಾರ್ಟಿಯವರಲ್ಲದವರಿಗೆ ಈ ಹಸಿರು ಕಾರ್ಡುಗಳನ್ನು ಕೊಟ್ಟಿಲ್ಲ. ಜನತಾ ಪಾರ್ಟಿಯವರನ್ನು ಆರಿಸಿ ಆರಿಸಿ ಕೊಟ್ಟಿದ್ದಾರೆ...

ಅಧ್ಯಕ್ಷರು.— ಇಂತಹ ಪ್ರಕರಣಗಳು ನಿರ್ದಿಷ್ಟವಾಗಿದ್ದರೆ ವಿವರಗಳನ್ನು ಕೊಡಿ.

ಶ್ರೀ ಬಿ. ಸ್ವಾಮಿರಾವ್.— ಮಾನ್ಯ ಅಧ್ಯಕ್ಷರೇ, ಇದನ್ನು ನಾನು ರುಜುವಾತು ಮಾಡುತ್ತೇನೆ. ಹಾಗೆಯೇ ನ್ಯಾಯಬೆಲೆ ಅಂಗಡಿಗಳನ್ನು ಯಾರಿಗೆ ಕೊಟ್ಟಿದ್ದಾರೆ ಎಂದರೆ...

ಅಧ್ಯಕ್ಷರು.— ಇಲ್ಲಿ ಸ್ವಲ್ಪ ಕೇಳಿ ಕೆಲವು ಕಡೆ ಹೀಗೆ ಕೊಟ್ಟಿರಬಹುದು. ಮಾನ್ಯ ಆಹಾರ ಮಂತ್ರಿಗಳೇನೂ ನಿಮ್ಮ ಊರಿಗೆ ಬಂದು ಕಾರ್ಡುಗಳನ್ನು ಕೊಡುವುದಿಲ್ಲ. ಪಾರ್ಟಿ ಸೈಡ್ ಹಿಡಿದು ಹೋಗಬೇಡಿ.

ಶ್ರೀ ಬಿ ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ ಕಾರ್ಡಿನ ವ್ಯವಸ್ಥೆ ಹೀಗಾದರೆ, ನ್ಯಾಯಬೆಲೆಅಂಗಡಿಗಳನ್ನು ನಿರುದ್ಯೋಗಿಗಳಿಗೆ, ಪದವೀಧರರಿಗೆ ವಿದ್ಯಾವಂತರಿಗೆ ಕೊಡಬೇಕೆಂದು ಕಾನೂನು ಮಾಡಿದರು. ಆದರೆ ಗಂಡನಿಗೆ ಒಂದು ನ್ಯಾಯಬೆಲೆ ಅಂಗಡಿ ಹೆಂಡತಿಗೆ ಒಂದು ನ್ಯಾಯಬೆಲೆ ಅಂಗಡಿ ಮಗನಿಗೆ ಒಂದು ನ್ಯಾಯ ಬೆಲೆ ಅಂಗಡಿ ಕೊಡಬೇಕೆಂದೇನಾದರೂ ಹೇಳಿದೀರಾ? ಇದರ ಬಗ್ಗೆ ಜಿಲ್ಲಾ ಮಂತ್ರಿಗಳಿಗೆ, ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇವೆ, ಈ ಅನ್ಯಾಯ ಏಕೆ ಮಾಡಿದ್ದೀರಿ ಎಂದು ಆದರೆ ಇದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ತಾವು ಹೇಳಿದರೆ ಇದನ್ನು ಪರಿಶೀಲಿಸುತ್ತೇವೆ. ಎಂದು ಹೇಳುತ್ತಾರೆ. ಇಲ್ಲೊಬ್ಬರು ಪರಿಶೀಲನಾ ಮಂತ್ರಿಗಳು ಆಗಿದ್ದಾರೆ. ತಾವು ಏನೇ ಕೇಳಿದರೂ ಪರಿಶೀಲಿಸುತ್ತೇನೆ, ಸರ್ಕಾರದಿಂದ ಉತ್ತರ ತರಿಸಿಕೊಡುತ್ತೇನೆ ಎಂದು ಹೇಳುತ್ತಾರೆ. ಇದೇ ಪದ್ಧತಿ ಇಲ್ಲಿಂದ ಹಿಡಿದು ಕರ್ನಾಟಕ ಮೂಲೆ ಮೂಲೆಗಳಲ್ಲೂ ಹರಡಿದೆ ಎಂದು ನಾನು ಹೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.— ಇಂತಹ ಅನ್ಯಾಯವಾಗಿದ್ದರೆ ವಿವರಗಳನ್ನು ಮಾನ್ಯ ಸದಸ್ಯರು ಕೊಡಲಿ, 24 ಗಂಟೆಯೊಳಗೆ ಏನು ಅವ್ಯವಸ್ಥೆ ಆಗಿದೆ, ಎಂದು ತಿಳಿದು ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ತಮ್ಮ ಭಾಷಣ ಮುಗಿದಮೇಲೆ ಅವರು ವಿವರಗಳನ್ನು ಕೊಟ್ಟರೆ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ನಾನು ಸರಿಮಾಡುತ್ತೇನೆ. ಏಕೆಂದರೆ, ಮಗನಿಗೆ, ಹೆಂಡತಿಯ ಹೆಸರಿನಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ಕೊಟ್ಟಿದ್ದಾರೆ ಎಂದರೆ ಇದನ್ನು ಯಾರೂ ಕೂಡ ಸರಿಎಂದು ಹೇಳುವುದಿಲ್ಲ.

ಶ್ರೀ ಬಿ. ಸ್ವಾಮಿರಾವ್.— ಕೊಟ್ಟಿದ್ದರೆ ನೀವು ಏನು ಮಾಡುತ್ತೀರಿ? ನನ್ನ ಹತ್ತಿರ ದಾಖಲೆಗಳು ಇವೆ.

ಅಧ್ಯಕ್ಷರು.— ಅದನ್ನು ನೀವು ಕೊಟ್ಟಾಗ ತನಿಖೆ ನಡೆಸುತ್ತೇನೆ ಎಂದು ಮಾನ್ಯ ಸಚಿವರೇ ಹೇಳಿದ್ದಾರಲ್ಲ? ಮಾತನಾಡಿ.

ಶ್ರೀ ಬಿ, ಸ್ವಾಮಿರಾವ್.— ನಾನು ಇಲ್ಲದೇ ಇರುವುದನ್ನು ಹೇಳುತ್ತಿಲ್ಲ.

ಅಧ್ಯಕ್ಷರು— ನಿರ್ದಿಷ್ಟವಾದ ಅಪ್ಲಿಕೇಶನ್ ಇದ್ದರೆ ನನ್ನ ಕೈಗೆ ಕೊಡಿರಿ. ನಾನು ಅದನ್ನು ಶ್ರೀ ಬಸವಣ್ಣಪ್ಪನವರಿಗೆ ತಲುಪಿಸುತ್ತೇನೆ.

ಶ್ರೀ ಬಿ. ಸ್ವಾಮಿರಾವ್.— ಇಂತಹ ಅನ್ಯಾಯಗಳಿಂದಾಗಿ ಜನರು ಇವತ್ತಿನ ದಿವಸ ಗೋಳಾಡುತ್ತಿದ್ದಾರೆ. ಈ ಭಾಷಣದಲ್ಲಿ ಮುಳುಗಡೆಯಾದ ರೈತರಿಗೆ ಪರಿಹಾರ ಮತ್ತು ಪುನರ್ವಸತಿ ವಿಚಾರವನ್ನೂ ಹೇಳಲಿಲ್ಲ. ಬರಗಾಲದಲ್ಲೂ ಕೂಡ ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಒಂಚೂರೂ ಕೆಲಸ ಮಾಡುತ್ತಿಲ್ಲ ಇವತ್ತಿನ ದಿವಸ ಅಧಿಕಾರಿಗಳು ಏನಾದರೂ ಬರಗಾಲ ಪೀಡಿತ ಪ್ರದೇಶಗಳನ್ನು ಕಣ್ಣಾರೆ ನೋಡಿ ಅಧ್ಯಯನ ಮಾಡೋಣ ಎಂದರೆ ಅಧಿಕಾರಿಗಳು ಸಿದ್ಧರಿಲ್ಲ ನಮ್ಮ ತಹಶೀಲ್ದಾರರ ಉದಾಹರಣೆಯನ್ನು ಇದಕ್ಕೆ ಕೊಡುತ್ತೇನೆ. ಹೇಗೂ ವಿಧಾನಸಭಾ ಅಧಿವೇಶನ ಶುರುವಾಗುತ್ತಿದೆಯಲ್ಲಾ ಅದಕ್ಕೆ ಮುಂಚೆ ಇಡೀ ಕ್ಷೇತ್ರವನ್ನು ಪ್ರವಾಸ ಮಾಡಿ ಬರೋಣ ಎಂದು ನಮ್ಮ ತಹಶೀಲ್ದಾರರನ್ನು ಕರೆದರೆ ಅವರು ಬರ ವುದಿಲ್ಲ ಎಂದು ಹೇಳಿ ತಮ್ಮ ಹೆಂಡತಿಯನ್ನು ಕೂರಿಸಿಕೊಂಡು ಜೀಪಿನಲ್ಲಿ ಎಲ್ಲೋ ಹೋಗಿಬಿಟ್ಟರು. ಇನ್ನೇನು ಮಾಡುವುದು, ನಾನೇ ಕೊನೆಗೆ ಬಾಡಿಗೆ ಟ್ಯಾಕ್ಸಿ ಗೊತ್ತುಪಡಿಸಿಕೊಂಡು ಇಡೀ ಕ್ಷೇತ್ರವನ್ನು ನೋಡಿಕೊಂಡು ಬಂದೆ.

ಶ್ರೀ ಸಾಲೇರ್ ಸಿದ್ದಪ್ಪ —ತಹಸೀಲ್ದಾರ' ಹೆಂಡತಿಯನ್ನು ಕೂರಿಸಿಕೊಂಡು ಹೋದರು ಎಂಬುದೇ ನೀವು ಗೋಪಾಲಗೌಡರ ಶಿಷ್ಯರಾಗಿ ಮಾಡುತ್ತಿರುವ ವಿಶ್ಲೇಷಣೆ.

ಶ್ರೀ ಬಿ. ಸ್ವಾಮಿರಾವ್.—ಅದೇನೋ ನೀವು ಹೇಳಿದ್ದು ಕೇಳಲಿಲ್ಲ.

ಶ್ರೀ ಕೆ.ಹೆಚ್ ಶ್ರೀನಿವಾಸ್ (ಶಿವಮೊಗ್ಗ).—ತಹಸೀಲ್ದಾರ್ ಜೊತೆ ಅವರ ಹೆಂಡತಿ ಇದ್ದರೆ ಇವರೇನು ಮಾಡುವುದು, ಹೋಗಿ ?

ಶ್ರೀ ಬಿ. ಸ್ವಾಮಿರಾವ್.– ಹೀಗೆ ಜನತಾದವರು ಮಧ್ಯೆ ಮಾತನಾಡುತ್ತಿದ್ದರೆ ನಾನು ಮುಗಿಸುವುದಕ್ಕಾಗುವುದಿಲ್ಲ. ನನಗೆ ಸ್ವಲ್ಪ ಜಾಸ್ತಿ ಟೈಮ್ ಬೇಕು. ೫ ಗಂಟೆವರೆಗೂ ಮಾತನಾಡುತ್ತೇನೆ. ಇವತ್ತಿನ ದಿವಸ ಕಾನೂನು ಶಾಂತಿ ಪಾಲನೆ ಸ್ಥಿತಿಯಂತೂ ಬೆಲೆಯೇ ಇಲ್ಲದಂತಾಗಿದೆ. ನಿನ್ನೆ ದಿವಸ ಒಬ್ಬ ಪ್ರಿನ್ಸಿಪಾಲರು ಬಂದಿದ್ದರು. ಅವರದೊಂದು ಖಾಸಗಿ ಸಂಸ್ಥೆ. ಅವರ ತಂದೆ ಆ ಸಂಸ್ಥೆಯನ್ನು ಸ್ಥಾಪಿಸಿದ್ದನ್ನು ಇವರು ಮುಂದುವರೆಸಿ ಕೊಂಡು ಬಂದಿದ್ದಾರಂತೆ ಇವರು ಸಂಸ್ಥೆಯನ್ನು ನಡೆಸುತ್ತಿರುವಾಗ ಒಬ್ಬ ಶಿಕ್ಷಕಿಯನ್ನು ಅಪಾಯಿಂಟ್ ಮಾಡಿಕೊಂಡಿದ್ದರಂತೆ ಆದರೆ ಇವತ್ತು ಅವಳೇ ಆ ಸಂಸ್ಥೆ ನನ್ನದು ಎಂದು ಕೂತುಬಿಟ್ಟಿದ್ದಾಳಂತೆ. ನನ್ನ ಸಂಸ್ಥೆ ಒಳಕ್ಕೇ ನನ್ನನ್ನು ಬಿಡುತ್ತಿಲ್ಲವಂತೆ. ಅಲ್ಲದೆ ಕೋರ್ಟ್ ಇಂಜೆನ್‌ಕ್ಷನ್ ಆರ್ಡರ್ ಕೊಟ್ಟಿದೆಯಂತೆ. ಪೋಲೀಸರು ರಕ್ಷಣೆ ಕೊಡುತ್ತಿಲ್ಲ ಎಂದರು. ನಾನು ಎಲ್ಲ ಕೇಳಿ ಆಮೇಲೆ ಅವಳಿಗೆ ಯಾರದಾದರೂ ರಾಜಕೀಯಸ್ಥರ ರಕ್ಷಣೆ ಇದೆಯೇ ಎಂದು ಕೇಳಿದೆ. ಅವರು ಹೌದು ಎಂದರು. ಒಬ್ಬ ಮಂತ್ರಿಗಳ ರಕ್ಷಣೆ ಅವರಿಗಿದೆಯಂತೆ.

ಅಧ್ಯಕ್ಷರು.—ನೀವು ಮತ್ತೆ ಏನೇನೋ ಹೇಳುತ್ತಿದ್ದೀರಲ್ಲ.

ಶ್ರೀ ಬಿ. ಸ್ವಾಮಿರಾವ್.—ಇದರ ಜೊತೆಗೆ ಭೂಮಿಗಳ ಭೂಸಂಧಾರಣೆ ಕಾಯಿದೆಯ ಟ್ರಿಬ್ಯೂನಲ್‌ಗಳಲ್ಲೂ ಅನ್ಯಾಯ ನಡೆದೇ ಇದೆ, ಅಲ್ಲಿ ನಾನು ಮೆಂಬರ್ ಆಗಿದ್ದರೂ ನ್ಯಾಯ ಒದಗಿಸಲು ಆಗುತ್ತಿಲ್ಲ. ನಮಗೆ ಮೂರು ಕಾಸಿನ ಬೆಲೆಯಿಲ್ಲ. ಇವತ್ತಿನ ದಿವಸ ದೇಶದಲ್ಲಿ ಎಲ್ಲಾ ಅರಾಜಕತೆ ತುಂಬಿದೆ ನಮ್ಮ ಶ್ರೀನಿವಾಸರು ಹೇಳಿದಂತೆ ನಾವು ಶಾಸಕರು ಅಧಿಕಾರಿಗಳಿಗೆ ಹೇಳಿದರೆ ಬೆಲೆ ಇಲ್ಲ. ನಮ್ಮ ಭಾಗದಲ್ಲಿ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಕೆಲಸ ಮಾಡುವ ರೀತಿಯಿಂದ ನಮ್ಮ ಭಾಗದ ಜನರೆಲ್ಲ ಬೇಜಾರಾಗಿದ್ದಾರೆ. ನಮ್ಮ ಕಾಂಗ್ರೆಸ್ಸಿನ ಕಾರ್ಯಕರ್ತ ಸುಕುಮಾರ್ ಎಂಬುವನ ಮನೆಯನ್ನು ನೂರಾರು ಜನ ಕಾರ್ಯಕರ್ತರು ಅದನ್ನು ಕಿತ್ತು ಹೊತ್ತುಕೊಂಡು ಹೋದರು. ನನಗಾಗಿ ಪಕ್ಷಕ್ಕಾಗಿ ದುಡಿದಿದ್ದ. ಅವನ ಮನೆಯನ್ನು ರಾತ್ರೋರಾತ್ರಿ ಧ್ವಂಸ ಮಾಡಿದರು. ಇದನ್ನು ಮಾಡಿದವರು ನಿಮ್ಮ ಪಾರ್ಟಿಯವರು. ಸಾಮಾನು ಹೊತ್ತುಕೊಂಡು ಹೋದ ಲಾರಿ ನಂಬರ್ ಕೊಟ್ಟಿದ್ದೇನೆ. ಯಾವ ಲಾರಿ ಅದು ಎಂಬುದನ್ನೂ ತೋರಿಸಿದ್ದೇನೆ. ಇಷ್ಟೆಲ್ಲ ಆದರೂ ಕೂಡ ಯಾರು ರಕ್ಷಣೆ ಕೊಡಬೇಕಾಗಿತ್ತೋ ಆ ಆಳುವ ಸರ್ಕಾರ ಯಾರನ್ನೂ ಬಂಧಿಸಿಲ್ಲ. ಕಳೆದ ಸಲ ವಿಧಾನಸಭೆಯಲ್ಲಿ ಜನತಾ ಪಕ್ಷದವರು ಮನೆ ಸುಡುವ ಕಾರ್ಯಕ್ರಮ ಹಾಕಿಕೊಂಡಿದ್ದಾರೆಂದು ಹೇಳಿದ್ದೆ.

(ಗೊಂದಲ)

ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಪಾಯಿಂಟ್ ಆಫ್ ಆರ್ಡರ್. ಕಾಂಗ್ರೆಸ್ ಕಾಲದಲ್ಲಿ ಕೊಲೆಯಾಗುತ್ತಿತ್ತು. ಈಗ ಹೇಳುತ್ತಿದ್ದಾರೆ. ಅವರ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು. ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.—ಇಲ್ಲ, ನಿಮಗೆ ಅವಕಾಶ ಕೊಡುವುದಿಲ್ಲ. ನೀವು ಕೂತುಕೊಳ್ಳಿ.

ಶ್ರೀ ಬಿ. ಸ್ವಾಮಿರಾವ್.—ಒಂದು ಸವಾಲನ್ನು ಕೂಡ ಹಾಕಿದ್ದೆ. ಈ ಪ್ರಕರಣ ಸುಳ್ಳಾದರೆ ನಾನು ರಾಜೀನಾಮೆ ಕೊಡುತ್ತೇನೆ. ಸತ್ಯವಾದರೆ ನೀವು ರಾಜೀನಾಮೆ ಕೊಡುತ್ತೀರಾ ಎಂದು ಕೇಳಿದ್ದೆ. ದೊಡ್ಡದಾಗಿ ಇವತ್ತು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಇಲ್ಲೇ ಇಬ್ಬರೂ ಇದ್ದೀರಲ್ಲ. ಸ್ವಾಮಿರಾವ್ ನೀವು ಮಾತನಾಡಿ.

(ಗದ್ದಲ)

ಶ್ರೀ ಬಿ. ಸ್ವಾಮಿರಾವ್.—ನನಗೆ ಮಾತನಾಡುವುದಕ್ಕೆ ಅವಕಾಶ ಇದೆ. ಮಧ್ಯದಲ್ಲಿ ಅವರು ಮಾತನಾಡಿದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ಇರುವುದನ್ನು ಮಾತನಾಡಲೇಬೇಕಾಗುತ್ತದೆ. ನನಗೇನು ಹೊರಗೆ ವೇದಿಕೆ ಇದೆಯೇ ? ನಿಮ್ಮ ಮುಂದೆ ಹೇಳಬೇಡವೇ ?

ಅಧ್ಯಕ್ಷರು.—ನೋಡಿ ಅಷ್ಟು ಜನ ಮಾತನಾಡಿದರೂ ಒಬ್ಬರೂ ಮಾತನಾಡಲಿಲ್ಲ. ಪಟವಂಕ್ಷಿ ರತ್ನಾಕರ್ ಮಾತನಾಡಿದರು, ನಾಯಕರು ಮಾತನಾಡಿದರು. ನೀವು ಮಾತನಾಡುವಾಗಲೇ ಇಷ್ಟೊಂದು ಮಧ್ಯೆ ಮಾತನಾಡುತ್ತಾರೆಂದರೆ ನೀವು ಮಾತನಾಡುವುದರಲ್ಲಿ ತಪ್ಪಿದೆ.

ಶ್ರೀ ಬಿ. ಸ್ವಾಮಿರಾವ್.—ಇವತ್ತು ರಾಜ್ಯದಲ್ಲಿ ನೇಮಕವಾದ ಲ್ಯಾಂಡ್ ಟ್ರಿಬ್ಯೂನಲ್‌ಗಳು ಏನಿವೆ ಅವುಗಳಿಗೆ ಅಧ್ಯಕ್ಷರನ್ನು ನೇಮಿಸುವುದಕ್ಕೆ ಅದ್ಯಾರು ಇವರಿಗೆ ಹೆಸರು ಕೊಟ್ಟರೋ ಗೊತ್ತಿಲ್ಲ. ಹಿಂದೆ ಗೇಣಿದಾರರ ಕಡೆ ಆಗಿದ್ದ ಪ್ರಕರಣಗಳನ್ನೆಲ್ಲ ಇವರು ಬಂದು ಜಮೀನ್ದಾರರಿಗೆ ಬರೆಯುತ್ತಿದ್ದಾರೆ, ಎ.ಸಿ. ಮೇಲೂ ಪ್ರಭಾವ ಬೀರಿದ್ದಾರೆ. ಈಗ ಹೊಸನಗರ ಟ್ರಿಬ್ಯೂನಲ್‌ನಲ್ಲಿ ಅಧ್ಯಕ್ಷರಾಗಿರುವವರು ಹಿಂದೆ ಖೋಟಾ ನೋಟು ಪ್ರಿಂಟ್ ಸಿಕ್ಕಿಹಾಕಿಕೊಂಡು ಜೈಲಿನಲ್ಲಿದ್ದವರು ಅಂಥವರನ್ನು ಟ್ರಿಬ್ಯೂನಲ್‌ಗೆ ಅಧ್ಯಕ್ಷರನ್ನಾಗಿ ಹಾಕಿದ್ದಾರೆ. ಏಕೆಂದರೆ ಅವರು ಇವರ ಪಕ್ಷದವರೆಂದು. ಅದರಿಂದ ನಮ್ಮ ಪಕ್ಷದವರಿಗೆ ನಾವು ರಕ್ಷಣೆ ಕೊಡಬೇಕೆಂದು ಅವರ ಪಕ್ಷದವರಿಗೆ, ಕಡೆಯುವರಿಗೆ ಪರವಾಗಿ ತೀರ್ಮಾನ ಕೊಡುತ್ತಿದ್ದಾರೆ.

(ಗದ್ದಲ)

ಶ್ರೀ ಬಿ. ಸ್ವಾಮಿರಾವ್.—ಈ ಥರ ಮಾತನಾಡಿದರೆ ಆಗುವುದಿಲ್ಲ. ನನಗೆ ತಾವು ರಕ್ಷಣೆ ಕೊಡಬೇಕು.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿರಾಯರನ್ನು ಅಣಕಿಸುತ್ತಾರೆಂದು ಎಲ್ಲರ ಮೇಲೂ ಅವರಿಗೆ ಸಂಶಯ ಬಂದಿದೆ.

ಅಧ್ಯಕ್ಷರು.—ತೊಂದರೆ ತಂದುಕೊಳ್ಳುವ ಮಾತನ್ನು ಏಕೆ ಆಡುತ್ತೀರಿ ?

ಶ್ರೀ ಬಿ. ಸ್ವಾಮಿರಾವ್.—ನಾನು ಸುಳ್ಳು ಹೇಳುವುದಿಲ್ಲ. ರಾಜ್ಯದಲ್ಲಿನ ಜನ ಇವತ್ತು ಏನು ನೋವನ್ನು ಸಂಕಟವನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ಹೇಳುತ್ತಿದ್ದೇನೆ. ಗೇಣಿದಾರರಿಗೆ ನ್ಯಾಯ ಸಿಗುತ್ತಿಲ್ಲ. ಹಿಂದಿನ ತೀರ್ಮಾನಗಳನ್ನು ಬದಲಾಯಿಸುತ್ತಿದ್ದಾರೆ. ನಾವು ಇಬ್ಬರಿದ್ದೇವೆ. ನಾವಿಬ್ಬರು ತೀರ್ಮಾನವನ್ನು ತಿರಸ್ಕರಿಸಿದರೂ ಅವರು ಮೂರು ಜನ ಇರುವುದರಿಂದ ಅವರದೇ ಮೆಜಾರಿಟಿ. ನಾವೇನೂ ಮಾಡುವುದಕ್ಕಾಗುತ್ತಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಹೀಗೆ ಮೇಲೆ ಮೇಲೆ ಮುಚ್ಚಿಟ್ಟುಕೊಂಡು ಪ್ರಸ್ತಾಪ ಮಾಡಬಾರದು. ಸ್ಪಷ್ಟವಾದ ವಿವರಗಳಿದ್ದರೆ ಕೊಡಿ ನಾನು ಪರಿಶೀಲಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ. ನಿಮ್ಮ ಪಾರ್ಟಿಯವರೇ ಅಧ್ಯಕ್ಷರು ಇರಬಹುದು ನಮ್ಮ ಪಾರ್ಟಿಯವರೇ ಆಗಿರಬಹುದು. ಜೈಲಿಗೆ ಹೋಗಿ ಬಂದವರೆಂದರೆ ಅಂಥವರನ್ನು ನೇಮಿಸಬಾರದು. ಆ ಥರ ಆಗಿದ್ದರೆ ಚೇಂಜ್ ಮಾಡಿ. ಎಮರ್ಜೆನ್ಸಿ ಕಾಲದಲ್ಲಿ ಜೈಲಿಗೆ ಹೋಗಿದ್ದರೆಂದರೆ ನಿಮ್ಮ ಅರ್ಥದಲ್ಲಿ ಪರವಾಗಿಲ್ಲ. ಆದರೆ ಖೋಟಾ ನೋಟು ಕಳ್ಳತನ ಮಾಡಿದವನನ್ನು ಅಧ್ಯಕ್ಷರನ್ನಾಗಿ ಮಾಡಿದರೆ ಹೇಗೆ ?

ಅವರು ಸ್ವಾತಂತ್ರ್ಯ ಹೋರಾಟಗಾರರಂತೂ ಅಲ್ಲ.

ಅಧ್ಯಕ್ಷರು.—ಈ ಬಗ್ಗೆ ತಾವು ವಿವರವಾಗಿ ಬರೆದು ಕಳುಹಿಸಿಕೊಡಿ.

ಶ್ರೀ ಆರ್. ಎನ್. ನಾಯಕ್.—ನಾನೂ ಸಹ ಅನೇಕ ವಿಚಾರಗಳನ್ನು ಬರೆದು ಕಳುಹಿಸಿಕೊಟ್ಟಿದ್ದೇನೆ. ಆದರೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ.

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ.

ಶ್ರೀ ಬಿ. ಸ್ವಾಮಿರಾವ್.—ನಿಮ್ಮ ಮಾತಿಗೆ ಬೆಲೆ ಕೊಡುತ್ತೇನೆ ಈ ರಾಜ್ಯಪಾಲರ ಭಾಷಣದಲ್ಲಿ ಹೆಚ್ಚಿನ ವಿಶೇಷ ಏನೂ ಇಲ್ಲ. ಆದ್ದರಿಂದ ಇದಕ್ಕೆ ಬೆಲೆ ಕೊಡುವುದು ಸರಿಯಲ್ಲ. ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ "ಚೆಲುವ ಕನ್ನಡ ನಾಡು" ಎಂಬ ಹೆಸರಿನ ಪುಸ್ತಕವನ್ನು ಸಿಂಗಪುರದಲ್ಲಿ ಪ್ರಿಂಟ್ ಮಾಡಿಸಿದ್ದಾರೆ. ಇದರ ಬೆಲೆ ೪೯೫ ರೂಪಾಯಿಗಳು ೫೦೦ ರೂಪಾಯಿಗಳಿಗೆ ೫ ರೂಪಾಯಿ ಕಡಿಮೆ ಬೆಲೆ ಇಟ್ಟಿದ್ದಾರೆ ಇದು ನಾಚಿಕೆಗೇಡಿನ ಸಂಗತಿ.

ಅಧ್ಯಕ್ಷರು.—ನಾಚಿಕೆಗೇಡು, ಬೇಜವಾಬ್ದಾರಿ ಎಂಬ ಪದಗಳನ್ನು ಇಲ್ಲಿ ಬಳಸಬೇಡಿ.

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್.—ಆ ಪದಗಳಿಗೆ ಬದಲು ಬೇರೆ ಯಾವ ಪದಗಳನ್ನು ಬಳಸಬೇಕು ಎಂಬುದನ್ನು ನೀವೇ ಹೇಳಬಿಡಿ.

ಅಧ್ಯಕ್ಷರು.—ನಿಮ್ಮ ದೃಷ್ಟಿಯಲ್ಲಿ ಅಷ್ಟು ಬೆಲೆ ಇಟ್ಟಿರುವುದು ಸರಿಯಿಲ್ಲದಿರಬಹುದು, ಆದರೆ ಶ್ರೀ ನಾರಾಯಣಕುಮಾರ್ ಅವರ ದೃಷ್ಟಿಯಲ್ಲಿ ಅದು ಸರಿಯಾಗಿದೆ.

ಶ್ರೀ ಬಿ. ಸ್ವಾಮಿರಾವ್.—ಬಾಟಾ ಕಂಪನಿಯವರು ತಾವು ತಯಾರಿಸುವ ಪದಾರ್ಥಗಳಿಗೆ ೯–೯೫, ೭೫–೯೫ ಎಂದು ಬೆಲೆ ಕಟ್ಟುತ್ತಾರೆ. ಅದೇ ರೀತಿ ಇವರು ಸಹ ಇದಕ್ಕೆ ೪೯೫ ರೂಪಾಯಿಗಳ ಬೆಲೆಯನ್ನು ಕಟ್ಟಿದ್ದಾರೆ. ಇದನ್ನು ಯಾವ ಪುರುಷಾರ್ಥಕ್ಕಾಗಿ ಪ್ರಿಂಟ್ ಮಾಡಿಸಿದ್ದಾರೆ ? ಇದರಿಂದ ಯಾವ ದೇಶ ಉದ್ಧಾರವಾಗುತ್ತದೆ, ಇದರಿಂದ ಬಡವರು ಏನಾದರು ಉದ್ಧಾರವಾಗುತ್ತಾರೆಯೇ ? ಈ ಪುಸ್ತಕದೊಳಗಡೆ ಹುಲಿ, ಚಿರತೆ ಮುಂತಾದ ಪ್ರಾಣಿಗಳ ಫೋಟೋಗಳಿವೆ. ಬೇರೆ ಕೆಲವು ಚಿತ್ರಗಳಿವೆ. ಹೊರ ದೇಶದಲ್ಲಿ ಇದನ್ನು ಪ್ರಿಂಟ್ ಮಾಡಿಸಿ, ಇವರು ಕನ್ನಡ ಭಾಷೆಗೆ ಮತ್ತು ಕನ್ನಡಿಗರಿಗೆ ದ್ರೋಹ ಮಾಡಿದ್ದಾರೆ, ಕರ್ನಾಟಕ ರಾಜ್ಯದಲ್ಲಿರುವ ಸಮಸ್ತ ಕನ್ನಡಿಗರಿಗೂ ದ್ರೋಹ ಮಾಡಿದ್ದಾರೆ. ಕನ್ನಡ ಎಂದು ಕೂಗಿದರೆ ಕನ್ನಡದ ಉದ್ಧಾರವಾಗುವುದಿಲ್ಲ, ಕನ್ನಡದ ಅಭಿಮಾನಿಗಳೇ ವಿಶ್ವಕನ್ನಡ ಸಮ್ಮೇಳನ ಎಂಬುದನ್ನು ಇಂಗ್ಲೀಷ್ ಭಾಷೆಯಲ್ಲಿ ಬರೆಯುತ್ತಾರೆ ಇಂತಹವರು ಕನ್ನಡದ ಉದ್ಧಾರವನ್ನು ಯಾವ ರೀತಿ ಮಾಡುತ್ತಾರೆ ? ಇಂತಹವರಿಗೆ ಕನ್ನಡ ಭಾಷೆಯ ಬೆಳವಣಿಗೆ ಬಗ್ಗೆ ಯಾವ ಚಿಂತನೆಯೂ ಇಲ್ಲ. ಒಟ್ಟಿನಲ್ಲಿ ಈ ಸರ್ಕಾರದವರು ಮಾಡಿರ ತಕ್ಕ ದ್ರೋಹಕ್ಕೆ ಹಾಗೂ ಪಾಪದ ಕೆಲಸಗಳಿಗೆ ಬೆಲೆ ಕಟ್ಟುವುದಕ್ಕಾಗುವುದಿಲ್ಲ, ಮಾನ್ಯ ರಾಜ್ಯಪಾಲರ ಭಾಷಣವನ್ನು ವಿರೋಧ ಮಾಡಿ, ಇವರ ಕಾರ್ಯಕ್ರಮಗಳನ್ನು ಖಂಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಉಸ್ತಾದ್ ಮಹಬೂಬ್ ಪಟೇಲ್ ಲಾಡ್ಲೆ ಪಟೇಲ್ (ಬಿಜಾಪುರ).—ಸನ್ಮಾನ್ಯ ಅಧ್ಯಕ್ಷರೇ, ಇಷ್ಟರವರೆಗೆ ಬಹಳಷ್ಟು ಸನ್ಮಾನ್ಯ ಸದಸ್ಯರುಗಳು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದ್ದಾರೆ. ನಾನು ಅತಿ ಮುಖ್ಯವಾಗಿ ಒಂದು ವಿಷಯವನ್ನು ಮೊದಲನೆಯದಾಗಿ ತಮ್ಮ ಗಮನಕ್ಕೆ ತರುವುದೇನೆಂದರೆ, ಇವರು ನಮ್ಮ ಕರ್ನಾಟಕ ರಾಜ್ಯದಲ್ಲಿ ಬಿಜಾಪುರ ಜಿಲ್ಲೆ ಎಂಬುದು ಒಂದು ಇದೆ ಎಂದು ತಿಳಿದುಕೊಂಡಿದ್ದಾರೋ ಅಥವಾ ಇಲ್ಲವೋ ಎಂಬ ಅನುಮಾನ ನನಗೆ ಬರುತ್ತಿದೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತೇನೆಂದರೆ, ಕಳೆದ ೫೧ ವರ್ಷಗಳಲ್ಲಿ ನಮ್ಮ ಬಿಜಾಪುರ ಜಿಲ್ಲೆ ಸತತವಾಗಿ ೩೩ ಸಲ ಬರಗಾಲಕ್ಕೆ ತುತ್ತಾಗಿದೆ. ಆದರೂ ಸಹ ನಮಗೆ ಸ್ವಾತಂತ್ರ್ಯ ಬಂದ ಮೇಲೆ ಈ ದೇಶವನ್ನು ಆಳಿದ ಕಾಂಗ್ರೆಸ್ ಸರ್ಕಾರವಾಗಲೀ ಅಥವಾ ಈಗಿನ ಜನತಾ ಪಕ್ಷದ ಸರ್ಕಾರವಾಗಲೀ ನಮ್ಮ ಜಿಲ್ಲೆಯನ್ನು ಏತಕ್ಕೆ ಕಡೆಗಣಿಸಿದ್ದಾರೋ ಗೊತ್ತಿಲ್ಲ. ನಮ್ಮ ಜಿಲ್ಲೆಯ ಬಗ್ಗೆ ಮಲತಾಯಿ ಧೋರಣೆಯನ್ನು ಏತಕ್ಕೆ ಅನುಸರಿಸುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ, ಈ ಕಾರಣದಿಂದ ನಾನು ಬಹಳ ನೊಂದ ಮನಸ್ಸಿನಿಂದ ಇವೊತ್ತು ಮಾತನಾಡುತ್ತಿದ್ದೇನೆ. ಮಾನ್ಯ ರಾಜ್ಯಪಾಲರ ಭಾಷಣ ಎಂದರೆ, It is nothing but a report of the Cabinet read through the mouth of the Hon'ble Governor. ಈ ೧೫ ಪುಟಗಳ ರಾಜ್ಯಪಾಲರ ಭಾಷಣವನ್ನು ಓದಿದಾಗ ನನಗೆ ಏನು ಅನಿಸುತ್ತದೆಂದರೆ, ಬರಗಾಲಕ್ಕೆ ಸಂಬಂಧಪಟ್ಟಂತೆ ಇದರಲ್ಲಿ ಬಹಳಷ್ಟು ಹೇಳಿದ್ದಾರೆ. ಇವೊತ್ತಿನ ದಿವಸ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ೪ ನದಿಗಳು ಮತ್ತು ಒಂದು ದೋಣಿ ನದಿ ಸೇರಿದಂತೆ ೫ ನದಿಗಳು ಹರಿಯುತ್ತವೆ. ಆದರೆ ನಮಗೆ ಕುಡಿಯಲು ಸಾಕಷ್ಟು ನೀರು ಸಿಗುತ್ತಿಲ್ಲ, ಇನ್ನು ೧೫ ವರ್ಷಗಳು ಕಳೆದರೆ ನಾವು ೨೧ನೇ ಶತಮಾನಕ್ಕೆ ಕಾಲಿಡುತ್ತೇವೆ. ಅದೇ ವೆಸ್ಟರ್ನ್ ಕಂಟ್ರೀಸ್ ಏನಿವೆ, ಅವು ಈಗಾಗಲೇ ಎಲೆಕ್ಟ್ರಾನಿಕ್ಸ್ ಮತ್ತು ಮೆಕ್ಯಾನಿಜಂಗಳಲ್ಲಿ ಬಹಳಷ್ಟು ಮುಂದುವರೆದಿವೆ, ಆದರೆ ನಮ್ಮಲ್ಲಿ ಮಾತ್ರ ಕುಡಿಯುವುದಕ್ಕೆ ನೀರು ಸಿಗದ ಪರಿಸ್ಥಿತಿ ಇದೆ. ಈ ಮಾತನ್ನು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ನಮ್ಮ ರಾಜ್ಯದ ಬರಗಾಲದ ಬಗ್ಗೆ ವೃತ್ತ ಪತ್ರಿಕೆಗಳಲ್ಲಿ ಮತ್ತು ಮ್ಯಾಗಜೈನ್‌ಗಳಲ್ಲಿ ಅನೇಕ ವರದಿಗಳು ಬಂದಿವೆ. ಜನವರಿ ತಿಂಗಳ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಮುಖಪುಟದಲ್ಲಿ ಆ ಪತ್ರಿಕೆಯ ಪ್ರೆಸ್ ಕರೆಸ್ಪಾಂಡೆಂಟ್ ಅವರು ಬರಗಾಲದ ಕಾರಣದಿಂದ ಸುಮಾರು ಆರು ಲಕ್ಷ ಜನರು ಮಹಾರಾಷ್ಟ್ರ ಮತ್ತು ಗೋವಾದ ಕಡೆಗೆ ನಮ್ಮ ಜಿಲ್ಲೆಯಿಂದ ವಲಸೆ ಹೋಗಿದ್ದಾರೆಂದು ಹೇಳಿದ್ದಾರೆ. ಆದರೆ ನನ್ನ ಒಂದು ಅಂದಾಜಿನ ಪ್ರಕಾರ ೧೨ ಲಕ್ಷಕ್ಕೂ ಮಿಕ್ಕಿ ನಮ್ಮ ಜಿಲ್ಲೆಯಿಂದ ಜನರು ಬೇರೆ ಕಡೆಗಳಿಗೆ ಹೋಗಿದ್ದಾರೆ. ನಮ್ಮ ಜಿಲ್ಲೆಯ

ವಿಸ್ತೀರ್ಣ ೧೭೮೧ ಕಿಲೋಮೀಟರ್, ಒಟ್ಟು ಜನಸಂಖ್ಯೆ ೨೪ ಲಕ್ಷದ ಒಂದು ಸಾವಿರದ ಏಳನೂರ ಎಂಭತ್ತೆರಡು. ದನಕರುಗಳ ಸಂಖ್ಯೆ ೭೩೩೭೩೨, ಸರ್ಕಾರದವರೇ ಕೊಟ್ಟಿರುವ ಮಾಹಿತಿಗಳ ಪ್ರಕಾರ ನಮ್ಮ ಜಿಲ್ಲೆಯಲ್ಲಿ ೫೩೪ ಹಳ್ಳಿಗಳು ಬರಗಾಲಕ್ಕೆ ತುತ್ತಾಗಿವೆ. ೮ ಲಕ್ಷದ ೭೩ ಸಾವಿರದ ೯೪ ಜನರು ಬರಗಾಲಕ್ಕೆ ತುತ್ತಾಗಿದ್ದಾರೆ. ೩,೪೭,೧೮೩ ದನಕರುಗಳು ಬರಗಾಲದ ಬವಣೆಗೆ ಸಿಕ್ಕಿವೆ. ಈ ಬರಗಾಲಕ್ಕೆ ತುತ್ತಾಗಿರುವವರ ಪೈಕಿ ಮಾರ್ಜಿನಲ್ ಫಾರ್ಮರ್ಸ್ ೨೫,೭೧೯ ಇದ್ದರೆ ವ್ಯವಸಾಯ ಕೂಲಿಗಾರರ ಸಂಖ್ಯೆ ೩,೩೭ ೮೭೨, ಈ ಜನರ ಜೊತೆಗೆ ದೊಡ್ಡ ದೊಡ್ಡ ರೈತರು ಸಹ ಹಳ್ಳಿಗಳನ್ನು ಬಿಟ್ಟು ಗೋವಾ ಮತ್ತು ಮಹಾರಾಷ್ಟ್ರದ ಕಡೆಗೆ ವಲಸೆ ಹೋಗಿದ್ದಾರೆ. ಇದರಿಂದ ನಮ್ಮ ಜಿಲ್ಲೆಯಲ್ಲಿ ಬರಗಾಲ ಕಾಮಗಾರಿಗಳು ಸಾಕಷ್ಟು ಪ್ರಮಾಣದಲ್ಲಿ ನಡೆದಿಲ್ಲವೆಂದು ಅರ್ಥವಾಗುತ್ತದೆ. ೧೯೭೩-೭೪ ರಲ್ಲಿ ನಮ್ಮ ಜಿಲ್ಲೆ ಬರಗಾಲಕ್ಕೆ ತುತ್ತಾದಾಗ ನಾನು ವಿದ್ಯಾರ್ಥಿಯಾಗಿದ್ದೆ. ಆ ಸಮಯದಲ್ಲಿ ಅಧಿಕಾರಿಗಳು ಮತ್ತು ಮಂತ್ರಿಗಳು ಹಗಲು ರಾತ್ರಿ ಎನ್ನದೆ ದುಡಿದಿದ್ದನ್ನು ನಾನು ನೋಡಿದ್ದೇನೆ. ಆಗ ವಾರ್-ಫುಟಿಂಗ್ ರೀತಿಯಲಿ ಕೆಲಸಗಳಾಗುತ್ತಿದ್ದವು. ಆದರೆ ಈಗ ಆ ರೀತಿ ಕೆಲಸಗಳಾಗುತ್ತಿಲ್ಲ. ನಮ್ಮ ಜಿಲ್ಲೆಯ ೧೫ ಜನ ಶಾಸಕರುಗಳ ಪೈಕಿ ಇಬ್ಬರು ಮಂತ್ರಿಗಳಾಗಿದ್ದಾರೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯಬಂದಮೇಲೆ ಇದೇ ಮೊದಲನೆಯ ಸಲ ನಮ್ಮ ಜಿಲ್ಲೆಯಿಂದ ೧೨ ಜನ ಸದಸ್ಯರು ಜನತಾ ಪಕ್ಷದಿಂದ ಆರಿಸಿ ಬಂದಿದ್ದಾರೆ ಮುಖ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರನ್ನು ನೋಡಿ ಜನರು ಜನತಾ ಪಕ್ಷಕ್ಕೆ ಓಟು ಕೊಟ್ಟಿದ್ದಾರೆ. ಕಾಂಗ್ರೆಸ್‌ನವರು ಏನೂ ಮಾಡಲಿಲ್ಲ, ನೀವಾದರೂ ಮಾಡಿ ಎಂದು ನಿಮಗೆ ಜನರು ಓಟು ಕೊಟ್ಟರು. ಇವೊತ್ತು ನಮ್ಮ ಜಿಲ್ಲೆಯವರೇ ಅಬಕಾರಿ ಮಂತ್ರಿಯಾಗಿದ್ದಾರೆ. ಅವರನ್ನು ನಮ್ಮ ಕಡೆ ದಾರೂ ಮಂತ್ರಿ ಇಲ್ಲವೇ ಸೆರೆ ಮಂತ್ರಿ ಎಂದು ಕರೆಯುತ್ತಾರೆ. ಇವರ ಜೊತೆಗೆ ನಮ್ಮ ಜಿಲ್ಲೆಯ ಮತ್ತೊಬ್ಬರು ಗಣಿ ಮತ್ತು ವಿದ್ಯುಚ್ಛಕ್ತಿಯ ಮಂತ್ರಿಯಾಗಿದ್ದಾರೆ. ನಮ್ಮಲ್ಲಿ ಗಣಿಗಳಿಲ್ಲ, ನಮ್ಮ ಜಿಲ್ಲೆಯ ಎಲ್ಲ ಜನರಿಗೂ ಯಾವಾಗ ವಿದ್ಯುತ್ ದೊರೆಯುತ್ತದೋ ಗೊತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಎಷ್ಟು ತಾಂಡಗಳಿವೆಯೋ ಅವುಗಳಿಗೆಲ್ಲಾ ವಿದ್ಯುತ್ ಸರಬರಾಜು ಮಾಡಿ ಎಂದು ನಾನು ಡಿ. ಡಿ. ಸಿ. ಮೀಟಿಂಗ್‌ನಲ್ಲಿ ಎರಡು ಮೂರು ಸಲ ಹೇಳಿದ್ದೇನೆ. ಆದರೆ ಈ ಮಂತ್ರಿಗಳು ಇಲ್ಲಿಯವರೆಗೆ ಏನನ್ನೂ ಮಾಡಲಿಲ್ಲ. ಈಗಲಾದರೂ ಈ ಕೆಲಸ ಮಾಡಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೊಂದು ಮುಖ್ಯ ಸಂಗತಿ ಎಂದರೆ, ನಮ್ಮ ಬಿಜಾಪುರ ತಾಲ್ಲೂಕಿಗೆ ಸೇರಿದ ನಾಲ್ಕು ಊರುಗಳ ಜನರು ಶೇಕಡಾ ೯೦ರಷ್ಟು ಮನೆಗಳಿಗೆ ಬೀಗ ಹಾಕಿ ಬೇರೆ ಕಡೆಗಳಿಗೆ ಹೋಗಿದ್ದಾರೆ. ೪ರಿಂದ ೫ ಸಾವಿರದವರೆಗೆ ಜನರು ಇರುವಂತಹ ಊರುಗಳೆಂದರೆ, ಮಮದಾಪುರ, ಮಂಗನೂರು, ಅಡವಿಸಂಗಾಪುರ, ಕೂಡಲಗಿ, ಈ ಊರುಗಳಲ್ಲಿ ಇವೊತ್ತಿನದಿವಸ ಬಾಕಿ ಉಳಿದಿರುವ ಶೇಕಡಾ ಹತ್ತರಷ್ಟು ಜನರು ಯಾರೆಂದರೆ, ನಡೆಯಲಾಗದ ಮುದುಕರು ಮತ್ತು ಮುದುಕಿಯರು.

೫-೦೦ ಪಿ. ಎಂ.

ಆ ಊರುಗಳಲ್ಲಿ ೧೦೦ಕ್ಕೆ ೯೦ ಮನೆಗಳು ಬೀಗ ಹಾಕಿವೆ. ಆ ಊರಿನ ಹೆಸರುಗಳು ಮಾಮಲಪೂರ್ ಮಂಗಳೂರು, ಅಡವಿಸಂಗಪೂರ್, ಕೊಟೆಬಾಗಿ. ಈ ನಾಲ್ಕು ಊರಿಗೆ ನಾನೇ ಸ್ವತಃ ಹೋಗಿ ಭೇಟಿಕೊಟ್ಟು ಬಂದಿದ್ದೇನೆ. ಇನ್ನು ಕಾಮಗಾರಿ ಕೆಲಸದ ಬಗ್ಗೆ ಹೇಳಬೇಕಾದರೆ, ಈ ಭಾಗದಲ್ಲಿ ಜನರು ೧೦ ದಿವಸ ಕೆಲಸ ಮಾಡಿದ್ದರೂ ಸಹಾ ಅವರಿಗೆ ಕೂಲಿ ಕೊಟ್ಟಿಲ್ಲ. ಅವರಿಗೇಕೆ ಇನ್ನೂ ಕೂಲಿಯನ್ನೇ ಕೊಟ್ಟಿಲ್ಲವೆಂದು ನಾನು ಹೋಗಿ ಅಲ್ಲಿನ ಆಫೀಸರ್‌ರವರನ್ನು ಕೇಳಿದಾಗ, ಅವರು ಹಣ ಬಂದಾಗ ಕೊಡುತ್ತೇವೆಂದರು. ಐದು, ಆರು ದಿವಸ ಕೆಲಸ ಮಾಡಿದ ಮೇಲೆ ಕೂಲಿಯನ್ನು ಕೊಡಬೇಡವೆ ? ಇಂತಹ ಪರಿಸ್ಥಿತಿ ನಮ್ಮ ಬಿಜಾಪುರ ಜಿಲ್ಲೆಯಲ್ಲಿದೆ. ಇದರ ಬಗ್ಗೆ ನಮ್ಮ ಜಿಲ್ಲೆಯ ಮಂತ್ರಿಗಳನ್ನು ಕೇಳುವ ಹಾಗೂ ಇಲ್ಲ, ಬಿಡುವ ಹಾಗೂ ಇಲ್ಲ. ಅವರು ನಮ್ಮ ಜಿಲ್ಲೆಗೆ ಬರುತ್ತಾರೆ, ಆಫೀಸರ್ ಮೀಟಿಂಗ್ ಮಾಡುತ್ತಾರೆ ಟಿ.ಬಿ.ಯಲ್ಲಿ ಕುಳಿತಿರುತ್ತಾರೆ. ಇವಿಷ್ಟನ್ನು ಬಿಟ್ಟರೆ ಅವರನ್ನು ಏನೂ ಕೇಳಬಾರದು. ಇದು ನಮ್ಮ ಜಿಲ್ಲೆಯ ಮಂತ್ರಿಯವರು ಮಾಡುವ ಕೆಲಸ. ಹೋದ ಸಲ ನಾನು ಸ್ಪೆಷಲ್ ಡೆಪ್ಯೂಟಿ ಕಮೀಷನರ್‌ರವರ ಹತ್ತಿರ ಕುಳಿತು ಹಿಂದಿನ ಒಂದು ಅಂಕಿಅಂಶವನ್ನು ತೆಗೆಸಿದೆ. ಈಗ ಬಂದಿರುವ ಬರಗಾಲ ನಮ್ಮ ಜಿಲ್ಲೆಯಲ್ಲಿ ೧೮೭೭ರಲ್ಲಿ ಬಿದಿತ್ತು. ಇದನ್ನು ಹಿಂದಿನ ಅಂಕಿ ಅಂಶಗಳಿಂದ ತಿಳಿದೆ. ಇವತ್ತು ನಮ್ಮ ಜಿಲ್ಲೆಯಲ್ಲಿ ಏನು ನಡೆದಿದೆ ಎಂಬುದನ್ನು ಅಧ್ಯಕ್ಷರು ಓದಿದ್ದಾರೆ. ಅಧ್ಯಕ್ಷರ ಪಕ್ಕದ ಜಿಲ್ಲೆಯಲ್ಲಿ ಅಂದರೆ ಹುಬ್ಬಳ್ಳಿಯಲ್ಲಿ ದಿನಕ್ಕೆ ಒಂದು ಕ್ವಿಂಟಾಲ್ ಮೂಗದಾಣಿಗಳು

ಸಿಕ್ಕಿತ್ತವೆ. ಅಂದರೆ ಇವುಗಳನ್ನು ಎತ್ತುಗಳಿಗೆ, ಹೋರಿಗಳಿಗೆ ಹಾಕುತ್ತಾರೆ. ಈ ದಾರಗಳು ಖಾಸಾಯಿ ಖಾನೆಗಳಲ್ಲಿ ಸಿಕ್ಕಿವೆ. ಇವತ್ತು ಯಾವುದೇ ಪಾರ್ಟಿಯ ಸರ್ಕಾರವಿರಬಹುದು ಎಲ್ಲಾ ಸರ್ಕಾರದವರು ಆ ಕೆಲಸ ಮಾಡುತ್ತೇವೆ, ಈ ಕೆಲಸ ಮಾಡುತ್ತೇವೆಂದು ದೊಡ್ಡ ಹೇಳಿಕೆಯನ್ನು ಪೇಪರ್‌ನಲ್ಲಿ ಪ್ರಚಾರ ಮಾಡಿಕೊಂಡು ಕುಳಿತಿದ್ದಾರೆಯೇ ವಿನಹಃ ಬೇರೆ ಏನನ್ನು ಮಾಡುತ್ತಿಲ್ಲ. ನಿಮ್ಮ ಮನಸ್ಸಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಪಟ್ಟಿರುವಿರಾ ? ಅಧ್ಯಕ್ಷರೇ, ಬರಗಾಲ ಬಿದ್ದಾಗ ತೇಪೆ ಕೆಲಸ ಅಂತಾ ಏನು ಇದೆ, ಅದನ್ನು ನಾಲ್ಕು ಹಳ್ಳಿಗಳ ರೋಡಿನ ಮೇಲೆ ಮಣ್ಣನ್ನು ಹಾಕಿದರೆ ಕೆಲಸ ಕೊಟ್ಟ ಹಾಗೇನು ? ಅದಕ್ಕೆ ಬದಲು ಒಂದು ಶಾಶ್ವತವಾದ ಪರಿಹಾರವನ್ನು ಹುಡಕಬೇಕು. ಆದಕ್ಕೆ ನನ್ನದೊಂದು ಸಲಹೆ ಇದೆ. ಅದೇನೆಂದರೆ, ಬಿಜಾಪುರದ ಜೇನ್‌ನಗರೂ ಎಂಬ ಊರಿನಲ್ಲಿ ಒಂದು ರಾಮಲಿಂಗನ ಕೆರೆ ಇದೆ. ಇದು ಅದಿಲ್‌ಶಾಹನ ಕಾಲದಿಂದಲೂ ಬಹಳ ಪ್ರಸಿದ್ಧಹೊಂದಿದ ಕೆರೆ. ಈ ಕೆರೆಯನ್ನು ಡೀಸಿಲ್ಟ್ ಮಾಡಬೇಕು. ಇದರಿಂದ ಬಿಜಾಪುರ ಮತ್ತು ಸುತ್ತಮುತ್ತಲಿನ ಏರಿಯಾ ಜನರಿಗೆ ನೀರಿನ ತೊಂದರೆ ಹೋಗಿಬಿಡುತ್ತದೆ ಅದೇ ತರಹ ತಜೆಪುರದಲ್ಲಿ ಒಂದು ಕೆರೆಯಿದೆ. ಅದನ್ನು ಡೀಸಿಲ್ಟ್ ಮಾಡಬೇಕು ಇಂತಹ ಕೆಲಸವನ್ನು ಈ ವರ್ಷವಲ್ಲ, ಮುಂದಿನ ವರ್ಷವಲ್ಲ, ಅದರ ಮುಂದಿನ ವರ್ಷ ಮಾಡಿ, ಇದರಿಂದ ಒಂದು ಶಾಶ್ವತವಾದ ಪರಿಹಾರವನ್ನು ಮಾಡಿಕೊಟ್ಟಂತಾಗುತ್ತದೆ. ಮತ್ತೊಂದು ವಿಷಯವೇನೆಂದರೆ, ನಾಲಾ ಬಂಡ ಕೆಲಸ ಇನ್ನೂ ನಡೆದಿಲ್ಲ. ಈ ನಾಲಾ ಬಂಡಿ ಕೆಲಸದ ಬಗ್ಗೆ ಏಕೆ ನಿಧಾನ ? ಬೇಕಾದರೆ ನಮ್ಮ ಜಿಲ್ಲಾ ಮಂತ್ರಿಗಳನ್ನು ನೀವೇ ಕೇಳಿ. ಇದರ ಬಗ್ಗೆ ಅವರಿಗೆ ಮಲತಾಯಿಯ ಧೋರಣೆ ಇದೆ. ಹೋದ ಸಲ ನಮ್ಮ ಜಿಲ್ಲೆಗೆ ಮುಖ್ಯಮಂತ್ರಿಗಳು ಮತ್ತು ಇತರ ಮಂತ್ರಿಗಳು ಬಂದಿದ್ದರು. ಅಲ್ಲಿ ಒಂದು ಮೀಟಿಂಗ್ ಏರ್ಪಾಡಿಸಿದ್ದರು. ಅಲ್ಲಿಗೆ ಶಾಸಕರು, ಸಂಸತ್ ಸದಸ್ಯರು, ವಿಧಾನಪರಿಷತ್ತಿನ ಶಾಸಕರು ಸಹಾ ಬಂದಿದ್ದರು. ಆ ಮೀಟಿಂಗ್‌ನಲ್ಲಿ ಮುಖ್ಯ ಮಂತ್ರಿಗಳನ್ನು ಒಂದು ಮಾತನ್ನು ಕೇಳಿದೆ. ಮುಖ್ಯಮಂತ್ರಿಗಳೇ, ತಾವು ೧೯೮೦ನೇ ಇಸವಿಯಲ್ಲಿ ಮತ್ತು ೧೯೮೫ನೇ ಇಸವಿಯಲ್ಲಿ ಚುನಾವಣಾ ಪ್ರಚಾರಕ್ಕೆ ಬಂದಾಗ ನಮ್ಮ ಬಿಜಾಪುರದಲ್ಲಿ ಒಂದು ಭಾಷಣ ಮಾಡಿದಿರಿ. ಅದು ಎಲ್ಲಾ ಪತ್ರಿಕೆಯಲ್ಲೂ ಪ್ರಕಟವಾಯಿತು. ಆ ಭಾಷಣದಲ್ಲಿ ಏನೂ ಹೇಳಿದ್ದೀರೆಂದರೆ, ನೀರಿನ ಕೊರತೆಯನ್ನು ನಿವಾರಿಸುತ್ತೇವೆ, ನೀರಾವರಿ ಮಾಡಿಕೊಡುತ್ತೇವೆಂದು ಭಾಷಣ ಮಾಡಿದಿರಿ. ನೀವು ಅವತ್ತು ಹೇಳಿದಂತಹ ಒಂದು ಕೆಲಸವನ್ನು ಇವತ್ತಿನವರೆವಿಗೂ ಮಾಡಿಲ್ಲ. ಬಿಜಾಪುರ ಹಿಸ್ಟಾರಿಕಲ್ ಸಿಟಿ ಮತ್ತು ಹಿಸ್ಟಾರಿಕಲ್ ಡಿಸ್ಟ್ರಿಕ್ಟ್. ಇಲ್ಲಿನ ರೋಡ್ಸ್ ಬಹಳಷ್ಟು ಕೆಟ್ಟಿವೆ. ಹೆಗಡೆಯವರು ೧೯೮೩ ರಿಂದ ೧೯೮೮ರವರೆವಿಗೂ ಅಧಿಕಾರದಲ್ಲಿದ್ದರು. ಈ ರೋಡ್ಸ್ ಸಲುವಾಗಿ ಬಿಜಾಪುರಕ್ಕೆ ವಿಶೇಷವಾದ ಹಣವನ್ನು ಕಳುಹಿಸಿಕೊಡುತ್ತೇವೆಂದು ಹೇಳಿದರು, ಇವತ್ತಿನವರೆವಿಗೂ ಆ ದುಡ್ಡು ಬಂದಿಲ್ಲ. ತಮಗೆ ತಿಳಿಸುವ ಮತ್ತೊಂದು ವಿಷಯವೇನೆಂದರೆ, ನಮ್ಮ ಸ್ವಾತಂತ್ರ್ಯ ಹೋರಾಟಗಾರರು ಸ್ವಾತಂತ್ರ್ಯಕ್ಕಾಗಿ ಮುಂಚೆ ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದರು. ದೇಶ ಸ್ವಾತಂತ್ರ್ಯವಾದ ಮೇಲೆ ಈ ಬರಗಾಲ ಪೀಡಿತನಾದ ಬಿಜಾಪುರದಲ್ಲಿ ಶಾಶ್ವತವಾದ ಪರಿಹಾರ ವನ್ನುಂಟು ಮಾಡುವ ಸಲುವಾಗಿ, ಲಿಫ್ಟ್ ಇರಿಗೇಷನ್ ಮಾಡಬೇಕೆಂದು ಸತತವಾಗಿ ಹೋರಾಟ ಮಾಡುತ್ತಾ ಬಂದಿದ್ದೇವೆ. ನಾನು ಸಹಿತ ಹೋದ ಅಧಿವೇಶನದಲ್ಲಿ ಒಂದು ಚುಕ್ಕೆ ಗುರುತಿನ ಪ್ರಶ್ನೆ ಹಾಕಿದ್ದೆ. ಆ ಪ್ರಕಾರ ಮಾನ್ಯ ಸಚಿವರಾದ ದೇವೇಗೌಡರು ಹೇಳಿದರು ಇದು ಮೊದಲನೆಯ ಹಂತದಲ್ಲಿ ಬರಬೇಕಾಗಿತ್ತು, ಅಂದರೆ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನಲ್ಲಿ ಬರಬೇಕಾಗಿತ್ತು ಆದ್ದರಿಂದ ಇದು ಎರಡನೇ ಹಂತದಲ್ಲಿ ಬರುವ ಹಾಗ ಇಲ್ಲ. ಆದರೂ ಎರಡನೇ ಹಂತದಲ್ಲಿ ಈ ಯೋಜನೆಯನ್ನು ತರಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದರು. ಅಧ್ಯಕ್ಷರೇ, ಮುಳವಾಡ ಲಿಫ್ಟ್ ಇರಿಗೇಷನ್ ಆದರೆ ಸುಮಾರು ಐದುವರೆ ಲಕ್ಷ ಭೂಮಿಗೆ ನೀರಾವರಿಯಾಗುತ್ತದೆ. ಮುಳವಾಡ ಲಿಫ್ಟ್ ಇರಿಗೇಷನ್‌ನಿಂದ ಬಿಜಾಪುರ, ಸಿಂಧಗಿ, ಇಂಡಿ, ಬಸವನಬಾಗೇವಾಡಿ, ಮುದ್ದೇಬಿಹಾಳ್, ಇದು ನಮ್ಮ ಸಚಿವರ ತಾಲ್ಲೂಕು, ಇವುಗಳಿಗೆ ಅನುಕೂಲವಾಗುತ್ತದೆ. ಈ ಮುಳವಾಡ ಲಿಫ್ಟ್ ಇರಿಗೇಷನನ್ನು ಏಕೆ ತೆಗೆದುಕೊಳ್ಳಬಾರದು ? ಇದಕ್ಕೆ ಮೊದಲ ಪ್ರಾಶಸ್ತ್ಯವನ್ನು ಏಕೆ ಕೊಡಬಾರದು ? ಇದನ್ನು ಬಿಟ್ಟು ಪ್ರತಿಷ್ಠಾನಾ ಪ್ರಾಜೆಕ್ಟ್ ನಮ್ಮ ಜಿಲ್ಲೆಯಲ್ಲಿ ಆಗುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಇದರಿಂದ ಸಾವಿರಾರು ಎಕರೆ ಜಮೀನು ನಮ್ಮ ಜಿಲ್ಲೆಯಲ್ಲಿ ಹಾಳಾಗುತ್ತದೆ. ಇವತ್ತು ಡ್ಯಾಮ್ ಆಗಿರುವುದು ನಮ್ಮ ಜಿಲ್ಲೆಯಲ್ಲಿ, ಆದರೆ ನೀರು ಹೋಗುವುದು ಗುಲ್ಬರ್ಗ ಮತ್ತು ರಾಯಚೂರಿಗೆ ನಮ್ಮಲ್ಲಿ ಟ್ಯಾಂಕ್ ಇದೆ, ಭೂತನಾಳದ ಕೆರೆ ನೀರು ಅಲ್ಲಿಗೆ ಬರುತ್ತದೆ. ಈ ಕೆರೆಯನ್ನು ೧೯೧೧ರಲ್ಲಿ ಸರ್. ಎಂ ವಿಶ್ವೇಶ್ವರಯ್ಯನವರು ಕಟ್ಟಿದ್ದು.

ಮುನಿಸಿಪಾಲಿಟಿ ಮಂತ್ರಿಗಳು ಹಾಗೂ ಪ್ರೊಫೆಸರ್ ಲಕ್ಷ್ಮೀಸಾಗರ್‌ರವರು ಅಲ್ಲಿಗೆ ಬಂದಾಗ ಹೇಳಿದೆ, ೧೯೧೧ರಲ್ಲಿ ಈ ಕೆರೆ ನಿರ್ಮಾಣವಾಗಿದೆ. ಆಗಿನ ಜನಸಂಖ್ಯೆ ೩೦ ಸಾವಿರ ಇತ್ತು, ಇವತ್ತಿನ ಜನಸಂಖ್ಯೆ ೨ ಲಕ್ಷ ಸಮೀಪಿಸುತ್ತಿದೆ. ಇವತ್ತಿನ ಅಂಕಿ ಅಂಶದ ಪ್ರಕಾರ ಒಂದು ಲಕ್ಷದ ಅರವತ್ತು ಸಾವಿರ ಜನ ಓಟರ್ಸ್ ನಮ್ಮ ಬಿಜಾಪುರದ ಸಿಟಿಯಲ್ಲಿದ್ದಾರೆ. ಇದರಿಂದ ನೀರು ಸಾಕಾಗುತ್ತಿಲ್ಲ. ಇದರ ಬಗ್ಗೆ ಏನಾದರೂ ವ್ಯವಸ್ಥೆ ಮಾಡಬೇಕು. ಬಿಜಾಪುರದ ಸಿಟಿಯಲ್ಲಿ ನೀರಿನ ಕೊರತೆ ಹೋಗಬೇಕಾದರೆ ೫೦ ಕಡೆ ನೀರಿನ ಸಂಗ್ರಹ ಮಾಡಬೇಕು. ಇದರ ಬಗ್ಗೆ ನಮ್ಮ ಮಂತ್ರಿಗಳಿಗೆ ಹೇಳಿದಾಗ ಅವರು ದುಡ್ಡಿಲ್ಲವೆಂದು ಹೇಳಿದರು. ಇಂತಹ ಪರಿಸ್ಥಿತಿ ಏಕೆ ಉದ್ಭವವಾಗುತ್ತದೆ. ಇಲ್ಲಿನ ಜನರಿಗೆ ಶಾಶ್ವತವಾದಂತಹ ಒಂದು ಪರಿಹಾರವನ್ನು ಕೊಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಏಕೆಂದರೆ ಇವತ್ತು ನೀವಿರಬಹುದು ನಾಳೆ ಹೋಗಬಹುದು. ಇಂತಹವರು ಇದ್ದರು, ಮಂತ್ರಿಗಳಾಗಿದ್ದರು, ಇಷ್ಟು ಜನ ಶಾಸಕರನ್ನು ಆರಿಸಿ ಕಳುಹಿಸಿದ್ದೆವು ಎಂಬುದನ್ನು ನಮ್ಮ ಮುಂದಿನ ಪೀಳಿಗೆಯವರಾದರೂ ನೆನಪಿಸಿ ಕೊಳ್ಳಲಿ. ಮೊದಲು ಕಾಂಗ್ರೆಸ್ ಸರ್ಕಾರದವರು ಏನು ಮಾಡಲಿಲ್ಲ. ಜನತಾದವರು ಏನಾದರೂ ಮಾಡುವರೆ ಎಂಬ ಭಾವನೆಯನ್ನು ಇಟ್ಟುಕೊಂಡು ಜನರು ಕೇಳುತ್ತಿದ್ದಾರೆ. ಇದನ್ನೆಲ್ಲಾ ತಾವು ನೆನಪಿನಲ್ಲಿಟ್ಟುಕೊಂಡು ಕೆಲಸ ಮಾಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ನಾನು ಸದನದಲ್ಲಿ ಮೇಲಿಂದ ಮೇಲೆ ಈ ಮಾತನ್ನು ಕೇಳುತ್ತಾ ಇದ್ದೇನೆ, ಅಂದರೆ ಕಾಂಗ್ರೆಸ್‌ನವರು ಅಷ್ಟು ವರ್ಷ ಅಧಿಕಾರದಲ್ಲಿದ್ದರು, ನಿವೇನು ಮಾಡಿದಿರಿ ಎಂಬುದನ್ನು ಪದೇ ಪದೇ ಹಿರಿಯ ಸದಸ್ಯರುಗಳು, ಈ ಕಡೆಯ ಹಿರಿಯ ಸದಸ್ಯರುಗಳೊಂದಿಗೆ ವಾದ ಮಾಡುತ್ತಾ ಇದ್ದಾರೆ. ಆದರೆ ನನಗೆ ಅನಿಸುತ್ತದೆ, ನಾವು ಏನು ಮಾಡಲಿಲ್ಲ, ಆದ್ದರಿಂದ ನಾವು ಈ ಕಡೆ ಬಂದು ಕುಳಿತಿದ್ದೇವೆ. ನೀವು ಏನು ಮಾಡುವುದಕ್ಕೆ ಪ್ರಯತ್ನ ಪಟ್ಟಿರುವಿರಿ ? ನಮ್ಮ ಬಿಜಾಪುರದಲ್ಲಿ ಲಾ ಅಂಡ್ ಆರ್ಡರ್ ಬಗ್ಗೆ ಹೇಳಬೇಕಾದರೆ ತಾರೀಖು ೯- -೧೯೮೬ ರಂದು ಒಂದು ಹೆಣ ಪೋಲೀಸ್ ಸ್ಟೇಷನಲ್ಲಿರುವ ಬಾವಿಯಲ್ಲಿ ತೇಲಾಡುತ್ತಾ ಇತ್ತು. ಅವನ ಬಳಿ ದುಡ್ಡು ಇತ್ತು. ಅವನಿಗೆ ಯಾವುದೊ ಒಂದು ಹೆಸರಿದ್ದರೂ ಕೂಡ ಅವನನ್ನು ಅನಾಮಧೇಯನೆಂದು ನೋಂದಾಣಿ ಮಾಡಿಕೊಂಡಿದ್ದಾರೆ. ಹೋದ ತಿಂಗಳು ಮತ್ತೊಂದು ಮರ್ಡರ್ ಆಯಿತು. ಅವನಿಗೆ ೩೦೨ರ ಸೆಕ್ಷನ್ ಪ್ರಕಾರ ಶಿಕ್ಷೆಯನ್ನು ಹಾಕುವುದಕ್ಕೆ ಬದಲಾಗಿ ಐ ಪಿ.ಸಿ. ಸೆಕ್ಷನ್ ಹಾಕಿ ಅಲ್ಲಿನವರು ಹಣ ಹೊಡೆದಿದ್ದಾರೆ. ಈ ವಿಷಯ ಮುಂದಿನ ಸಾರಿ ಗಮನ ಸೆಳೆಯುವ ಸೂಚನೆಯಲ್ಲಿ ಬರುತ್ತದೆ. ಇಂಥದೇ ಹೆಣ ಜಮಖಂಡಿ ತಾಲ್ಲೂಕಿನಲ್ಲಿ ತೇಲುತ್ತಾ ಇತ್ತು. ಅದಕ್ಕೆ ಪಂಚನಾಮ ಮಾಡಲಿಲ್ಲ. ಪೋಸ್ಟ್ ಮಾರ್ಟಮ್ ಮಾಡಲಿಲ್ಲ. ಅದನ್ನು ಹಾಗೆಯೇ ಮಣ್ಣು ಮಾಡಿದರು. ಇಂತಹ ಲಾ ಅಂಡ್ ಆರ್ಡರ್ ನಮ್ಮ ಜಿಲ್ಲೆಯಲ್ಲಿ ಇದೆ. ಇವತ್ತಿನ ದಿವಸ ೧೯ ಜಿಲ್ಲೆಗಳಲ್ಲಿ ೧೫ ಜಿಲ್ಲೆಗಳಲ್ಲಿ ಬರಗಾಲ ಬಿದ್ದಿದೆ. ಈ ಒಂದು ವರ್ಷಕ್ಕೆ ಕೇಂದ್ರ ಸರ್ಕಾರ ೫೩ ಕೋಟಿಯಷ್ಟು ಹಣವನ್ನು ಸಹಾಯ ಮಾಡಿದೆ. ಹಿಂದೆ ಕಾಂಗ್ರೆಸ್ ಸರ್ಕಾರವಿದ್ದಾಗಲೂ ಇಷ್ಟೊಂದು ಹಣವನ್ನು ಕೇಂದ್ರ ಸರ್ಕಾರದಿಂದ ಬಂದಿದ್ದ ಇಲ್ಲ. ಪದೇ ಪದೇ ಕೇಂದ್ರ ಸರ್ಕಾರದಿಂದ ಸಹಾಯ ಬಂದೇ ಇಲ್ಲವೆಂದು ಹೇಳುತ್ತಿದ್ದೀರಿ ಈಗಾಗಲೇ ೧೫೦ ಕೋಟಿ ಖರ್ಚು ಮಾಡಿದ್ದೇವೆಂದು ಹೇಳುತ್ತಾ ಇದ್ದೀರಿ. ಅಧ್ಯಕ್ಷರೇ. ಎನ್‌ಆರ್‌ಇಪಿ, ಡಿಪಿಎಪ್, ಆರ್‌ಎಲ್‌ಜಿಪಿ ಯಿಂದ ಏನು ಕೆಲಸ ನಡೆಯಬೇಕು ಆ ಕೆಲಸ ನಡೆಯುತ್ತಾ ಇದೆ. ಇದರ ಬಗ್ಗೆ ತಮ್ಮ ಕನ್‌ಟ್ರಿಬ್ಯೂಷನ್ ಏನು ? ತಾವು ಏನಾದರೂ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಾ ? ಈ ಎಲ್ಲಾ ಪರಿಸ್ಥಿತಿಯನ್ನು ಒಂದೇ ಅಕ್ಷರದಲ್ಲಿ ಹೇಳಬೇಕಾದರೆ ನಿಮ್ಮ ಸರ್ಕಾರ ಫೇಲಾಗಿದೆ. ಅಷ್ಟೇ ಅಲ್ಲ. ಮಾನ್ಯ ನಿಜಲಿಂಗಪ್ಪನವರು ಹುಬ್ಬಳ್ಳಿಗೆ ಬಂದಾಗ ಅವರೇ ಸ್ವತಃ ಹೇಳಿದರು, ಒಬ್ಬ ಮಂತ್ರಿಯವರನ್ನು ಬಿಟ್ಟರೆ ಮಿಕ್ಕವರು ಸರಿಯಿಲ್ಲವೆಂದು ಹೇಳಿದ್ದಾರೆ. ಈ ಸರ್ಕಾರವನ್ನು ಒಂದೇ ವಾಕ್ಯದಲ್ಲಿ ಹೇಳಬೇಕಾದರೆ, ನಿಜಲಿಂಗಪ್ಪನವರ ಆಶೀರ್ವಾದವನ್ನು ಪಡೆದವರು ರಾಮಕೃಷ್ಣ ಹೆಗಡೆಯವರು ಸಹ ಒಬ್ಬರು ಅಲ್ಲವೇ ? ತಾವು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎ. ಉಮರಬ್ಬ (ವಿಟ್ಲ) — ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ಹಿರಿಯ ಸದಸ್ಯ ರೊಬ್ಬರು, ಇಟ್ಟಿರುವಂಥ ಯಾವ ಒಂದು ನಿಲುವಳಿ (ವಂದನಾ ನಿರ್ಣಯ) ಇದೆ, ಅದನ್ನು ನಾನು ಸಕಾರಣ ಸಹಿತವಾಗಿ ವಿರೋಧಿಸುತ್ತಾ ನನ್ನ ಭಾಷಣವನ್ನು ಪ್ರಾರಂಭ ಮಾಡುತ್ತೇನೆ.

ಅಧ್ಯಕ್ಷರೇ, ತಾವು ಒಂದು ಪ್ರಶ್ನೆ ಕೇಳಬಹುದು, ವಿರೋಧಿಸುವುದಕ್ಕೆ ಏನು ಕಾರಣಗಳು ಇವೆ ಯೆಂದು ಕಾರಣಗಳು ಇದ್ದಾಗಲೇ ಯಾವುದನ್ನೇ ವಿರೋಧಿಸುವುದಕ್ಕೆ ಸಾಧ್ಯ. ವಿರೋಧಿಸುವುದಕ್ಕೆ ವಿರೋಧಪಕ್ಷದ ಖುರ್ಚಿಯಲ್ಲಿದ್ದೇನೆ ಎನ್ನುವುದು ಕಾರಣವಲ್ಲ. ನನ್ನ ತಿಳುವಳಿಕೆ ಮಟ್ಟಿಗೆ ರಾಜ್ಯ ಪಾಲರ ಭಾಷಣದಲ್ಲಿ ರಾಜ್ಯ ಸರ್ಕಾರದ ರೀತಿ ನೀತಿಗಳು, ಕಾರ್ಯಕ್ರಮಗಳು, ಯೋಜನೆಗಳು, ದಿಕ್ಕುದಿಸೆಗಳು ಇವನ್ನು ಸದನದ ಮುಂದೆ ಮತ್ತು ರಾಜ್ಯದ ಜನತೆಯ ಮುಂದೆ ಇಡುವಂಥ ಉದ್ದೇಶ ಹೊಂದಿರುತ್ತದೆ. ಮೊದಲೇ ಪ್ರಾರಂಭದಲ್ಲೇ ಹೇಳಿದೆ, ಯಾವ ಕಾರಣಕ್ಕಾಗಿ ವಿರೋಧಿಸುತ್ತೇನೆಂದು, ಅದಕ್ಕೆ ಉತ್ತರವಾಗಿ ಹೇಳುವುದಾದರೆ, ಒಂದು ಸಮಗ್ರವಾದಂಥ ಚಿತ್ರಣವನ್ನು ಈ ರಾಜ್ಯ ಸರ್ಕಾರದ ವೈಖರಿಯನ್ನು ಇಡುವ ಸಂದರ್ಭದಲ್ಲಿ ಕೇವಲ ಸಾಧನೆಗಳ ಪಟ್ಟಿಯನ್ನೇ ಮಾಡಿ ಸಭೆಯ ಮುಂದೆ ಇಡುವುದಕ್ಕೆ ಬದಲಾಗಿ ಎಲ್ಲೆಲ್ಲಿ ವೈಫಲ್ಯಗಳಾಗಿವೆ ಎಂದು ಬೆಟ್ಟು ಮಾಡಿ ತೋರಿಸಿ ವೈಫಲ್ಯಗಳನ್ನು ತಿದ್ದುವಂಥ ಸಲಹೆಗಳನ್ನು ಸಹ ರಾಜ್ಯಪಾಲರ ಭಾಷಣದಲ್ಲಿ ಬಯಸಿದರೆ ಅದು ಒಂದು ಉತ್ತಮ ವಾದಂಥ ಭಾಷಣವಾದೀತು. ಅದನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿಲ್ಲ ಆ ಕಾರಣದಿಂದ ಮಾತ್ರ ನಾನು ವಾದ ಮಾಡುತ್ತೇನೆ. ಕರ್ನಾಟಕ ರಾಜ್ಯಾದ್ಯಂತ ಅವ್ಯಾಹತವಾಗಿ ನಡೆಯುತ್ತಿರುವಂಥ ಕೊಲೆ, ದರೋಡೆ, ಸುಲಿಗೆಗಳಲ್ಲಿ ತತ್ತರಿಸುತ್ತಿರುವಂಥ ಜನತೆಯ ಕಳವಳದ ಕಿಂಚಿತ್ತು ಸುಳಿವು ಸಹ ರಾಜ್ಯಪಾಲರ ಭಾಷಣದಲ್ಲಿ ಇಲ್ಲ. ಬರಗಾಲದಿಂದ ಬೆಂಡಾದ ಜನತೆ ಸಿಕ್ಕಿದ್ದನ್ನು ದಕ್ಕಿಸಿಕೊಳ್ಳಲೂ ಸಾಧ್ಯವಾಗದೇ ಇರುವಂತಹ ಅವ್ಯವಸ್ಥೆಯ ಪರಿಸ್ಥಿತಿ ಬಗ್ಗೆ ಸುಳಿವು ಇಲ್ಲ. ಕರ್ನಾಟಕ ಲೋಕಸೇವಾ ಆಯೋಗಕ್ಕೆ ಅಧ್ಯಕ್ಷರ ನೇಮಕ ಮಾಡುವಾಗ ಅನುಕೂಲ ಶಾಸ್ತ್ರದಂತೆ ಪಕ್ಷೀಯರೊಬ್ಬರನ್ನು ಸಂಪ್ರದಾಯ ಮುರಿದೇ ಮಾಡಿರುವ ಬಗ್ಗೆ ಚಕಾರವೂ ಸಹ ಇಲ್ಲ. ಎಲ್ಲಾ ಅಭಿವೃದ್ಧಿ ಕಾರ್ಯಗಳು ಕರ್ನಾಟಕ ರಾಜ್ಯದಲ್ಲಿ ಸಂಪೂರ್ಣ ಸ್ಥಗಿತಗೊಂಡಿದೆ ಎನ್ನುವುದರ ಬಗ್ಗೆ ಕಳವಳದ ಸೂಚನೆ ಇಲ್ಲ. ಬಾಟ್ಲಿಂಗ್, ಸ್ಪಿರಿಟ್, ಬ್ರೆವೇರಿಸ್ ಮುಂತಾದವುಗಳಲ್ಲಿ ನಡೆದಿರುವ ಗೊಂದಲಗಳ ಬಗ್ಗೆ ವ್ಯಾಕುಲವನ್ನು ವ್ಯಕ್ತಪಡಿಸಿದ್ದಿಲ್ಲ. ಅಂತೆಯೇ ಗೊಂದಲಮಯವಾಗಿರುವಂಥ ಪಂಚಾಯತ್ ರಾಜ್ಯ ಹಾಗೂ ಜಿಲ್ಲಾ ಪರಿಷತ್ ವಿಳಂಬವಾಗಿರುವುದರ ಚುನಾವಣೆ ಬಗ್ಗೆ ಚಕಾರದ ಮಾತಿಲ್ಲ. ಉದ್ಯೋಗ ನಿರುದ್ಯೋಗ ಭತ್ಯೆ ತನ್ನ ನಿಲುವು ಎಂದ ಸರ್ಕಾರದ ಪ್ರಜ್ಞೆಯನ್ನು ಅತ್ತ ಕಡೆ ಎಳೆಯುವ ಯಾವ ಪ್ರಯತ್ನವೂ ಇಲ್ಲ. ವಿಶ್ವ ಕನ್ನಡ ಸಮ್ಮೇಳನದಲ್ಲಿ ರಚಿತವಾದ ಕೃತಿಗಳ ಮೂಲಕ ಕನ್ನಡಕ್ಕೆ ಆಗಿರುವ ಅವಹೇಳನದ ಬಗ್ಗೆ ಚಕಾರವು ಸಹ ಇಲ್ಲ ಈ ಕಾರಣಕ್ಕಾಗಿ ನಾನು ರಾಜ್ಯಪಾಲರ ಭಾಷಣವನ್ನು ವಿರೋಧಿಸಬೇಕಾಗಿದೆ. ಒಂದೊಂದೇ ವಿಷಯವನ್ನು ಡಿಮ್ಯಾಂಡ್‌ಗಳ ಮೇಲೆ ಮಾತನಾಡುವಾಗ ಮಾತನಾಡುತ್ತೇನೆ. ಪ್ರಾರಂಭ ದಲ್ಲೇ ಹೇಳಿದೆ, ರಾಜ್ಯದಲ್ಲಿ ತೀರಾ ಭಯಾನಕವಾದಂಥ ಪರಿಸ್ಥಿತಿ ಇದೆ ಇದು ಕಾನೂನು ಮತ್ತು ಶಿಸ್ತಿನ ಪ್ರಶ್ನೆ ಬಂದಾಗ. ಪರಿಸ್ಥಿತಿಯನ್ನು ಎದುರಿಸುವಲ್ಲಿ ನಮ್ಮ ಕರ್ನಾಟಕ ರಾಜ್ಯ ಸರ್ಕಾರದ ಗೃಹ ಮಂತ್ರಾಲಯ ಸಂಪೂರ್ಣ ಸೋಲನ್ನು ಒಪ್ಪಿಕೊಳ್ಳುವಂತಾದ್ದೇ ಆಗಿದೆ. ಅನೇಕ ಕಡೆ ಕೊಲೆ, ಸುಲಿಗೆ, ದರೋಡೆಗಳಾದರೂ ಸಹ ಯಾವುದನ್ನು ಪತ್ತೆ ಹಚ್ಚತಕ್ಕ ಪರಿಸ್ಥಿತಿ ಇಲ್ಲದಿರುವುದರಿಂದ ಸರ್ಕಾರ ತನ್ನ ದೌರ್ಬಲ್ಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ ಈ ದೌರ್ಬಲ್ಯವನ್ನು ಎತ್ತಿ ತೋರಿಸಿ, ಸ್ವಲ್ಪ ಬಲಶಾಲಿ ಗಳಾಗಿ ಎಂದು ಸೂಚನೆ ನೀಡಬಹುದಾಗಿತ್ತು. ಈ ದೌರ್ಬಲ್ಯಕ್ಕೆ ಎಲ್ಲೋ ಒಂದು ಮೂಲೆಯಲ್ಲಿ ಯಾವುದೋ ರೀತಿಯ ಕೊರತೆ ಇದೆ ಎಂದು ನನ್ನ ಭಾವನೆ ಮೋ ಬಿ ಎ ಕಮ್ಯುನಿಕೇಷನ್ ಗ್ಯಾಪ್. ನಾನು ಕಿರಿಯ ಸದಸ್ಯ. ಹೆಚ್ಚು ವಿಚಾರ ವಿನಿಮಯಗಳನ್ನು ಅರಿತವನು ನಾನಲ್ಲ. ಒಂದು ಗಾದೆ ಮಾತಿದೆ. ''ಅನ್ನ ಬೆಂದಿದೆಯೋ ಎಂದು ನೋಡಲು ಇಡೀ ಪಾತ್ರೆಯಲ್ಲಿರುವ ಅನ್ನಕ್ಕೆ ಕೈ ಹಾಕಿ ಹಿಚುಕುವ ಅವಶ್ಯಕತೆ ಇಲ್ಲ. ಒಂದೆರಡು ಕಾಳನ್ನು ತೆಗೆದರೆ ಸಾಕು.'' ಮಾನ್ಯ ಗೃಹ ಸಚಿವರು ನಮ್ಮ ಸಹ ಸದಸ್ಯರೊಬ್ಬರ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಹೇಳಿದರು. ''ಒಂದು ವಿಚಾರ, ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಎಂದು ವಸಂತಸಾಲಿಯಾನರವರು ಕೇಳಿದ್ದರು.'' ಅದಕ್ಕೆ ಅವರಿಂದ ನೇರವಾದ ಉತ್ತರ ಬಂತು. ನನ್ನ ಗಮನಕ್ಕೆ ಬರಲಿಲ್ಲವೆಂದು. ಅದೇ ಗೃಹ ಸಚಿವರು ತಮ್ಮ ಸ್ವಂತ ಕೈಯಿಂದ ನನ್ನ ಗಮನಕ್ಕೆ ಬಂದಿದೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ೬ ಪತ್ರಗಳನ್ನು ಆಗಲೇ ಬರೆದಿದ್ದರು. ಇಲ್ಲಿ ಆಡಳಿತ ಮಾಡುವವರ ಹತ್ತಿರ ಇಂತಹ ಗ್ಯಾಪ್ ಇದೆಯೆಂದು ಹೇಳಬೇಕಾಗುತ್ತದೆ. ಒಂದು ಸಣ್ಣ ವಿಚಾರದಲ್ಲಿ ಇಷ್ಟು ದೊಡ್ಡ ಲೋಪವಾಗುವುದಿದ್ದರೆ, ದೊಡ್ಡ ದೊಡ್ಡದರಲ್ಲಿ ಎಷ್ಟು ಲೋಪವಾದೀತು ಎಂದು ಕೇಳಬೇಕಾಗುತ್ತದೆ. ಇದು ಉದಾಹರಣೆ ಮಾತ್ರ. ಡಿಮ್ಯಾಂಡ್ ಬಗ್ಗೆ ಸವಿವರವಾಗಿ ಚರ್ಚೆ ಮಾಡೋಣ. ಪ್ರಹಾರಗಳು ಆಗುವಾಗ ಕ್ರಮ ತೆಗೆದುಕೊಂಡಿರೆ ಡಿಪಾರ್ಟ್‌ಮೆಂಟ್

ನಲ್ಲಿ ಡೀಮಾರಲೈಸ್ ಆಗುತ್ತದೆ ಎಂದು ಹೇಳುತ್ತಾರೆ. ಕ್ರಮ ತೆಗೆದುಕೊಂಡರೆ ಡಿಪಾರ್ಟ್‌ಮೆಂಟ್ ಡೀಮಾರಲೈಸ್ ಆಗುತ್ತದೆ ಎಂದು ಭಯ ಇದ್ದರೆ ಹೇಗೆ? ಕ್ರಮ ತೆಗೆದುಕೊಳ್ಳದಿದ್ದರೆ ಜನತೆ ಡೀಮಾರಲೈಸ್ ಆಗುವುದಿಲ್ಲವೇ? ಯಾವುದನ್ನು ಕಾಪಾಡಿಕೊಳ್ಳಬೇಕು ಎಂಬ ಬಗ್ಗೆ ಅವರು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಯಾವ ಡಿಪಾರ್ಟ್‌ಮೆಂಟಿನಲ್ಲಿ ಸಣ್ಣ ಪುಟ್ಟ ವಿಷಯಕ್ಕೆ ಕ್ರಮ ತೆಗೆದುಕೊಂಡರೆ, ಡೀಮಾರಲೈಸ್ ಆಗುತ್ತದೆ ಎಂದು ಹೇಳುತ್ತಾರೋ ಅಂತಹ ಡಿಪಾರ್ಟ್‌ಮೆಂಟ್‌ನಲ್ಲಿ ಒಬ್ಬ ಕಾನ್‌ಸ್ಟೇಬಲ್‌ನ್ನು ೬ ತಿಂಗಳಿನಲ್ಲಿ ೪ ಬಾರಿ ೪ ಜಾಗಗಳಿಗೆ ವರ್ಗಾವಣೆ ಮಾಡುವಂಥ ಕೆಲಸವಾಗಿದೆ. ಯಾವುದೇ ಕಾರಣ ಇಲ್ಲದೆ ಈ ರೀತಿ ಮಾಡಿದ್ದಾರೆ. ಇದರಿಂದ ಡಿಪಾರ್ಟ್‌ಮೆಂಟಿನಲ್ಲಿ ಡೀಮಾರಲೈಸ್ ಆಗಬಹುದೇ ವಿನಃ ಕ್ರಮ ತೆಗೆದುಕೊಳ್ಳುವುದರಿಂದಲ್ಲ. ಚಿಕ್ಕ ಸಿದ್ದಯ್ಯ ಎಂಬ ಕಾನ್‌ಸ್ಟೇಬಲ್‌ನನ್ನು ಕೆಂಗೇರಿ ಪೋಲೀಸ್ ಸ್ಟೇಷನ್‌ನಿಂದ ಹೈಗ್ರೌಂಡ್‌ಗೆ ಬಂದ ಅಲ್ಲಿಂದ ವಿಧಾನಸೌಧಕ್ಕೆ ಬಂದು ಅಲ್ಲಿಂದ ಶೇಷಾದ್ರಿಪುರಂಗೆ ಬಂದ. ೬ ತಿಂಗಳಿನಲ್ಲಿ ೪ ವರ್ಗಾವಣೆ ಮಾಡಿದ್ದಾರೆ. ಇಂತಹವುಗಳನ್ನು ಮಾಡಿದಾಗ ಮಾತ್ರ ಡಿಪಾರ್ಟ್‌ಮೆಂಟ್ ಡೀಮಾರಲೈಸ್ ಆಗುತ್ತದೆಂದು ಗೃಹ ಮಂತ್ರಾಲಯದವರು ಮನಗಾಣಬೇಕಾಗುತ್ತದೆ. ಇನ್ನು ಶಿಕ್ಷಣ ಕ್ಷೇತ್ರದಲ್ಲಿ ಆಡಳಿತ ಮಾಡುವಂಥ ಪ್ರಮುಖರಾಗಿ ಯಾರು ಕುಳಿತಿರುತ್ತಾರೊ ಅವರು ಬಹಳ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಿದಾಗ ಮಾತ್ರ ಶಿಕ್ಷಣ ಇಲಾಖೆ ಸಮರ್ಥ ಇಲಾಖೆಯಾಗುವುದಕ್ಕೆ ಸಾಧ್ಯವಾದೀತು ಎನ್ನುವಂಥ ನಂಬಿಕೆಯುಳ್ಳವನು ನಾನು. ಯಾರೋ ಏನೋ ಆಡು ಮಾತಿನಲ್ಲಿ ಇದನ್ನು ಹೇಳಿರಬಹುದು. ನೆರೆ ರಾಜ್ಯದ ಮುಖ್ಯಮಂತ್ರಿಯವರು ನಮ್ಮ ಮುಖ್ಯಮಂತ್ರಿಯವರಿಗೆ ಪತ್ರ ಬರೆದು ನಿಮ್ಮ ಮಾನ್ಯ ರಘುಪತಿಗೆ ಶಿಕ್ಷಣ ಕೊಡಿ ಎಂದು ಹೇಳಿರಬಹುದು, ಅದನ್ನು ತಪ್ಪಾಗಿ ಗ್ರಹಿಸಿಕೊಂಡು ಶಿಕ್ಷಣ ಖಾತೆಯನ್ನೇ ಕೊಟ್ಟಿದ್ದಾರೆ. ಈ ಮಾತು ನಿಜವೋ ತಪ್ಪೋ ನಾನು ಅಂತೂ ಇದರ ಬಗ್ಗೆ ವಿಮರ್ಶೆಗೆ ಹೋಗುವುದಿಲ್ಲ. ಕರ್ನಾಟಕ ರಾಜ್ಯದ ಜನತೆಯು ಅವರಿಗೆ ತೀವ್ರ ಶಿಕ್ಷಣದ ಅವಶ್ಯಕತೆ ಇದೆ ಎನ್ನುವುದನ್ನು ಮನಗಂಡಿದ್ದಾರೆ. ಶಿಕ್ಷಣ ಮಂತ್ರಿಯವರ ಕೆಲವಾರು ಪಾಪ್ಯುಲರ್ ಪ್ರೋಗ್ರಾಮ್‌ಗಳ ಬಗ್ಗೆ ಹೇಳುವುದಾದರೆ, ನಮ್ಮ ಮಕ್ಕಳಿಗೆ ಪುಸ್ತಕಗಳನ್ನು ಹಂಚುತ್ತಿದ್ದಾರೆ. ಈ ಪುಸ್ತಕಗಳನ್ನು ೩ ವರ್ಷದವರೆಗೆ ಉಳಿಸಿಕೊಳ್ಳಬೇಕು ಎನ್ನುವಾಗ, ಶಾಲೆಯ ಉಪಾಧ್ಯಾಯರು ಮಕ್ಕಳೇ ಪುಸ್ತಕಗಳನ್ನು ಬಿಚ್ಚಿ ಓದಿ ಎನ್ನುವ ಬದಲು ದಯವಿಟ್ಟು ಮುಚ್ಚಿಡಿ ಇದನ್ನು ೩ ವರ್ಷ ಕಾಪಾಡಿ ಎಂದು ಹೇಳುವ ಪರಿಸ್ಥಿತಿಗೆ ಇವರು ತಂದಿಟ್ಟಿದ್ದಾರೆ. ಯಾವುದೇ ಒಂದು ಪುಸ್ತಕ ಬೇಕು ಎನ್ನತಕ್ಕ ಸಂದರ್ಭ ಬಂದರೆ, ಅನೇಕ ಬಾರಿ ಟ್ರೆಜರಿಯ ಶಾಲೆಯನ್ನು ಬಿಟ್ಟು ಹೋಗಿ ಪುಸ್ತಕಗಳನ್ನು ತೆಗೆದುಕೊಳ್ಳಬೇಕಾಗಿದೆ. ಪುಸ್ತಕಗಳನ್ನು ಕೊಡುವುದರ ಮೂಲಕ ನಮ್ಮ ರಾಜ್ಯದಲ್ಲಿ ೨ ಲಕ್ಷ ವಿದ್ಯಾರ್ಥಿಗಳ ಸಂಖ್ಯೆ ಏರಿದೆ ಎಂದು ಹೆಮ್ಮೆಯ ಮಾತನ್ನು ಆಡುವುದಾದರೆ, ಈಗಿರುವ ಶಾಲೆಗಳೇ ದೊಡ್ಡಿಯ ತರಹ ಇರುವಾಗ ೨ ಲಕ್ಷ ಹೆಚ್ಚು ಮಕ್ಕಳಿಗೆ ಎಲ್ಲಿ ಸ್ಥಳಾವಕಾಶ ಸಿಕ್ಕೀತು? ಪುಸ್ತಕಗಳನ್ನು ತೆಗೆದುಕೊಳ್ಳಲು ಬಂದಾಗ ೨ ಲಕ್ಷದ ದಾಖಲೆ ಇರಬಹುದು. ಎಷ್ಟು ಉಪಾಧ್ಯಾಯರುಗಳನ್ನು ಈ ೨ ಲಕ್ಷ ವಿದ್ಯಾರ್ಥಿಗಳಿಗೆ ಹೆಚ್ಚಿಸಿದ್ದೀರಿ? ಎಂದು ಶಿಕ್ಷಣ ಸಚಿವರಲ್ಲಿ ನೇರವಾಗಿ ನಾನು ಕೇಳುತ್ತೇನೆ. ತಮ್ಮ ಅಂಕಿ ಸಂಖ್ಯೆಗಳನ್ನು ತೆಗೆದುಕೊಂಡು ಬನ್ನಿ ಯಾವುದೇ ಒಂದು ಗ್ರಾಮಾಂತರ ಶಾಲೆಗೆ ನಾವು ಸರ್‌ಪ್ರೈಸ್ ಆಗಿ ಭೇಟಿ ಕೊಡೋಣ ಆಗ ನಿಮ್ಮ ಸಂಖ್ಯೆ ಸರಿ ಇದ್ದರೆ ನಾನು ನನ್ನ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಕೇವಲ ಭ್ರಮಾಲೋಕದಲ್ಲಿ ಸಂಚರಿಸುವಂಥ ಶಿಕ್ಷಣ ಕ್ಷೇತ್ರ ನಮ್ಮದಾಗಬಾರದೆಂದು ನನ್ನ ಅಭಿಲಾಷೆ. ಇನ್ನು ವಿದ್ಯುಚ್ಛಕ್ತಿ ಸಚಿವರು ಇದ್ದಾರೆ. ಪ್ರಮುಖವಾಗಿ ಸಚಿವರಿಗೇ ಬ್ಯಾಟರಿ ಚಾರ್ಜ್ ಆಗಬೇಕೆಂದು ನನಗನಿಸುತ್ತದೆ. ಎಷ್ಟೋ ಸಲ ಅವರ ಮಾತನಾಡಿದ್ದು ಸದನದಲ್ಲಿ ಕೇಳಿಸದೇ ಇರತಕ್ಕಂಥ ಪರಿಸ್ಥಿತಿ ಇದೆ. ಅವರು ಮಾತನಾಡುವ ವೈಖರಿಯೇ ಹಾಗಿದ್ದರೆ ಇರಬಹುದು. ಈ ಖಾತೆಯಲ್ಲಿ ಅನೇಕ ಲೋಪದೋಷಗಳನ್ನು ಸರಿಪಡಿಸುವುದರ ಮೂಲಕ ಈ ಖಾತೆಯನ್ನು ಸ್ಪಷ್ಟವಾದ ಸಮರ್ಥ ಖಾತೆಯನ್ನಾಗಿ ಮಾಡಬಹುದೆಂದು ನಾನು ಭಾವಿಸುತ್ತೇನೆ. ಅನೇಕ ಕೋಟಿ ರೂಪಾಯಿಗಳನ್ನು ಬಾಕಿ ಇಟ್ಟಿರುವವರು ಹಾಗೇ ಬಾಕಿ ಇಟ್ಟಿದ್ದಾರೆ. ವಸೂಲಿಗೆ ಯಾವ ಕ್ರಮವೂ ಇಲ್ಲ. ತನ್ನದೇ ಆದಂತ ಕಾರ್ಯಾಗಾರವನ್ನು ಹೊಂದಿರುವ ಈ ವಿದ್ಯುತ್ ಖಾತೆ ಏನು ಇದೆ, ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಸಲಕರಣೆಗಳನ್ನು ಹೊರಗಿನ ಕಾರ್ಯಾಲಯಗಳಲ್ಲಿ ಮಾಡಿಸಿ ತರುವಂಥ ಪರಿಸ್ಥಿತಿ ಇದೆ. ಈ ಖಾತೆ ತನ್ನದೇ ಆದಂಥ ಒಂದು ಮುದ್ರಣಾಲಯವನ್ನು ಇದುವರೆಗೆ ಮಾಡಿಲ್ಲ ಎನ್ನುವುದು ಅತ್ಯಂತ ಶೋಚನೀಯ ಪರಿಸ್ಥಿತಿ. ಇದನ್ನು ಸರಿಪಡಿಸುವುದರ ಮೂಲಕವೇ ಈ ಖಾತೆಯನ್ನು ಸಮರ್ಥಗೊಳಿಸಬಹುದೆಂದು ನಾನು ಸಂಪೂರ್ಣವಾಗಿ ನಂಬಿದ್ದೇನೆ.

ಸನ್ಮಾನ್ಯ ಅಧ್ಯಕ್ಷರೆ, ಇನ್ನು ಸಾರಿಗೆ ಇಲಾಖೆಯ ಬಗ್ಗೆ ಮಾತನಾಡುವಾಗ ತಮ್ಮ ರಕ್ಷಣೆಯನು ಕೇಳಿಯೇ ಮಾತನಾಡುತ್ತೇನೆ. ರಸ್ತೆಯಲ್ಲಿ ನಡೆಯುವಾಗ ಬಿ.ಟಿ.ಎಸ್. ಬಸ್ಸೋ, ಕೆ.ಎಸ್.ಆರ್.ಟಿ.ಸಿ. ಬಸ್ಸೋ, ಬಂತು ಎಂದಾಗ ಹೆದರಿ ನಮ್ಮ ಎದೆ ಜಲ್ ಎನ್ನುತ್ತಿತ್ತು. ಇದು ನನ್ನ ಚಿಕ್ಕ ವಯಸ್ಸಿನ ಅನುಭವ. ಶಾಸಕನಾದ ನಂತರ ಈ ಖಾತೆಯ ಬಗ್ಗೆ ಮಾತನಾಡುವ ಕಾಲದಲ್ಲಿ ಈ ಸದನದಲ್ಲಿಯೇ ಎದೆ ನಡುಗುತ್ತಿದೆ. ನಮ್ಮ ಸಾರಿಗೆ ಸಚಿವರು ಒಮ್ಮೊಮ್ಮೆ ಮೈಮೇಲೆ ಬೀಳುವಂತಹ ದೃಶ್ಯವನ್ನು ತಾವು ಅನೇಕ ಬಾರಿ ಇಲ್ಲಿ ಕಂಡು ಅನುಭವಿಸಿದ್ದೀರಿ, ನಾನೇನು ಹೇಳಬೇಕಾಗಿಲ್ಲ. ಈ ಖಾತೆಯ ಸಮರ್ಥತೆಯನ್ನು ಅಥವಾ ಈ ಖಾತೆಯಲ್ಲಿ ಲಾಭವನ್ನು ತರುತ್ತೇನೆ ಎನ್ನುವಂತಹ ಯಾವ ಸ್ಪಷ್ಟ ನುಡಿಗಳನ್ನು ಸಾರಿಗೆ ಸಚಿವರು ಹೇಳಿದ್ದಾರೋ, ಆದರಿಂದ ಸಂಪೂರ್ಣವಾಗಿ ಸೋತಿದ್ದಾರೆ ಎನ್ನುವಂತಹ ಕ್ಕಲಿವನ್ನು ನಮ್ಮ ಹಿರಿಯ ಸದಸ್ಯರುಗಳು ಈಗಾಗಲೇ ನೀಡಿದ್ದಾರೆ. ಈ ಸೋತಿರುವಲ್ಲಿಯೂ ಸಹ ಮತ್ತಷ್ಟು ಹೊರೆಯನ್ನು ಹೇರುವಂತಹ ಪ್ರಯತ್ನವೂ ಸಹ ಇದರಲ್ಲಿ ಆಯಿತು. ಇದು ತೀವ್ರವಾದಂತಹ ಆಘಾತ. ಇದರ ಅನುಭವ ನಮ್ಮ ರಾಜ್ಯದ ಜನತೆಗೆ ಆಗಿದೆ. ಇದರ ಜೊತೆಗೆ ಈ ಹೇರುವುದರ ಮೂಲಕ ಕೊಡುವ ಮತ್ತು ಕಸಿದುಕೊಳ್ಳುವ ಒಂದು ವ್ಯವಹಾರ ಈ ಸರಕಾರ ನಡೆಸಿದ್ದು ಸರಿಯಲ್ಲ. ಯಾರಿಗೆ ? ಬಡವರಿಗೆ. ಒಂದೆಡೆ ಕೊಡುವುದು, ಮತ್ತೊಂದೆಡೆ ಕಸಿದುಕೊಳ್ಳುವುದು. ಕಡಿಮೆ ಬೆಲೆಯಲ್ಲಿ, ಸೀರೆ, ರವೀಕೆ, ಪಂಚೆ, ತಾಳಿಗಳನ್ನು ಇತ್ಯಾದಿಗಳನ್ನು ಬಡವರಿಗೆ ಎಂದು ಕೊಟ್ಟ ಅದೇ ಜನರು ಪ್ರಯಾಣ ಮಾಡುವಂತಹ ಬಸ್ಸಿನಲ್ಲಿ ಶೇಕಡಾವಾರು ೩೦ ರಿಂದ ೬೦ರಷ್ಟು ಬೆಲೆ ಏರಿಕೆ ಮಾಡಿದಾಗ, ಕೊಟ್ಟು ಕಸಿದುಕೊಳ್ಳುವಂತಹ ಪ್ರಯತ್ನ ಒಟ್ಟಾರೆ ಆಗಿದೆ ಎನ್ನುವುದನ್ನು ಅರಿತುಕೊಳ್ಳಬಹುದು.

ಶ್ರೀ ಆರ್. ಎಲ್. ಜಾಲಪ್ಪ.—ನಾವೇನೊ ಕೊಟ್ಟು ಸ್ವಲ್ಪ ಕಸಿದುಕೊಂಡಿದ್ದೇವೆ. ಏನನ್ನೂ ಕೊಡದೆ ಕಸಿದುಕೊಂಡರಲ್ಲ ಇವರು ? ಗೋಧಿ ಬೆಲೆ ಜಾಸ್ತಿ ಮಾಡಿದರು, ಅಕ್ಕಿ ಬೆಲೆ ಜಾಸ್ತಿ ಮಾಡಿದರು, ಡೀಸೆಲ್, ಪೆಟ್ರೋಲ್, ಸೀಮೆ ಎಣ್ಣೆ, ಇವುಗಳ ಬೆಲೆ ಜಾಸ್ತಿ ಮಾಡಿದರು. ಇವರು ಏನು ಕೊಟ್ಟು ಕಸಿದುಕೊಂಡರು ?

ಶ್ರೀ ಬಿ. ಎ ಉಮರಬ್ಬ.—ಮಾನ್ಯ ಅಧ್ಯಕ್ಷರೆ, ನನ್ನ ಈ ಮಾತುಗಳು ಮಾನ್ಯ ಸಹಕಾರ ಸಚಿವರ ಸಹಕಾರವನ್ನು ಪಡೆಯದೆ ಇದ್ದುದು ಅತ್ಯಂತ ಶೋಚನೀಯ. ಆದರೂ ಸಹ ಮುಂದುವರಿಸಿ ಮಾತನಾಡುವುದಾದರೆ ಹೀಗೆ ಕೊಟ್ಟು ಕಸಿಯುವ ಪ್ರಯತ್ನದ ಜೊತೆಗೆ ಕೊಟ್ಟಿದ್ದರ ಫಲವನ್ನೂ ಸಹ ಆದರಿಸುವಂತಹ ಪ್ರಯತ್ನಗಳು ನಡೆದಿಲ್ಲ. ಇದರ ಹಿನ್ನೆಲೆಯಲ್ಲಿ ಪವಾಡಗಳ ದರ್ಶನವನ್ನು ಗ್ರಾಮೀಣ ಜನತೆಗೆ ತಾವು ತೋರಿಸುತ್ತಾ ಇರುವುದರ ಬಗ್ಗೆ ಹೇಳುತ್ತೇನೆ. ಪವಾಡ ಏನು ? ಯಾವ ಮಂತ್ರ ಜಾಲವನ್ನು ನಮ್ಮ ಕೈಯಿಂದಲೇ ಮಾಡಿಸುತ್ತಾ ಇದ್ದೀರಿ ಅಂದರೆ ಒಂದು ಗ್ರಾಮೀಣ ಮಹಿಳೆ ಇವರು ಕೊಟ್ಟಂತಹ ಹಸಿರು ಸೀರೆಯನ್ನು ತೆಗೆದುಕೊಂಡು ಹೋಗಿ ಬಿಳಿಯ ನೀರಿಗೆ ಹಾಕಿದಾಗ ಒಂದು ನಿಮಿಷದೊಳಗೆ, ನೀರು ಹಸಿರು, ಸೀರೆ ಬೆಳ್ಳಗೆ ಆಗುವಂತಹ ಒಂದು ಜಾದುಗಾರಿಕೆಯನ್ನು ತಾವು ಮಾಡಿ ತೋರಿಸಿರುವುದು ಅತ್ಯಂತ ಗಮನೀಯ ವಿಚಾರ ಎಂದು ನಾನು ಭಾವಿಸಿಕೊಂಡಿದ್ದೇನೆ.

ಮತ್ತೆ, ಅರಣ್ಯ ಖಾತೆಯ ಬಗ್ಗೆ ತಮಗೆ ಗೊತ್ತಿದೆ. ಕಾಡಿನ ಖಾತೆ ಎಂದ ಮಾತ್ರಕ್ಕೆ ಕಾಡ ಜನರ ಹಾಗೆ ವರ್ತಿಸಲಿಕ್ಕೆ ಸಾಧ್ಯವಿಲ್ಲ. ಈ ಖಾತೆಯ ಬಗ್ಗೆ ನಾನು ಹಿಂದೆ ಮಾತನಾಡಿದಾಗ ಹೇಳಿದ್ದೇನೆ. ಅಭಯಾರಣ್ಯಗಳನ್ನು ರಚಿಸಿ, ರಕ್ಷಿಸುತ್ತಾ ಇದ್ದೀರಿ. ಪ್ರಾಣಿಗಳಿಗೆ ರಕ್ಷಣೆ ಸಿಗಲಿ ಎಂದು. ಎಲ್ಲೆಲ್ಲಿ ಅಭಯಾರಣ್ಯಗಳನ್ನು ರಚಿಸುತ್ತಿದ್ದಿರೋ ಅಲ್ಲಿ, ಮನುಷ್ಯರು ವಾಸವಾಗಿದ್ದು ಅವರನ್ನು ರಕ್ಷಿಸುವ ಬಗ್ಗೆ ಪ್ರಯತ್ನ ಮಾಡಿ ಎಂದರೆ ಆ ಖಾತೆಯಿಂದ ಬಂದ ಉತ್ತರ "ಸಾಧ್ಯವಿಲ್ಲ, ರೆವಿನ್ಯೂ ಭೂಮಿ ಅದು ಅದರಲ್ಲಿ ಅಕ್ರಮವಾಗಿ ಜನರು ವಾಸವಾಗಿದ್ದಾರೆ. ಅವರನ್ನು ಹೊರಗೆ ಎಳೆದು ಹಾಕುವುದೆ ಸರಿ ಎಂದು ?."—ಬೆಂಗಳೂರಿನ ಸುತ್ತಮುತ್ತ ಇರುವಂತಹ ರೆವಿನ್ಯೂ ಭೂಮಿಯನ್ನೇ ವಶಪಡಿಸಿಕೊಂಡು ಮನೆಕಟ್ಟಿರುವವರ ಬಗ್ಗೆ ಹೇಳುವಾಗ "ಅನೇಕ ಸವಲತ್ತುಗಳನ್ನು ಅವರಿಗೆ ಕೊಟ್ಟಿರುವುದರಿಂದ ಅವರಿಂದ ವಸೂಲಿ ಮಾಡಿ ಅವರನ್ನು ಕೂರಿಸಬೇಕು"—ಎಂದಿದ್ದೀರಿ. ಇಲ್ಲಿ ಯಾವ ಸವಲತ್ತನ್ನು ಕೊಟ್ಟಿಲ್ಲ. ಅರ್ಧಾಂಶ ಗಿರಿಜನರಾಗಿಯೇ ಆ ರೆವಿನ್ಯೂ ಭೂಮಿಯಲ್ಲಿ, ಆ ಕಾಡಿನಲ್ಲಿ ಬದುಕುತ್ತಿರುವಂತಹ ಜನ, ತಲಾಂತರದಿಂದ ಒಂದಿಷ್ಟು ಭೂಮಿಯನ್ನು ಉತ್ತು, ಬಿತ್ತು, ಬದುಕುವಂತಹ ಜನ. ಈ ಪ್ರಾಣಿಗಳ ಬಗ್ಗೆ ದಯೆ ತೋರುವ ತಾವು ಈ ಜನರ ಬಗ್ಗೆ ಒಂದು ಮಾನವೀಯ ದೃಷ್ಟಿಯ ಕ್ಷಕಿರಣನ್ನು

ಕೊಟ್ಟಿದ್ದರೆ, ಅದು ಅತ್ಯಂತ ಸ್ವಾಗತಾರ್ಹವಾಗುತ್ತಿತ್ತು ಎಂದು ನಾನು ಭಾವಿಸಿದ್ದೇವೆ. ಆದರಿಂದ ಅಪಾರವಾದಂತಹ ನಷ್ಟವೇನೂ ಈ ರಾಜ್ಯ ಸರಕಾರಕ್ಕೆ ಆಗುತ್ತಿರಲಿಲ್ಲ.—ಎನ್ನುವಂತಾದ್ದು ನನ್ನ ವಾದ

ಇನ್ನು ತಮಗೆ ಅತ್ಯಂತ ರೋಷ, ಆವೇಶಗಳನ್ನು ತರಬಹುದಾದರೂ ಸಹ ನಾನು ಹೇಳದೇ ಇರಲು ಸಾಧ್ಯವಿಲ್ಲದ ಸಂಗತಿ ಎಂದರೆ ವಿಶ್ವ ಕನ್ನಡ ಸಮ್ಮೇಳನ ಅಲ್ಲಿನ ಖರ್ಚಿನ ಬಗ್ಗೆ, ವ್ಯವಸ್ಥೆಯ ಬಗ್ಗೆ, ಅನೇಕ ಚರ್ಚೆಗಳು ನಡೆದಿದೆ. ಆದರೆ ವಿಶ್ವ ಕನ್ನಡ ಸಮ್ಮೇಳನದ ಹೆಸರಿನಲ್ಲಿ ಕನ್ನಡ ಭಾಷೆಗೆ ಆದ, ಕನ್ನಡ ಸಾಹಿತ್ಯಕ್ಕೆ ಆದ, ಅಥವಾ ಕನ್ನಡದ ಇತಿಹಾಸದ ರಚನೆಯಲ್ಲಿ ಯಾವುದೇ ಅನ್ಯಾಯ ಆದರೂ ಸಹ ಕನ್ನಡವನ್ನು ಅತ್ಯಂತವಾಗಿ ಪ್ರೀತಿಸುತ್ತಿದ್ದಂತಹ ನಾನು ಪ್ರತಿಭಟಿಸಲೇ ಬೇಕಾಗಿದೆ. ವಿಶ್ವಕನ್ನಡ ಸಮ್ಮೇಳದ ತಮ್ಮ ವೈಖರಿಯ ಬಗ್ಗೆ ಒಂದು ಉದಾಹರಣೆ, ನಿನ್ನೆ ರಾತ್ರಿ ತಾವು ಒದಗಿಸಿ ಕೊಟ್ಟಂತಹ ಈ "ಚೆಲುವು ಕನ್ನಡ ನಾಡು'' ಪುಸ್ತಕ. ಇಲ್ಲಿ ಮಾನ್ಯ ಜಾಲಪ್ಪನವರು ಮತ್ತು ಅನೇಕ ಜನ ಹಿರಿಯ ಸದಸ್ಯರುಗಳು ಇದ್ದಾರೆ, ಇದರ ಕೆಲವು ಪುಟಗಳನ್ನು, ಹಾಗೂ ಕೆಲವು ಸಾಲುಗಳನ್ನು ತಮ್ಮ ಮುಂದಿಡುತ್ತೇನೆ. ಅದು ಈ ಕರ್ನಾಟಕ ರಾಜ್ಯದ ಜನತೆ ಒಪ್ಪಬಹುದಾದಂತಹ ಸಾಲು ಎಂದು ತಾವು ಒಪ್ಪುವುದಾದರೆ, ಭಾವಿಸುವುದಾದರೆ, ಈ ಪುಸ್ತಕವನ್ನು ಒಪ್ಪೋಣ.—ಈ ಸದನದಲ್ಲಿ. ಅದು ಅಲ್ಲ ಎನ್ನುವುದನ್ನು ಸಾಪು ಪ್ರಾಮಾಣಿಕವಾಗಿ ಮನಗಂಡರೆ. ಈ ಪುಸ್ತಕವನ್ನು ತತ್ಕ್ಷಣ ತಾವು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಈ ಸರಕಾರವನ್ನು ಅತ್ಯಂತ ಕಳಕಳಿಯಿಂದ ಒತ್ತಾಯ ಪಡಿಸುತ್ತಾ ಇದ್ದೇನೆ. ಯಾವ ಸಾಲುಗಳು ಎನ್ನುವಂತಹ ಪ್ರಶ್ನೆಗೆ ನನ್ನ ಉತ್ತರ ಇಷ್ಟೆ. ಈ ಪುಸ್ತಕ ಇಂಗ್ಲೀಷ್‌ನಲ್ಲಿ ಬರೆದಿರತಕ್ಕಂತಹ ಪುಸ್ತಕ. ಮಾನ್ಯ ಎಂ. ವಿ. ಕಾಮತ್ ಎನ್ನುವಂತಹ ಪ್ರಖ್ಯಾತ ಬರಹಗಾರರು ಇದರ ಲೇಖಕರು—ಮತ್ತು ಪತ್ರಿಕೋದ್ಯಮಿ. ಈ ಪುಸ್ತಕದ ಅನುವಾದವನ್ನು ಕನ್ನಡಕ್ಕೆ ಡಾ|| ಎಚ್. ಕೆ. ರಂಗನಾಥ್ ಇವರು ಮಾಡಿದ್ದಾರೆ ನನ್ನ ತಿಳುವಳಿಕೆಗೆ ಬಂದ ಮಟ್ಟಿಗೆ ಕೇವಲ ಪ್ರಿಂಟಿಂಗ್‌ಗೆ ಮಾತ್ರ, ೧೬ ಲಕ್ಷ ರೂಪಾಯಿಗಳಷ್ಟು ವೆಚ್ಚವಾಗಿದೆ. ಅಷ್ಟೆ ಅಲ್ಲ, ಈ ಪುಸ್ತಕದ ಅಚ್ಚು ಎಲ್ಲಿದೆ ಅದು ಹೊರದೇಶವಾದಂತಹ ಸಿಂಗಪೂರಿನ "ಟೋಪಾನ್ ಪ್ರಿಂಟಿಂಗ್ ಕಂ. (ಎಸ್)ಪ್ರೈ.ಲಿ. ಸಿಂಗಪೂರ್''—ಇಲ್ಲಿ ಮುದ್ರಣ ಕಾರ್ಯ ಮಾತ್ರ. ಇದರ ಅಕ್ಷರ ಜೋಡಣೆ, ಎಲ್ಲಿ ಆಗಿದೆ ಎಂದರೆ, "ಶ್ರೀ ಭಗವಾನ್ ಇಂಡಸ್ಟ್ರೀಸ್ ಬೆಂಗಳೂರು.''—ಬೆಂಗಳೂರಲ್ಲಿ ಅಕ್ಷರ ಜೋಡಿಸಿ, ಅದನ್ನು ಸಿಂಗಪೂರಿಗೆ ತೆಗೆದುಕೊಂಡು ಹೋಗಿ ಅಲ್ಲಿ ಅಚ್ಚು ಹಾಕಿಸಿ ಈ ಪುಸ್ತಕವನ್ನು ಕೊಟ್ಟಿದ್ದೀರಿ. ಆದರೆ ಈ ಪುಸ್ತಕದಲ್ಲಿ ಹೇಳಿದಂತಹ ಒಂದು ಮಾತಿದೆ. "ನಮ್ಮ ಮುದ್ರಣ ಕನ್ನಡದ ಮುದ್ರಣ. ಇಷ್ಟು ಹಿಂದೆಯೂ ಸಹ ಪ್ರಖ್ಯಾತಿ ಆಗಿತ್ತು ಎಂದರೆ, ಮಂಗಳೂರಿನ ಬಾಸೆಲ್ ಮಿಷನ್ ಎನ್ನುವಂತಹ ಪ್ರಖ್ಯಾತಿಯ ಒಂದು ಮುದ್ರಣಾಲಯದಲ್ಲಿ ಉತ್ತಮವಾದಂತಹ ಮುದ್ರಣ ಕಾರ್ಯವು ನಡೆಯುತ್ತಿತ್ತು, ಎಂದೆಲ್ಲಾ ಹಿರಿಮೆ ಗರಿಮೆಗಳನ್ನು ಹೇಳಿ, ಬೆನ್ನು ಚಪ್ಪರಿಸಿಕೊಂಡ ನಾವು ಸಿಂಗಾಪೂರಿನ ಆಶ್ರಯವನ್ನು ಮುದ್ರಣಕ್ಕಾಗಿ ಪಡೆದಿರುವುದು ಕನ್ನಡದ ಹೆಸರಿನಲ್ಲಿ ಅತ್ಯಂತ ಅಪಮಾನಕಾರಿ ಎಂದು ಈ ಸಭೆಯಲ್ಲಿ ನಾನು ತಮ್ಮ ಮುಂದೆ ಹೇಳುತ್ತಾ ಇದ್ದೇನೆ. ಇಷ್ಟು ಮಾತ್ರವಲ್ಲ. ಇದೊಂದು ದಾಖಲೆ. ವಿಶ್ವ ಕನ್ನಡ ಸಮ್ಮೇಳನದಲ್ಲಿ ಇದೊಂದು ದಾಖಲೆ. ಇಂತಹ ದಾಖಲೆಯ ಪುಸ್ತಕದಲ್ಲಿ ವಿಷಯಗಳು ಅತ್ಯಂತ ಪ್ರಾಮಾಣಿಕವಾಗಿರ ಬೇಕಾಗುತ್ತದೆ. ಅತ್ಯಂತ ವಿಶ್ವಾಸಕ್ಕೆ ಒಳಪಟ್ಟಿರತಕ್ಕಂತಾದ್ದಾಗಿರ ಬೇಕಾಗುತ್ತದೆ, ಪ್ರಾರಂಭದಲ್ಲಿಯೇ ಈ ಕನ್ನಡದ ವ್ಯಾಖ್ಯಾನಗಳು ಇಂಗ್ಲೀಷ್ ಕವಿಗಳ ಮೂಲಕ ಪ್ರಾರಂಭ ಆಗುತ್ತವೆ. ಪ್ರಥಮ ಪುಟದಲ್ಲಿ ಬರುವಂತಹ ಶೇಕ್ಸ್‌ಪೀಯರ್ ಹೇಳಿದಂತಹ ಮಾತನ್ನು, ನಮ್ಮ ಕವಿಗಳು ಈ ರೀತಿ ಹೇಳಿದ್ದಾರೆ "ನಿನ್ನ ಕಣ್ಣಿನ ಅಂದಚೆಂದಗಳ ಬಣ್ಣಿಸಿ ಬರೆಯಲೆ? ಬೆರಗುಗೊಳಿಸುವ ನಿನ್ನ ಬೆಡಗು ಬಿನ್ನಾಣವನ್ನು ಗುಣಿಸಿ ಎಣಿಸಲೇ?'' ಎನ್ನುವಂತಹ ಶೇಕ್ಸ್‌ಪೀಯರ್‌ರ ಮಾತಿಗೆ ತಾವು ಆಶ್ರಯ ಕೊಡುವಂತಹದ್ದು ಅಗತ್ಯ ಇರಲಿಲ್ಲ, ಶ್ರೀ ಗೋಪಾಲಕೃಷ್ಣ ಅಡಿಗರವರ "ಯಾವ ಮೋಹನ ಮುರಳಿ ಕರೆಯಿತು, ದೂರ ತೀರಕೆ ನಿನ್ನನ್ನು? ಯಾವ ಬೃಂದಾವನವು ಸೆಳೆಯಿತು ನಿನ್ನ ಮಣ್ಣಿನ ಕಣ್ಣನು?'' ಎಂದಿದ್ದರೆ ಇನ್ನೂ ಸೊಗಸಾಗಿರುತ್ತಿತ್ತು ಎಂದು ನಾನು ಭಾವಿಸಿದ್ದೇನೆ. ಮತ್ತೆ ಎರಡನೆ ಪುಟದಲ್ಲಿ ಬ್ರೌನಿಂಗ್ ಕವಿ ಬರೆದ ಪದ್ಯ ನೆನಪಿದೆಯೋ? "ನಿನ್ನನ್ನು ಹೇಗೆ ಎನಿತು ಬಗೆಯಲಿ ಪ್ರೇಮಿಸಲಿ? ತಾಳು: ಎಣಿಸಿ ನೋಡುತ್ತೇನೆ''—ಮಾನ್ಯ ಅಧ್ಯಕ್ಷರೇ, ಪ್ರೇಮ ಕಾವ್ಯಗಳ ಲಹರಿಯನ್ನೇ ಹರಿಸಿದಂತಹ ಈ ಕನ್ನಡದ ನಾಡಿನಲ್ಲಿ, ಈ ನೆಲದಲ್ಲಿ, ಒಂದು ತುಣುಕಿಗಾಗಿ ಇಂಗ್ಲೀಷ್‌ನ್ನು ಆಶ್ರಯಿಸಿರುವುದು ನಮ್ಮ ಬುದ್ಧಿಮತ್ತೆಯ ಪ್ರತೀಕ ಎಂದು ನಾನು ಮತ್ತೊಮ್ಮೆ ಘೋಷಿಸಿ ಹೇಳಬೇಕಾಗಿದೆ.

ಮುಂದೆ ವಿಪರ್ಯಾಸ, ಇತಿಹಾಸದ ಘಟನೆಗಳನ್ನು ಹೇಳುವಾಗ ಒಪ್ಪಿಸಿರುವಂತಹ ಒಂದು ವಿಪರ್ಯಾಸಕ್ಕೆ ಒಂದೇ ತುಣುಕು ಉದಾಹರಣೆ: ಅದನ್ನು ಪುಟ ೧೧ರಲ್ಲಿ ಹೇಳುತ್ತಾರೆ, "ಕನ್ನಡದ ನೆಲವನ್ನು ಕಾಯ್ದುಕೊಳ್ಳುವುದಕ್ಕಾಗಿ ಟಿಪ್ಪೂಸುಲ್ತಾನನ ತಂದೆ ಹೆಸರಾಂತ ಹೈದರಾಲಿ, ಈ ಕರಾವಳಿಯು ಗುಂಟ ಕೋಟೆಕೊತ್ತಲಗಳ ಸರಪಳಿಯನ್ನೆ ಕಟ್ಟಿ ನಿಲ್ಲಿಸಿದ''—ಹಾಗಾದರೆ, ಈ ಸರಪಳಿಯನ್ನು ತಾವು ತೋರಿಸಿದರೆ, ನಾನು ನನ್ನ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಕರಾವಳಿಯಲ್ಲಿ ಮಂಗಳೂರಿನ ಸುಲ್ತಾನ್ ಬತ್ತೇರಿಯಲ್ಲಿ ಒಂದು ಚಿಕ್ಕ ಕೋಟೆ ಇದೆ. ಅದಲ್ಲದೆ ಕರಾವಳಿಯು ಗುಂಟ ಕನ್ನಡದ ನೆಲವನ್ನು ರಕ್ಷಿಸುವಂತಹ ಕೋಟೆ ಕೊತ್ತಲಗಳ ಸರಪಳಿಯನ್ನು ಹೈದರಾಲಿ ರಚಿಸಿದ್ದಾನೆ ಎನ್ನುವಂತಹದ್ದು ಅತ್ಯಂತ ಸತ್ಯಕ್ಕೆ ದೂರವಾದುದು. ಈ ವಿಚಾರನ್ನು ಈ ಪುಸ್ತಕ ಪ್ರಕಟಿಸುವುದಾದರೆ ಈ ಪುಸ್ತಕ ಒಂದು ದಾಖಲೆ ಆಗಲಿಕ್ಕೆ ಆಯೋಗ್ಯವಾದಂತಾದ್ದು ಎಂದು ನಾನು ಘೋಷಿಸಿ ಹೇಳಬೇಕಾಗುತ್ತದೆ. ಮುಂದೆ ಇವರ ಕಲ್ಪನೆಯನ್ನು ನೋಡಬೇಕು...

ಶ್ರೀ ಎಂ. ಪಿ. ಪ್ರಕಾಶ್.—ಕೋಟೆ ಕೊತ್ತಲಗಳನ್ನು ಕಟ್ಟಿಸಿದರು ಎಂದರೆ, ನೇರವಾಗಿ ಇಡೀ ಕರಾವಳಿಯು ಎರಡು ನೂರು ಮೈಲಿನುದ್ದಕ್ಕೂ ಕಟ್ಟಿಸಿದರು ಎನ್ನತಕ್ಕಂತಾದ್ದು ಅಲ್ಲ. ಯಾರು ಇದನ್ನು ಕಟ್ಟಿರಬಹುದು. ಕೆಳದಿಯ ಅರಸರು ಕಟ್ಟಿರತಕ್ಕಂತಕ್ಕಂತಹ ಘಟ್ಟದ ಮೇಲಿನ ಕೋಟೆ ಆಗಿರಬಹುದು. ಅಥವಾ ಸೊಂಡೂರಿನಲ್ಲಿ ಕಟ್ಟಿರತಕ್ಕಂತಾದ್ದು ಬಳ್ಳಾರಿಯಲ್ಲಿ ಕಟ್ಟಿರತಕ್ಕಂತಾದ್ದು ಆಗಿರಬಹುದು. ಹೀಗೆ ಅನೇಕಕಡೆಗಳಲ್ಲಿ ಕಟ್ಟಿರತಕ್ಕಂತಾದು ಇದೆ. ಕರಾವಳಿ ಪ್ರದೇಶದಲ್ಲಿಯೂ ಇದೆ.

ಶ್ರೀ ಬಿ. ಎ ಉಮರಬ್ಬ.—ಇನ್ನು ಪ್ರತ್ಯೇಕ, ಪ್ರತ್ಯೇಕವಾಗಿ ವಿಷಯಗಳನ್ನು ವಿಶ್ಲೇಷಿಸಿರ ತಕ್ಕಂತಹ ಈ ಪುಸ್ತಕದಲ್ಲಿ ಎಲ್ಲವನ್ನೂ ಕರಾವಳಿ ಎಂದು ಕರ್ನಾಟಕವನ್ನು ಕರೆದಿದ್ದಾರೆ, ಕೇವಲ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದ ಬಗ್ಗೆ ಮಾತನಾಡುವಂತಹ ಕಾಲದಲ್ಲಿ ಮಾತ್ರ ಬರುವಂತಹ ಮಾತುಗಳು ಇವು. ಇದನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರುತ್ತಾ ಇದ್ದೇನೆ.

ತಾವು ಶೃಂಗಾರವನ್ನು ಕಾಣುವ ಕಣ್ಣಿನ ಬಗ್ಗೆ ನನಗೆ ಬೆರಗು : ಸ್ವಾಮಿ, "ಮೀನುಗಳ ಬುಟ್ಟಿ ಹೊತ್ತು, ಮಾರ್ಕೆಟ್ಟಿಗೆ ಹೊರಟಿರುವ ಬೆಸ್ತರ ಹೆಣ್ಣುಗಳ ಬೆಡಗಿನ ನಡಿಗೆಯನ್ನು ನೋಡಿದರೆ ಸಾಕು, ಕಲಾವಿದ ತನ್ನ ಕುಂಚ, ಚಿತ್ರಭಿತ್ತಿಗಳನ್ನು ಹಿಡಿದು ಒಮ್ಮೆಲೆ ಧಾವಿಸಬೇಕು''—ಪಾಪ, ಬದುಕಿಗಾಗಿ ಅಪಾರವಾದ ಮೀನನ್ನು ಹೊತ್ತು ಏದುಸಿರು ಬಿಟ್ಟು ಮಾರ್ಕೆಟ್ಟಿನ ಜನರಿಗಾಗಿ ಓಡುತ್ತಾ ಇರುವಂತಹ ಹೆಣ್ಣಿನಲ್ಲಿ ಭಾರಿ ಸೌಂಧರ್ಯವನ್ನು ಕಂಡಂತಹ ತಮ್ಮ ಸೌಂಧರ್ಯ ದೃಷ್ಟಿ ಮಂದವಾಗಿರುವ ಬಗ್ಗೆ ಈ ಪುಸ್ತಕದ ಮೂಲಕ ನನ್ನ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

೫-೩೦ ಪಿ.ಎಂ.

ಕರಾವಳಿ ಕಡಲ ತೀರದ ಹೆಣ್ಣು ಮೀನಿನ ಬುಟ್ಟಿಯನ್ನು ತಲೆಯ ಮೇಲೆ ಹೊತ್ತು ಮಾರ್ಕೇಟಿನ ಜನರಿಗಾಗಿ ಓಡುವಂತಹ ಹೆಣ್ಣಿನಲ್ಲಿ ಭಾರಿ ಸೌಂದರ್ಯವನ್ನು ಕಂಡ ನಿಮ್ಮ ದೃಷ್ಟಿಯ ಮಂದದ ಬಗ್ಗೆ ನಾನು ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ.

ಶ್ರೀ ಎಂ ಪಿ. ಪ್ರಕಾಶ್.—ಕರಾವಳಿ ತೀರದ ಹೆಣ್ಣಿನ ಸೌಂದರ್ಯದ ಪ್ರಜ್ಞೆಯನ್ನು ಮಾನ್ಯ ಸದಸ್ಯರು ಲಂಪಟತನದಿಂದ ಕಾಣಲು ಪ್ರಯತ್ನ ಮಾಡುತ್ತಿದ್ದಾರೆ. ಹೆಣ್ಣಿನ ಸೌಂದರ್ಯವನ್ನು ವರ್ಣಿಸುವುದಲ್ಲ ಡಾಕ್ಟರ್ ಲೋಹಿಯಾರವರು ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ. all women are beautiful some are more ಎನ್ನತಕ್ಕಂಥ ಮಾತನ್ನು ಬಳಸಿದ್ದಾರೆ. ಆದ್ದರಿಂದ ಹೆಣ್ಣು ಶ್ರಮಜೀವಿಯಾಗಿ ದಷ್ಟಪುಷ್ಟಳಿಂದ ತುಂಬಿರುತ್ತಾರೆ. ಅದನ್ನು ಲಂಪಟತನದಿಂದ ಕಾಣುವುದು ಸರಿಯಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ... ..

ಅಧ್ಯಕ್ಷರು.—ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಮಧ್ಯೆ ತಾವೇತಕ್ಕೆ ಎದ್ದು ನಿಂತಿದ್ದೀರಿ?

ಶ್ರೀ ಬಿ. ಬಸವಲಿಂಗಪ್ಪ. ಮಾನ್ಯ ಸದಸ್ಯರು ಮಾತನಾಡಿದ ನಂತರ ಸರ್ಕಾರ ಉತ್ತರ ಕೊಡುತ್ತದೆ. ಆಮೇಲೆ ಈ ಸಾಹಿತ್ಯ ಬೂಸ ಅಲ್ಲದೆ ಮತ್ತೇನು?

ಅಧ್ಯಕ್ಷರು.—ಮಾನ್ಯ ರಾಮಪ್ಪನವರೇ ಏತಕ್ಕೆ ಹೋಗುತ್ತಿದ್ದೀರಿ. ಕುಳಿತುಕೊಳ್ಳಿ ಕವಿಗಳು ಮಾತನಾಡುತ್ತಿದ್ದಾರೆ. ಕೇಳಿ.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಸದಸ್ಯರು ಸರ್ಕಾರದ ವಿರುದ್ಧ ವಾಕ್‌ಔಟ್ ಮಾಡುತ್ತಿದ್ದಾರೆ.

ಶ್ರೀ ಬಿ.ಎ. ಉಮರಬ್ಬ.—ಈ ಪುಸ್ತಕದಲ್ಲಿ ಕನ್ನಡ ಭಾಷೆ ಅರ್ಥ ರಹಿತವಾಗಿ ಬಳಸಲ್ಪಟ್ಟ ಈ ಪುಸ್ತಕದ ಪುಟ ೧೨ರಲ್ಲಿ ಈ ರೀತಿ ಹೇಳಿದ್ದಾರೆ. ಅದೇನೆಂದರ ಅಡ್ಡಗಟ್ಟಿ ಬಿಳಿಯ ಕಲ್ಲಿದ್ದಲು ಎಂದು ಹೆಸರಾಂತ ವಿದ್ಯುಚ್ಛಕ್ತಿ ಉತ್ಪಾದಿಸಲಾಗುತ್ತಿದೆ ಎಂದು ಹೇಳಿದ್ದಾರೆ. ವಿದ್ಯುಚ್ಛಕ್ತಿಯನ್ನು ಕರ್ನಾಟಕ ರಾಜ್ಯದಲ್ಲಿ ಬಿಳಿಯ ಕಲ್ಲಿದ್ದಲು ಎಂದು ಕರೆದಿದ್ದು ನನ್ನ ಪ್ರಜ್ಞೆಗೆ ತಲುಪಿದಂತಹ ವಿಚಾರ ಅಲ್ಲ. ಇವರು ಈ ರೀತಿ ಡಿಕ್ಲರೇಷನ್ ಈ ದಾಖಲೆಯ ಪುಸ್ತಕದಲ್ಲಿ ಮಾಡಬಾರದಾಗಿತ್ತು. ವಿಶ್ವಕನ್ನಡ ಸಮ್ಮೇಳನದ ನೆನಪಿನ ಕಾಣಿಕೆಯಾಗಿ ತಂದಿರುವ ಈ ಪುಸ್ತಕದಲ್ಲಿ ಹೇಳುವಂತಹ ಅವಶ್ಯಕತೆ ಇರಲಿಲ್ಲ. ಇದೇ ಪುಸ್ತಕದಲ್ಲಿ ಇನ್ನೊಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಕರ್ನಾಟಕದ ಮುಖ್ಯವಾದ ಬೆಳೆ ಶ್ರೀಗಂಧ ಇದು ನಮ್ಮ ಕನ್ನಡ. ಭಾಷೆ ಗೊತ್ತಿದ್ದವರಿಗೆ, ಭಾಷೆ ಗೊತ್ತಿಲ್ಲದಿದ್ದರೆ? ಅದೇ ರೀತಿಯಲ್ಲಿ ಪುಟ ೧೩ರಲ್ಲಿ ಈ ರೀತಿ ಹೇಳಿದ್ದಾರೆ. ಅದೇನೆಂದರೆ ಕರ್ನಾಟಕದ ಭೂಮಿ ಜಗತ್ತಿನಲ್ಲಿಯೇ ಅತ್ಯಂತ ಪ್ರಾಚೀನವಾಗಿರಬಹುದೆಂದು ಹಿಂದೆಯೇ ಹೇಳಿದೆ. ಅಂದರೆ ಇದರ ಅರ್ಥ ಕರ್ನಾಟಕದ ಭೂಮಿ ಜಗತ್ತಿನಲ್ಲಿಯೇ ಪ್ರಾಚೀನವಾದುದು. ಅಂದರೆ ಪ್ರಪಂಚದ ಸೃಷ್ಟಿಗಿಂತ ಮೊದಲು ಕರ್ನಾಟಕದ ಭೂಮಿಯ ತುಣುಕಿನ ಸೃಷ್ಟಿ ಆಗಿದೆ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಆದ್ದರಿಂದ ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ ಈ ಬಗ್ಗೆ ಅಮೂಲಾಗ್ರವಾಗಿ ಹೌದೋ ಅಥವಾ ಅಲ್ಲವೋ ಎನ್ನುವಂತಹ ತನಿಖೆಯಾಗಬೇಕು. ಅದನ್ನು ಈ ಸದನದ ಮುಂದೆ ಇಡಬೇಕು. ಅದಕ್ಕೂ ಮುಂದೆ ಹೋಗಿ ಇನ್ನು ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಕರ್ನಾಟಕದ ಕರಾವಳಿ ಜನರಿಗೆ ಕನ್ನಡ ದ್ವಿತೀಯ ಭಾಷೆ. ಎಲ್ಲಿಂದ ಎಲ್ಲಿಯವರೆಗೆ ಕರಾವಳಿ? ಕರಾವಳಿಯ ಸ್ವಲ್ಪ ಭಾಗದ ಜನರಿಗೆ ದ್ವಿತೀಯ ಭಾಷೆ ವಿನಃ ಕರಾವಳಿಯ ಅಧಿಕ ಅಂಶದ ಜನರಿಗೆ ಕನ್ನಡ ದ್ವಿತೀಯ ಭಾಷೆಯಲ್ಲ, ಅದು ಪ್ರಥಮ ಭಾಷೆಯಾಗುವುದು ಇದ್ದರೂ ಸಹ ದಾಖಲೆಯಲ್ಲಿ ಬರುವಂತಹ ವಿಚಾರ ಆಗಬಾರದೆಂದು ನಾನು ಭಾವಿಸಿದ್ದೇನೆ.

ಶ್ರೀ ಕೆ. ಹೆಚ್ ಪಾಟೀಲ್.—ರಾಜ್ಯದ ಹಿತದೃಷ್ಟಿಯಿಂದ ಇದು ಬಹಳ ಅಪಾಯಕಾರಿಯಾದ ಮಾತು. ನಾಳೆ ಕಾಸರಗೂಡು ಕರ್ನಾಟಕಕ್ಕೆ ತೆಗೆದುಕೊಳ್ಳುವಾಗ ಯಾವುದೇ ದೃಷ್ಟಿಯಿಂದ ಕಷ್ಟವಾಗಬಹುದು. ಇನ್ನೊಂದು ಮಾತನ್ನು ನಾನು ಹೇಳುವುದಾದರೆ ಹಿಂದೂಸ್ತಾನದ ಬಗ್ಗೆ ಶ್ರೀ ನಿಜಲಿಂಗಪ್ಪನವರ ಕಾಲದಲ್ಲಿ ಒಂದು ಇತಿಹಾಸವನ್ನು ನಿರ್ಮಾಣ ಮಾಡಿದ್ದರು. ಅದೇನೆಂದರೆ ಯಾರ್ಯಾರು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಜೈಲಿಗೆ ಹಚ್ಚಿದ್ದರೋ ಅಂತಹವರು ಉಪ್ಪಿನ ಸತ್ಯಾಗ್ರಹದಲ್ಲಿ ಪಾಲು ತೆಗೆದುಕೊಂಡರು ಎಂದು ಬರೆದಿದ್ದಾರೆ. ಆಗ ದೇಶಕ್ಕಾಗಿ ತ್ಯಾಗ ಮಾಡಿದವರನ್ನು ಕೈಬಿಟ್ಟರು. ಅದೇ ರೀತಿ ಈಗ ತಾವು ಎರಡನೆಯ ಇತಿಹಾಸವನ್ನು ನಿರ್ಮಾಣ ಮಾಡುತ್ತಿದ್ದೀರಿ. ಆದ್ದರಿಂದ ಮಾನ್ಯ ರಾಮಕೃಷ್ಣ ಹೆಗಡೆಯವರು ಈ ಬಗ್ಗೆ ಒಂದು ಎನ್‌ಕ್ವೈರಿ ಕಮಿಷನ್ ಮಾಡಬೇಕು.

ಶ್ರೀ ಪಟಮಕ್ಕಿ ರತ್ನಾಕರ್.—ಇದು ಕನ್ನಡ ನಾಡಿಗೆ ಅಪಮಾನ.

ಅಧ್ಯಕ್ಷರು.—ಅಧಿಕಾರಿಗಳು ಮಾಡುವಂತಹ ಕೆಲಸ; ಅದಕ್ಕೆ ಮಂತ್ರಿಗಳನ್ನು ಮತ್ತು ಹೆಗಡೆಯವರನ್ನು ಏತಕ್ಕೆ ತೆಗೆದುಕೊಳ್ಳುತ್ತೀರಿ? ಯಾರು ತಪ್ಪು ಮಾಡಿದ್ದಾರೋ ಅವರ ಹೆಸರನ್ನು ಹೇಳಿ.

ಶ್ರೀ ಕೆ.ಹೆಚ್. ಪಾಟೀಲ್.—ಅಧಿಕಾರಿಗಳು ಮಾಡಿದಂತಹ ಕೆಲಸವನ್ನು ಮಂತ್ರಿಗಳು ನೋಡಬೇಕಲ್ಲವೇ? ಅಧಿಕಾರಿಗಳು ಇದನ್ನು ತೆಗೆದುಕೊಂಡು ಹೋಗಿ ಸಿಂಗಪುರದಲ್ಲಿ ಪ್ರಿಂಟ್ ಮಾಡಿಸಿಕೊಂಡು ಬರುವುದಕ್ಕೆ ಆಗುವುದಿಲ್ಲ. ಮಂತ್ರಿಗಳೇ ಈ ಕೆಲಸ ಮಾಡಬೇಕು.

ಅಧ್ಯಕ್ಷರು.—ಇನ್ನೊಂದು ವಿಷಯವನ್ನು ನಾನು ತಮಗೆ ಹೇಳಬೇಕೆಂದರೆ, ಕರ್ನಾಟಕ ರಾಜ್ಯದಲ್ಲಿ ೨೦೯ ಮತದಾರ ಕ್ಷೇತ್ರಗಳು ಇವೆ ಎಂದು ಬರೆದಿದ್ದಾರೆ. ೨೨೪ ಮತದಾರ ಕ್ಷೇತ್ರಗಳು ಇದ್ದರೂ ೨೨೪ ಜನ ಶಾಸಕರು ಚುನಾಯಿತರಾಗಿ ಬಂದಿದ್ದರು ೨೦೮ ಜನ ಶಾಸಕರು ಚುನಾಯಿಸಿ ಬಂದಿದ್ದಾರೆಂದು ಅವರು ಬರೆದಿದ್ದಾರೆ. ಆ ರೀತಿ ಯಾರು ಮಾಡಿದ್ದಾರೋ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳುವುದು.

ಶ್ರೀ ಪಟವರ್ಧನ್ ರತ್ನಾಕರ್.—ಚೆಲುವ ಕನ್ನಡ ನಾಡು ಅಲ್ಲ. ಗೇಲಿಯ ಕನ್ನಡ ನಾಡು.

ಶ್ರೀ ಬಿ.ಎ. ಉಮರಬ್ಬ.—ನಾನು ಸಹ ನಿಮ್ಮ ಪಕ್ಷದ ಸದಸ್ಯನೇ. ತಾವು ಏತಕ್ಕೆ ಈ ರೀತಿ ಇಂಟ್ರಪ್ಟ್ ಮಾಡುತ್ತೀರಿ?

ಅಧ್ಯಕ್ಷರು.—ತಾವು ಮಾತನಾಡುವುದಿಲ್ಲ, ಬೇರೆಯವರು ಮಾತನಾಡುವಾಗಲೂ ಸಹ ಸುಮ್ಮನಿರುವುದಿಲ್ಲ.

ಶ್ರೀ ಬಿ.ಎ. ಉಮರಬ್ಬ.—ನಾನು ಸ್ವಲ್ಪ ವಿಸ್ತಾರವಾಗಿ ಈ ವಿಷಯದ ಬಗ್ಗೆ ಹೋಗಲು ಇಷ್ಟೇ ಕಾರಣ. ಕನ್ನಡ ಭಾಷೆಯನ್ನು ಬಂಡವಾಳ ಮಾಡಿಕೊಂಡು ಸೌಧವನ್ನು ಕಟ್ಟಲು ಹೊರಟಿರುವ ಸರ್ಕಾರದ ಪ್ರಜ್ಞೆಯನ್ನು ಕೆದಕುತ್ತಿದ್ದೇನೆ ಅಷ್ಟೆ. ಇನ್ನು ಸ್ವಲ್ಪ ಮುಂದುವರೆದು ಹೇಳುವುದಾದರೆ ಬದುಕಿರದೆ ಇರುವಂತಹ ಒಬ್ಬ ಮಹಾಶಿಲ್ಪಿ ರಂಜಾಳ್‌ಶಣೈರವರನ್ನು ಈ ಪುಸ್ತಕದಲ್ಲಿ ಜೀವಂತವಾಗಿ ಇಟ್ಟಿದ್ದೀರಿ. ತಮಗೆ ಕಾಲಪ್ರಜ್ಞೆ ಇಲ್ಲವೆಂದು ನಾನು ಹೇಳಬೇಕಾಗುತ್ತದೆ, ಇನ್ನೂ ಒಂದು ಅತ್ಯಂತ ಘೋರವಾದ ಅಪರಾಧವನ್ನು ತಾವೇನು ಮಾಡಿದ್ದೀರಿ ಎಂದರೆ ರಾಷ್ಟ್ರಕವಿ ಕೆ.ವಿ. ಪುಟ್ಟಪ್ಪನವರ ಮತ್ತು ಅವರ ವ್ಯಕ್ತಿತ್ವದ ಬಗ್ಗೆ ಅವರ ಸಾಹಿತ್ಯದ ಬಗ್ಗೆ ಅಪಚಾರವನ್ನುವೆಸಗುವಂತಹ ಶಬ್ದಗಳನ್ನು ಈ ಪುಸ್ತಕದಲ್ಲಿ ಬರೆದಿದ್ದಾರೆ. ಅದನ್ನು ಓದಿ ನಾನು ತಮಗೆ ಹೇಳುವುದಾದರೆ ಅದು ಈ ರೀತಿ ಇದೆ. ಇಂಗ್ಲೀಷ್‌ಗೆ ಋಣಿಯಾದ ಕನ್ನಡದ ಮತ್ತೊಬ್ಬ ಮಹಾಕವಿ ಎಂದರೆ ಕುವೆಂಪು ಎಂದು ಪ್ರಸಿದ್ಧರಾದ ಕೆ.ವಿ. ಪುಟ್ಟಪ್ಪ. ಇದು ಒಂದು ವ್ಯಂಗ ವಾಕ್ಯ. ಅವರು ಇಂಗ್ಲೀಷ್ ಕಾವ್ಯದಿಂದ ಅದೆಷ್ಟು ಪ್ರಭಾವಿತರೆಂದರೆ ಮೂಲದಿಂದ ಕಲ್ಪನೆಗಳನ್ನೂ ಪ್ರತಿಮಾಚಿತ್ರಣಗಳನ್ನೂ ಕಡೆಗೆ ಪದಪುಂಜ ವಿನ್ಯಾಸಗಳನ್ನು ಕೂಡ ಎರವಲು ಪಡೆದರು ಎಂದು, ಒಬ್ಬ ರಾಷ್ಟ್ರಕವಿಯ ಮೇಲೆ ಕನ್ನಡದ ಭಾಷೆಗೆ ಸಾಹಿತ್ಯಕ್ಕೆ ತಾವು ಎಸೆಗಿರುವಂತಹ ಘೋರವಾದ ಅಪಚಾರದ ಮಾತುಗಳನ್ನು ಹೇಳಿದ್ದೀರಿ. ಇನ್ನು ಕನ್ನಡದ ಕವಿಗಳ ಬಗ್ಗೆ ಬಹಳ ಹಗುರವಾಗಿ ಪದಗಳನ್ನು ಬಳಸಿರುವಂತಾದ್ದು ನಾನು ಇಲ್ಲಿ ಉದಾಹರಣೆ ಕೊಡುತ್ತೇನೆ. ಅದೇನೆಂದರೆ ಕಾರಂತ, ದತ್ತಾತ್ರೇಯ ಬೇಂದ್ರೆ ಹಾಗೂ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರಂತೆ ಪುಟ್ಟಪ್ಪನವರೂ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದರು ಎಂಬುದು ಹಾರಿಕೆಯ ಮಾತು. ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದ ನೆಲದಲ್ಲಿ ಹುಟ್ಟಿದ ಕೆ.ವಿ. ಪುಟ್ಟಪ್ಪನವರು, ರಾಷ್ಟ್ರಕವಿಗಳ ಬಗ್ಗೆ ತೇಲಿಕೆಯ ಮಾತುಗಳನ್ನು ಆಡಿರುವ ಉದ್ದೇಶವೇನು? ಇದರ ಹಿನ್ನಲೆ ಏನು ಎನ್ನುವುದನ್ನು ನಾನು ಮೂಲಭೂತವಾಗಿ ಪ್ರಶ್ನೆ ಮಾಡಬೇಕಾಗಿದೆ. ಇದೇ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರೇ ಕನ್ನಡ ಚಿತ್ರ ನಟನಟಿಯರ ಬಗ್ಗೆ ಇಲ್ಲಿ ವ್ಯಾಖ್ಯಾನಿಸಿದ್ದಾರೆ. ಅವರು ಯಾರ್ಯಾರೆಂದರೆ ಇನ್ನಾರು ಬಿಂದು ಜಯದೇವ್ ಇನ್ನೆರಡು ಮೂರು ಹೆಸರುಗಳ ಜೊತೆಗೆ ಅನಂತ್‌ನಾಗ್. ಇಂದು ಕರ್ನಾಟಕದ ಮೂಲೆ ಮೂಲೆಯಲ್ಲಿ ಜನತೆ ಒಪ್ಪಿ ಕೊಂಡಾಡುವಂತಹ ಚಿತ್ರನಟನೆಂದರೆ ಡಾಕ್ಟರ್ ರಾಜಕುಮಾರ್. ನೂರಾರು ಚಿತ್ರಗಳಲ್ಲಿ ನಟಿಸಿ ಕನ್ನಡದ ಜನತೆಯ ಮನವನ್ನು ಸೂರೆಗೊಂಡ ಏಕೈಕ ಚಿತ್ರನಟನೆಂದರೆ ಡಾಕ್ಟರ್ ರಾಜ್‌ಕುಮಾರ್ ರವರನ್ನು ಬಿಟ್ಟರೆ ಬೇರೆ ಯಾರೂ ಇಲ್ಲ. ಅವರ ಬಗ್ಗೆ ಒಂದು ಚಕಾರದ ಮಾತಾಗಲಿ, ಒಂದು ಶಬ್ದವಾಗಲಿ ಎತ್ತಲಿಲ್ಲ. ಕನ್ನಡದ ಕಲಾವಿದರಿಗೆ ಎಸೆಗಿದಂತಹ ಘೋರವಾದ ಅಪಮಾನ. ಅಷ್ಟು ಮಾತ್ರವಲ್ಲ. ಕನ್ನಡ ಚಿತ್ರರಂಗದಲ್ಲಿ ಬಿರುದುಬಾವಲಿಗಳನ್ನು ಪಡೆದಂತಹ ಉದಯಕುಮಾರ್ ಕಲ್ಯಾಣಕುಮಾರ್ ಕನ್ನಡದ ಖ್ಯಾತ ಚಿತ್ರನಟಿ ಬಿ. ಸರೋಜದೇವಿಯವರ ಹೆಸರು ಇಲ್ಲಿ ಪ್ರಸ್ತಾಪ ಮಾಡಿಲ್ಲ. ನಿಮ್ಮ ಪಕ್ಷದ ಪ್ರಚಾರ ಮಾಡಿದಂತಹ ಅನಂತ್‌ನಾಗ್ ಒಬ್ಬರೆ ಪ್ರಖ್ಯಾತ ಕನ್ನಡ ಚಿತ್ರ ಕಲಾವಿದರೆ ಮತ್ತೊಂದು ಉದ್ದೇಶ ತುಂಬಿರುವುದು ಇಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಇದು ನಿಮ್ಮ ಸಣ್ಣತನವನ್ನು ಎತ್ತಿತೋರಿಸುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅಷ್ಟೆ ಅಲ್ಲದೆ ಕೈಗಾರಿಕೆಗಳ ಅಭಿವೃದ್ಧಿ ಬಗ್ಗೆ ವ್ಯಾಖ್ಯಾನಿಸಿದ್ದಾರೆ. ಅದೇನೆಂದರೆ ಕರ್ನಾಟಕದ ಹಿರಿಮೆಗರಿಮೆಗಳನ್ನು ಎತ್ತಿ ಹಿಡಿದ ಕೈಗಾರಿಕೆ ಕಿಯೋನಿಕ್ಸ್. ಇದರಲ್ಲಿ ಶೇಕಡ ೩೦ರಷ್ಟು ವಿದ್ಯುತ್ ಉಪಕರಣಗಳನ್ನು ಇಡೀ ದೇಶಕ್ಕೆ ಪೂರೈಸುತ್ತದೆ ಎಂದು ಹೇಳಿದ್ದೀರಿ. ಇದು ನನ್ನ ಕಣ್ಣಿಗೆ ಕಾಣದಂತಹ ಮಾತು, ಈ ಮಾತನ್ನು ತಾವು ಸಾಬೀತು ಪಡಿಸುವ ದಾದರೆ ನಾನು ಸದನದಲ್ಲಿ ಕ್ಷಮೆಯಾಚಿಸುತ್ತೇನೆ. ನಾನು ಕಿಯೋನಿಕ್ಸ್ ಕಾರ್ಮಿಕ ಸಂಘದ ಅಧ್ಯಕ್ಷನಾಗಿ ಮಾತನಾಡುತ್ತಿದ್ದೇನೆ. ಒಂದು ಹದಗೆಟ್ಟ, ಅವ್ಯವಸ್ಥಿತವಾದ ಮಾತು. ಯಾವುದೇ ಗೊತ್ತು ಗುರಿ ಇಲ್ಲದೆ, ಲಾಭ ಮತ್ತು ನಷ್ಟದ ಪರಿವೇ ಇಲ್ಲದೆ ಅಪಾರವಾದಂಥ ನಷ್ಟ ರಾಜ್ಯದ ಬೊಕ್ಕಸಕ್ಕೆ ಆಗುತ್ತಿರುವಾಗ ಶೇಕಡ ೩೦ರಷ್ಟು ವಿದ್ಯುತ್ ಉಪಕರಣಗಳನ್ನು ಇಡೀ ರಾಷ್ಟ್ರಕ್ಕೆ ಒದಗಿಸಿ

ಕೊಡುತ್ತದೆ ಎಂದು ಹೇಳಿದ್ದಾರೆ. ತಾವು ಮಾಡರುವ ಒಂದೇ ಒಂದು ಸಾಧನೆ ಅದು ಕೆಟ್ಟು ಹೋಲ ಸಾಗಿದ್ದರೂ ಸಹ ಅದು ಬಹುದೊಡ್ಡ ಸಾಧನೆ ಎಂದು ಹೇಳಿ ಜನತೆಯನ್ನು ತಪ್ಪುದಾರಿಗೆ ಎಳೆಯುವಂತಹ ಕೆಲಸವನ್ನು ಮಾಡಿದ್ದೀರಿ. ಅಷ್ಟು ಮಾತ್ರ ಅಲ್ಲ ಈ ಸರ್ಕಾರದ ಸಾಧನೆಯನ್ನು ಪುಟ ೫೫ರಲ್ಲಿ ಹೇಳಿದ್ದಾರೆ.

ನಿಮ್ಮ ಜನತಾ ಸರ್ಕಾರದ ಸಾಧನೆಗಾಗಿ ಈ ಕನ್ನಡದ ಪುಸ್ತಕವನ್ನು ಬಳಸಲಾಗಿದೆ. ಯಾವುದನ್ನು ಯಾವುದಕ್ಕಾಗಿ ಬಳಸಬೇಕು ಎನ್ನುವಂಥ ಪ್ರಜ್ಞೆ ಇಲ್ಲದೆ ವಿಶ್ವ ಕನ್ನಡ ಸಮ್ಮೇಳನ ಅದರಲ್ಲಿ ಕನ್ನಡದ ಒಂದು ದಾಖಲೆ ಪುಸ್ತಕ. ನಿಮ್ಮ ಸರ್ಕಾರದ ಸಾಧನೆಯನ್ನು ಕನ್ನಡ ಮಾತೆ ಸರಿಯೋ ತಪ್ಪೋ ಎಂದು ಘೋಷಿಸಬೇಕು ಈ ಕನ್ನಡದ ನಾಲಿಗೆಯನ್ನು ನಿಮ್ಮ ಸ್ವಾರ್ಥ ಸಾಧನೆಗೆ ಬಳಸಿರುವಂತಾದ್ದು ಸಣ ಬುದ್ಧಿಯ ಒಂದು ಪ್ರದರ್ಶನ. ನಿಜವಾಗಿ ಜನತಾ ವರ್ಷಗಳು ಗಟ್ಟಿ ಸಾಧನೆಯ ವರ್ಷಗಳು ಸರಿ. ೫೫ನೇ ಪುಟ. ಅಧಿಕಾರಕ್ಕೆ ಬಂದ ಮೊದಲ ವರ್ಷದಲ್ಲಿ ಜನತಾ ಪಕ್ಷ ರಾಜ್ಯದ ಸಾಮಾಜಿಕ ಮತ್ತು ರಾಜಕೀಯ ರಂಗಗಳಲ್ಲಿ ಬಹು ದೊಡ್ಡ ಬದಲಾವಣೆಯನ್ನು ಸಾಧಿಸಿ “೧೮ ರಿಂದ ೬೦ ವರ್ಷ ವಯಸ್ಸಿನಲ್ಲಿ ದೇಹ ಸಾಮರ್ಥ್ಯವುಳ್ಳ ಪ್ರತಿಯೊಬ್ಬನಿಗೂ ವರ್ಷಪೂರ್ತಿ ಉದ್ಯೋಗವನ್ನು ಕಲ್ಪಿಸಿತು.” ಇದು ನಿಮ್ಮ ಪುಸ್ತಕ. ೧೮ ವರ್ಷದಿಂದ ೬೦ ವರ್ಷದಲ್ಲಿ ದೇಹ ಸಾಮರ್ಥ್ಯವುಳ್ಳ ಪ್ರತಿಯೊಬ್ಬನಿಗೂ ಉದ್ಯೋಗವನ್ನು ಒದಗಿಸಿತು. ನನಗೆ ನಾಚಿಕೆ ಯಾಗುತ್ತದೆ. I myself am ashmed of having such a book in my hand. ಇನ್ನೂ ಒಂದು ತುಣುಕು, ಮತದಾನದ ವಯಸ್ಸನ್ನು ೧೮ ವರ್ಷಕ್ಕೆ ಇಳಿಸಿದ್ದರಿಂದ ಹೆಚ್ಚು ಮಂದಿ ಯುವ ಜನಕ್ಕೆ ಸರ್ಕಾರದ ಆಯ್ಕೆಗೆ ಅವಕಾಶ ಸಿಕ್ಕಿತು. ಯಾವ ಸರ್ಕಾರದ ಆಯ್ಕೆಗೆ ೧೮ ವರ್ಷಕ್ಕೆ ಮತದಾನದ ಹಕ್ಕನ್ನು ಕೊಟ್ಟಿದ್ದೀರಿ? ಯಾವ ಸರ್ಕಾರದ ಆಯ್ಕೆಗೆ ಕರ್ನಾಟಕದ ನೆಲದಲ್ಲಿ ಜನತಾ ಸರ್ಕಾರ ೧೮ ವರ್ಷದವರಿಗೆ ಮತದಾನದ ಹಕ್ಕನ್ನು ಕೊಟ್ಟಿದೆ? ಕೊಡದೇ ಇರುವುದನ್ನು ಕೊಟ್ಟಿದೆ ಯೆಂದು ಹೇಳುವುದು ಅಪಹಾಸ್ಯವಲ್ಲವೆ ? ಇನ್ನು ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಅತ್ಯಂತ ಹೀನಸ್ಥಿತಿಯಲ್ಲಿರುವ ೫ ಸಂಸಾರಗಳನ್ನು ಗುರುತಿಸಿ ಅವರುಗಳ ಏಳಿಗೆಗಾಗಿ ನೆರವು ನೀಡಲಾಗಿದೆಎಂದು ತಿಳಿಸಲಾಗಿದೆ. ನನ್ನ ಕ್ಷೇತ್ರದಲ್ಲಿ ಯಾವ ಯಾವ ೫ ಹಳ್ಳಿಗಳಿಗೆ ನೆರವು ನೀಡಿದ್ದೀರಿ ? ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨ ಹಳ್ಳಿಯನ್ನು ಹೇಳಿ ನೋಡೋಣ. ಮತ್ತೆ ಇನ್ನು ಅಲ್ಪಸಂಖ್ಯಾತರ ಏಳಿಗೆಯೆಂದೂ ಇದೆ. ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಇತಿಹಾಸ, ಸಾಹಿತ್ಯ, ಕಲೆ, ಶಿಲ್ಪಕಲೆ ನೃತ್ಯಗಳ ಪರಂಪರೆಯ ಚಿತ್ರಣವನ್ನು ಕೊಡಲು ತಾವು ಈ ಪುಸ್ತಕವನ್ನು ಆಶ್ರಯಿಸಿದ್ದೀರಿ. ರಾಜಕೀಯ ಕ್ಷೇತ್ರದಲ್ಲಿ ಮಾತನಾಡುವಾಗ ಆಗಲೂ ಸಹ ಕರ್ನಾಟಕ ರಾಜ್ಯದ ಬಡಜನತೆಗೆ ಒಂದು ಭದ್ರತೆಯ ನೆಲಗಾಲು ಮತ್ತು ಸ್ವಾತಂತ್ರ್ಯದ ಉಸಿರನ್ನು ಕೊಟ್ಟಂಥ ಶ್ರೀ ದೇವರಾಜ ಅರಸರ ನೆನಪನ್ನಾದರೂ ತಾವು ಮಾಡಬಹುದಾಗಿತ್ತೆಂದು ನಾನು ಹೇಳುತ್ತಿದ್ದೇನೆ. ಅದಕ್ಕೂ ಹಿಂದೆ ಅನೇಕ ಜನ ಮಹನೀಯರು ಕರ್ನಾಟಕ ರಾಜ್ಯದ ರಾಜಕೀಯ ಕ್ಷೇತ್ರದಲ್ಲಿ ಮಾಡಿರುವ ಅನೇಕಾರು ಸಾಧನೆಗಳನ್ನು ಸಂಪೂರ್ಣವಾಗಿ ಮರೆಮಾಚಿ ಒಂದು ಸತ್ಯಕ್ಕೆ ದೂರವಾದಂಥ ಕಂತೆಯನ್ನು ನಮ್ಮ ಎದುರು ಇಟ್ಟಿದ್ದೀರಿ. ನಾನು ಕನ್ನಡಕ್ಕಾಗಿ ಹೋರಾಡುತ್ತೇನೆ. ಆದರೆ ಕನ್ನಡವನ್ನು ಬದುಕಿಗಾಗಿ ಆಶ್ರಯಿಸದವನು ನಾನಲ್ಲ. ಕನ್ನಡವನ್ನು ಅತ್ಯಂತ ಕಾಳಜಿಯಿಂದ ಓದಿರುವುದರಿಂದ ಈ ಕನ್ನಡ ಸಂಸ್ಕೃತಿ, ಇತಿಹಾಸಗಳ ಬಗ್ಗೆ ಸಾಹಿತ್ಯದ ಬಗ್ಗೆ ತೀವ್ರ ಕಳಕಳಿಯ ಮನಸ್ಸನ್ನು ಇಟ್ಟಿರುವವನು. ಈ ರೀತಿ ಹೊತ್ತಿಗೆ ಏನಬಂದಿದೆ ಇದು ಕನ್ನಡಕ್ಕೆ ಮಾಡಿರುವಂಥ ಅತ್ಯಂತ ಅಪಮಾನವೆಂದು ಈ ಸಭೆಯಲ್ಲಿ ಈ ಪುಸ್ತಕವನ್ನು ಹರಿದು ಎಸೆಯುತ್ತೇನೆ.

(ಚಲುವ ಕನ್ನಡನಾಡು ಪುಸ್ತಕವನ್ನು ಮಾನ್ಯ ಸದಸ್ಯರು ಹರಿದು ಪ್ರತಿಭಟನೆಯನ್ನು ತೋರಿಸಿದರು) This is not what the people of Karnataka expect from you. ಈ ಪುಸ್ತಕದ ಬೆಲೆ ಐದು ನೂರು ರೂಪಾಯಿಗಳು. ಒಟ್ಟು ಈ ಪುಸ್ತಕದ ಖರ್ಚು ೧೫ ಲಕ್ಷ. ಇದರ ಮುದ್ರಣವನ್ನು ವಿದೇಶದ ಸಿಂಗಪುರದಲ್ಲಿ ಮಾಡಲಾಗಿದೆ. ನಮ್ಮ ಸಂಬಳ ನಿಮ್ಮ ಸಂಬಳ, ಒಬ್ಬ ಕೂಲಿ ಮಾಡುವವನ ಸಂಬಳವನ್ನು ಸಹ ಬರಗಾಲಪೀಡಿತ ಪ್ರದೇಶಗಳಿಗೆ ಕೊಡಿ ಎಂದು ಅಂಗಲಾಚಿದಂಥ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಹಣವನ್ನು ವಿನಿಯೋಗ ಮಾಡುವಾಗಲು ಸದ್‌ವಿನಿಯೋಗ ಮಾಡದೆ ಅಪವ್ಯಯ ಮಾಡಿ ನಾವು ರಾಜ್ಯಕ್ಕೆ ನ್ಯಾಯ ಕೊಟ್ಟಿದ್ದೇವೆ ಎನ್ನುವಂಥ ಮಾತನಾಡುವಂಥ ಯಾವುದೇ ನೈತಿಕ ಹಕ್ಕು ಈ ಸರ್ಕಾರಕ್ಕೆ ಇಲ್ಲವೆಂದು ನಾನು ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಬಾಟ್ಲಿಂಗ್

ಹಗರಣ ಬಂದಾಗ ನಿಮ್ಮ ನೈತಿಕ ಸಾವಿಗೆ ಸಂತಾಪವನ್ನು ಸೂಚಿಸುವಿರಂತೆ. ಅದಕ್ಕೆ ಇನ್ನೂ ಎರಡು ದಿನಗಳ ಕಾಲಾವಕಾಶ ಇದೆ. ಅಂದು ನಾವು ಆದರ ಬಗ್ಗೆ ಚರ್ಚೆ ಮಾಡೋಣ. ಆದರೆ ಮತ್ತೊಮ್ಮೆ ಒತ್ತಾಯಿಸುತ್ತೇನೆ. ಕನ್ನಡವನ್ನು ಬಂಡವಾಳವನ್ನಾಗಿಸಿಕೊಂಡಂಥ ಅನೇಕ ಅಚಾತುರ್ಯಗಳನ್ನು ಮಾಡಿ ಕನ್ನಡದ ಹೆಸರಿನಲ್ಲಿ ಮಾಡಿರುವಂಥ ಈ ಕರ್ನಾಟಕ ರಾಜ್ಯದಲ್ಲಿ ಈ ಪುಸ್ತಕ ಯಾವುದು ? ಇನ್ನೂ ಅನೇಕ ಪುಸ್ತಕಗಳು ಇವೆ, ಸಂಪೂರ್ಣ ಅವಕಾಶ ಇದ್ದರೆ ಒಂದೊಂದೇ ಹೇಳುತ್ತಿದ್ದೆ. ಚೆಲುವ ಕನ್ನಡ ನಾಡು ಪುಸ್ತಕ ಚಲುವಾದ ಕನ್ನಡ ನಾಡನ್ನು ಪ್ರತಿಬಿಂಬಿಸಿಲ್ಲ. ಆದ್ದರಿಂದ ಇದನ್ನು ತಕ್ಷಣ ಹಿಂತೆಗೆದು ಕೊಳ್ಳಬೇಕೆಂದು ಹೇಳಿ ನಿಮ್ಮ ಸರ್ಕಾರ ಎಲ್ಲಾ ರೀತಿಯಲ್ಲೂ ಅವ್ಯವಸ್ಥೆ ಹಾಗೂ ಯಾವುದೇ ರೀತಿಯಲ್ಲಿ ಪ್ರಗತಿಯ ಹೆಜ್ಜೆಯನ್ನು ಇಡಲು ಸಾಧ್ಯವಿಲ್ಲದೇ ಇರುವಂಥ ಪರಿಸ್ಥಿತಿಯಲ್ಲಿ ಈ ಸರ್ಕಾರ ಇದೆ. ಈ ಸರ್ಕಾರ ತನ್ನನ್ನು ತಾನು ಅರಿತುಕೊಂಡು ತನ್ನನ್ನು ತಾನು ಸಂಶೋಧಿಸಿಕೊಂಡು ತನ್ನನ್ನು ತಾನು ಪರಿಶೀಲಿಸಿಕೊಂಡು ಒಂದು ಹೆಜ್ಜೆ ಇಡಬೇಕು. ನಮ್ಮ ಬದುಕಿಗಾಗಿಯಲ್ಲ, ಕರ್ನಾಟಕ ಜನತೆಯ ಬದುಕಿನ ಜವಾಬ್ದಾರಿಯನ್ನು ನೀವು ಹೊತ್ತಿರುವುದರಿಂದ. ತಾವು ಮಾಡುವ ಒಂದು ಕಿಂಚಿತ್ತು ತಪ್ಪು ಅಪಾರವಾದಂಥ ಘೋರವಾದಂಥ ಅಪರಾಧಕ್ಕೆ ಕಾರಣವಾದೀತು ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ನಾನು ಪ್ರಾರಂಭದಲ್ಲೇ ಹೇಳಿದೆ. ಈ ರಾಜ್ಯಪಾಲರ ಭಾಷಣದಲ್ಲಿ ಕನ್ನಡ ಸಂಸ್ಕೃತಿಗೆ ಬಹಳಷ್ಟು ಮಾಡಿದ್ದಾರೆಂದು ಪ್ರಸ್ತಾಪಿಸಿದ್ದಾರೆ. ಪ್ರತಿಯೊಂದು ವಿಷಯವನ್ನೂ ಸ್ಥೂಲವಾಗಿ ಪ್ರಸ್ತಾಪಿಸಿದ್ದೇನೆ. ರಾಜ್ಯಪಾಲರ ಭಾಷಣವೆಂದು ಈ ನಿಲುವಳಿಯನ್ನು ಯಾರು ಸಭೆಯ ಮುಂದೆ ಇಟ್ಟಿದ್ದಾರೋ ಅವರಲ್ಲಿ ನನ್ನ ಕಳಕಳಿಯ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ನಿಲುವಳಿಯನ್ನು ಹಿಂತೆಗೆದುಕೊಳ್ಳಬೇಕು. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಸಭೆಯು ಎದ್ದು ನಾಳೆ ಬೆಳಿಗ್ಗೆ ೯-೦೦ ಗಂಟೆಗೆ ಪುನಃ ಸೇರುವುದು.

ಸದನವು ೫ ಗಂಟೆ ೪೭ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೭-೨-೧೯೮೬ ರಂದು ಶುಕ್ರವಾರ ಬೆಳಿಗ್ಗೆ ೯-೦೦ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.